ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೫ನೇ ಮಾರ್ಚ್ ೧೯೮೬ ಫಾಲ್ಗುಣ ೧೪, ೧೯೦೭ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೦-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದ್ದರು].

ವಿತ್ತೀಯ ಕಾರ್ಯಕಲಾಪಗಳು

೧೯೮೬—೮೭ನೇ ಸಾಲಿನ ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ರಮಾನಾಥ ರೈ (ಬಂಟ್ವಾಳ್).— ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ಬೇಡಿಕೆಗಳ ಬಗ್ಗೆ ಚರ್ಚೆ ಮುಂದು ವರೆದಿರತಕ್ಕಂಥ ಕಾಲದಲ್ಲಿ ನನಗೆ ಇವತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಒಂದೆರಡು ಮಾತುಗಳನ್ನು ಇದರ ಬಗ್ಗೆ ಆಡುವುದಕ್ಕೆ ನಾನು ಇಚ್ಛೆಪಡುತ್ತಾ ಇದ್ದೇನೆ. ೨೦೦೦ನೇ ಇಸವಿಯಲ್ಲಿ ನಮ್ಮ ದೇಶದಲ್ಲಿರತಕ್ಕ ಜನರೆಲ್ಲರಿಗೂ ಆರೋಗ್ಯ ವನ್ನು, ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಟ್ಟು ಅವರನ್ನು ಆರೋಗ್ಯವಂತರನ್ನಾಗಿ ಮಾಡಬೇಕು ಎನ್ನತಕ್ಕಂಥ ಘೋಷಣೆ ನಮ್ಮಲ್ಲಿದೆ. ಹಾಗಿದ್ದರೂ ಕೂಡ ಈ ಒಂದು ಆರೋಗ್ಯ ಇಲಾಖೆ ನಡೆದು ಕೊಂಡು ಹೋಗತಕ್ಕಂಥ ದಾರಿಯನ್ನು ನಾವು ನೋಡುವಾಗ ಖಂಡಿತವಾಗಿಯೂ ೨೦೦೦ನೇ ಇಸವಿ ಯಷ್ಟು ಹೊತ್ತಿಗೆ ನಾವು ಇದನ್ನು ಸಾಬೀತು ಮಾಡಲಿಕ್ಕೆ ಸಾಧ್ಯವಿಲ್ಲ, ಇನ್ನು ೨೦೦೦ನೇ ಇಸವಿಯಲ್ಲಿ ಆಗಬಹುದೇನೋ ಎನ್ನುವ ಸಂಶಯ ನಮ್ಮಲ್ಲಿ ಬರುತ್ತಿದೆ. ಅಂದರೆ ಈ ಒಂದು ಆರೋಗ್ಯ ಇಲಾಖೆಯ ನಡವಳಿಕೆ ಆರೋಗ್ಯವಂತವಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವುದೇ ಒಂದು ವಿಚಾರದಲ್ಲಿ ನೋಡುವುದಾದರೆ, ಇವತ್ತು ಪ್ರಾಥಮಿಕ ಆರೋಗ್ಯ ಘಟಕ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ, ಜಿಲ್ಲಾ ಆಸ್ಪತ್ರೆ ಇದೆ, ಕೇಂದ್ರ ಆಸ್ಪತ್ರೆ ಇದೆ. ಇಲ್ಲಿ ವ್ಯವಸ್ಥಿತವಾಗಿ ನಡವಳಿಕೆ ಆಗುತ್ತಿ ದೆಯೋ ಎನ್ನುವ ವಿಷಯ ನಮ್ಮ ಮುಂದೆ ಇರತಕ್ಕಂಥಾದ್ದು. ಇವತ್ತು ಅಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಏನಿದೆ ಅಲ್ಲಿ ಒಂದು ಘಟಕ ಇದ್ದರೆ ಮಾತ್ರ ಸಾಲದು, ಅಲ್ಲಿ ಆಗತ್ಯತೆಯ ವಸ್ತುಗಳು ಇರಬೇಕು. ಔಷಧಿಯ ಒಂದು ವ್ಯವಸ್ಥೆ ಬಹಳಷ್ಟು ಆರೋಗ್ಯ ಘಟಕಗಳಲ್ಲಿಲ್ಲ, ಔಷಧಿ ಇದ್ದರೆ ಅಲ್ಲಿ ಡಾಕ್ಟರ್ ಕೊರತೆ ಯನ್ನು ನಾವು ಕಾಣುತ್ತಾ ಇದ್ದೇವೆ, ಡಾಕ್ಟರ್ ಇದ್ದರೆ ಅಲ್ಲಿ ಅವರಿಗೆ ಉಳಿದುಕೊಳ್ಳಲಿಕ್ಕೆ ಕ್ವಾಟ್ರರ್ಸ್ ಅಗತ್ಯವಿದ್ದರೂ ಆ ಒಂದು ವ್ಯವಸ್ಥೆ ಇಲ್ಲ. ಇವೆಲ್ಲ ಇದ್ದರೂ ಕೂಡ ಜನಸಾಮಾನ್ಯರು ಸರ್ಕಾರಿ ಆಸ್ಪತ್ರೆಗೆ, ಪ್ರಾಥಮಿಕ ಆರೋಗ್ಯ ಘಟಕಕ್ಕೆ ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ, ಬದಲಾಗಿ ಖಾಸಗಿ ಡಾಕ್ಟರನ್ನೇ ಅವಲಂಬಿಸಿಕೊಂಡು ಹೋಗುತ್ತಾರೆ ಜಾಸ್ತಿ ಜನ ಸರ್ಕಾರಿ ಆಸ್ಪತ್ರೆಗೆ ಹೋಗು ವುದಿಲ್ಲ. ಕಾರಣವೇನೆಂದರೆ, ಅಲ್ಲಿ ಉತ್ತಮವಾದಂಥ ವ್ಯವಸ್ಥೆ ಇಲ್ಲದೇ ಇರುವುದರಿಂದ ಯಾರೂ ಆರೋಗ್ಯ ಘಟಕಕ್ಕೆ ಹೋಗುವಂಥ ಸಾಧ್ಯತೆ ಇಲ್ಲ, ಹೀಗಾಗಿ ಸರ್ಕಾರಿ ಆರೋಗ್ಯ ಘಟಕ ಇದ್ದರೂ ಕೂಡ ಜನರು ಖಾಸಗಿ ಡಾಕ್ಟರ್ ಹತ್ತಿರ ಹೋಗುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಇಂತಹ ಒಂದು ಅವ್ಯವಸ್ಥಿತ ರೀತಿಯಲ್ಲಿ ಪ್ರಾಥಮಿಕ ಘಟಕಗಳು ಇವತ್ತು ಕೆಲಸ ಮಾಡುತ್ತಿವೆ. ಇನ್ನು ತಾಲ್ಲೂಕು ಆಸ್ಪತ್ರೆ ಬಗ್ಗೆ ನೋಡುವುದಾದರೆ ಅಲ್ಲೂ ಕೂಡ ಯಾವ ಪ್ರಾಥಮಿಕ ಅವಶ್ಯಕತೆಗಳು

ಇರತಕ್ಕಂಥಾದ್ದನ್ನು ನಾವು ನೋಡುತ್ತಾ ಇಲ್ಲ. ನನಗೆ ಮೊದಲು ಮಾತನಾಡಿದ ಹಿರಿಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಒಂದು ತಾಲ್ಲೂಕಿನಲ್ಲಿ ಕನಿಷ್ಟಪಕ್ಷ ೫೦ ಬೆಡ್‌ನ ಆಸ್ಪತ್ರೆಯಾದರೂ ಇರಬೇಕು ಎಂದು ಹೇಳಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಬಂಟ್ವಾಳ ತಾಲ್ಲೂಕಿನ ವಿಚಾರವಾಗಿ ಮಾತನಾಡುವುದಾದರೆ, ನಮ್ಮ ತಾಲ್ಲೂಕಿನಲ್ಲಿ ೨೪ ಬೆಡ್ಡುಗಳ ಆಸ್ಪತ್ರೆ ಮಾತ್ರ ಇದೆ. ಈ ಒಂದು ತಾಲ್ಲೂಕು ಕೇಂದ್ರದಲ್ಲಿ ೨೪ ಬೆಡ್‌ಗಳ ಆಸ್ಪತ್ರೆ ಮಾತ್ರ ಇದೆ. ಬಹಳಷ್ಟು ಸಮಯದಿಂದ ಇದನ್ನು ೧೦೦ ಬೆಡ್‌ಗಳ ಆಸ್ಪತ್ರೆ ಮಾಡಬೇಕು ಎಂದು ಅನೇಕಸಲ ಮನವಿ ಮಾಡಿದ್ದೇವೆ, ಮಾತ್ರವಲ್ಲ ಹೋದಸಲ ಹಿಂದಿನ ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಪಿ. ಜಿ. ಆರ್. ಸಿಂಧ್ಯರವರನ್ನು ಆಸ್ಪತ್ರೆಗೆ ಬರಮಾಡಿಕೊಂಡು ಮನವಿ ಕೊಟ್ಟಾಗ ಇದನ್ನು ನಾನು ಮಾಡಿಕೊಡುತ್ತೇನೆ ಎಂದು ವೇದಿಕೆಯಲ್ಲಿ ನಿಂತು ಮಾತನಾಡಿದಂಥ ಸಂಗತಿಯನ್ನು ನೆನಪು ಮಾಡಿಕೊಳ್ಳುತ್ತೇನೆ. ಇಷ್ಟು ದಿವಸವಾದರೂ ಕೂಡ ಅದು ೨೪ ಬೆಡ್ಡಿನಿಂದ ಮೇಲಕ್ಕೆ ಹೋಗಿಲ್ಲ, ಪ್ರಾಥಮಿಕ ಅವಶ್ಯಕತೆ ಕೂಡ ಇಲ್ಲ. ಎಕ್ಸ್-ರೇ ಯೂನಿಟ್ ಆಗಲಿ, ಇನ್ನಿತರ ಸೌಲಭ್ಯಗಳಾಗಲಿ ಯಾವುದೂ ಇಲ್ಲದೆ ಕೇವಲ ೨೪ ಬೆಡ್ಡಿನ ಆಸ್ಪತ್ರೆಯಾಗಿಯೇ ಉಳಿದಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡುತ್ತಾ ಇದ್ದೇನೆ. ಅದೇ ರೀತಿ ಕೇಂದ್ರ ಆಸ್ಪತ್ರೆಯಲ್ಲೂ ಕೂಡ ಯಾವರೀತಿಯ ವ್ಯವಸ್ಥೆ ಇಲ್ಲ ಎನ್ನುವುದು ಮಾನ್ಯ ಸಚಿವರಿಗೆ ಗೊತ್ತಿದ್ದಂಥ ವಿಚಾರ. ಯಾರಾದರೂ ತಲೆ ಹೊಡೆದು ಆಸ್ಪತ್ರೆ ಸೇರಬೇಕಾದರೆ, ಅಡ್ಮಿಟ್ ಆಗಬೇಕಾದರೂ ಯಾರಾದರೂ ಶಾಸಕರ ಇನ್‌ಫ್ಲ್ಯುಯೆನ್ಸ್ ಅಗತ್ಯ ಇದೆ, ಅಂತಹ ಒಂದು ಪರಿಸ್ಥಿತಿ ಕೇಂದ್ರ ಆಸ್ಪತ್ರೆಯಲ್ಲಿ ಕೂಡ ಇದೆ. ಅವನಿಗೆ ತಲೆ ಒಡೆದು ದೊಡ್ಡ ಗಾಯವಾದರೂ. ಏನಿಲ್ಲ ಅಡ್ಮಿಟ್ ಮಾಡಬೇಕಾದ ಅವಶ್ಯಕತೆ ಇಲ್ಲ ಮನೆಗೆ ಹೋಗಿ ಎಂದು ಹೇಳುವಂಥ ವ್ಯವಸ್ಥೆ ಇವತ್ತು ಆಸ್ಪತ್ರೆಯಲ್ಲಿ ಆಗುತ್ತಿದೆ. ನಮ್ಮ ಅನೇಕ ಶಾಸಕ ಮಿತ್ರರು ನಮ್ಮ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳು ಬೇಕು ಎಂಬ ಬೇಡಿಕೆಯನ್ನು ಕೇಳಿರಬಹುದು. ಇವತ್ತು ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯನ್ನು ನೋಡುವುದಾದರೆ, ಯಾವುದೇ ಒಂದು ಪ್ರಾಥಮಿಕ ಘಟಕವನ್ನು ಈ ವರ್ಷ ಕೊಟ್ಟಿಲ್ಲ. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ಪ್ರಾಥಮಿಕ ಘಟಕವನ್ನು ಕೊಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಬಹಳ ದುಃಖದಿಂದ ಹೇಳಬೇಕಾಗಿದೆ. ಕಾಂಗ್ರೆಸ್‌ಗೆ ಮತ ಹಾಕಿದಂಥ ಜನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ ಎಂಬ ದೃಷ್ಟಿಯಿಂದ ಮಲತಾಯಿ ಧೋರಣೆ ಮಾಡುತ್ತಾ ಇದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಖಂಡಿತವಾಗಿ ಹೇಳಬೇಕಾಗಿದೆ, ದಕ್ಷಿಣ ಕನ್ನಡ ಜಿಲ್ಲೆಗೆ ಒಂದೇ ಒಂದು ಘಟಕವನ್ನು ಕೊಟ್ಟಿಲ್ಲ ಎಂದು ಹೇಳುತ್ತಾ ಇದ್ದೇನೆ. ಮಾನ್ಯ ಡಿಸೋಜರವರು ಒಂದು ಮಾತನ್ನು ಹೇಳಿದ್ದಾರೆ. ಉಲ್ಲಾಳದಲ್ಲಿ ೨೦೦೦ ಜನರಿಗಿಂತ ಜಾಸ್ತಿ ಇರತಕ್ಕಂಥ ಪ್ರದೇಶದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಆ ಒಂದು ಕೇಂದ್ರವನ್ನು ಎರಡು ವಿಭಾಗ ಮಾಡಿ, ಗಂಜಿಮಠದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾಡಬೇಕು ಎಂದು ನಮ್ಮ ಆರೋಗ್ಯ ಇಲಾಖೆಯ ಅಧಿಕಾರಿಗಳು ಅದಕ್ಕೆ ರೂಪುರೇಷೆಗಳನ್ನು ಮಾಡಿಕಳಿಸಿ ಕೊಟ್ಟಿದ್ದಾರೆ ಮಾತ್ರವಲ್ಲ ಅದನ್ನು ಮಾಡಬೇಕು ಎಂಬ ಒತ್ತಾಯವನ್ನು ಅಧಿಕಾರಿಗಳ ಮುಖಾಂತರ ಮಾಡಿದರೂ ಕೂಡ ಆ ಒಂದು ಕೇಂದ್ರ ಸ್ಥಾಪನೆಯಾಗಲಿಲ್ಲ. ಆದುದರಿಂದ ಗಂಜಿಮಠದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅದೇ ರೀತಿ ವಿಲೇಜಿನಲ್ಲಿ ಹೆಲ್ತ್‌ಗೈಡ್ಸ್ ಎಂದು ಏನಿದ್ದಾರೆ ಅವರಿಗೆ ಕೇಂದ್ರ ಸರ್ಕಾರದಿಂದ ೫೦ ರೂಪಾಯಿ ಕೊಡುವಂತಹ ವ್ಯವಸ್ಥೆ ಇದೆ. ಅವರಿಗೆ ನಮ್ಮ ಕರ್ನಾಟಕ ಸರ್ಕಾರದ ವತಿಯಿಂದ ಕೂಡ ೫೦ ರೂಪಾಯಿಯನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಇನ್ನು ಇತರ ಕಡೆಗಳಲ್ಲಿ ಹಾಗೂ ನಮ್ಮ ಜಿಲ್ಲೆಯಲ್ಲಿ ಆರೋಗ್ಯ ಘಟಕಗಳು ಬೇಕೆಂದು ಜಾಗಗಳನ್ನು ಕೊಟ್ಟು, ದುಡ್ಡನ್ನು ಕೊಟ್ಟು ಅನೇಕ ವರ್ಷಗಳಾಗಿದ್ದರೂ ಕೂಡ ಆ ಘಟಕಗಳಿಗೆ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆರೋಗ್ಯ ಇಲಾಖೆಯ ಬಗ್ಗೆ ಇಷ್ಟು ಮಾತನ್ನು ಹೇಳಿ ಮುಂದೆ ಈ ನಗರಾಭಿವೃದ್ಧಿ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕೆಂದು ಇದ್ದೇನೆ. ನಾನು ಇದರ ಬಗ್ಗೆ ವಿಶೇಷವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ ಕೆಲವಾರು ವಿಚಾರಗಳನ್ನು ಹೇಳುತ್ತೇನೆ. ನನ್ನ ಪ್ರದೇಶಕ್ಕೆ ಸೀಮಿತವಾದ ಪುರಸಭೆಗಳ ವಿಚಾರದಲ್ಲಿ ಕೆಲವು ಮಾತನಾಡಲು ಇಷ್ಟಪಡುತ್ತೇನೆ, ಕೆಲವು ಕಡೆ ಗ್ರಾಮಾಂತರ ಪ್ರದೇಶಗಳು ಸೇರಿಕೊಂಡು ಪುರಸಭೆಗಳು ಇದೆ. ಅದರಲ್ಲಿ ಸೇರಿರತಕ್ಕಂತಹ ಜನ

ಏನಿದ್ದಾರೆ ಅವರ ಆರ್ಥಿಕ ಮಟ್ಟದಲ್ಲಿ ಮೇಲೆ ಇದ್ದಾರೆ ಅನ್ನತಕ್ಕಂತಹ ಭಾವನೆ ಈ ಸರ್ಕಾರಕ್ಕೆ ಇದೆ ಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ಮಾತನಾಡಿದಂತಹ ಸದಸ್ಯರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಜನರಿಗೆ ಹೆರಿಗೆ ಭತ್ಯೆ, ಹಸಿರು ಕಾರ್ಡು ಎಂದು ಏನು ದೊರಕುತ್ತದೆ ಅಂತಹ ಒಂದು ವ್ಯವಸ್ಥೆ ಈ ಪುರಸಭೆ ವ್ಯಾಪ್ತಿಯಲ್ಲಿರತಕ್ಕಂತಹ ಜನರಿಗೆ ದೊರಕುತ್ತಿಲ್ಲವೆಂದು ಹೇಳುತ್ತಿದ್ದೇನೆ. ಈ ಒಂದು ವ್ಯವಸ್ಥೆ ಪಟ್ಟಣ ಪ್ರದೇಶದಲ್ಲಿರತಕ್ಕಂತಹ ಬಡವರಿಗೆ ಕೂಡ ದೊರಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಮ್ಮ ಬಂಟ್ವಾಳ ಪುರಸಭೆಯ ಬಗ್ಗೆ ಹೇಳುವುದಾದರೆ, ಅಲ್ಲಿ ಮೂರು ಗ್ರಾಮಗಳು ಅಂದರೆ ಬಂಟ್ವಾಳ ಮೂಡ, ಬಂಟ್ವಾಳ ಕಸಬಾ, ಬಂಟ್ವಾಳ ಪಾಣೆಮಂಗಳೂರು ಸೇರಿ ಪುರಸಭೆಯಾಗಿದೆ. ಇನ್ನೂ ಅನೇಕ ಕಡೆಗಳಲ್ಲಿ ಇದೇ ರೀತಿ ಪುರಸಭೆಗಳನ್ನು ರಚನೆ ಮಾಡಿದ್ದಾರೆ. ಉಡುಪಿಯ ನಂತರ ಇದೇ ದೊಡ್ಡ ಪುರಸಭೆ. ಬಂಟ್ವಾಳ ಪುರಸಭೆಯಲ್ಲಿ ೪೦ ಸಾವಿರಕ್ಕಿಂತಲೂ ಹೆಚ್ಚಿದ್ದು, ಶೇಕಡಾ ೨೫ ಭಾಗದ ಜನರಿಗೆ ನೀರಿನ ವ್ಯವಸ್ಥೆ ಸಿಗುತ್ತಿಲ್ಲ. ಹೀಗೆ ಗ್ರಾಮಗಳನ್ನು ಸೇರಿಸಿಕೊಂಡು ಪುರಸಭೆಗಳಿಗೆ, ಅವನ್ನು ವಿಂಗಡಿಸಿ ಮಂಡಲ ಪಂಚಾಯ್ತಿಗಳಾಗಿ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೆವು. ಅಲ್ಲದೆ ಬಂಟ್ವಾಳದ ಮೂರು ಗ್ರಾಮಗಳನ್ನು ಬೇರೆ ಬೇರೆ ಯಾಗಿ ವಿಂಗಡಣೆ ಮಾಡಿ ಮಂಡಲ ಪಂಚಾಯ್ತಿಯನ್ನಾಗಿ ಮಾಡ ಬೇಕೆಂಬ ಬೇಡಿಕೆ ಇದ್ದರೂ ಕೂಡ ಸರ್ಕಾರ ಇನ್ನೂ ಮಾಡಿಲ್ಲ. ಈ ಪ್ರದೇಶದ ಜನರು ಸರ್ಕಾರಕ್ಕೆ ಕೊಡುವಂತಹ ಟ್ಯಾಕ್ಸ್ ಏನಿದೆ ಅದನ್ನು ಜಾಸ್ತಿ ಕೊಡಬೇಕು, ಅವರು ಹೆಚ್ಚಿಗೆ ಟ್ಯಾಕ್ಸನ್ನೇನೋ ಕೊಡುತ್ತಿದ್ದಾರೆ. ಆದರೆ ಅಲ್ಲಿ ಏನೇನೂ ವ್ಯವಸ್ಥೆ ಇಲ್ಲ. ಅಲ್ಲಿ ನೀರಿನ ವ್ಯವಸ್ಥೆ ಇಲ್ಲ, ದಾರಿ ದೀಪದ ವ್ಯವಸ್ಥೆ ಇಲ್ಲ, ಯಾವುದೇ ವ್ಯವಸ್ಥೆಯಿಲ್ಲದೆ ಜನರು ವಂಚಿತರಾಗಿದ್ದಾರೆ. ಆ ಕಡೆ ಹೆರಿಗೆ ಭತ್ಯೆ, ಹಸಿರು ಕಾರ್ಡಿನ ವ್ಯವಸ್ಥೆಯಿಲ್ಲದೆ ಈ ಕಡೆ ನಗರ ಪ್ರದೇಶದವರಿಗೆ ಸಿಗುವ ಸೌಲಭ್ಯಗಳಾಗಲೀ ಇಲ್ಲವೇ ಗ್ರಾಮಾಂತರ ಪ್ರದೇಶದವರಿಗೆ ಸಿಗುವ ಸೌಲಭ್ಯಗಳಾಗಲಿ ಇಲ್ಲದೆ ವಂಚಿತರಾದಂತಹ ಸಮಾಜದಲ್ಲಿ ಅವರು ಇದ್ದಾರೆ. ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದ್ದರಿಂದ ಈ ಪುರಸಭೆಯ ನೀರಿನ ವ್ಯವಸ್ಥೆ ಬಗ್ಗೆ ತಾವು ಗಮನ ಕೊಡಬೇಕು. ೮೦ ಲಕ್ಷ ರೂಪಾಯಿಯ ಒಂದು ಪ್ರಪೋಸಲ್ ಅನ್ನು ಅಲ್ಲಿಗೆ ಕಳಿಸಿಕೊಟ್ಟಿದ್ದೇವೆ. ಈ ಹಣವನ್ನು ಪುರಸಭೆಯವರು ಭರಿಸಿಕೊಳ್ಳು ವುದಕ್ಕೆ ಅಸಾಧ್ಯವಾದಂತಹ ಬಡತನದಲ್ಲಿ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಸಿರಾ ತಾಲ್ಲೂಕಿನ ಪುರಸಭೆಯ ೬೫ ಲಕ್ಷ ರೂಪಾಯಿಯನ್ನು ನೀವೇ ಭರಿಸಿಕೊಂಡು ನೀರಿನ ವ್ಯವಸ್ಥೆ ಮಾಡಿದಂತಹದ್ದನ್ನು ನೆನಪು ಮಾಡುತ್ತಾ, ಬಂಟ್ವಾಳ ತಾಲ್ಲೂಕು ಹಳ್ಳಿ ಪ್ರದೇಶದಿಂದ ಕೂಡಿರತಕ್ಕಂತಹ ಪ್ರದೇಶವಾಗಿದ್ದು, ಅದು ದೊಡ್ಡ ಪುರಸಭೆಯಾಗಿರುವುದರಿಂದ ಸರ್ಕಾರವು ಇದನ್ನು ತಾವೇ ಭರಿಸಿಕೊಂಡು ನಲ್ಲಿ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.— Sri Roshan Baig will speak now.

SRI R. ROSHAN BAIG.— Mr. Speaker Sir, I thank you for having given me a chance to speak on the demands for grants in respect of H. U. D. and Health Departments. Firstly, I speak on the demands on H. U. D. Sir, in Bangalore City Corporation in respect of taking up of any major works, officials say that no major works can be taken up this year due to paucity of funds, In the last year budget though the money was sanctioned, I am sorry to say that no major work was taken in my Constituency. The Project of remodelling of Russel Market was not taken up.

ಶ್ರೀ ಜಿ. ನಾರಾಯಣಕುಮಾರ್.— ಮಾನ್ಯ ಅಧ್ಯಕ್ಷರೇ ನಮ್ಮಗೆ ಒಂದು ವಿಚಾರವು ಗೊತ್ತಾಗುತ್ತಿಲ್ಲ. ನಿನ್ನೆ ತಾನೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಈ ಸದನದಲ್ಲಿ ಕನ್ನಡದ ಬಗ್ಗೆ ಎಷ್ಟು ಕಳಕಳಿ ಇರಬೇಕು ಎಂದು ಮಾನ್ಯ ರೋಷನ್ ಬೇಗ್‌ರವರಿಗೆ ಕನ್ನಡ ಬರುತ್ತದೆ. ನೀವೇಕೆ ಒತ್ತಾಯ ಮಾಡುತ್ತಿಲ್ಲ, ಕನ್ನಡದಲ್ಲಿ ಮಾತನಾಡಿ ಎಂದು. ಮೊನ್ನೆ ತಾನೇ ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಚೆನ್ನಾಗಿ ಕನ್ನಡ ಬಂದರೂ ಏಕೆ ವಂಚನೆ ಮಾಡುತ್ತಾರೆ.

SRI R. ROSHAN BAIG.— Sir, in the Civil Area there is only one beauty spot i. e., Ulsoor Lake; I am sorry to tell you that the land near tank bed portion of the main canal was awarded to one Mr. Sohia of Hyderabad in the year 1980. They were about to start the construction. But, Sri Michael Fernandez and others protested against the construction on that place. Accordingly, the City Corporation had written to the State Government to revoke that decision during the year 1980. Now we are in 1986 and it has come to my notice that the entire file is missing in the Secretariat. That is why, again, the City Corporation is passing a resolution to that effect; it is in the agenda of tomorrow. I would like to know what happened to that file. The funniest part of it is Mr. Sohia in the name of whom the land is allotted is no more.

(Interruption)

ಶ್ರೀ ಜಿ. ನಾರಾಯಣ ಕುಮಾರ್.— ಅವರಿಗೆ ಬಂದ ಹಾಗೆ ಕನ್ನಡದಲ್ಲಿ ಮಾತನಾಡಲಿ; ವ್ಯಾಕರಣದ ಬಗ್ಗೆ ಮಾತನಾಡಿ ಎಂದು ಏನೂ ಹೇಳಲಿಲ್ಲ.

ಶ್ರೀ ಆರ್. ರೋಷನ್ ಬೇಗ್.—ಕನ್ನಡ ಎಂದು ಹೇಳಿಕೊಂಡು ಅಸೆಂಬ್ಲಿಗೆ ಬಂದಿಲ್ಲ. ಚಳುವಳಿ ಮಾಡಿ, ಸ್ಟೂಡೆಂಟ್ ಲೀಡರ್ ಆಗಿ ಅಸೆಂಬ್ಲಿಗೆ ಬಂದಿದ್ದೇನೆ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಅವರಿಗೆ ಬುದ್ದಿ ಹೇಳಿ. ಕನ್ನಡದಲ್ಲಿ ಟೀಕೆ ಮಾಡುತ್ತಾರೆ ಆದರೆ ವಿಷಯ ಬಂದಾಗ ಏಕೆ ಕನ್ನಡದಲ್ಲಿ ಮಾತನಾಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ನಾರಾಯಣಕುಮಾರ್‌ರವರು ಅಡ್ಡಿ ಬರಬಾರದೆಂದು ಅವರಲ್ಲಿ ಮನವಿ ಮಾಡುತ್ತೇನೆ. ಇಂತಹ ಭಾಷೆಯಲ್ಲೇ ಮಾತನಾಡಬೇಕೆಂದು ನಮ್ಮ ನಿಯಮಾವಳಿಯಲ್ಲಿ ಇಲ್ಲ. ಆದುದರಿಂದ ಸನ್ಮಾನ್ಯ ಸದಸ್ಯರು ದಯವಿಟ್ಟು ಸಭೆಯು ಸರಾಗವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.— ನಾನು ಕಲಾಪಕ್ಕೆ ಅಡ್ಡಿ ಬಂದಿಲ್ಲ. ಕನ್ನಡದ ಬಗ್ಗೆ ಕಳಕಳಿ ಇದೆ. ಮಾನ್ಯ ಲಕ್ಷ್ಮೀಸಾಗರ್‌ರವರೂ ಕೂಡ ಕನ್ನಡದವರು.

ಅಧ್ಯಕ್ಷರು.— ಸಭೆ ನಡೆಸುವವರು ನಾವು.

ಶ್ರೀ ಜಿ. ನಾರಾಯಣ ಕುಮಾರ್.— ನಾನೂ ಕೂಡ ಆಯ್ಕೆಯಾಗಿ ಈ ಸದನಕ್ಕೆ ಬಂದಿದ್ದೇನೆ. ಈ ನಾಡಿನ ಭಾಷೆ, ಆಡು ಭಾಷೆ, ಗ್ರಾಮೀಣ ಭಾಷೆ ಕನ್ನಡ. ಇಂಗ್ಲೀಷಿನವರ ಜೊತೆಯಲ್ಲೇ ಇರಬಹುದಿತ್ತಲ್ಲ, ಅವರನ್ನೇಕೆ ದೇಶ ಬಿಟ್ಟು ಓಡಿಸಬೇಕಿತ್ತು.

SRI R. ROSHAN BAIG.—Sir regarding Ulsor lake I request the Hon'ble Minister to immediately revoke the lease. In Bangalore City Corporation they say that we are short of funds. I would like to say here that the State Government can get more funds from the Central Government. For Example, there are Central Government Offices in Bangalore, they give service charges to the City Corporation. It is only Rs. 5 lakhs, it is a very meagre amount. I request the State Government to advice at least to get Rs. 25 lakhs from the Central Government. Now, I come to Khatha transfer. Recenty the Bangalore City Corporation has imposed a sum of Rs. 500-00 for Khata transfer. It is all right if one person sells the property to another, but, if wife transfers the property to the husband, they have to pay Rs. 500-00 This is very unjust. Therefore, I request the Minister to examine it and see that Rs. 500-00 is not collected wherever transfer of property effects on the basis of hereditary. The Government has constituted the Jacob Committee and the Gommittee has recommended to give 25% of the collection of the Motor Vehicle Tax to the City Corporation. request the Minister to implement the recommendations of the Jacob Committee at the earliest. Now regarding entertainment tax. Sir, income from theatres is very low. In Bangalore the income from theatres is very low. Most the theatres are leased out to private individuals. The tax collected from these theatres are only Rs. 24-25 lakhs. Sir, regarding advertiesment tax, I woud like to suggest the Government that 50% of the tax is evaded, the Corporation is not getting full tax, Therefore, I request the Government to form a Committee either of City Corporators or of City Legislators to suggest remedial measures for unauthorised hoarding of advertisement tax. The advertisement tax can also be collected from the TV and Radio also. The share of advertisment tax in respect of films or slides shown in cinema theatres may also be given to Bangalore City Corporation. Sir there are approximately 150 revenue pockets in Bangalore City Corporation 46 revenue pockets have been identified so far. The Corporation has passed a resolution for collecting betterment charges and the concerned file has been sent to the BDA and that file, I am told, is pending there. If the BDA clears betterment chrges immediately, the Corporation will get about 2 crores. Another 100 revenue pockets had to be regularised and it is pending before the Corporation if they finalise it, the Corporation, gets money of more than about Rs. 4 crores. Sir near Frazer town, there is a village called Devarajeevana Halli most of the inhabitants are muslims and

SCs/STs. I do not know why step motherly treatment is meted out to this village by not including this village to the City Coroparation the other day I went to that village. I felt very sorry to see the inhuman conditions in which they are living there. Even pregnant ladies had to face difficulties while delivering babies, they do not get autorikshaw even to go to hospitals I request the Government to include this village to the City Corporation and improve the village. Bangalore City Corporation can also be named as Greater Bangalore City as in Bombay. Bombay City Corporation is now called as Greater Bombay Corporation. I request the Government to think over it. When Sri K. Hanumanthaiah was the Railway Minister he had sanctioned all the approaches to the Railway bridges, on the condition that 50% will be provided by the Railway Department. Therefore, I request the Government to initiate this matter with the railway authority and collect money so that all the approaches to railway bridges can be completed. Sir, in my constitueney there is not even single degree college and therefore, I request the Government to sanction and give permission to start medical and engineering degree colleges in my constituency. As in Bombay Corporation I also request the City Corporation to start different technical Institutions like ITI etc., in various parts of the Corporation area. In the case of City Corporation 20% of the seats are reserved for women, I feel it is insufficient. Though Rs. 5 lakhs was earmarked by the Corporation to my area even Rs. 500 has not been spent, but in this year's budget they have earmarked Rs. 10 lakhs and I doubt whether they will be able to really spend that amount. We do not have trucks and lorries to clear the garbage and we are short of funds and there is no point in making big allotment on paper without spending. I want to forewarn the Government because there is a big conspiracy, they want to loot about Rs, 10 crores in the months of April/May/June by revising property tax. The tax inspectors are allowed to go and revise taxes. They will inspect the House, if they are bribed they will write red oxide for marble and reduce the house tax. Therefore I request the Government to appoint Committees for each Assembly constituency with Assistant Commissioner or Special DCs so that the harassment to the genuine house owners by these people can be stopped. Now I come to Health Department. I have spoken about the condition of the Bowring Hospital even last year on Healh Demands. Bowring and Victoria Hospitals are the two major hospitals in Bangalore City. In Bowring Hospital still Cardiology and urology units are not there. I request the Hon'ble Minister for Health to immediately sanction one Cardiology and Urology

units. I am grateful to the Hon'ble Minister Sri Inamdar for having sanctioned a generator in Bowring Hospital, So far there was no generator in Bowring Hospital. Sir, there are vacanies of nursing superintendents and securi y staff. Last year a child was missing from a special ward and so far that child has not been traced. I request the Government to immediately sanction security staff. I also request to sanction lift operator and record section. One more thing I want to bring to your notice. Any time the electricity and water may be disconnected in this Bowring hospital any day because the hospital is to owe to the Water Board and the Electricity Board about Rs. 33 lakhs. I request the Government to immediately intervene in this behalf and save the hospital. I also request for sanction of electric laundry to the Bowring Hospital as was done in Victoria hospital. I also request for sanction of additional nursing staff and Class-IV stoff. The ratio between patients and nurses is very low in Bowring hospital. Sir, with these words I thank the Speaker for providing me an opportunity to speak in the language I wish Thanking you.

ಶ್ರೀ ಸಿ. ಕಣ್ಣನ್ (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮಂತ್ರಿಗಳು ಬೇಡಿಕೆಯನ್ನು ಮಂಡಿಸಿದ್ದಾರೆ. ಅದನ್ನು ವಿರೋಧಿಸಿ ತಮ್ಮ ಮುಖಾಂತರ ಸರ್ಕಾರಕ್ಕೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಕಾರ್ಪೊರೇಷನ್‌ನಲ್ಲಿ ಸರ್ಕಾರಕ್ಕೆ ೨,೧೯೦ ಲಕ್ಷ ರೂಪಾಯಿ ರೆವಿನ್ಯೂ ಬರುತ್ತದೆ. ಅದರಲ್ಲಿ ೧೯೮೫-೮೬ನೇ ಸಾಲಿಗೆ ಸುಮಾರು ೧೩೮ ಲಕ್ಷ ಹಣವನ್ನು ಶೇಕಡ ೧೮ ರಷ್ಟು ಇರುವ ಎಸ್.ಸಿ. ವರ್ಗಕ್ಕೆ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಬಹಳ ಕಡಿಮೆ ಇದು. ೧೯೮೬-೮೭ರಲ್ಲಿ ೨೦೮ ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಎರಡನೆಯದು, ೫೦೬ ಪೌರ ಕಾರ್ಮಿಕರಿಗೆ ಕ್ವಾರ್ಟರ್ಸ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ೧೫ ವರ್ಷ, ೨೦ ವರ್ಷಗಳಿಂದ ಪೌರಕಾರ್ಮಿಕರಾಗೇ ಕೆಲಸ ಮಾಡುತ್ತಿರುವವರಿಗೆ ಕ್ವಾರ್ಟರ್ಸ್ ಕೊಟ್ಟಿಲ್ಲ, ಆದ್ದರಿಂದ ಎಲ್ಲರಿಗೂ ಕ್ವಾರ್ಟರ್ಸ್‌ನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ನಮ್ಮ ಬೆಂಗಳೂರಿನಲ್ಲಿ ೩೫ ಲಕ್ಷ ಜನಸಂಖ್ಯೆ ಇದೆ. ಅದರಲ್ಲಿ ಐದರಲ್ಲಿ ಒಂದು ಭಾಗ ಎಸ್.ಸಿ. ಇದ್ದಾರೆ. ಮೂರೇ ಮೂರು ಶೆಡ್ಯೂಲ್ ಕ್ಯಾಸ್ಟ್ ಹಾಸ್ಟೆಲ್ಸ್ ಕೊಡುತ್ತಿದ್ದೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಇನ್ನೂ ಕೊಟ್ಟಿಲ್ಲ. ಆದ್ದರಿಂದ ಇನ್ನೂ ಹೆಚ್ಚಾಗಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಬೆಂಗಳೂರು ಸಿಟಿ ಪ್ಲಾನಿಂಗ್ ಬಹಳ ತಪ್ಪಾಗಿ ಮಾಡಿದ್ದಾರೆ. ಯಾರ ಕಾಲದಲ್ಲಿ ಇದನ್ನು ಮಾಡಿದ್ದೋ ಗೊತ್ತಿಲ್ಲ, ಆದರೆ ನಗರವು ಬೆಳೆಯುತ್ತಲೇ ಇದೆ. ಈಗ ಏನಾಗಿದೆ ಎಂದರೆ, ಕಮರ್ಷಿಯಲ್ ಸ್ಟ್ರೀಟ್ ಆಗಬೇಕಾದ ಕಡೆ ಇಂಡಸ್ಟ್ರಿ ಬೆಳೆಯುತ್ತಿದೆ. ಇಂಡಸ್ಟ್ರಿ ಇರಬೇಕಾದ ಕಡೆ ರೆಸಿಡೆನ್ಸಿ ಬಂದಿದೆ. ಟೌನ್ ಪ್ಲಾನಿಂಗ್ ಸರಿಯಾಗಿ ಮಾಡಿಲ್ಲ. ಬಿಡಿಎ ನವರೂ, ಕಾರ್ಪೊರೇಷನ್ನಿನವರೂ ಒಂದಾಗಿ ಪ್ಲಾನಿಂಗ್ ಮಾಡಿದ್ದರೆ ಈ ತರಹ ಆಗುತ್ತಿರಲಿಲ್ಲ. ಆದ್ದರಿಂದ ಇನ್ನೂ ಮುಂದಾದರೂ ಇರುವ ಪ್ಲಾನನ್ನು ಚೇಂಜ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೂರನೆಯದು, ವಾಟರ್ ಸಪ್ಲೈದು. ಅದರ ಕಮಿಟಿಯಲ್ಲಿ ನಾನೂ ಮೆಂಬರಾಗಿದ್ದೆ. ಬೆಂಗಳೂರು ಜಲಮಂಡಲಿಯನ್ನು ನಾನು ಕಂಗ್ರಾಚುಲೇಟ್ ಮಾಡಬೇಕಾಗಿದೆ. ಕೇವಲ ೪ ತಿಂಗಳಲ್ಲೇ ೬೦೦ ಮಿಲಿಯನ್ ಗ್ಯಾಲನ್ ನೀರನ್ನು ಶಿಂಷಾ ನದಿಯಿಂದ ಬೆಂಗಳೂರಿಗೆ ಕೊಡಿಸಿದ್ದಾರೆ. ಈ ರೀತಿ ಕನ್

ಸ್ಟ್ರಿಕ್ಟ್‌ವಾಗಿ ಕೆಲಸ ಮಾಡುವ ಇವರನ್ನು ಕಂಗ್ರಾಚುಲೇಟ್ ಮಾಡುತ್ತೇನೆ. ಅಲ್ಲದೆ ನಗರದ ವಾಟರ್ ಸಪ್ಲೈ ಡಿವಿಜನ್‌ಗಳನ್ನು ನಾಲ್ಕನ್ನಾಗಿ ಮಾಡಬಹುದು. ಸ್ಯಾನಿಟರಿಗೂ ೨ ಡಿವಿಜನ್ ಮಾಡಬಹುದೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ, ಮಾನ್ಯ ನಗರಾಭಿವೃದ್ಧಿ ಸಚಿವರಿಗೂ ಪತ್ರ ಬರೆದಿದ್ದೇನೆ. ಅವರು ನನ್ನ ಸಲಹೆಗಳನ್ನು ಒಪ್ಪಿಕೊಂಡು ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಇಲ್ಲೀ ತನಕ ಮಾಡಿಲ್ಲ. ಜಾಗ್ರತೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮೂರನೆಯದು, ನಮ್ಮ ಕಾಮ್ರೇಡ್ ಕೃಷ್ಣನ್‌ರವರು ಆಗಲೇ ಹೇಳಿದರು. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಇರುವ ಗೋಡೆ ಗೋಡೆಗಳು ಲಂಚ ಕೇಳುತ್ತವೆ. ದೊಡ್ಡ ಆಫೀಸರ್‌ನಿಂದ ಹಿಡಿದು ಸಣ್ಣ ಸಣ್ಣ ಜವಾನನವರೆಗೂ ಭ್ರಷ್ಟರಾಗಿದ್ದಾರೆ. ಅವರು ನಮ್ಮನ್ನು ಒಳಗಡೆಯೇ ಸೇರಿಸುವುದಿಲ್ಲ. ನನ್ನ ಎಕ್ಸ್‌ಪೀರಿಯನ್ಸಿನಲ್ಲಿ ನನ್ನ ಕ್ಷೇತ್ರದಲ್ಲಿ ಅಕ್ಕಿತಿಮ್ಮನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘ ಇದೆ. ಅಲ್ಲಿ ೨೦೫ ಸೈಟ್ ಕೊಡಬೇಕೆಂದು ೧೯೮೩ರಲ್ಲಿ ರೆಸಲ್ಯೂಷನ್ ಮಾಡಿ ೩೮ ಸೈಟ್ ಮಾತ್ರ ಬಿಡುಗಡೆ ಮಾಡಲು ಅವರು ರೆಸಲ್ಯೂಷನ್ ಮಾಡಿದ್ದಾರೆ. ಈ ಮಧ್ಯದಲ್ಲಿ ಈ ಲ್ಯಾಂಡ್ ಬೇರೆಯವರಿಗೆ ಸ್ಯಾಂಕ್ಷನ್ ಆಗಿದೆ. ಆ ಬಗ್ಗೆ ಕೋರ್ಟಿನಲ್ಲಿ ಡಿಸ್‌ಪ್ಯೂಟ್ ಇದೆ. ಸ್ವಲ್ಪ ದಿನಗಳ ಹಿಂದೆ ನನ್ನ ಕ್ಷೇತ್ರದಲ್ಲಿ ಮಾಜಿ ಎಂ.ಎಲ್.ಎ. ಅವರೊಂದಿಗೆ ಈ ಬಗ್ಗೆ ಕಮೀಷನರ್ ಅವರನ್ನು ನೋಡಲು ಹೋದೆ. ಅವರು ಇಂಟರ್‌ವ್ಯೂನೇ ಕೊಡಲಿಲ್ಲ. ಸೆಕ್ರೆಟರಿಯನ್ನು ನೋಡಿ ಹೋಗಿ ಎಂದು ಹೇಳಿದರು. ಒಳಗಿನಿಂದಲೇ ಹೀಗೆ ಹೇಳಿ ಕಳಿಸಿದರು. ಬಾಗಿಲು ಮುಚ್ಚಿದ್ದು ತೆಗೆಯಲೇ ಇಲ್ಲ. ಇಂಥ ಅಧಿಕಾರಿಗಳಿರುವಾಗ ಬಡವರಿಗೆ ಎಲ್ಲಿ ಅನುಕೂಲವಾಗುತ್ತದೆ.

ಶ್ರೀ ರೋಷನ್ ಬೇಗ್‌ರವರು ಹೇಳಿದರು, ಕಾರ್ಪೋರೇಷನ್‌ನಲ್ಲಿ ರೆವಿನ್ಯೂ ಪಾಕೇಟ್‌ಗಳನ್ನು ಸಿಟಿ ಲಿಮಿಂಟೇಷನ್‌ಗೆ ತೆಗೆದುಕೊಳ್ಳುವ ಬಗ್ಗೆ ಬೆಟರ್‌ಮೆಂಟ್ ಚಾರ್ಜ್ ಫಿಕ್ಸ್ ಮಾಡಿದ್ದಾರೆ. ಅದಕ್ಕೆ ಒಂದು ಸ್ಟ್ಯಾಂಡಿಂಗ್ ಕಮಿಟಿಯೂ ಇದೆ. ಟ್ಯಾಕ್ಸ್ ಕಮಿಟಿ, ಹೆಲ್ತ್ ಕಮಿಂಟಿ, ಫೈನಾನ್ಸ್ ಕಮಿಟಿಗಳಿವೆ. ಜನರಲ್ ಕೌನ್ಸಿಲರ್ಸ್ ಯಾವ್ಯಾವ ವಿಷಯಗಳನ್ನು ಇವರಿಗೆ ರೆಫರ್ ಮಾಡುತ್ತಾರೋ ಅವನ್ನು ಇವರು ನೋಡಿಕೊಳ್ಳುತ್ತಾರೆ. ಇದಕ್ಕೂ ಬಿಡಿಎಗೂ ಸಂಬಂಧ ಇಲ್ಲ. ಹೋದ ವರ್ಷ ಈ ತರಹ ರೆಫರ್ ಮಾಡದೆಯೇ ಫಾರ್ಮಾಲಿಟಿ ಮಾಡಿ ಕಳಿಸಿದ್ದರು. ಈಗಿರುವ ಕಮೀಷನರ್ ಆ ಫೈಲನ್ನು ರಿಜಿಸ್ಟರ್ ಸಹ ಮಾಡಿಕೊಂಡಿದ್ದಾರೆ. ಇದೊಳ್ಳೆ ತಮಾಷೆ. ನಾವು ಕಾರ್ಪೊರೇಷನ್‌ಗೆ ದುಡ್ಡು ಕೊಟ್ಟಿದ್ದರೂ ಬಿಡಿಎನವರು ರೆವಿನ್ಯೂ ಪಾಕೆಟ್‌ನ್ನು ಬಿಡುಗಡೆ ಮಾಡಬೇಕೆಂದು ಕಾರ್ಪೊರೇಷನ್ ಕಮಿಷನರ್ ಹೇಳುತ್ತಾರೆ. ರೆವಿನ್ಯೂ ಪಾಕೆಟ್‌ಗಳನ್ನು ರೀಕನ್ಸ್ ಮಾಡಿರುವುದು ಎಂದರೆ ಏನು ಅರ್ಥ?

ಇನ್ನು ಈ ಬೇಡಿಕೆಯಲ್ಲಿ ೯೬೫ ಸ್ಲಮ್ಸ್ ಇದೆ ಎಂದು ಹೇಳುತ್ತಾರೆ. ಇವುಗಳಲ್ಲಿ ೮೫೦ ಅನ್ನು ಸ್ಲಮ್ ಬೋರ್ಡ್ ತೆಗೆದುಕೊಂಡಿದೆ. ಶ್ರೀಮಾನ್ ದೇವರಾಜ್ ಅರಸರ ಕಾಲದಲ್ಲಿ ಈ ಬೋರ್ಡ್ ಆದದ್ದು. ಇಲ್ಲಿಯತನಕ ಮನೆ ಕಟ್ಟಿಸಿಕೊಟ್ಟಿರುವುದು ಬರೀ ೪೨೦೦ ಜನರಿಗೆ ನೀವು ಉಳಿದ ಎಲ್ಲರಿಗೂ ಕಟ್ಟಿಸಿಕೊಡುವುದು ಯಾವಾಗ?

ಅಧ್ಯಕ್ಷರೇ, ಹೋದ ವರ್ಷ ಇಡೀ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಈ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ನೆಮ್ಮದಿ ಇರಲಿಲ್ಲ. ಎಲ್ಲ ಮನೆಗಳನ್ನು ಹೊಡೆದು ಹಾಕಿ ಅಲ್ಲಿನ ಜನ ತಮ್ಮ ಮಕ್ಕಳನ್ನು ಬೀದಿಗಳಲ್ಲಿ ನಿಲ್ಲಿಸಿಕೊಂಡಿದ್ದರು. ಆ ಜನಗಳೆಲ್ಲ ಮಾನ್ಯ ಲಕ್ಷ್ಮೀಸಾಗರ್‌ರವರ ಹತ್ತಿರ ಬಂದು ಸ್ವಾಮಿ, ನೀರಿಲ್ಲ, ಮನೆಯಿಲ್ಲ ಎಂದರೆ ಇವರು ನೋಡಿ, ನಾವೇ ಈಗ ಎರಡು ಬಕೆಟ್ ನೀರಿಗೆ ಅಲೆದು ತಂದಿದ್ದೇನೆ ಎನ್ನುತ್ತಾರೆ, ಮನೆಯಿಲ್ಲ ಎಂದರೆ ನೋಡಿ ನಾನು ಸಚಿವನಾಗಿ ಹಳೆಯ ಬಾಡಿಗೆ ಮನೇಲಿದ್ದೇನೆ ಎನ್ನುತ್ತಾರೆ. ಇಂಥ ಸಚಿವರನ್ನು ಈ ಸರ್ಕಾರ ಕೊಳಚೆ ಪ್ರದೇಶಗಳ ಕಷ್ಟ ನಿವಾರಣೆಗೆಂದು ಇಡಬಾರದಾಗಿತ್ತು. ಸರ್ಕಾರವೇನು ಹೆಚ್ಚು ಹಣ ಕೊಡಬೇಕಾಗಿಲ್ಲ. ಹುಡ್ಕೋನವರು ೯೦ ಪರ್ಸೆಂಟ್ ಕೊಡುವುದಕ್ಕೆ ಸಿದ್ಧವಿದ್ದಾರೆ, ಆ ದುಡ್ಡಿನಲ್ಲಿ ಕೆ.ಹೆಚ್.ಬಿ.ನವರೋ ಬಿಡಿಎನವರೋ ಕಾರ್ಪೋರೇಷನ್‌ನವರೋ ಕಟ್ಟಿ ಕೊಡುತ್ತಾರೆ. ಸರ್ಕಾರ ಏನು ಮಾಡಬೇಕೆಂದರೆ ೧೦ ಪರ್ಸೆಂಟ್ ಹಣ ಕೊಟ್ಟು ಆ ದುಡ್ಡಿಗೆ ಗ್ಯಾರಂಟಿ ನಿಂತರೆ ಸಾಕು. ಬೇರೆ ರಾಜ್ಯಗಳಲ್ಲಿ ಈ ಬಗ್ಗೆ ಬೇಕಾದಷ್ಟು ಸಹಾಯ ಆಗಿದೆ ಆದ್ದರಿಂದ ಈ ವರ್ಷವೇ ಶೇಕಡಾ ೫೦ರಷ್ಟು ಸ್ಲಂ ವಾಸಿಗಳಿಗೆ ಮನೆ ಕಟ್ಟಿಸಿಕೊಡಬೇಕೆಂದು ಕೋರುತ್ತೇನೆ.

ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಫಾರಿನ್‌ನಲ್ಲಿರತಕ್ಕ ಇಂಡಿಯನ್‌ರವರಿಗೆ ಬೆಂಗಳೂರು ನಗರದಲ್ಲಿ ಸೈಟುಗಳನ್ನು ಕೊಡುತ್ತೇವೆ, ಅವರು ಡಾಲರ್ ಸಿಸ್ಟಮ್‌ನಲ್ಲಿ ಹಣವನ್ನು ಕೊಡಬಹುದೆಂದು ಹೇಳಿದರು. ಆಗ ಸುಮಾರು ೮೦೦ ಜನ ೨೦ ಸಾವಿರ ರೂಪಾಯಿಗಳನ್ನು ಡಾಲರ್ ರೂಪದಲ್ಲಿ ಒಟ್ಟೊಟ್ಟರು ಡಿಪಾಸಿಟ್ ಮಾಡಿದ್ದಾರೆ. ಇದುವರೆಗೂ ಅವರಿಗೆ ಸೈಟುಗಳನ್ನು ಕೊಟ್ಟಿಲ್ಲ, ಮತ್ತು ಹಣವನ್ನು ವಾಪಸ್ಸು ಕೊಟ್ಟಿಲ್ಲ. ಪತ್ರಿಕೆಗಳಿಗೆ ಹಣವನ್ನು ವಾಪಸ್ಸು ತೆಗೆದುಕೊಳ್ಳುವವರು ತೆಗೆದುಕೊಳ್ಳಬಹುದೆಂದು ಜಾಹೀರಾತು ಕೊಟ್ಟರು. ಅವರಿಗೆ ಹಣವೂ ಇಲ್ಲ, ಅದರ ಬಡ್ಡಿಯೂ ಇಲ್ಲ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಸೈಟಿಗಾಗಿ ೨೨ ಸಾವಿರ ಅರ್ಜಿಗಳು ಬ್ಯಾಲೆನ್ಸ್ ಇವೆ. ಬೆಂಗಳೂರು ನಗರದಲ್ಲಿ ಶೇಕಡ ೮೦ರಷ್ಟು ಜನ ಕಾರ್ಮಿಕರು ಇದ್ದಾರೆ. ಅವರೆಲ್ಲರೂ ತಿಂಗಳಿಗೆ ೫೦ ರೂಪಾಯಿ ೧೦೦೦ ರೂಪಾಯಿ ಈ ತರಹ ಹಣವನ್ನು ಉಳಿಸಿ ೨೦-೩೦ ಅಡಿ ಅಳತೆಯುಳ್ಳ ಸೈಟು ೩೦-೪೦ ಅಡಿ ಅಳತೆಯುಳ್ಳ ರೆವೆನ್ಯೂ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಲೇಔಟ್ ಮಾಡುವಾಗ ಆ ನಿವೇಶನಗಳನ್ನು ಅಕ್ವೈರ್ ಮಾಡಿಕೊಂಡು ಕಟ್ಟಿಕೊಂಡಿದ್ದ ಮನೆಗಳನ್ನು ಒಡೆದಿದ್ದಾರೆ, ಅವರಿಗೆ ಇನ್ನೂ ಪರಿಹಾರವನ್ನು ಕೊಟ್ಟಿಲ್ಲ. ಇವರ ಕೈಯಲ್ಲಿ ಸೈಟನ್ನು ಕೊಡುವುದಕ್ಕೆ ಆಗುವುದಿಲ್ಲ. ನಾನು ಒಂದು ಮಾತನ್ನು ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಕನ್ನಡಿಗರಿಗೆ ಸೈಟುಗಳು ಸಿಗುತ್ತಿಲ್ಲ. ಯಾರ್‍ಯಾರು ಲಂಚ ಕೊಡುತ್ತಾರೆ, ಯಾರ್‍ಯಾರು ಶಿಫಾರಸ್ಸು ಮಾಡಿಸುತ್ತಾರೆ ಅಂತಹವರಿಗೆ ಸೈಟುಗಳು ಸಿಗುತ್ತವೆ. ರೆವಿನ್ಯೂ ಸೈಟುಗಳನ್ನು ರೀಕನ್ವೆ ಮಾಡಿ ಅಥವಾ ಅವರಿಗೆ ಬೇರೆ ಸೈಟುಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ನಗರಾಭಿವೃದ್ಧಿ ಮತ್ತು ಆರೋಗ್ಯ ಇಲಾಖೆಗಳ ಬಗ್ಗೆ ಸಾಕಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಆರೋಗ್ಯ ಇಲಾಖೆಯವರು ಹೊಸ ಆಸ್ಪತ್ರೆಗಳನ್ನು ಮಾಡುವುದಕ್ಕೆ ಬದಲಾಗಿ, ನಾವು ಹೊಸ ಆಸ್ಪತ್ರೆಗಳನ್ನು ಕೊಡಿಯೆಂದು ಕೇಳುವುದಿಲ್ಲ. ಈಗಿರತಕ್ಕ ಆಸ್ಪತ್ರೆಗಳಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಡಾಕ್ಟರುಗಳು ಆಸ್ಪತ್ರೆಗಳಲ್ಲಿರಬೇಕು. ಈಗ ಸಾಕಷ್ಟು ಡಾಕ್ಟರುಗಳ ಕೊರತೆಯಿದೆ. ಹಣಕಾಸಿನ ಕೊರತೆ ಸರ್ಕಾರಕ್ಕೆ ಬಹಳ ಇರಬಹುದು. ಜನರ ಆರೋಗ್ಯ ಭಾಗ್ಯ ಬಹಳ ಮುಖ್ಯ. ಇವತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ಸಾಕಷ್ಟು ಔಷಧಿಗಳಿಲ್ಲ. ಹಳೆಯ ಕಾಲದ ರೇಟನ್ನು ಕೊಡುತ್ತಿದ್ದಾರೆ. ಇವತ್ತಿನ ರೇಟಿಗೆ ಹೋಲಿಸಿದರೆ ಕೊಡತಕ್ಕದ್ದು ಬಹಳ ಕಡಿಮೆ. ಇವತ್ತು ಕೊಡತಕ್ಕ ಹಣಕ್ಕೂ, ಇವತ್ತಿನ ರೇಟಿಗೂ ಬಹಳ ವ್ಯತ್ಯಾಸವಿದೆ. ಇವತ್ತು ಕೊಡತಕ್ಕ ಹಣದಲ್ಲಿ ಹತ್ತನೆಯ ಒಂದು ಭಾಗ ಬರುತ್ತದೆ. ಇವತ್ತು ಆಸ್ಪತ್ರೆಗಳಲ್ಲಿ ಶುಚಿತ್ವ ಬಹಳ ಕಡಿಮೆಯಾಗಿದೆ, ಆಸ್ಪತ್ರೆಗಳ ವಿಷಯಗಳಲ್ಲಿ ನಮ್ಮ ಸರ್ಕಾರ ಏನಾದರೂ ಒಂದು ಯೋಜನೆಯನ್ನು ಹಾಕಿಕೊಂಡು ಆಸ್ಪತ್ರೆಗಳನ್ನು ಕಂಪ್ಲೀಟಾಗಿ ಬದಲಾವಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಸಾಕಷ್ಟು ಕೆಲಸ ನಡೆದಿದೆ ಅದು ಸಾಲದು. ಆಸ್ಪತ್ರೆಗಳಲ್ಲಿ ಡಾಕ್ಟರುಗಳನ್ನು ಮಾತನಾಡಿಸುವುದು ಕಷ್ಟ. ಇಂತಹ ಒಂದು ಪರಿಸ್ಥಿತಿ ಬಂದಿದೆ. ಡಾಕ್ಟರುಗಳ ಬಗ್ಗೆ ಕಠಿಣವಾದ ನಿಲುವನ್ನು ತೆಗೆದುಕೊಂಡರೆ ಈಗಿರತಕ್ಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯ. ಎಲ್ಲಾ ಆಸ್ಪತ್ರೆಗಳಿಗೂ ಡಾಕ್ಟರುಗಳನ್ನು ನೇಮಕ ಮಾಡಲೇಬೇಕು.

ಇನ್ನು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಪಟ್ಟಣಗಳು ಬೆಳೆಯುತ್ತಾ ಇವೆ. ಬೆಳೆಯುತ್ತಿರುವ ಪಟ್ಟಣಗಳನ್ನು ಅಭಿವೃದ್ಧಿ ಮಾಡುವ ವ್ಯವಸ್ಥೆಯನ್ನು ಮಾಡಿಲ್ಲ. ಒಂದು ಕಡೆ ಕೊಳಚೆ ಪ್ರದೇಶವನ್ನು ನಿರ್ಮೂಲನೆ ಮಾಡುತ್ತಾ ಹೋದರೆ ಮತ್ತೊಂದು ಕಡೆ ಕೊಳಚೆ ಪ್ರದೇಶ ಬರುತ್ತದೆ. ಕೊಳಚೆ ಪ್ರದೇಶ ಬೆಳೆಯುವುದನ್ನು ತಡೆಗಟ್ಟುವುದಕ್ಕೆ ಏನೂ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕೊಳಚೆ ಪ್ರದೇಶ ನಿರ್ಮೂಲನೆ ಮಾಡಲಿಕ್ಕೆ ಹೆಚ್ಚು ಹಣವನ್ನು ಕೊಟ್ಟು ಈ ಸಮಸ್ಯೆಯನ್ನು ಸಾಲ್ವ್ ಮಾಡದೇ ಹೋದರೆ ಒಂದಕ್ಕೆ ನ್ಯಾರಷ್ಟು ಆಗುತ್ತಲೇ ಇರುತ್ತವೆ. ಆದ್ದರಿಂದ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು. ನಗರಗಳಲ್ಲಿ ಅನೇಕ ಸಮಸ್ಯೆಗಳು ಇರುತ್ತವೆ. ನೀರಿನ ಸಮಸ್ಯೆ ಬಹಳ ಮುಖ್ಯವಾದುದು. ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಪ್ರಯತ್ನಪಡುವುದು ಬೇಡ. ಸಣ್ಣ ಸಣ್ಣ ಮುನಿಸಿಪಾಲಿಟಿಗಳಲ್ಲೂ ನೀರಿನ ಕೊರತೆ

ಇದೆ. ಉದಾಹರಣೆಗೆ ನಮ್ಮ ಸಾಗರ ಪಟ್ಟಣಕ್ಕೆ ನೀರಿನ ಬಗ್ಗೆ ಒಂದು ದೊಡ್ಡ ಯೋಜನೆ ಇದೆ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎರಡು ವರ್ಷದಿಂದ ಅದು ಹಾಗೆಯೇ ಇದೆ. ಬೆಂಗಳೂರು ನಗರದಲ್ಲಿ ಮಾತ್ರ ನೀರಿನ ಸಮಸ್ಯೆ ಇದೆಯೆಂದು ತಾವು ತಿಳಿದುಕೊಳ್ಳಬೇಡಿ. ರಾಜ್ಯದ ಬೇರೆ ಬೇರೆ ನಗರಗಳಲ್ಲೂ, ಪಟ್ಟಣಗಳಲ್ಲೂ ನೀರಿನ ಸಮಸ್ಯೆ ಇದೆ. ಅದರ ಬಗ್ಗೆ ಸರ್ಕಾರ ತೀವ್ರಗತಿಯಿಂದ ಗಮನಹರಿಸಿ ಆದಷ್ಟು ಬೇಗ ಆ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯಾಲಯ ಕಟ್ಟಡಗಳ ಬಗ್ಗೆ ಹೇಳುವುದಾದರೆ, ಮಾನ್ಯ ಕಾನೂನು ಸಚಿವರು ಕೆಲಸ ಮಾಡಿದ್ದಾರೆ. ನಮ್ಮ ಸಾಗರ ತಾಲ್ಲೂಕಿನಲ್ಲಿ ಕೋರ್ಟ್ ಬಿಲ್ಡಿಂಗ್ ಇಲ್ಲದೆ ಶೆಡ್‌ನಲ್ಲಿ ಕೋರ್ಟ್ ಕೆಲಸವನ್ನು ಮಾಡಲಾಗುತ್ತಿದೆ. ಕೆಲವು ಕಡೆಗಳಲ್ಲಿ ಕೋರ್ಟ್ ಬಿಲ್ಡಿಂಗ್‌ಗಳು ಇವೆ. ಕೆಲವು ಕಡೆಗಳಲ್ಲಿ ಕೋರ್ಟ್ ಬಿಲ್ಡಿಂಗ್ಸ್ ಇಲ್ಲ. ಸಾಗರದಲ್ಲಿ ಕೋರ್ಟ್ ಬಿಲ್ಡಿಂಗ್ ಕೆಲಸ ಮಾಡಲಾಗುತ್ತಿತ್ತು, ಅದು ಅರ್ಧಕ್ಕೆ ನಿಂತಿದೆ. ೧೦–೧೨ ಲಕ್ಷ ರೂಪಾಯಿ ಅಂದಾಜು ವೆಚ್ಚದ ಕಟ್ಟಡದ ಕೆಲಸ ಅರ್ಧಕ್ಕೆ ನಿಂತಿದೆ ಕೋರ್ಟ್ ಬಿಲ್ಡಿಂಗ್ ಇಲ್ಲದೆ ಶೆಡ್‌ನಲ್ಲಿ ನಡೆಸುತ್ತಿದ್ದೇವೆ. ರಾಜ್ಯದ ಅನೇಕ ಕಡೆಗಳಲ್ಲಿ ಇದೇ ವ್ಯವಸ್ಥೆ ಇದೆ. ಸರ್ಕಾರದವರು ನಾವು ಎಲ್ಲಾ ಕಡೆ ಕೋರ್ಟ್‌ಗಳನ್ನು ಮತ್ತು ಬಿಲ್ಡಿಂಗ್‌ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಕೋರ್ಟ್ ಮತ್ತು ಬಿಲ್ಡಿಂಗ್‌ಗಳ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಂತ್ತೇನೆ.

ಆಸ್ಪತ್ರೆಗಳ ವಿಷಯದಲ್ಲಿ ಮತ್ತೊಂದು ಮಾತು ಹೇಳಬೇಕಾಗಿದೆ, ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ದಾರಿಯನ್ನು ಬಿಟ್ಟು ಆಸ್ಪತ್ರೆಗಳ ವಿಷಯದಲ್ಲಿ ಬಿಗಿಕ್ರಮ ತೆಗೆದುಕೊಂಡರೆ ಏನಾದರೂ ಅನುಕೂಲವಾಗಬಹುದು. ಹೊಸ ಆಸ್ಪತ್ರೆಗಳನ್ನು ಓಪನ್ ಮಾಡದಿದ್ದರೂ ಇರುವಂತಹ ಆಸ್ಪತ್ರೆಗಳು ಸುಸಜ್ಜಿತವಾದ ರೀತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಕ್ಯಾನ್ಸರ್ ರೋಗಕ್ಕ ಸಂಬಂಧಪಟ್ಟ ಹಾಗೆ ಆಸ್ಪತ್ರೆಗಳು ಜಿಲ್ಲೆಗೊಂದು ಇರಬೇಕು. ದೊಡ್ಡ ದೊಡ್ಡ ರಾಜಕಾರಣಿಗಳು, ಅಧಿಕಾರಿಗಳು, ಅನುಕೂಲಸ್ಥರು ಹೊರದೇಶಗಳಿಗೆ ಹೋಗಿ ಕಾಯಿಲೆಗಳನ್ನು ವಾಸಿಮಾಡಿಕೊಂಡು ಬರುತ್ತಾರೆ. ಎಷ್ಟೋ ಗೌರ್ನಮೆಂಟ್ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಬದಲಾಗಿ ಜನರು ಪ್ರವೇಟ್ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆ ಫ್ರೀ ಆಸ್ಪತ್ರೆಯೆಂದು ಸರಿಯಾಗಿ ರೋಗಿಗಳನ್ನು ನೋಡಿಕೊಳ್ಳುವುದಿಲ್ಲ. ಇವರುಗಳ ಬಗ್ಗೆ ಮಾನ್ಯ ಮಂತ್ರಿಗಳು ಚಾಟಿಯನ್ನು ತೆಗೆದುಕೊಂಡು ಒಂದು ವ್ಯವಹಾರ ಮಾಡದಿದ್ದರೆ ಆಸ್ಪತ್ರೆಗಳಲ್ಲಿ ಏನೇನೂ ಸಿಗುವುದಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಸಣ್ಣ ಸಣ್ಣ ಔಷಧಿಗಳು ಸಿಗುವುದಿಲ್ಲ. ಇನ್ನು ಕೆಲವು ಆಸ್ಪತ್ರೆಗಳಲ್ಲಿ ಬ್ಯಾಂಡೇಜ್ ಕಟ್ಟುತಕ್ಕ ಬಟ್ಟೆ ಮತ್ತು ಹತ್ತಿ ಕೂಡ ಸಿಗದಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತಾ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಮತ್ತು ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದು ಮಾತನ್ನು ಹೇಳುತ್ತೇನೆ. ಅದು ಈ ರೀತಿ ಇದೆ.

ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನು ನಮ್ಮ ಸಮಾಜಕ್ಕೆ ಒದಗಿಸಿಕೊಡತಕ್ಕ ವ್ಯವಸ್ಥೆ ಆಗಬೇಕು. ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ನಾವು ನಮ್ಮ ದೇಶದ ಜನತೆಗೆ ಒದಗಿಸಿಕೊಡಬೇಕಾದರೆ ನಮ್ಮ ಸಂವಿಧಾನದಲ್ಲಿ ಕೆಲವು ನಿಬಂಧನೆಗಳು ಇವೆ. ಡೈರೆಕ್ಟೀವ್ ಪ್ರಿನ್ಸಿಪಾಲ್ ಆಫ್ ಸ್ಟೇಟ್ ಪಾಲಿಸಿಯಲ್ಲಿ ನಮ್ಮ ದೇಶದ ಜನತೆಗೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಬಗ್ಗೆ ಒಂದು ವಿವರಣೆಯನ್ನು ಅಳವಡಿಸಿದ್ದಾರೆ. ಆ ಒಂದು ಹಿನ್ನಲೆಯಲ್ಲಿ ನಮ್ಮ ರಾಜ್ಯದ ಪ್ರಗತಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಯೋಚಿಸಿದರೆ ನಿಜವಾಗಿ ನಾವು ಹಿಂದುಳಿದಿದ್ದೇವೆ ಎಂಬುದು ಭಾಸವಾಗುತ್ತದೆ. ನಾವು ಏನು ಯೋಜನೆಗಳನ್ನು ಅಳವಡಿಸಿಕೊಂಡಿದ್ದೇವೆ. ಏನು ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದನ್ನು ನೋಡಿದರೆ ನಿಜವಾಗಿ ನಾವು ಬಹಳ ಹಿಂದೆ ಬಿದ್ದಿದ್ದೇವೆಂದು ಮನನೊಂದು ಹೇಳಬೇಕಾಗಿದೆ. ನಾವು ಸಾಮಾಜಿಕ ನ್ಯಾಯವನ್ನು ಯಾವ ರೀತಿ ದೊರಕಿಸಿಕೊಡುತ್ತಿದ್ದೇವೆ. ನಾವು ಮಾಡಿರತಕ್ಕ ಕಾನೂನುಗಳು ಏನು ಇವೆ ಎಂಬುದನ್ನು ಯೋಚನೆ ಮಾಡಬೇಕು. ನಾವು ಡೈರೆಕ್ಟೀವ್ ಪ್ರಿನ್ಸಿಪಲ್ ಅನ್ನು ಅಳವಡಿಸಿಕೊಂಡು ಓಲ್ಡ್ ಏಜ್ ಪೆನ್‌ಷನ್, ಹೆರಿಗೆ ಭತ್ಯ ಮತ್ತಿ

ತರ ಹಲವಾರು ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆ, ಆದರೆ ಎಷ್ಟರ ಮಟ್ಟಿಗೆ ಜನತೆಗೆ ಅನುಕೂಲ ಮಾಡುತ್ತಿದ್ದೇವೆಂಬುದನ್ನು ಯೋಚಿಸಿದಾಗ ನಾನು ಮೊದಲು ಹೇಳಿದಂತೆ ಆಗಿದೆ. ಇವತ್ತು ಕಾನೂನು ಪ್ರಚಾರ ಜನತೆಗೆ ಬಹಳ ಕಡಿಮೆ ಇದೆ. ನಾವು ಓಲ್ಡ್ ಏಜ್ ಪೆನ್‌ಷನ್ ಕೊಡಬಹುದು, ಹೆರಿಗೆ ಭತ್ಯ ಕೊಡಬಹುದು, ಸಾಮಾಜಿಕ ಆರ್ಥಿಕ ಸುಧಾರಣೆಗಳನ್ನು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು, ಆದರೆ ಆದರ ಉಪಯೋಗ ಪಡೆಯುವ ಬಗ್ಗೆ ಜನರಿಗೆ ಪ್ರಚಾರ ಕೊಡದಿದ್ದರೆ ನಾವು ದ್ರೋಹಿಗಳಾಗುತ್ತೇವೆ. ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಅವರು ಈ ಕಾನೂನಿನ ಉಪಯೋಗವನ್ನು ಪಡೆಯಲಿ, ಪಡೆಯದೆ ಇರಲಿ, ನಾವು ಅವರಿಗೆ ತಿಳಿಸತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಅವರಿಗೆ ಕಾನೂನು ಗೊತ್ತಿಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಆ ಹಿನ್ನೆಲೆಯಲ್ಲಿ ಹೇಳಬೇಕೆಂದರೆ ಇವತ್ತು ನಮ್ಮ ಅಧಿಕಾರಿಗಳು ಏನಿದ್ದಾರೆ ಅವರೂ ಕೂಡ ಕೆಲವು ತಪ್ಪುಗಳನ್ನು ಮಾಡುತ್ತಾರೆ. ಉದಾಹರಣೆಗೆ ನೀವು ಬಾಟ್ಲಿಂಗ್ ಹಗರಣ ನೋಡಿರಬಹುದು. Whether it is violation of law? If it is violation of law, whether it is out of ignorance or not? If it is out of ignorance, there is excuse for it. ತಾವು ಈ ಸದನದಲ್ಲಿ ಏನು ಕಾನೂನು ಮಾಡುತ್ತೀರಿ ಅಥವಾ ಅಡ್ಮಿನಿಸ್ಟ್ರೇಟೀವ್ ಲಾಸ್ ಎಂದು ಏನು ಮಾಡುತ್ತೀರಿ ಅದರ ಪ್ರಚಾರ ಸಾಕಷ್ಟು ಆಗಿಲ್ಲ. ಇದನ್ನು ಪಾಂಪ್ಲೆಟ್ಸ್, ರೇಡಿಯೋ, ಟಿ. ವಿ. ಮೂಲಕ ಪ್ರಚಾರ ಮಾಡಿ ಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಸಾಮಾಜಿಕ ಆರ್ಥಿಕ ನ್ಯಾಯವನ್ನು ದೊರಕಿಸಿ ಕೊಡಲಿಲ್ಲವೆಂಬ ದೂರನ್ನು ಸರಿ ಮಾಡಬೇಕಾದರೆ ಈ ದೇಶದಲ್ಲಿ ಲಾ ಕಮೀಷನ್ ಮಾಡಬೇಕು. ಈ ಕಾನೂನನ್ನು ಎಷ್ಟರ ಮಟ್ಟಿಗೆ ಎಫೆಕ್ಟೀವ್ ಆಗಿ ಕೊಟ್ಟಿದ್ದಾರೆಂಬುದನ್ನು ನೋಡಲು, ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಇರತಕ್ಕ ಕಾನೂನನ್ನು ಜನತೆಗೆ ಕೊಡಬೇಕೆಂಬ ದೃಷ್ಟಿಯಿಂದ ಅದು ಬೇಕು, ಇವತ್ತು ಹಲವಾರು ಕಾನೂನುಗಳನ್ನು ಮಾಡಿದ್ದೇವೆ. ಅದರಲ್ಲಿ ಕೆಲವು ಕಾನೂನುಗಳನ್ನು ಉಪಯೋಗಕ್ಕೆ ಬಂದಿವೆ. ಮತ್ತೆ ಕೆಲವು ಬಂದಿಲ್ಲ. ಅಂಥವನ್ನು ರಿವ್ಯೂ ಮಾಡಬೇಕು. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಅನ್ನು ಎಷ್ಟರ ಮಟ್ಟಿಗೆ ಅಳವಡಿಸಿದ್ದೇವೆ ಎಂಬುದನ್ನು ರಿವ್ಯೂ ಮಾಡುವುದಕ್ಕೆ ಲಾ ಕಮೀಷನ್ ನಮ್ಮ ರಾಜ್ಯಕ್ಕೆ ಅತಿ ಮುಖ್ಯವಾಗಿ ಬೇಕಾಗಿದೆ ಎಂದು ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇವತ್ತು ನಾವು ಸಾಮಾನ್ಯ ಜನತೆಗೆ, ಕಾರ್ಮಿಕರಗೆ, ಹಲವಾರು ಶಾಸನಗಳನ್ನು ಮಾಡಿದ್ದೇವೆ. ಆದರೆ ಕೃಷಿ ಕಾರ್ಮಿಕರಿಗೆ, ಅವರ ಕ್ಷೇಮಾಭಿವೃದ್ಧಿಗಾಗಿ ಯಾವ ಶಾಸನವನ್ನೂ ಮಾಡಿಲ್ಲ. ದೇಶದಲ್ಲಿರತಕ್ಕ ಕಾರ್ಮಿಕರ ಪೈಕಿ ೫೦-೬೦ ಪರ್ಸೆಂಟ್ ಕೃಷಿ ಕಾರ್ಮಿಕರೇ ಇದ್ದಾರೆ ನಿಮ್ಮ ಲೆಕ್ಕದ ಪ್ರಕಾರ ಕಡಿಮೆ ಇರಬಹುದು. ಆದರೆ ಸುಮಾರು ೫೦ ಪರ್ಸೆಂಟ್ ಕೃಷಿ ಕಾರ್ಮಿಕರು ರಿಜಿಸ್ಟರ್ ಮಾಡಿಸದೆ ಇರತಕ್ಕವರು ಇದ್ದಾರೆ. ಅವರ ಕ್ಷೇಮಾಭಿವೃದ್ಧಿಗೋಸ್ಕರ ಒಂದು ಶಾಸನವನ್ನು ರಚಿಸಬೇಕು. ಮತ್ತು ಅವರು ಸಂಘಟಿತರಾಗುವುದಕ್ಕೆ ಉತ್ತೇಜನ ಕೊಡಬೇಕೆಂದು ಮಾನ್ಯ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ, ಲಕ್ಷ್ಮೀಸಾಗರ್—ಅದು ಕಾರ್ಮಿಕ ಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ— ಶಾಸನ ಮಾಡತಕ್ಕವರು ತಾವು. ಇನಿಷಿಯೇಟ್ ಮಾಡತಕ್ಕವರು ತಾವು. ಆದ್ದರಿಂದ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

SRI. A. LAKSHMISAGAR— Initiative of law regarding the Agricultural labourers will have to come from the Labour Minister. I will just scrutinise them, as to whether they are in conformity with the Constitution of law.

ಶ್ರೀ ಎಂ. ಎಸ್. ಕೃಷ್ಣನ್— ಹಿಂದೆಯೇ ಡ್ರಾಫ್ಟ್ ಮಾಡಿ ಕೊಡಲಾಗಿದೆ. ಹಿಂದಿನ ಕಾರ್ಮಿಕ ಮಂತ್ರಿಗಳೂ ಮಾಡಲಿಲ್ಲ, ಆಮೇಲೆ ಬಂದವರೂ ಮಾಡಲಿಲ್ಲ, ಈಗ ಇರುವವರೂ ಮಾಡುತ್ತಿಲ್ಲ, ತಾವಾದರೂ ಒತ್ತಾಯ ಮಾಡಿ ಅದನ್ನು ಡಸ್ಟ್‌ಬಿನ್‌ಗೆ ಹಾಕದೆ ಕಾರ್ಯಗತವಾಗುವಂತೆ ಮಾಡಿ.

ಅಧ್ಯಕ್ಷರು— ಆಗಬಹುದೆಂದು ಒಪ್ಪಿದ್ದಾರೆ ಬಿಡಿ,

ಶ್ರೀ ಸಿ. ಪಿ. ಮೂಡಲಗಿರಿಯಪ್ಪ— ಯಾವ ಕಾರ್ಮಿಕರೂ ಸಂಘಟಿತರಾಗಿಲ್ಲ. ಅವರ ಕ್ಷೇಮಾಭಿವೃದ್ಧಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ತಾವೇ ನೋಡಿರಬಹುದು. ಎಷ್ಟೋ ಜನ ಬಿಲ್ಡಿಂಗ್ ಲೇಬರರ್ಸ್ ಸತ್ತು ಹೋದರು. ಅವರಿಗೆ ಕೆಲವು ರಿಲೀಫ್ಸ್ ಅನ್ನು ಸರ್ಕಾರದವರು ಕೊಟ್ಟಿರಬಹುದು. ಅವರಿಗೆ ಶಾಶ್ವತವಾದ ಸೆಕ್ಯೂರಿಟಿ ಇಲ್ಲ. ಆದ್ದರಿಂದ ಅವರನ್ನು ಶಾಸನದಲ್ಲಿ ಅಳವಡಿಸಬೇಕೆಂದು ತಮ್ಮ ಮೂಲಕ ಕಾನೂನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕೋರ್ಟಿನಲ್ಲಿ ವಕಾಲತ್ತು ಹಾಕುವಾಗ ಹೈಕೋರ್ಟಿನಲ್ಲಿ ೩ ರೂಪಾಯಿ ಫೀ ಮತ್ತು ಲೋಯರ್ ಕೋರ್ಟಿನಲ್ಲಿ ಒಂದು ರೂಪಾಯಿ ಇದೆ. ಈ ವಕಾಲತ್ತು ಫೀ ಅನ್ನು ಎಲ್ಲ ಕೋರ್ಟುಗಳಲ್ಲೂ ಯೂನಿಫಾರಂ ಆಗಿ ೩ ರೂಪಾಯಿ ಇರುವಂತೆ ಮಾಡಿ. ಒಂದು ರೂಪಾಯಿಯನ್ನು ಲೀಗಲ್ ಏಡ್ ಕಮಿಟಿಗೆ ಕೊಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂಟರ್‌ಕ್ಯುಟರಿ ಅಪ್ಲಿಕೇಷನ್ ಮೇಲೆ ಹೈಕೋರ್ಟಿಗೆ ರಿವಿಜನ್ ಪಿಟಿಷನ್ ಹೋಗುತ್ತಾರೆ, ಇಂಟರ್ ಆಕ್ಯುಟರಿ ಬೇರೆ ಕೋರ್ಟಿನಲ್ಲಿ ಮಾತ್ರ ಇರತಕ್ಕದ್ದು. ಇದರ ಮೇಲೆ ಓರಲ್ ಡಾಕ್ಯುಮೆಂಟ್ ಮತ್ತು ರಿಟನ್ ಡಾಕ್ಯುಮೆಂಟ್ ಫೈಲ್ ಮಾಡಿ ಹೈಕೋರ್ಟಿಗೆ ರಿವಿಜನ್ ಅಪೀಲು ಹೋಗುವುದಕ್ಕೆ ಅವಕಾಶ ಇಲ್ಲವೆಂದು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್— ವಕೀಲರು ಇದ್ದಕ್ಕೆ ಒಪ್ಪುತ್ತಾರೆಯೆ?

ಶ್ರೀ ಸಿ.ಪಿ. ಮೂಡಲಗಿರಿಯಪ್ಪ— ರಿಟನ್ ಆರ್ಗ್ಯುಮೆಂಟ್ ಅಕ್ಸೆಪ್ಟ್ ಮಾಡಿಕೊಳ್ಳಬೇಕು. ಕೋರ್ಟಿನಲ್ಲಿ ಟೈಂ ಲಿಮಿಟ್ ಜಾಸ್ತಿ ಇದೆ. ಒಂದೊಂದು ಕೇಸನ್ನು ೫-೬ ದಿನ ಆರ್ಗ್ಯುಮೆಂಟ್ ಮಾಡುತ್ತಾರೆ. ರಿಟನ್ ಆರ್ಗ್ಯುಮೆಂಟ್ ಮಾಡಿ ಒಂದೆರಡು ಗಂಟೆ ಮಾತ್ರ ಆರ್ಗ್ಯುಮೆಂಟ್ ಮಾಡುವುದಕ್ಕೆ ಫಿಕ್ಸ್ ಮಾಡಬೇಕು. ತಾವು ಇಲ್ಲಿ ಮಾತನಾಡಲು ರೆಸ್ಟ್ರಿಕ್ಟ್ ಮಾಡುವಂತೆ ಕೋರ್ಟಿನಲ್ಲಿ ಕೂಡ ರೆಸ್ಟ್ರಿಕ್ಟ್ ಮಾಡಬೇಕು. ಅವರು ಹೇಳತಕ್ಕದ್ದನ್ನು ರಿಟನ್ ಆರ್ಗ್ಯುಮೆಂಟ್ ರೂಪದಲ್ಲಿ ಕೊಡಲಿ. ಈಗ ೨ ಲಕ್ಷ ರೂಪಾಯಿ ಸೂಟ್ ಆಗಲಿ ಅದರ ಮೇಲೆ ೧೦ ಪರ್ಸೆಂಟ್ ಚಾರ್ಜ್ ಮಾಡುತ್ತಾರೆ. ಸೂಟ್ ವ್ಯಾಲ್ಯು ಎಷ್ಟೇ ಇರಲಿ ೫ ಸಾವಿರ ರೂಪಾಯಿ ಚಾರ್ಜ್ ಲಿಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ವೀಸ್ ಆಫ್ ಸಮನ್ಸ್ ಬಗ್ಗೆ ಹೇಳುವುದಾದರೆ, ಅಮೀನ್ ಮೂಲಕ ಕಳುಹಿಸುವುದು ನಿಧಾನವಾಗುತ್ತದೆ, ಆದ್ದರಿಂದ ರಿಜಿಸ್ಟರ್ಡ್ ಪೋಸ್ಟ್ ಮಾಡುವುದು ಕೋರ್ಟ್ ಪ್ರೊಸೀಜರ್‌ಗೂ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಜನತೆಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಸರ್ವೀಸ್ ಆಫ್ ಸಮನ್ಸ್ ಆದಮೇಲೆ ಕೋರ್ಟ್ ಕೇಸ್‌ಗಳನ್ನು ಕರೆಯಬೇಕು. ಒಂದೆರಡು ಗಂಟೆಯಾದರೂ ಕೊನೆಯವರೆಗೂ ಕೇಸ್ ಕರೆದು ತೀರ್ಮಾನವಾಗುವುದಿಲ್ಲ. ಆ ರೀತಿ ಸಮನ್ಸ್ ನೋಟೀಸ್ ಜಾರಿ ಆದಮೇಲೆ ಬೇರೆ ಪೆಂಷನರಿ ಅಪಾಯಿಂಟ್ ಮಾಡಿ ಕೋರ್ಟ್ ಕೇಸ್‌ಗಳನ್ನು ಜಾಗ್ರತೆಯಾಗಿ ಕರೆಯುವ ರೀತಿಯಲ್ಲಿ ಮಾಡಬೇಕು. ಪ್ರಿವಿಲೇಜ್ ಆಫ್ ಮೆಂಬರ್ಸ್ ಕೋಡಿಫಿಕೇಷನ್ ಆಗಿಲ್ಲ ಎಂದು ನನ್ನ ಭಾವನೆ. ಕೋಡಿಫೈ ಮಾಡಬೇಕು ಎಂದು ನಾನು ಕೇಳುತ್ತೇನೆ. ಇನ್ನು ಜಡ್ಜ್‌ಸ್‌ಗೆ ಟ್ಯಾಕ್ಸ್‌ಫ್ರೀ ಸ್ಯಾಲರಿಯನ್ನು ಕೊಡಬೇಕು ಎಂದು ಹೇಳುತ್ತೇನೆ. ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳು ಇವೆ. ಇವತ್ತು ನಮ್ಮ ಸಿವಿಲ್ ಜಡ್ಜಸ್ ಕೋರ್ಟ್‌ನಲ್ಲಿ ೩-೩ ಕೋರ್ಟ್‌ನಲ್ಲೂ ಒಬ್ಬೊಬ್ಬರೇ ಪ್ರಾಸಿಕ್ಯೂಟರ್ಸ್ ಇರುತ್ತಾರೆ. ಈ ಪ್ರಾಸಿಕ್ಯೂಟರ್ಸ್‌ನ್ನು ಬೇಗನೆ ಅಪಾಯಿಂಟ್ ಮಾಡಬೇಕು ಎಂದು ಹೇಳುತ್ತೇನೆ. ಡಿಸ್ಟ್ರಿಬ್ಯೂಷನ್ ಆಫ್ ವರ್ಕ್ ಸಿವಿಲ್ ಕೋರ್ಟ್‌ನಲ್ಲೂ, ಕ್ರಿಮಿನಲ್ ಕೋರ್ಟ್‌ನಲ್ಲೂ ಮಿಕ್ಸ್ ಅಪ್ ಮಾಡಿದ್ದಾರೆ. ಸಿವಿಲ್ ಕೋರ್ಟಿನ ಕೇಸ್‌ಗಳನ್ನು, ಕ್ರಿಮಿನಲ್ ಕೋರ್ಟ್‌ನ ಕೇಸಸ್‌ಗಳನ್ನು ಎರಡನ್ನೂ ಮಿಕ್ಸ್ ಮಾಡಬಾರದು. ಅದು ಕನ್‌ಫ್ಯೂಸ್ ಆಗುತ್ತದೆ. ಯಾವುದೇ ಒಂದು ವಿಷಯದ ಮೇಲೆ ಕಾನ್‌ಸಂಟ್ರೇಟ್ ಮಾಡುವುದಕ್ಕೂ ಕೂಡ ಜಡ್ಜಸ್‌ಗೆ ತೊಂದರೆಯಾಗುತ್ತದೆ. ಇದರಲ್ಲಿ ಜನರಿಗೆ ಇನ್‌ಜಸ್ಟೀಸ್ ಆಗುತ್ತದೆ ಎಂದು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಲೀಗಲ್ ಏಡ್ ಪ್ರೋಗ್ರಾಮ್ ಅದು ಹೆಸರಿಗೆ ಮಾತ್ರ ಇದೆ. ಅದು ಸ್ಲೋಗನ್ ಆಗಿದೆ. ಇದರಲ್ಲಿ ಕೆಲಸ ಏನೂ ನಡೆಯುತ್ತಿಲ್ಲ. ಲೀಗಲ್ ಏಡ್ ಪ್ರೋಗ್ರಾಮ್‌ನಲ್ಲಿ ಏನು ಮಾಡಬೇಕು ಅಂದರೆ ಲೀಗಲ್ ಏಡ್ ಪ್ರೋಗ್ರಾಮ್‌ನಿಂದ ಈ ದೇಶದ ಜನತೆಯ ಬಡ ಜನತೆಯ ಬಾಗಿಲಿಗೆ ತೆಗೆದುಕೊಂಡು ಹೋಗುವ ಒಂದು ಕಾರ್ಯಕ್ರಮಗಳನ್ನು ಮಾಡಬಹುದು. ಒಂದು ಅರ್ಜಿಯನ್ನು ಬರೆದು ಕೊಡುವುದರಿಂದ ಹಿಡಿದು ಶಾಸನದಪ್ರಚಾರವನ್ನು ಕೂಡ ಅವರಿಗೆ ವಹಿಸಬಹುದು. ಸದನದಲ್ಲಿ ಶಾಸನಗಳನ್ನು ಮಾಡುತ್ತೀರಿ, ಅಡ್ಮಿನಿಸ್ಟ್ರೇಷನ್ ಆಫ್ ಲಾ ಮಾಡುತ್ತೀರಿ, ಕೋರ್ಟ್ ಆಫ್ ಲಾ ಕಾನೂನನ್ನು ನಾವು ಏನು ಮಾಡುತ್ತೇವೆ, ಅದರ ಒಂದು ಪ್ರಚಾರ, ಅದರ ಒಂದು ಅನುಕೂಲಗಳು ಜನರಿಗೆ ಸಿಗಬೇಕೆಂದು ಹೇಳಿ ಆ

ರೀತಿಯಲ್ಲಿ ಈ ಲೀಗಲ್ ಏಡ್ ಪ್ರೋಗ್ರಾಮನ್ನು ತೆಗೆದುಕೊಂಡು ಹೋಗಬಹುದು ಎಂದು ಹೇಳುತ್ತೇನೆ. ಲಾಯರ್ ಫೀಜ್ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು ಎಂಬ ಮಾತನ್ನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರನ್ನೇ ಸರ್ಕಾರದ ಪರವಾಗಿ ಕೇಸ್ ನಡೆಸಲಿಕ್ಕೆ ಹಾಕಿ ಲೀಗಲ್ ಏಡ್‌ಗೆ ವ್ಯತಿರಿಕ್ತವಾಗಿ ಅವರು ತಮ್ಮ ಪಾತ್ರವನ್ನು ವಹಿಸುತ್ತಿದ್ದಾರೆ. ಅದು ತಪ್ಪು ಎಂದು ನನ್ನ ಭಾವನೆ. ಎರಡೂ ಕೆಲಸಗಳನ್ನೂ ಒಬ್ಬನೇ ಮಾಡುವುದಕ್ಕಾಗುವುದಿಲ್ಲ. ಅಪರಾಧಿ ಅವರ ಪರವಾಗಿಯೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಕೊನೆಯದಾಗಿ ಫ್ಯಾಮಿಲಿ ಕೋರ್ಟ್‌ಗಳ ವಿಚಾರವಾಗಿ ಮಾನ್ಯ ಕಾನೂನು ಮಂತ್ರಿಗಳಿಗೆ ಹೇಳಿದ್ದೆನು. ಫ್ಯಾಮಿಲಿ ಕೋರ್ಟ್‌ಗಳನ್ನು ಮಾಡುವ ವಿಚಾರದಲ್ಲಿ ಬೇರೆ ರಾಜ್ಯಗಳಿಗೆ ಈ ಫ್ಯಾಮಿಲಿ ಕೋರ್ಟ್‌ಗಳು ಇದೆ. ಆದಷ್ಟು ಬೇಗ ನಮ್ಮ ರಾಜ್ಯದಲ್ಲಿಯೂ ಫ್ಯಾಮಿಲಿ ಕೋರ್ಟ್‌ಗಳನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಎಲ್ಲಾ ಎಂ.ಎಲ್.ಎ.ಗಳಿಗೂ ವೇತನವನ್ನು ಹೆಚ್ಚಿಸಿದ್ದೀರಿ. ಅದರಂತೆ ಎಕ್ಸ್ ಎಂ.ಎಲ್.ಎ. ಗಳಿಗೂ ಸಹಾ ಹೆಚ್ಚಿಸಬೇಕೆಂದು ಹೇಳುತ್ತೇನೆ. ಅದರ ಬಗ್ಗೆ ತಾವು ಗಮನವನ್ನು ಹರಿಸಬೇಕು. ಬಸ್‌ಪಾಸ್ ವಗೈರೆ ಕೇಳುತ್ತಿದ್ದಾರೆ. ನನ್ನ ಕಣ್ಣಿಗೆ ಕಂಡ ಹಾಗೆ ಅನೇಕ ಎಕ್ಸ್ ಎಂ.ಎಲ್.ಎ.ಗಳು ಬಹಳ ಬಡತನದಲ್ಲಿದ್ದಾರೆ. ಕೆಲವರು ಮಂತ್ರಿಗಳಾಗಿದ್ದಾರೆ. ಬಸ್‌ಗಾಗಿ ಬಸ್‌ಸ್ಟಾಪ್‌ನಲ್ಲಿ ಕಾಯುವಂಥವರಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಎಕ್ಸ್ ಎಂ.ಎಲ್.ಎ.ಗಳ ವೇತನವನ್ನೂ ಕೂಡ ಹೆಚ್ಚು ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನ ಮುಗಿಸುತ್ತೇನೆ.

ಶ್ರೀ ಬಾಬರೆಡ್ಡಿ ವಿ. ತುಂಗಳ್ (ಬಿಳಗಿ).—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಸಚಿವರು ತಂದಿರತಕ್ಕಂಥ ಬೇಡಿಕೆಗಳನ್ನು ಸಮರ್ಥಿಸುತ್ತಾ ಆರೋಗ್ಯ ಇಲಾಖೆಯ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಹೋದ ವರ್ಷ ನಾವೆಲ್ಲಾ ಸನ್ಮಾನ್ಯ ಆರೋಗ್ಯ ಸಚಿವರನ್ನು ವಿನಂತಿ ಮಾಡಿಕೊಂಡ ಮೇರೆಗೆ ಅನೇಕ ವರ್ಷಗಳಿಂದ ಆಸ್ಪತ್ರೆಯಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮಾಂತರದ ಆಸ್ಪತ್ರೆಗಳಲ್ಲಿ ಒಂದು ಔಷಧಿಯ ಕೊರತೆ ಇತ್ತು, ಈ ಔಷಧಿ ಪೂರೈಕೆ ಇಮ್ಮಡಿ ಮಾಡಿ ಔಷಧಿ ಪೂರೈಕೆಯಲ್ಲಿ ಅತ್ಯಂತ ಒಂದು ಅಸಮಾಧಾನ, ಅಸ್ಥಿರತೆಯನ್ನು ಕಡಿಮೆ ಮಾಡಿದ್ದಾರೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಅನೇಕ ಆಸ್ಪತ್ರೆಗಳಲ್ಲಿ ರೋಗಿಗಳನ್ನು ತರವುದಕ್ಕೂ ಹಾಗೂ ಮನೆಗೆ ಕಳುಹಿಸುವುದಕ್ಕೂ ಸುಸಜ್ಜಿತವಾದ ವಾಹನಗಳನ್ನು ಹಲವಾರು ಕಡೆ ಒದಗಿಸಿದ್ದಾರೆ. ಈ ಒಂದು ಕಾರ್ಯಕ್ಕಾಗಿ ಇಬ್ಬರೂ ಆರೋಗ್ಯ ಸಚಿವರನ್ನು ಈ ಮೂಲಕ ಅಭಿನಂದಿಸುತ್ತೇನೆ. ಅವರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿರುವ ಆಸ್ಪತ್ರೆಗಳ ದುಸ್ಥಿತಿಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರ ಬಗ್ಗೆ ಗಮನ ಕೊಡುವುದು ಅತ್ಯಂತ ಅವಶ್ಯ ಇದೆ. ಏಕೆಂದರೆ ನಾವು ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ಆರೋಗ್ಯ ಘಟಕಗಳನ್ನು ಸಂದರ್ಶನ ಮಾಡಿದಾಗ ಅಲ್ಲಿರುವಂಥ ಒಂದೇ ಒಂದು ಕೊರತೆಯೆಂದರೆ ಜನರು ಇಷ್ಟು ದಿವಸವೂ ಔಷಧಿ ಕೊರತೆ ಇದೆಯೆಂದು ಹೇಳುತ್ತಿದ್ದರು, ಈಗ ಔಷಧಿ ಕೊರತೆ ಬಹುಮಟ್ಟಿಗೆ ನಿವಾರಣೆಯಾಗಿದೆ, ಅದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರ ಕೊರತೆ ಬಹಳ ಜಾಸ್ತಿಯಾಗಿದೆ. ಅದರಲ್ಲೂ ಮಹಿಳಾ ವೈದ್ಯರ ಕೊರತೆ ಅತ್ಯಂತ ತೀವ್ರವಾಗಿದೆ. ನನ್ನ ಕ್ಷೇತ್ರದಲ್ಲಿ ೨–೩ ಪ್ರಾಥಮಿಕ ಕೇಂದ್ರಗಳು ಇವೆ. ಎರಡು ಮೂರು ವರ್ಷಗಳಿಂದ ಅಲ್ಲಿ ಮಹಿಳಾ ವೈದ್ಯರುಗಳು ಇಲ್ಲ. ಮಹಿಳಾ ವೈದ್ಯರುಗಳ ಬಗ್ಗೆ ಸನ್ಮಾನ್ಯ ಆರೋಗ್ಯ ಸಚಿವರನ್ನು ಕೇಳಿಕೊಂಡಿದ್ದೆ. ಮಹಿಳಾ ವೈದ್ಯರ ನೇಮಕವಾದ ಕೂಡಲೇ ಪೋಸ್ಟಿಂಗ್ಸ್ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅವರು ಪೋಸ್ಟಿಂಗ್ಸ್ ಆದಮೇಲೂ ೩–೪ ತಿಂಗಳು ಆದರೂ ಆಸ್ಪತ್ರೆ ಕಡೆ ಮುಖ ತೋರಿಸಿಲ್ಲ. ಕೇಳಿದರೆ ಎಂ.ಡಿ.ಎಂ.ಗೆ ಹೋಗಬೇಕೆಂದು ಉತ್ತರ ಕೊಡುತ್ತಾರೆ. ಮಹಿಳಾ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳುವಾಗ ಕರಾರುವಾಕ್ಕಾಗಿ ಬಾಂಡ್‌ಗಳನ್ನು ಬರೆಸಿ ಕೊಂಡಿದ್ದರೂ ಆ ಬಾಂಡ್‌ಗಳಿಗೆ ಬೆಲೆ ಕೊಡದೇ ಹೊರಟು ಹೋಗುತ್ತಾರೆ, ಗ್ರಾಮಾಂತರ ಪ್ರದೇಶದಲ್ಲಿ ಮಹಿಳಾ ವೈದ್ಯರ ಅಭಾವ ಅತ್ಯಂತ ತೀವ್ರವಾಗಿದೆ. ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಎಂ.ಬಿ ಬಿ.ಎಸ್. ಆದಂತಹ ವೈದ್ಯರು ಬರುವುದಿಲ್ಲವೆಂದು ತಕರಾರು ಇದೆ. ಆದಕಾರಣ ಸನ್ಮಾನ್ಯ ಆರೋಗ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಭಾರತೀಯ

ವೈದ್ಯಕೀಯ ಪದ್ಧತಿಯಲ್ಲಿ ಆಯುರ್ವೇದಿಕ್ ಪದ್ಧತಿ ಎಂದು ಇದೆ. ಈ ಆಯುರ್ವೇದದಲ್ಲಿ ಪರೀಕ್ಷೆಯನ್ನು ಮುಗಿಸಿ ಅನೇಕ ಜನ ನನ್ನ ಸ್ನೇಹಿತರು ನಿರುದ್ಯೋಗಿಗಳಾಗಿದ್ದಾರೆ. ಅವರು ಬಹಳ ಬುದ್ಧಿವಂತರು ಇದ್ದಾರೆ. ಎಂ.ಬಿ.ಬಿ.ಎಸ್. ವೈದ್ಯರುಗಳು ಬರುವುದಕ್ಕೆ ಏನಾದರೂ ನೆವ ಹೇಳುತ್ತಾರೆ. ಬಿ.ಎ.ಎಂ.ಎಸ್. ಮುಗಿಸಿದವರು ಕಾರಾರುಗಳನ್ನು ಹಾಕಿದರೂ ಅದಕ್ಕೆ ಒಳಪಟ್ಟು ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸಲಿಕ್ಕೆ ಸಿದ್ಧರಾಗಿದ್ದಾರೆ. ಬಿ.ಎ.ಎಂ.ಎಸ್. ಪಾಸಾದ ಸಾವಿರಾರು ಯುವಕರುಗಳನ್ನು ನೇಮಿಸಿದರೆ ಇನ್ನು ಹೆಚ್ಚು ಆರೋಗ್ಯ ಸೌಕರ್ಯ ಕೊಡಲಿಕ್ಕೆ ಸಾಧ್ಯ ಇದೆ ಎಂಬ ಮಾತನ್ನು ಹೇಳುತ್ತೇವೆ. ಉತ್ತರ ಕರ್ನಾಟಕಕ್ಕೆ ಆಶಾಕಿರಣವಾದಂಥ ಸರ್ಕಾರಿ ಕೆ.ಎಂ.ಸಿ. ಬಗ್ಗೆ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಕೆ.ಎಂ.ಸಿ. ಆಸ್ಪತ್ರೆಯನ್ನು ಮುಂಬೈ ಸರ್ಕಾರ ಸ್ಥಾಪನೆ ಮಾಡಿತ್ತು. ಉತ್ತರ ಕರ್ನಾಟಕಕ್ಕೆ ಆಶಾಕಿರಣ ಆಗಬೇಕಾದಂಥ ಆಸ್ಪತ್ರೆ ಇವತ್ತು ದುರಂತದ ಸ್ಥಿತಿಯಲ್ಲಿದೆ. ಒಮ್ಮೆ ಸನ್ಮಾನ್ಯ ಇನಾಂದಾರ್ ಆಗಲೀ, ತಿಮ್ಮೇಗೌಡರಾಗಲೀ ಇಡೀ ಕೆ.ಎಂ.ಸಿ. ಆಸ್ಪತ್ರೆಯನ್ನು ಒಂದು ಬಾರಿ ಸುತ್ತು ಹಾಕಿದರೆ ನರಕದಲ್ಲಿ ಒಂದು ರೌಂಡ್ ಹೋಗಿ ಬಂದಂಥ ಅನುಭವ ಬರುತ್ತದೆ. ಸಂದರ್ಶನ ಸಮಿತಿಗಳು ಎಂದು ಇವೆ. ಇವತ್ತು ಸಂದರ್ಶನ ಸಮಿತಿಗಳು ಕೇವಲ ಅಲ್ಲಿ ಹೋಗಿ ಚಹಾ ಕುಡಿದು, ಬಿಸ್ಕೆಟ್ ತಿಂದು ಬರುವಂಥ ಸಂಸ್ಥೆಗಳಾಗಿವೆ. ಸಂದರ್ಶನ ಸಮಿತಿಗಳು ಎಂದರೆ ಆಸ್ಪತ್ರೆಗಳಲ್ಲಿ ಹೋಗಿ ಅಲ್ಲಿರುವ ಕುಂದುಕೊರತೆಗಳನ್ನು ನೋಡಲಿ ಎನ್ನುವ ಸದುದ್ದೇಶದಿಂದ ನಾವುಗಳು ಸಂದರ್ಶನ ಸಮಿತಿಯನ್ನು ಮಾಡಿದ್ದೇವೆ. ಸಂದರ್ಶನ ಸಮಿತಿಗಳು ಬರಿ ನಾಮಕಾವಸ್ಥೆ ಸಮಿತಿಗಳಾಗಿವೆ. ಈ ಆಸ್ಪತ್ರೆ ವ್ಯವಸ್ಥೆಯನ್ನು ತಹಬಂದಿಯಲ್ಲಿ ಮತ್ತು ಹದ್ದು ಬಸ್ತಿನಲ್ಲಿ ಇಡುವುದಕ್ಕೆ ಸಂಘರ್ಷಕ ಸಮಿತಿಗಳು ಇವತ್ತು ನೆರವಾಗಬೇಕು. ಇಲ್ಲದೇ ಹೋದರೆ ಆಸ್ಪತ್ರೆ ಸ್ಥಿತಿ ಬಹಳವಾಗಿ ಕೆಟ್ಟು ಹೋಗುತ್ತದೆ. ಸಂಸ್ಕೃತದಲ್ಲಿ ಒಂದು ಗಾದೆ ಇದೆ, ಅದರ ಅರ್ಥವೇನೆಂದರೆ ವೈದ್ಯರು ಯಮನ ಸಹೋದರ ಇದ್ದ ಹಾಗೆ. ಯಮ ಬರೀ ಪ್ರಾಣ ತೆಗೆಯುತ್ತಾನೆ. ವೈದ್ಯರು ಪ್ರಾಣ ಮತ್ತು ಧನ ಎರಡನ್ನೂ ಹೀರುತ್ತಾರೆ ಎಂದು ವೈದ್ಯರ ಬಗ್ಗೆ ವ್ಯಂಗ್ಯೋಕ್ತಿಯನ್ನು ಹಾಡಿದ್ದಾರೆ. ವೈದ್ಯರನ್ನು ಕಂಡರೆ ಜನ ಹೆದರುವಂಥ ಕಾಲ ಹಿಂದೆ ಇತ್ತು. ಅದು ಹೋಗಬೇಕು. ಹೋಗಬೇಕಾದರೆ ಆಸ್ಪತ್ರೆಗಳಲ್ಲಿ ಕಟ್ಟುನಿಟ್ಟಾದ ಸೇವೆ ಸಲ್ಲಿಸುವಂತೆ ವೈದ್ಯರುಗಳ ಮೇಲೆ ನಿಗಾ ಇಡಬೇಕು. ಗ್ರಾಮಾಂತರ ಪ್ರದೇಶಕ್ಕೆ ವೈದ್ಯರು ಬಂದರೆ ಏನು ಹೇಳುತ್ತಾರೆಂದರೆ ಇಲ್ಲಿ ನಮಗೆ ವಸತಿ ಸೌಕರ್ಯ ಇಲ್ಲ, ಮನರಂಜನೆ ಇಲ್ಲ ಎಂದು ಅವರಿಗೆ ಮನರಂಜನೆ ಕೊಡುವುದಕ್ಕೆ ಯಾವ ಸರ್ಕಾರದಿಂದ ಕೂಡಾ ಸಾಧ್ಯವಿಲ್ಲ. ಕನಿಷ್ಟ ವಸತಿ ಸೌಕರ್ಯವನ್ನಾದರೂ ಕೊಡಬೇಕೆಂದು ಹೇಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ೩೦೦ ಹಳ್ಳಿಗಳುಳ್ಳ ಒಂದು ಜಿಲ್ಲಾ ಆಸ್ಪತ್ರೆ ಇದೆ. ಅಲ್ಲಿ ಏನಾಗಿದೆ ಎಂದು ಹೇಳಿದರೆ ಆಸ್ಪತ್ರೆ ಊರ ಹೊರಗಡೆ ಇದೆ. ಆಸ್ಪತ್ರೆಗೆ ರೋಗಿಗಳು ಮೂರು ಕಿಲೋ ಮೀಟರ್ ಹೋಗಬೇಕಾದಂಥ ಪರಿಸ್ಥಿತಿ ಇದೆ. ಆಸ್ಪತ್ರೆ ಸಿಬ್ಬಂದಿ ಕೂಡ ಮೂರು ಕಿಲೋ ಮೀಟರ್ ದೂರ ಹೋಗಬೇಕಾಗಿದೆ. ಆದ್ದರಿಂದ ಬಿಜಾಪುರ ಜಿಲ್ಲೆಯಲ್ಲಿ ಅವರಿಗೆ ತೀವ್ರತರವಾದಂಥ ವಸತಿ ಸೌಕರ್ಯ ಇದೆ. ವಸತಿ ಸೌಕರ್ಯವನ್ನು ಬಿಜಾಪುರ ಜಿಲ್ಲೆಯ ಆಸ್ಪತ್ರೆಗೆ ಕೊಡುವಂತೆ ತೀವ್ರವಾಗಿ ಪ್ರಯತ್ನ ಮಾಡಬೇಕು. ಒಂದೇ ಒಂದು ಸೂಚನೆ ಕೊಡುತ್ತೇನೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಗರ ಪ್ರದೇಶಗಳಲ್ಲಿ ಆಸ್ಪತ್ರೆಗಳನ್ನು ಕಟ್ಟುತ್ತೀರಿ. ಬೇರೆ ಕಡೆ ತಾಲ್ಲೂಕಿಗೆ ಒಂದರಂತೆ ಆಗದಿದ್ದರು ಉಪವಿಭಾಗಕ್ಕೆ ಒಂದಂತಾದರೂ ಪ್ರಕೃತಿ ಚಿಕಿತ್ಸಾ ಕೇಂದ್ರಗಳನ್ನು ಏತಕ್ಕೆ ತೆರೆಯಬಾರದು? ಕರ್ನಾಟಕದಲ್ಲಿ ೫ ಕಡೆ ಪ್ರಕೃತಿ ಚಿಕಿತ್ಸಾ ಕೇಂದ್ರ ಇದೆ ಎಂದು ವರದಿಯಲ್ಲಿ ತೋರಿಸಿದ್ದೀರಿ. ಜಯನಗರದಲ್ಲಿ ಖಾಸಗಿ ಕ್ಷೇತ್ರದಲ್ಲಿ ನೇಚರ್ ಕ್ಯೂರ್ ಆಸ್ಪತ್ರೆ ಇದೆ. ಮೇಲಿಂದ ಮೇಲೆ ಉಪಚಾರಕ್ಕಾಗಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ಹೋಗಿ ನಾನು ನೋಡಿದ್ದೇನೆ. ಅದನ್ನು ತೆರೆಯುವುದರಿಂದ ಸರ್ಕಾರದ ಮೇಲೆ ಹೊರೆಯಾಗುವುದಿಲ್ಲ. ಸುಲಭ ರೀತಿಯಲ್ಲಿ ಯಾರಿಗಾದರೂ ಚಿಕಿತ್ಸೆ ಕೊಡುವ ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾನಿಕ ಜನರು ಸಹಾಯ ಮಾಡಿದರೆ ತಾಲ್ಲೂಕಿಗೆ ಒಂದರಂತೆ ಅಥವಾ ಸಬ್–ಡಿವಿಷನ್‌ಗೆ ಒಂದರಂತೆ ತೆರೆಯುವುದಕ್ಕೆ ಪ್ರಯತ್ನ ಮಾಡಬೇಕು. ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯಬೇಕಾದರೆ ೪ ಎಕರೆ ೧ ಗುಂಟೆ ಜಮೀನು ಮತ್ತು ೨೫ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಿಯಮ ಹಾಕಿದ್ದೀರಿ. ಇವತ್ತಿನ ಪರಿಸ್ಥಿತಿಯಲ್ಲಿ ಹಳ್ಳಿಗಳಲ್ಲಿ ಅದನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಎರಡರಲ್ಲಿ ಒಂದನ್ನಾದರೂ ಮಾಡಿ. ೪ ಎಕರೆ ೧ ಗುಂಟೆ ಜಮೀನು ಅಥವಾ ೨೫ ಸಾವಿರ ರೂಪಾಯಿ ಎರಡರಲ್ಲಿ ಒಂದನ್ನು ತೆಗೆದುಕೊಳ್ಳಿ. ಎರಡೂ ಬೇಕು ಎಂದರೆ ಆಸ್ಪತ್ರೆ ನಿಜವಾಗಿ ಯಾರಿಗೆ ಬೇಕೋ ಅವರಿಗೆ ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಣೆ ಮಾಡಿದಂತಾಗುತ್ತದೆ. ಯಾವುದಾದರೂ ಒಂದಕ್ಕೆ

ಒಪ್ಪಿಕೊಂಡರೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಹೆಚ್ಚಿಗೆ ವೈದ್ಯಕೀಯ ಕೇಂದ್ರ ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ವೈದ್ಯಕೀಯ ಶಿಕ್ಷಣದಲ್ಲಿ ಇವತ್ತು ಗುಣಮಟ್ಟ ಕುಸಿಯುತ್ತಿದೆ. ಮೆಡಿಕಲ್ ಕಾಲೇಜುಗಳಲ್ಲಿ, ನರ್ಸಿಂಗ್ ಟ್ರೈನಿಂಗ್ ಸೆಂಟರ್‌ಗಳಲ್ಲಿ ಶಿಕ್ಷಣ ಮಟ್ಟ ಕುಸಿಯುತ್ತಿದೆ. ಅಲ್ಲಿಂದ ಪಾಸಾಗಿ ಬಂದವರು ಜನರನ್ನು ನೇರವಾಗಿ ಸ್ವರ್ಗಕ್ಕೆ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆ. ಇದರ ಪರಿಣಾಮವಾಗಿ ಹಳ್ಳಿಗಳಲ್ಲಿ ನಕಲಿ ವೈದ್ಯರ ಹಾವಳಿ ಇದೆ. ಇದನ್ನು ತಡೆಗಟ್ಟಬೇಕು ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು ಬರಬೇಕೆಂದು ಹೇಳಿ, ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ—(ಮಡಿಕೇರಿ) ಮಾನ್ಯ ಅಧ್ಯಕ್ಷರೇ, ಇವತ್ತಿನ ಬೇಡಿಕೆಯ ಮೇಲೆ ಎರಡು ಮಾತುಗಳನ್ನು ಆಡುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ, ಬಡವರಿಗೆ ಒಳ್ಳೆಯ ರೀತಿಯ ಔಷಧಿಗಳು ಸಿಗುತ್ತಿಲ್ಲ. ಡಾಕ್ಟರುಗಳು ಸಿಗುತ್ತಿಲ್ಲ, ಪೌಷ್ಠಿಕ ಆಹಾರಗಳು ಸಿಗುತ್ತಿಲ್ಲ. ಈ ಎಲ್ಲ ಸೌಲಭ್ಯಗಳನ್ನು ಪೌಷ್ಠಿಕಾಹಾರವನ್ನು ತಲುಪಿಸತಕ್ಕ ಏರ್ಪಾಡನ್ನು ಸರ್ಕಾರ ಗ್ರಾಮಾಂತರ ಪ್ರದೇಶಗಳಿಗೆ ಮಾಡಬೇಕು. ಗ್ರಾಮೀಣ ಪ್ರದೇಶಗಳಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಿದರೆ ಅವರು ಅಲ್ಲಿ ಹೋಗಿ ಚಾರ್ಜ್ ತೆಗೆದುಕೊಂಡು ರಜಾ ಹಾಕಿ ಎಂ. ಡಿ. ಕೋರ್ಸಿಗೋ ಅಥವಾ ಟ್ರಾನ್ಸ್‌ಫರ್‌ಗೋ ಪ್ರಯತ್ನ ಮಾಡುವುದರಿಂದ ಜನರು ಕಷ್ಟಪಡಬೇಕಾದ ಸಂದರ್ಭ ಬಂದಿದೆ. ಕೆಲವು ಸಂದರ್ಭದಲ್ಲಿ ಪೋಸ್ಟಿಂಗ್ ಆದಾಗ ಹೋದರೆ ವೇಕೆನ್ಸಿ ಇಲ್ಲ ಎಂದು ವಾಪಸ್ ಬರಬೇಕಾದ ನಿದರ್ಶನಗಳೂ ಇವೆ. ಒಂದು ಉದಾಹರಣೆ ಹೇಳಬೇಕಾದರೆ, ಒಬ್ಬ ಡಾಕ್ಟರನ್ನು ಕೊಡಗಿನಿಂದ ಗುಲ್ಬರ್ಗ ಜಿಲ್ಲೆಯ ಚಿಕ್ಕೋಡಿಗೆ ಟ್ರಾನ್ಸ್‌ಫರ್ ಮಾಡಿದರು. ಅವರು ಅಲ್ಲಿ ಹೋದಾಗ ವೇಕೆನ್ಸಿ ಇಲ್ಲ ಎಂದು ವಾಪಸ್ ಬಂದರು. ಈ ರೀತಿಯಾಗಿ ಬಹಳಷ್ಟು ತೊಂದರೆ ಆಗುತ್ತಿವೆ. ಇನ್ನು ಮುಂದೆ ಆ ರೀತಿ ಮಾಡದೆ ಒಳ್ಳೆಯ ರೀತಿಯಲ್ಲಿ ಅವರಿಗೆ ಸರಿಯಾದ ಪೋಸ್ಟಿಂಗ್ ಕೊಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ವೈದ್ಯಕೀಯ ಕಾಲೇಜುಗಳಿಗಾಗಿ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ವೈದ್ಯಕೀಯ ಸ್ಟ್ಯಾಂಡರ್ಡ್ ಬಹಳಷ್ಟು ಕಡಿಮೆಯಾಗಿದೆ. ಒಳ್ಳೆಯ ರೀತಿಯಲ್ಲಿ ಸ್ಟ್ಯಾಂಡರ್ಡ್ ಬರಬೇಕಾದರೆ ವಿಶ್ವವಿದ್ಯಾನಿಲಯ ಮಾಡಬೇಕು. ಆ ರೀತಿ ಮಾಡಿದರೆ ವೈದ್ಯರ ಘನತೆ ಗೌರವವನ್ನು ಹೆಚ್ಚಿಸಿಕೊಂಡು ಹೋಗಬಹುದು. ಆ ಮೇಲೆ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಔಷಧಿಗಳು ಸಿಗುತ್ತಿಲ್ಲ. ಮಕ್ಕಳಿಗೆ ಪೌಷ್ಠಿಕಾಹಾರ ಅಲ್ಲಿ ಸಿಗುತ್ತಿಲ್ಲ, ಆದ್ದರಿಂದ ಅದನ್ನು ಸರಿಯಾಗಿ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಆಸ್ಪತ್ರೆಗಳಲ್ಲಿ ಡಯಟ್ ವ್ಯವಸ್ಥೆ ಸರಿಯಾಗಿಲ್ಲದಿರುವುದರಿಂದ ಇನ್‌ಪೇಷೆಂಟ್ಸ್ ಬರುತ್ತಿಲ್ಲ. ಆದ್ದರಿಂದ ಎಲ್ಲ ಆಸ್ಪತ್ರೆಗಳಲ್ಲಿ ಸರಿಯಾಗಿ ಡಯಟ್ ಕೊಡತಕ್ಕ ಪ್ರಯತ್ನ ಮಾಡಿದರೆ ಇನ್‌ಪೇಷೆಂಟ್ಸ್ ಇರುವುದಕ್ಕೆ ಸರಿಯಾದ ವ್ಯವಸ್ಥೆಯಾಗುತ್ತದೆ, ಇಲ್ಲದಿದ್ದರೆ ಕಷ್ಟವಾಗುತ್ತದೆ. ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿದ್ದರೆ ಕ್ವಾರ್ಟರ್ಸ್ ಇರುವುದಿಲ್ಲ, ಕ್ವಾರ್ಟರ್ಸ್ ಇದ್ದರೆ ಲೈಟ್ ಇರುವುದಿಲ್ಲ, ನೀರಿರುವುದಿಲ್ಲ, ಆದ್ದರಿಂದ ಡಾಕ್ಟರುಗಳು ಹೋಗುತ್ತಿಲ್ಲ. ಸರ್ಕಾರ ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕು. ಅನಂತರ, ಆಸ್ಪತ್ರೆಗಳಲ್ಲಿ ಅಡ್ಮಿನಿಸ್ಟ್ರೇಷನ್ ಬಹಳ ಕೆಳಮಟ್ಟಕ್ಕೆ ಹೋಗಿದೆ. ಇದಕ್ಕೆ ಕಾರಣ ಹಿಂದೆ ಇದ್ದಂತೆ ವಿಸಿಟರ್ಸ್ ಕಮಿಟಿಗಳನ್ನು ಈ ಸಾರಿ ಆಸ್ಪತ್ರೆಗಳಲ್ಲಿ ಮಾಡದಿರುವುದು. ನಮ್ಮಲ್ಲಿ ಒಂದು ಒಂದೂವರೆ ವರ್ಷದಿಂದ ವಿಸಿಟರ್ಸ್ ಕಮಿಟಿ ಇಲ್ಲದೆ ಸೂಪರ್‌ವಿಷನ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕೂಡಲೇ ವಿಸಿಟರ್ಸ್ ಕಮಿಟಿಯನ್ನು ಮಾಡಿ ಸೂಪರ್‌ವಿಷನ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಸ್ಪತ್ರೆಗಳಲ್ಲಿ ಕೆಲವು ಸಮಯ ಎಲೆಕ್ಟ್ರಿಕ್ ಲೈಟ್ ಇರುವುದಿಲ್ಲ. ಆಪರೇಷನ್ ಮಾಡತಕ್ಕ ಕಾಲದಲ್ಲಿ ಲೈಟ್ ಹೋಗತಕ್ಕ ಪರಿಸ್ಥಿತಿ ಬರುತ್ತದೆ. ಟಾರ್ಚ್ ಹಾಕಿಕೊಂಡು ಆಪರೇಷನ್ ಮಾಡುವ ಪ್ರಸಂಗ ಇರುತ್ತದೆ ಆ ಸಂದರ್ಭದಲ್ಲಿ ಹೊಟ್ಟೆಯೊಳಗೆ ಏನಾದರೂ ಇಟ್ಟು ಹೊಲಿಯುತಕ್ಕ ಪ್ರಸಂಗ ಬರುತ್ತದೆ. ಆದ್ದರಿಂದ ಅದಕ್ಕೆ ಎಡೆಕೊಡದೆ ಜನರೇಟರುಗಳನ್ನು ಆಸ್ಪತ್ರೆಗಳಲ್ಲಿ ಒಳಪಡಿಸಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಲೆನಾಡು ಪ್ರದೇಶದಲ್ಲಿ ಮಳೆಗಾಲದಲ್ಲಿ ಮಳೆ ಗಾಳಿ ಇರುತ್ತದೆ. ಆದ್ದರಿಂದ ಆಗಾಗ ಕರೆಂಟ್ ಹೋಗುತ್ತದೆ. ಅಂಥ ಸಂದರ್ಭದಲ್ಲಿ ಜನರೇಟರ್ ಇದ್ದರೆ ಸುಲಭವಾಗುತ್ತದೆ, ಆಪರೇಷನ್ ಮಾಡುವುದಕ್ಕೆ ಯಾವ ಅಡಚಣೆಯೂ ಆಗುವುದಿಲ್ಲ ಎಂದು ಇಲ್ಲಿ ಹೇಳ ಬಯಸುತ್ತೇನೆ. ನಮ್ಮಲ್ಲಿ ಡಾಕ್ಟರುಗಳು ಬಹಳ ಜನ ಕೆಲಸವಿಲ್ಲದೆ ತಿರುಗಾಡುತ್ತಿದ್ದಾರೆ. ಡಾಕ್ಟರುಗಳ ಹುದ್ದೆಗಳನ್ನು ತುಂಬು

ವುದಕ್ಕೆ ಏನೂ ಕಷ್ಟ ಎಂಬುದು ಗೊತ್ತಾಗುವುದಿಲ್ಲ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿ ನೇರವಾಗಿ ಪರ್ಮನೆಂಟಾಗಿ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕು. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರುಗಳನ್ನು ತೆಗೆದುಕೊಂಡರೆ ಪುನಃ ನಾವು ವಾಪಸ್ ಹೋಗಬೇಕಾಗುತ್ತದೆ ಎಂಬ ಭಾವನೆಯಿಂದ ಅವರು ಸರಿಯಾಗಿ ಕೆಲಸ ಮಾಡವುದಿಲ್ಲ. ಆದ್ದರಿಂದ ಪರ್ಮನೆಂಟ್ ಡಾಕ್ಟರುಗಳನ್ನು ತೆಗೆದುಕೊಂಡು ಪೋಸ್ಟ್ ಮಾಡಿದರೆ ಮುಂದೆ ಆರೋಗ್ಯ ಇಲಾಖೆಯಲ್ಲಿ ಹೆಚ್ಚಿನ ಜನಸೇವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನರ್ಸ್‌ಗಳನ್ನು ಜಿಲ್ಲೆಗಳಲ್ಲಿ ಸೆಲೆಕ್ಷನ್ ಮಾಡಿ ಕಳುಹಿಸಿಕೊಟ್ಟರೆ ಇಲ್ಲಿ ಡೈರೆಕ್ಟರ್ ಆಫೀಸಿನಲ್ಲಿ ಲಿಸ್ಟೇ ಬದಲಾಗಿ ಹೊಸ ಲಿಸ್ಟ್ ಆಗತಕ್ಕ ಪ್ರಸಂಗ ಇದೆ. ಇಲ್ಲಿ ಸೆಲೆಕ್ಷನ್ ಲಿಸ್ಟ್ ಮಾಡುವಾಗ ಬಹಳಷ್ಟು ಇನ್‌ಫ್ಲುಯೆನ್ಸ್‌ನಿಂದ ಮಾಡುತ್ತಾರೆ. ಇದರಲ್ಲಿ ಕರಪ್ಷನ್ ಕೂಡ ನಡೆಯುತ್ತದೆ. ಆದ್ದರಿಂದ ಸೆಲೆಕ್ಷನ್ ಕಮಿಟಿಯಲ್ಲಿ ಏನು ಸೆಲೆಕ್ಷನ್ ಮಾಡಿ ಕಳುಹಿಸುತ್ತಾರೋ ಅದನ್ನೇ ಡೈರೆಕ್ಟೊರೇಟ್‌ನಲ್ಲಿ ಅಪ್ರೂವ್ ಮಾಡಿ ಕಳುಹಿಸಿಕೊಟ್ಟರೆ ಪ್ರಯೋಜನವಾಗುತ್ತದೆ. ಇಲ್ಲದೇಹೋದರೆ ಅಲ್ಲಿ ಸೆಲೆಕ್ಷನ್ ಮಾಡುವುದು ಬರೀ ನಾಮಕಾವಸ್ಥೆಯಾಗುತ್ತದೆ ಎಂದು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡುವ ಕಾಲದಲ್ಲಿ ಎರಡು ಮೂರು ವರ್ಷ ಅಲ್ಲೇ ಕೆಲಸ ಮಾಡುವಂತೆ ಬಾಂಡ್ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅಲ್ಲಿ ಕೆಲಸವನ್ನು ಸರಿಯಾಗಿ ಪ್ರೀತಿಯಿಂದ ಮಾಡುವುದಿಲ್ಲ. ಆದ್ದರಿಂದ ಅಲ್ಲೇ ಅವರಿದ್ದು ಅಲ್ಲೇ ವಾಸ ಮಾಡಿ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೆಟರ್ನಿಟಿ ಹೋಂಗಳಲ್ಲಿ ಮನುಷ್ಯರು ಹೋಗುವದಕ್ಕಾಗುವುದಿಲ್ಲ. ಕ್ಲೀನ್ ಅಂತೂ ಇಲ್ಲವೇ ಇಲ್ಲ. ಒಳಗೆ ಹೋದರೆ ಕೆಟ್ಟ ವಾಸನೆ ಇರುತ್ತದೆ. ತಾಯಿ, ಮಕ್ಕಳು ಮೂರು ದಿವಸ ಅಲ್ಲಿರುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಬೇಕು ಆದ್ದರಿಂದ ಮೆಟರ್ನಿಟಿ ಹೋಂಗಳನ್ನು ಕ್ಲೀನಾಗಿ ಇಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಕಳೆದ ವರ್ಷ ಮಾನ್ಯ ವಿದ್ಯಾ ಮಂತ್ರಿಯವರು ನಮ್ಮ ಕೊಡಗಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಕೇಳಿದಾಗ, ವಿಶ್ವವಿದ್ಯಾನಿಲಯದವರು ಒಪ್ಪಿಗೆ ಕೊಟ್ಟರೆ ಅದನ್ನು ಕೊಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದಾರೆ ಈಗಾಗಲೇ ನಾವು ವಿಶ್ವವಿದ್ಯಾನಿಲಯದವರ ಒಪ್ಪಿಗೆಯನ್ನು ತೆಗೆದುಕೊಂಡು ಬಂದು ಸರ್ಕಾರದ ಮುಂದೆ ಇಟ್ಟಿದ್ದೇವೆ. ಸರ್ಕಾರ ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ತೆಗೆಯುವುದಕ್ಕೆ ಇದೆ. ಈ ಸಂದರ್ಭದಲ್ಲಿ ಕೊಡಗಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಹೇಳುತ್ತಿದ್ದೇನೆ. ಇದಕ್ಕೋಸ್ಕರವೇ ಅಲ್ಲಿ ೪೦ ಎಕರೆ ಜಾಗವನ್ನು ಕೂಡಾ ನಿಗದಿ ಮಾಡಿ ಇಡಲಾಗಿದೆ. ಅದನ್ನೂ ಸಹಾ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ.—(ಹರಿಹರ), ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಇಲಾಖೆ, ನ್ಯಾಯಾಂಗ ಇಲಾಖೆ, ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ಸುಸಂದರ್ಭದಲ್ಲಿ ನಾನು ತಮ್ಮ ಮೂಲಕ ಮಾನ್ಯ ನಗರಸಭೆಯ ಸಚಿವರಿಗೆ ಕೆಲವು ಅವಶ್ಯಕತೆಗಳನ್ನು ಪೂರೈಸುವುದರ ಬಗ್ಗೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಗರಸಭೆಗಳು ಮತ್ತು ಪುರಸಭೆಗಳಲ್ಲಿ ಬರುತ್ತಿದ್ದ ಆಕ್ಟ್ರಾಯ್‌ನ್ನು ರದ್ದುಪಡಿಸಿದ ಮೇಲೆ ಅವುಗಳ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ನಗರ ಸಭೆಗಳು ಅಗತ್ಯ ಸೌಕರ್ಯಗಳನ್ನು ಕೂಡಾ ಪೂರೈಸುವುದಕ್ಕೆ ಬಹಳ ಕಷ್ಟವಾಗಿದೆ. ನಾಗರೀಕರಿಗೆ ನೀರಿನ ಸೌಕರ್ಯ, ದೀಪದ ವ್ಯವಸ್ಥೆ, ರಸ್ತೆ ವ್ಯವಸ್ಥೆ ನೈರ್ಮಲ್ಯ ಮೊದಲಾದಅನುಕೂಲಗಳನ್ನು ಒದಗಿಸುವಬಗ್ಗೆ ನಗರಸಭೆಗಳು ಶೋಚನೀಯಪರಿಸ್ಥಿತಿಯಲ್ಲಿವೆ. ಆದ್ದರಿಂದ ಆಕ್ಟ್ರಾಯ್‌ಬದಲು ಏನು ಪ್ರೋತ್ಸಾಹ ಧನವನ್ನು ಕೊಡುತ್ತೀದ್ದೀರಿ ಅದನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಗರಗಳಲ್ಲಿ ಶಾಲೆಗಳನ್ನು ಕಟ್ಟತಕ್ಕ ಸಂದರ್ಭಗಳಲ್ಲಿ ನಗರಸಭೆಗಳಿಗೆ ಮ್ಯಾಚಿಂಗ್ ಗ್ರಾಂಟ್ ಕೊಟ್ಟರೆ ಮಾತ್ರ ಹಣವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಮಾನ್ಯ ಸಚಿವರು ನಗರ ಸಭೆಗಳಿಗೆ ಪರಿಹಾರ ಹಣವನ್ನು ಕೊಡತಕ್ಕ ಸಂದರ್ಭದಲ್ಲಿ ಶಾಲಾ ಕಟ್ಟಡಗಳಿಗೇ ಉಪಯೋಗಿಸಬೇಕೆಂದು ಹೇಳಿ ನಗರಸಭೆಗಳಿಗೆ ಹಣವನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಇವುಗಳಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಇವತ್ತು ವಿದ್ಯುಚ್ಛಕ್ತಿ ಹಾಗೂ ಟೆಲಿಫೋನ್ ಇಲಾಖೆಯವರು ನಗರಗಳಲ್ಲಿ ಆಗಿಂದಾಗ್ಗೆ ರಸ್ತೆಗಳನ್ನು ಅಗೆಯು

ವುದರ ಮುಖಾಂತರ ಸಾರ್ವಜನಿಕರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಇವತ್ತು ಖಾಸಗಿಯವರು ಜಾಗವನ್ನು ತೆಗೆದುಕೊಂಡರೆ ನೆಲ ಬಾಡಿಗೆ ಮೂಲಕ ಹಣವನ್ನು ಪಡೆಯುವ ಪದ್ಧತಿ ಇರುವಹಾಗೆ ವ್ಯಾವಹಾರಿಕವಾಗಿ ಈ ಎರಡು ಇಲಾಖೆಗಳಿಂದ ಅಗೆದ ಜಾಗದ ಬಗ್ಗೆ ನೆಲಬಾಡಿಗೆಯನ್ನು ಪಡೆಯುವ ವ್ಯವಸ್ಥೆ ಮಾಡಿದರೆ ನಗರಸಭೆಗಳಿಗೂ ಆದಾಯ ಬರುತ್ತದೆ ಹಾಗೂ ಆ ಜಾಗವನ್ನು ಆದಷ್ಟು ಬೇಗ ದುರಸ್ತಿ ಮಾಡಬಹುದೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ನ್ಯಾಯಾಂಗ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇತ್ತೀಚೆಗೆ ಕೆಲವು ಕೋರ್ಟುಗಳನ್ನು ಕೆಲವು ಪ್ರದೇಶಗಳಲ್ಲಿ ಪ್ರಾರಂಭಮಾಡುವುದರ ಮೂಲಕ, ಸಣ್ಣ ಸಣ್ಣ ಕಟ್ಟಡಗಳಲ್ಲಿ ಅವುಗಳನ್ನು ನಡೆಸುತ್ತಿದ್ದಾರೆ. ಇವತ್ತು ಅಂತಹ ಕಡೆ ನ್ಯಾಯಾಧೀಶರು ಕೂರುವುದಕ್ಕೆ, ವಕೀಲರು ಪ್ರತಿವಾದಿಗಳು ಅಲ್ಲಿ ಓಡಾಡುವುದಕ್ಕೂ ಕೂಡ ಬಹಳ ತೊಂದರೆಯಾಗುತ್ತಾ ಇದೆ. ಆದ್ದರಿಂದ ಎಲ್ಲೆಲ್ಲಿ ಕೋರ್ಟುಗಳನ್ನು ತೆರೆದಿದ್ದೀರಿ ಸುಸಜ್ಜಿತವಾದ ದೊಡ್ಡ ಕಟ್ಟಡಗಳನ್ನು ಕೇಳುವುದಕ್ಕೆ ನಾನು ಹೋಗುವುದಿಲ್ಲ, ಅಲ್ಲಿ ನ್ಯಾಯಾಲಯಕ್ಕೆ ಅವಶ್ಯಕ ಇರುವಂತಹ ಕಟ್ಟಡಗಳನ್ನು ಪೂರೈಕೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಿ ಕೋರ್ಟಿನ ವ್ಯವಹಾರ ಸರಳವಾಗಿ ನಡೆಯುತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ದಾವಣಗೆರೆ ನಗರದಲ್ಲಿ ಸೆಷನ್ ಜಡ್ಜ್ ಕೋರ್ಟ್ ಪ್ರಾರಂಭ ಮಾಡಬೇಕೆಂದು ಬಹಳ ದಿವಸಗಳ ಕೋರಿಕೆ ಇದೆ. ಮಾನ್ಯ ಸಚಿವರು ಈ ವರ್ಷದಲ್ಲಿ ಎಂದರೆ ೧೯೮೬-೮೭ ರಲ್ಲಿ ದಾವಣಗೆರೆಗೆ ಸೆಷನ್ಸ್ ಕೋರ್ಟ್ ಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳಬೇಕೆಂದರೆ, ನರ್ಸಿಂಗ್ ಶಾಲೆಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕ ಸಂದರ್ಭದಲ್ಲಿ ಸ್ಥಾನಗಳು ಕೇವಲ ನಗರಪ್ರದೇಶದವರಿಗೆ ಮಾತ್ರ ಸೀಮಿತವಾಗಿವೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅಂಕಗಳ ಆಧಾರದ ಮೇಲೆ ಇಲ್ಲಿ ಪ್ರಾತಿನಿಧ್ಯ ಸಿಗುತ್ತಾ ಇಲ್ಲ ಇವತ್ತು ಬಿ. ಎಸ್. ಸಿ. (ಅಗ್ರಿಕಲ್ಚರ್) ಹಾಗೂ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಮೀಸಲಾತಿಯನ್ನು ಇಡುವ ರೀತಿ ಇವರಿಗೂ ಮೀಸಲಾತಿ ಕೊಟ್ಟರೆ, ಶೇಕಡಾ ೫೦ ಭಾಗ ಮೀಸಲಾತಿ ಇಟ್ಟರೆ ಗ್ರಾಮಾಂತರ ಪ್ರದೇಶದ ಮಕ್ಕಳು ವೈದ್ಯಕೀಯ ಇಲಾಖೆಯಲ್ಲಿ ಸೇವೆ ಮಾಡತಕ್ಕ ಸದವಕಾಶ ಸಿಕ್ಕಿದಂತಾಗುತ್ತದೆ. ಇನ್ನು ಔಷಧಿಗಳ ಬಗ್ಗೆ ಹೇಳಬೇಕೆಂದರೆ, ಇವತ್ತು ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಔಷಧಿಗಳನ್ನು ಒದಗಿಸಬೇಕು. ಈ ಬಗ್ಗೆ ಹಣವನ್ನು ಹೆಚ್ಚು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಇವತ್ತಿನ ದಿವಸ ಔಷಧಿಗಳ ಧಾರಣೆ ಎಷ್ಟು ಹೆಚ್ಚು ಆಗಿದೆ ಅದನ್ನು ಹೋಲಿಸಿದಾಗ ಇವರು ಇಟ್ಟಿರುವ ಹಣದಲ್ಲಿ ಹೆಚ್ಚು ಔಷಧಿಗಳು ಬರುವುದಿಲ್ಲ. ಇದರಿಂದ ಮೊದಲಿಗಿಂತಲೂ ಕಡಿಮೆ ಪ್ರಮಾಣದ ಔಷಧಿಗಳು ಬರುತ್ತವೆ ಇವತ್ತು ಗ್ರಾಮಾಂತರ ಜನರಿಗೆ ವೈದ್ಯಕೀಯ ಸೌಕರ್ಯವನ್ನು ಕೊಡಬೇಕೆಂದಾಗ ಹೆಚ್ಚಿನ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ಔಷಧಿಗಳನ್ನು ಪಡೆಯುವುದಕ್ಕೋಸ್ಕರ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕು. ಈ ರೀತಿಯಲ್ಲಿ ಗ್ರಾಮಾಂತರ ಜನರಿಗೆ ಹೆಚ್ಚು ವೈದ್ಯಕೀಯ ಸೌಕರ್ಯ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ, ದಾವಣಗೆರೆಯ ಮಾಯಕೊಂಡ ತಾಲ್ಲೂಕಿನ ಕಂದಗಲ್ ಗ್ರಾಮದಲ್ಲಿ ಒಂದು ಆಸ್ಪತ್ರೆ ಇದೆ, ಅದನ್ನು ಪರಿವರ್ತನೆ ಮಾಡಬೇಕು ಎನ್ನುವ ಉದ್ದೇಶ ಇದೆ. ಇದನ್ನು ಆರೋಗ್ಯ ಘಟಕವನ್ನಾಗಿ ಪರಿವರ್ತನೆ ಮಾಡಿ ಹೆಚ್ಚಿನ ವೈದ್ಯಕೀಯ ಸೌಕರ್ಯವನ್ನು ಕೊಡತಕ್ಕ ವ್ಯವಸ್ಥೆಯನ್ನು ಆರೋಗ್ಯ ಸಚಿವರು ಪೂರೈಕೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ. ಇನ್ನು ದಾವಣಗೆರೆ ತಾಲ್ಲೂಕಿನಲ್ಲಿ ೧೫೦ಕ್ಕೂ ಮೇಲ್ಪಟ್ಟ ಗ್ರಾಮಗಳು ಇದ್ದು ಸುಮಾರು ೭-೮ ಸಾವಿರಕ್ಕಿಂತ ಹೆಚ್ಚು ಪ್ರಜಾಸಂಖ್ಯೆ ಇರತಕ್ಕ ಗ್ರಾಮಗಳೂ ಸಹಾ ಇವೆ. ಇಂತಹ ಗ್ರಾಮಗಳಲ್ಲಿ ಆರೋಗ್ಯ ಘಟಕ ಇಲ್ಲದೇ ೧೦-೧೫ ಮೈಲಿ ದೂರ ಚಿಕಿತ್ಸೆಗಾಗಿ ಹೋಗಬೇಕಾಗಿದೆ. ಅದಕ್ಕೋಸ್ಕರ ದಾವಣಗೆರೆ ತಾಲ್ಲೂಕು ಅಣಬೇರು, ಐದ್ನೂರು, ಆಲೂರು ಗ್ರಾಮಗಳಲ್ಲಿ ವೈದ್ಯಕೀಯ ಸೌಕರ್ಯಕ್ಕಾಗಿ ಮೂರು ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡಿ ಗ್ರಾಮೀಣ ಜನತೆಗೆ ವೈದ್ಯಕೀಯ ನೆರವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರು)—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಪೌರಾಡಳಿತ, ಕಾನೂನು ಇಲಾಖೆಯ ಮೇಲಿನ ಬೇಡಿಕೆಗಳನ್ನು ನಾನು ವಿರೋಧಿಸಿ ಮಾತನಾಡುತ್ತೇನೆ. ಕಾರಣ ಈ ಇಲಾಖೆಯ ಅಸಮರ್ಪಕ ಕಾರ್ಯ ನಿರ್ವಹಣೆಗಾಗಿ. ನಮಗೆ ನೀಡಲಾದ ಪುಸ್ತಕಗಳಲ್ಲಿ ಏನು ಹೇಳಿದ್ದಾರೆ ಅದರ ಆಧಾರದ ಮೇಲೆ ನೋಡಿ ಹೇಳುವುದಾದರೆ ಆರೋಗ್ಯ ಕೇಂದ್ರಗಳ ಕನಿಷ್ಟ ಅವಶ್ಯಕತೆಗಳನ್ನೂ ಕೂಡಾ ಪೂರೈಕೆ ಮಾಡಿಲ್ಲ ಎಂದು ಹೇಳುವುದಕ್ಕೆ ಬೇಸರವಾಗುತ್ತದೆ. ೧೯೭೫-೭೬ನೇ ವರ್ಷದ ಗುರಿ ೫೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವುದು ಆಗಿದೆ. ಆದರೆ ಇದುವರೆವಿಗೂ ಒಂದೂ ಸ್ಥಾಪನೆಯಾಗಿಲ್ಲ. ಮೇಲ್ದರ್ಜೆಗೆ ಏರಿಸುವ ಪಿ ಎಚ್. ಸೆಂಟರ್‌ಗಳು, ತಾಲ್ಲೂಕು ಆಸ್ಪತ್ರೆಗಳು, ಸಹಾಯಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಹೆರಿಗೆ ಸೌಲಭ್ಯ, ಗಂಡ್ಸುಗಾಡು ಕೇಂದ್ರ, ಸಂಚಾರಿ ಘಟಕ ಇವುಗಳ ಬಗ್ಗೆ ೧೯೭೫-೭೬ ರಲ್ಲಿ ಯಾವ ಗುರಿಯೂ ಇಲ್ಲ ಯಾವ ಸಾಧನೆಯೂ ಇಲ್ಲ. ಇವುಗಳಲ್ಲಿ ೧೯೭೩-೭೪ ರಲ್ಲಿ ಏನು ಸಾಧನೆ ಆಗಿತ್ತೋ ಅದಕ್ಕಿಂತಾ ಕಡಿಮೆ ಸಾಧನೆ ೧೯೭೪-೭೫ ರಲ್ಲಿ ಆಗಿದೆ. ಇದರಿಂದ ಕಳೆದ ೨ ವರ್ಷಗಳಲ್ಲಿ ಯಾವ ರೀತಿ ನಮ್ಮ ವೈದ್ಯಕೀಯ ಇಲಾಖೆ ಮುಂದುವರಿಯುತ್ತಿದೆ ಎನ್ನುವ ಚಿತ್ರ ನಮಗೆ ಗೊತ್ತಾಗುತ್ತದೆ. ಹೀಗಾದರೆ ಆರೋಗ್ಯ ಪಾಲನೆ ಹಾಗೂ ರೋಗ ಪ್ರತಿಬಂಧಕ ಕಾರ್ಯಕ್ರಮ ಸಾಧನೆ ಹೇಗೆ? ಇವತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಖಾಸಗೀ ವೈದ್ಯರೇ ಇದನ್ನೆಲ್ಲಾ ನೋಡಬೇಕೇ. ನಗರ ಪ್ರದೇಶದಲ್ಲಿ ಯಾವುದೇ ನಿಯಂತ್ರಣ ಇಲ್ಲದೇ ವಿಪರೀತ ಸುಲಿಗೆ ಮಾಡುತ್ತಿರುವ, ಹಣ ವಸೂಲಿ ಮಾಡುತ್ತಿರುವ ನರ್ಸಿಂಗ್ ಹೋಮ್‌ಗಳಿಗೇ ಕಾರ್ಯ ಮಾಡುವುದಕ್ಕೆ ಬಿಟ್ಟು ತಾವು ಕೈ ಕಟ್ಟಿ ಕುಳಿತಿದ್ದೀರಾ ಎಂದು ನಾನು ಕೇಳಬೇಕಾಗುತ್ತದೆ. ಇವತ್ತು ಆರೋಗ್ಯ ಇಲಾಖೆ ಆರೋಗ್ಯ ಪಾಲನೆ ಹಾಗೂ ರೋಗ ಪ್ರತಿಬಂಧಗಳನ್ನು ಮಾತ್ರ ಹೊತ್ತುಕೊಂಡಿದೆ. ನಗರದಲ್ಲಾಗಲೀ, ಗ್ರಾಮಾಂತರ ಪ್ರದೇಶದಲ್ಲಾಗಲೀ ಸರ್ಕಾರದವರ ಕಾರ್ಯಕ್ರಮಗಳನ್ನು ಬಡ ಜನರು ಒಪ್ಪಿಕೊಂಡು ಬಂದಿದ್ದಾರೆ. ಆದ್ದರಿಂದ ಆಸ್ಪತ್ರೆಗಳಲ್ಲಿ ಯಾವ ರೀತಿಯ ಸೌಕರ್ಯಗಳು ದೊರೆಯುತ್ತಿವೆ ಎಂಬುದನ್ನು ನೋಡಬೇಕು. ಇವತ್ತು ಎಲ್ಲಾ ಕಡೆ ಉದಾಸೀನ ಮನೋವೃತ್ತಿಯೇ ಆಗಿದೆ. ಆಸ್ಪತ್ರೆಗಳಲ್ಲಿ ಪರಿಶ್ರಮದ ಕೆಲಸಗಳು ಆಗಬೇಕಾಗಿವೆ. ಆದ್ದರಿಂದ ಈ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಬಡ ಜನರಿಗೆ ಸಾಂತ್ವನ ನೀಡತಕ್ಕ ಕಾರ್ಯಕ್ರಮ ಇಗಾಗಬೇಕು. ಜನರಲ್ಲಿ ಚೇತನ, ನವಚೇತನ ಬರಬೇಕು. ಸಾಯುವವರು ಸಾಯಲಿ, ಬದುಕುವವರು ಬದುಕಲಿ, ಈ ಸಾವು ಬದುಕಿನ ನಡುವೆ ನಾವೇಕೆ ನರಳಬೇಕೆಂಬ ಮನೋವೃತ್ತಿ ವೈದ್ಯರಲ್ಲಿರುವುದನ್ನು ನೋಡಿದರೆ ಬೇಸರವಾಗುತ್ತದೆ. ನಿಮ್ಮ ಇಲಾಖೆಯ ವಾರ್ಷಿಕ ವರದಿಯ ಪುಟ ೬-೭ ರಲ್ಲಿ ನೋಡಿದರೆ ಆಸ್ಪತ್ರೆಯ ಕಟ್ಟಡಗಳ ಕೆಲಸ ತುಂಬಾ ನಿರ್ಲಕ್ಷಿಸಲ್ಪಟ್ಟಿವೆ. ಇಲ್ಲಿ ತಾವು ಕೆಲವು ಜಿಲ್ಲೆಗಳ ಹೆಸರುಗಳನ್ನು ಕೊಟ್ಟಿದ್ದೀರಿ ಕೆಲವು ಜಿಲ್ಲೆಗಳ ಹೆಸರುಗಳೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನೇಕ ಆಸ್ಪತ್ರೆ ಕಟ್ಟಡಗಳ ಕೆಲಸ ಅಲಕ್ಷಿಸಲ್ಪಟ್ಟಿವೆ. ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದ ಸರ್ಕಾರಕ್ಕೆ ಯಾವ ಆಸ್ಪತ್ರೆಗಳು ಹಸ್ತಾಂತರವಾದುವೋ ಆ ಆಸ್ಪತ್ರೆಗಳ ಕಟ್ಟಡಗಳು ಸರಿಯಾದ ದುರಸ್ತಿಯಲ್ಲಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗದವರ ಸೇವಾ ಹಿರಿತನದ ಬಗ್ಗೆ ಇದುವರೆಗೂ ಅಂತಿಮವಾಗಿ ನಿರ್ಧಾರ ಆಗಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧೀನದಲ್ಲಿರತಕ್ಕ ಕೆಲವು ರೂರಲ್ ಆಸ್ಪತ್ರೆಗಳು ತುಂಬಾ ದುರವಸ್ಥೆಯಲ್ಲಿವೆ. ಖಾಸಗಿ ವೈದ್ಯರು ಆಸ್ಪತ್ರೆಗಳಿಗೆ ಬಂದು ಕೆಲಸ ಮಾಡುತ್ತಿದ್ದವರಿಗೆ ಪಾರ್ಟ್ ಟೈಂ ಎಂದು ಮೊದಲು ೧೦೦ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಅವರಿಗೆ ೩೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈ ವೈದ್ಯರ ಬಗ್ಗೆ ಯಾವುದೇ ರೀತಿಯ ಸಮರ್ಪಕವಾದ ವಿವರಣೆಯನ್ನು ಇಲ್ಲಿ ತಾವು ಕೊಟ್ಟಿಲ್ಲ ಸ್ವಾಮಿ. ಈ ಆಸ್ಪತ್ರೆಗಳನ್ನು ಸಂಪೂರ್ಣವಾಗಿ ಸರ್ಕಾರೀ ಆಸ್ಪತ್ರೆಯೆಂದು ಮಾಡಿ, ಇಲ್ಲದಿದ್ದರೆ ಅದಕ್ಕೆ ಬೇರೆ ಏನಾದರೂ ವ್ಯವಸ್ಥೆಯನ್ನು ಮಾಡಿ. ನನ್ನ ತಾಲ್ಲೂಕಿನಲ್ಲಿ ನಾಡ, ವಂಡ್ಸೆ, ಗಂಗೊಳ್ಳಿ ಈ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳಿವೆ ಅಲ್ಲಿ ಕಳೆದ ಎರಡು ವರ್ಷಗಳಿಂದಲೂ ವೈದ್ಯರುಗಳೇ ಇಲ್ಲ. ಅಷ್ಟೇ ಅಲ್ಲ, ಬೈಂದೂರು ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಮಹಿಳಾ ವೈದ್ಯರು ಇಲ್ಲವೆಂದು ಕಳೆದ ಸಾರಿ ಬಹಳಷ್ಟು ಒತ್ತಾಯ ಮಾಡಿ ಹೇಳಿದ್ದೇನೆ. ಆದರೂ ಅಲ್ಲಿಗೆ ಮಹಿಳಾ ವೈದ್ಯರನ್ನು ಹಾಕಿಲ್ಲ. ಕೇಳಿದರೆ ಅಲ್ಲಿಗೆ ಮಹಿಳಾ ವೈದ್ಯರನ್ನು ನೇಮಕ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ನಿಮ್ಮ ಸರ್ಕಾರದ ಇಲಾಖೆಗಳಲ್ಲಿ ಕೇವಲ ಕಾಗದದ ಮೇಲೆ ಮಾತ್ರ ನೇಮಕಾತಿಗಳಾಗಿರುತ್ತವೆ. ಆದರೆ ಆ ಜನರು ಮಾತ್ರ ವರ್ಗವಾದ ಜಾಗಕ್ಕೆ ಹೋಗಿರುವುದಿಲ್ಲ. ಇಂಥ ವಿಚಾರಗಳ ಬಗ್ಗೆ ಸರ್ಕಾರ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು.

ಸ್ಥಳೀಯ ಅಭ್ಯರ್ಥಿಗಳನ್ನು ನಾವು ತೆಗೆದುಕೊಳ್ಳುವುದಿಲ್ಲವೆಂದು ತಾವು ನಿರ್ಧಾರ ಮಾಡಿರುವುದಾಗಿ ಹೇಳಿದ್ದೀರಿ. ಆದರೆ ಇಂಥ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದಿರುವ ಕಡೆಗಳಲ್ಲಿ ಯಾವುದಾದರೊಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡು ಅಲ್ಲಿ ಒಬ್ಬ ವೈದ್ಯಾಧಿಕಾರಿ ಇರುವಂತೆ ವ್ಯವಸ್ಥೆ ಮಾಡಬೇಕು. ಅದೇ ರೀತಿ ಕುಂದಾಪುರ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್‌ನ್ನು ತೆರೆಯುವುದಾದರೆ ಅದಕ್ಕೆ ಬೇಕಾದ ಸಹಾಯವನ್ನು ನಾವು ನೀಡುತ್ತೇವೆಂದು ಅಲ್ಲಿನ ರೋಟರಿ ಸಂಸ್ಥೆಯವರು ಮುಂದೆ ಬಂದಿದ್ದಾರೆ. ಇಂಥ ಸಂಸ್ಥೆಗಳು ಯಾವುವು ಮುಂದೆ ಬರುತ್ತವೆ ಅವುಗಳ ನೆರವನ್ನು ಸರ್ಕಾರ ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರೋಟರಿ ಸಂಸ್ಥೆಯಲ್ಲಿ ಪ್ರತಿ ವರ್ಷವೂ ಸದಸ್ಯರ ಅಧ್ಯಕ್ಷರ ಬದಲಾವಣೆಗಳಾಗುತ್ತಿರುತ್ತವೆ. ಆದ್ದರಿಂದ ಯಾರು ಈಗ ನೆರವನ್ನು ಕೊಡುತ್ತೇವೆಂದು ಹೇಳಿದ್ದಾರೆ ಅವರಿಂದ ಸಹಾಯವನ್ನು ತೆಗೆದುಕೊಂಡು ಕೂಡಲೇ ಅಲ್ಲಿ ಬ್ಲಡ್ ಬ್ಯಾಂಕ್‌ನ್ನು ತೆರೆಯಲು ಸರ್ಕಾರ ವ್ಯವಸ್ಥೆ ಮಾಡಬೇಕು. ಸರ್ಕಾರೀ ವೈದ್ಯಕೀಯ ಉಗ್ರಾಣಕ್ಕೆ ಬೇಕಾದ ವಸ್ತುಗಳನ್ನು ತರಿಸಿಕೊಳ್ಳಲು ೧-೪-೧೯೮೫ ರಿಂದ ೩೧-೦೩-೧೯೮೫ ರವರೆಗೆ ೮ ಕೋಟಿ ರೂಪಾಯಿಗಳ ಗುರಿಯನ್ನು ಇಟ್ಟುಕೊಂಡಿದ್ದೀರಿ. ಆದರೆ ಖರ್ಚು ಮಾಡಿರತಕ್ಕದ್ದು ಕೇವಲ ೬.೧೭ ಕೋಟಿ ರೂಪಾಯಿಗಳು. ಇದು ೯ ತಿಂಗಳಿಗೆ ಇಟ್ಟುಕೊಂಡಿದ್ದ ಗುರಿ. ಈ ಸಾಲಿಗೆ ಅಂದರೆ ೧-೧-೮೬ ರಿಂದ ೩೧-೧೨-೮೬ ರವರೆಗೆ ೨.೫ ಕೋಟಿ ರೂಪಾಯಿಗಳ ಗುರಿ ಇಟ್ಟುಕೊಂಡಿದ್ದು ಖರ್ಚು ೪ ಕೋಟಿ ಎಂದು ತೋರಿಸಿದ್ದೀರಿ, ಇದು ೧೨ ತಿಂಗಳಿಗೆ. ಈ ನಿಮ್ಮ ಅಂಕಿ ಅಂಶವನ್ನು ನೋಡಿದರೆ ಜನರಿಗೆ ಬೇಕಾದ ವೈದ್ಯಕೀಯ ನೆರವನ್ನು ಯಾವ ರೀತಿ ಈ ಸಾಲಿನಲ್ಲಿ ಸರಬರಾಜು ಮಾಡುತ್ತೀರಿ ಎಂಬುದರಲ್ಲಿ ಸಂಶಯ ಬರುತ್ತದೆ,

ಇದು ಒಂದು ರೀತಿಯಾದರೆ, ಇನ್ನೊಂದು ಕೇಂದ್ರ ಸರ್ಕಾರದ ನೆರವಿನಿಂದ ಆಗಬೇಕಾದ ಕೆಲವು ಕಾರ್ಯಕ್ರಮಗಳಿವೆ. ಅವು ಯಾವುದೆಂದರೆ: ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಕುಷ್ಟರೋಗ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಪೌಷ್ಟಿಕ ಆಹಾರ ಶಿಕ್ಷಣ ಕಾರ್ಯಕ್ರಮ, ಮಕ್ಕಳ ಸಮಗ್ರ ಅಭಿವೃದ್ಧಿ ಸೇವೆಗಳ ಯೋಜನೆ ಇನ್ನೂ ಮುಂತಾದುವೆಲ್ಲಾ ಇವೆ. ಆದರೆ ಈ ದಿಸೆಯಲ್ಲಿ ಸರ್ಕಾರದ ಸಾಧನೆ ಏನೇನೂ ಆಗಿಲ್ಲ. ಶೇಕಡ ನೂರರಷ್ಟು ಕೇಂದ್ರದಿಂದಲೇ ಬರತಕ್ಕ ನೆರವನ್ನು ಉಪಯೋಗಿಸಿಕೊಂಡು ಕೈಗೊಳ್ಳಬಹುದಾದ ಈ ಕಾರ್ಯಕ್ರಮಗಳ ಬಗ್ಗೆ ಸರ್ಕಾರದವರು ಏತಕ್ಕೆ ಇಷ್ಟೊಂದು ಉದಾಸೀನದಿಂದಿದ್ದಾರೋ ಗೊತ್ತಿಲ್ಲ, ಕೇಂದ್ರದಿಂದ ಬರತಕ್ಕ ಈ ನೆರವನ್ನು ಉಪಯೋಗಿಸಿಕೊಳ್ಳದಿರುವುದನ್ನು ನೋಡಿ ಮನಸ್ಸಿಗೆ ಬೇಸರವಾಗುತ್ತದೆ. ಇನ್ನು ಕಾರ್ಯನಿರ್ವಹಣಾ ವೆಚ್ಚದ ಬಗ್ಗೆ ಪುಟ ೨೫-೨೭ ರಲ್ಲಿ ಹೊಸ ಯೋಜನೆಗಳಿಗೆ ಹಣವನ್ನು ನೀವು ಇಟ್ಟಿಲ್ಲ. ಇಲ್ಲಿ ನೋಡಿದರೆ ಹಿಡಿಗಂಟು ಎಂದು ಕೊಟ್ಟಿದ್ದೀರಿ. ನೀವು ಕೊಟ್ಟಿರುವುದೂ ಕೂಡ ೨ ತಃಖ್ತೆಯಲ್ಲಿ. ಎರಡು ತಃಖ್ತೆಗಳ ಉದ್ದೇಶವೂ ಒಂದೇ ಇದೆ. ಆದರೆ ಹೊಸ ಯೋಜನೆಗಳಿಗೆ ಹಣವನ್ನು ಕೊಟ್ಟಿಲ್ಲ. ಹಿಡಿಗಂಟು ಎಂದು ಕೊಟ್ಟು ಅದರ ಮುಂದೆ ಏನೂ ಸೂಚಿಸಿಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಕೇಂದ್ರ ಸರ್ಕಾರದಿಂದ ೧ ಕೋಟಿ ರೂಪಾಯಿ ಬಂದಿರುವ ಬಗ್ಗೆ ತಾವು ತಮ್ಮ ಮೆಚ್ಚುಗೆಯನ್ನು ಸೂಚಿಸಬೇಕು. ಈ ಹಣ ಆ ಎಲ್ಲ ವರ್ಗದವರಿಗೂ ಸೇರಬೇಕು.

ಮಾನ್ಯ ಅಧ್ಯಕ್ಷರೆ, ನಾನು ಕಳೆದ ಸಾರಿಯೂ ಕೂಡ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ನಮ್ಮ ಜಿಲ್ಲೆಯಲ್ಲಿ ಕಾರ್ಕಳದ ಶ್ರೀನಿವಾಸ ಉಡುಪ ಎನ್ನುವವರು ಕುಟುಂಬ ಯೋಜನೆಗೆ ಸಂಬಂಧಪಟ್ಟಂತೆ ಅನೇಕ ನಾಟಕಗಳನ್ನು ಬರೆದು ಆಡಿಸುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಈ ನಾಟಕ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಹಿಂದೆ ಒಂದು ಸಾರಿ ನಮ್ಮ ಜಿಲ್ಲಾಧಿಕಾರಿಗಳು ಇವರಿಂದ ನಾಟಕವನ್ನು ಆಡಿಸಿದಾಗ ಅವರಿಗೆ ತಗುಲಿದ ಕನಿಷ್ಟ ಖರ್ಚನ್ನೂ ಕೂಡ ಕೊಡಲಿಲ್ಲ. ಇದರಿಂದ ಉಡುಪರವರಿಗೆ ಅಪಮಾನವಾಗಿದೆ. ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದಾಗ ಇದನ್ನು ನಾನು ಪರಿಶೀಲಿಸುತ್ತೇನೆಂದು ಮಾನ್ಯ ಸಚಿವರು ತಿಳಿಸಿದ್ದರು. ಆದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡರೋ ಗೊತ್ತಿಲ್ಲ. ಡಾಕ್ಟರ್‌ಗಳು ಕಡ್ಡಾಯವಾಗಿ ಇನ್ನು ಮುಂದೆ ಹಳ್ಳಿಗಳಲ್ಲಿ ಸೇವೆಯನ್ನು ಮಾಡಲೇಬೇಕೆಂದು ನಿಯಮ ಮಾಡಬೇಕು.

ಇನ್ನೊಂದು ವಿಚಾರ ಎಂದರೆ, ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರೆಂಬುದನ್ನು ನೋಡಬೇಕು. ತಾವು ಅಧಿಕಾರಕ್ಕೆ ಬಂದರೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ

ಕ್ಯಾಪಿಟೇಷನ್ ಶುಲ್ಕವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಈಗ ನೋಡಿದರೆ ಬಹಳ ಉದಾರವಾಗಿ ಮೆಡಿಕಲ್ ಕಾಲೇಜುಗಳನ್ನು ಕೊಡುತ್ತಿದ್ದೀರಿ. ನಿಮ್ಮ ನೀತಿ ಹೇಳುವುದು ಒಂದು, ಮಾಡುವುದು ಇನ್ನೊಂದು ಆಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಭಾರತೀಯ ವೈದ್ಯ ಪದ್ಧತಿಯಲ್ಲಿ ಆಯುರ್ವೇದ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಏನನ್ನೂ ಹೇಳದಿರುವುದನ್ನು ಇಲ್ಲಿ ನಾವು ನೋಡುತ್ತಿದ್ದೇವೆ. ನನ್ನ ಕ್ಷೇತ್ರದ ನಾವುಂದ ಎನ್ನುವ ಗ್ರಾಮದಲ್ಲಿ ಒಂದು ಆಯುರ್ವೇದ ಚಿಕಿತ್ಸಾಲಯ ಕಟ್ಟಡ ಪ್ರಾರಂಭವಾಗಿದೆ. ಆದರೆ ಅದಕ್ಕೆ ಇನ್ನೂ ವೈದ್ಯರ ನೇಮಕ ಆಗಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಪುರಸಭೆಗಳ ವಿಚಾರದಲ್ಲಿ ಹೇಳುವುದಾದರೆ, ಚಿಕ್ಕ ಪುರಸಭೆಗಳಾಗಲಿ, ದೊಡ್ಡ ಪುರಸಭೆಗಳಾಗಲಿ ನೀವು ಏನು ಹೇಳುತ್ತೀರೆಂದರೆ, ಒಂದು ಪುರಸಭೆಗೆ ೨ ಜನತಾ ಮನೆಗಳು, ೧ ಶಾಲಾ ಕಟ್ಟಡ ಮತ್ತು ಒಂದೆರಡು ಕೊಳವೆ ಬಾವಿಗಳು ಎಂದು ಮಂಜೂರು ಮಾಡುತ್ತೀರಿ. ಹೀಗಾದರೆ ಆ ಪುರಸಭೆಯ ಕೆಲಸ ಆದಂತಾಗುತ್ತದೆಯೆ? ೭೫ ಪರ್ಸೆಂಟ್‌ಗಿಂತಲೂ ಹೆಚ್ಚು ಜನರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರು ಇರತಕ್ಕ ಬೈಂದೂರು ಪುರಸಭೆಯಲ್ಲಿ ಎನ್.ಆರ್.ಇ.ಪಿ; ಐ.ಆರ್.ಡಿ.ಪಿ. ಡಿ.ಪಿ.ಎ.ಪಿ. ಯೋಜನೆಗಳು ಯಾವುದೂ ಇಲ್ಲ. ಮಂಡಲ್ ಪಂಚಾಯಿತ್ ಅಡಿಯಲ್ಲಿ ಇದು ಬರಬಹುದೆಂದರೆ ನೀವು ೮–೧೦ ಸಾವಿರ ಜನಸಂಖ್ಯೆ ಎಂದು ನಿಗದಿ ಮಾಡಿದ್ದೀರಿ. ಆದರೆ ಅಲ್ಲಿ ೧೧,೩೫೭ ಜನರಿದ್ದಾರೆ. ಸುಮಾರು ೩೫೭ ಜನ ಜಾಸ್ತಿ ಇರುವುದರಿಂದ ಇದು ಮಂಡಲ್ ಪಂಚಾಯಿತ್ ಕಕ್ಷೆಯಲ್ಲೂ ಕೂಡ ಬರುವುದಿಲ್ಲ. ಆದ್ದರಿಂದ ಇದನ್ನು ಮಾನ್ಯ ಸಚಿವರು ಗಮನಿಸಿ ಪುರಸಭೆಗಳನ್ನು ಮಂಡಲ್ ಪಂಚಾಯಿತ್ ಆಗಿ ಪರಿವರ್ತಿಸಲು ೮ ಸಾವಿರದಿಂದ ೧೦ ಸಾವಿರ ಜನಸಂಖ್ಯೆ ಎಂದು ಇರುವುದನ್ನು ೧೦ ಸಾವಿರದಿಂದ ೧೨ ಸಾವಿರ ಜನಸಂಖ್ಯೆ ಎಂದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ, ಕಾನೂನು ಇಲಾಖೆಯ ವಿಚಾರದಲ್ಲಿ ನಾನು ಒಂದು ಮಾತು ಹೇಳಬೇಕಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಸಿವಿಲ್ ಕೇಸುಗಳು ಕ್ರಿಮಿನಲ್ ಕೇಸುಗಳು ಬಹಳಷ್ಟು ಬಾಕಿ ಉಳಿದಿವೆ. ಈ ಕೇಸುಗಳಲ್ಲಿ ಅಲ್ಲಿ ತೀರ್ಮಾನ ಆಗಬೇಕಾದರೆ ಬಹಳಷ್ಟು ದಿವಸ ತೆಗೆದುಕೊಳ್ಳುತ್ತದೆ. ಆದ್ದರಿಂದ ಜಿಲ್ಲಾ ಮಟ್ಟದ ಕೋರ್ಟುಗಳನ್ನು ತೆರೆದು ಕೇಸುಗಳ ಇತ್ಯರ್ಥ ಮಾಡತಕ್ಕ ಯೋಜನೆ ಸರ್ಕಾರಕ್ಕೆ ಇದೆಯೆಂದು ಕಾಣುತ್ತದೆ. ಇದನ್ನು ಬೇಗ ಮಾಡಬೇಕು. ತಾವು ಬಡವರಿಗೆ ಉಚಿತ ಕಾನೂನು ನೆರವು ವ್ಯವಸ್ಥೆಯನ್ನು ಏನು ಮಾಡಿದ್ದೀರಿ ಇದು ಬಹಳಷ್ಟು ಜನರಿಗೆ ಗೊತ್ತೇ ಇಲ್ಲ. ಇದರ ಪ್ರಚಾರ ಜನರಿಗೆ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ಸಾಕಷ್ಟು ಪ್ರಚಾರ ಕಾರ್ಯವನ್ನು ಕೈಗೊಂಡು ಬಡವರಿಗೆ ನ್ಯಾಯ ಸಿಕ್ಕಲು ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಹಾಗೂ ಕುಟುಂಬಕಲ್ಯಾಣ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯ ಮೇಲೆ ಒಂದೆರಡು ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತಿನ ದಿವಸ ಅನೇಕ ನಗರಸಭೆಗಳಲ್ಲಿ ಹಣದ ಕೊರತೆ ಬಹಳಷ್ಟು ಇದೆ. ಅನೇಕ ನಗರಸಭೆಗಳಲ್ಲಿ ಅವರ ಸಿಬ್ಬಂದಿ ವರ್ಗದವರಿಗೆ ವೇತನವನ್ನೂ ಕೂಡ ಕೊಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಇರುತ್ತವೆ. ಮಾನ್ಯ ನಗರಾಭಿವೃದ್ಧಿ ಸಚಿವರು ಎಲ್ಲ ಕಡೆ ಸುತ್ತಾಡಿ ಅವರಿಗೆ ಆದೇಶವನ್ನು ಕೊಡುತ್ತಿದ್ದಾರೆ, ಆದಾಯವನ್ನು ಹೆಚ್ಚಿಸಿಕೊಳ್ಳಿ ಎಂದು. ಅವರು ಹೇಳಿದಷ್ಟು ಸುಲಭವಲ್ಲ. ಆದಾಯವನ್ನು ಹೆಚ್ಚಿಸಿಕೊಳ್ಳಬೇಕಾದರೂ ಕೂಡ ನಗರ ಸಭೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣವಿರಬೇಕು. ಆದಾಯವನ್ನು ಹೆಚ್ಚಿಸಿಕೊಳ್ಳಿ ಎಂದು ಹೇಳುವುದು ಬಹಳ ಸುಲಭ. ಆದರೆ ಆದಾಯವನ್ನು ಹೆಚ್ಚಿಸಿಕೊಳ್ಳಲು ಮೂಲಗಳು ಬೇಕಾಗಿರುತ್ತದೆ. ಆದ್ದರಿಂದ ದಯವಿಟ್ಟು ನಗರಸಭೆಗಳ ಆದಾಯ ಹೆಚ್ಚಿಸಿಕೊಳ್ಳತಕ್ಕಂಥ ಮೂಲಗಳನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ, ನಗರಸಭೆಗಳಿಗೆ ಹಿಂದೆ ಆಕ್ಟ್ರಾಯನ್ನು ವಸೂಲು ಮಾಡತಕ್ಕಂಥ ಪದ್ಧತಿ ಇದ್ದುದರಿಂದ ಸ್ವಲ್ಪ ಅನುಕೂಲವಾಗಿತ್ತು. ಅದನ್ನು ನಿಲ್ಲಿಸಿ ಅದರ ಬದಲಾಗಿ ಸರ್ಕಾರದವರು ಏನು ಒಂದು ಪರಿಹಾರವನ್ನು ಕೊಡುತ್ತಿದ್ದಾರೆ ಇದು ಬಹಳ ಕಡಿಮೆಯಾಗಿರುತ್ತದೆ. ನಾನು ಉದಾಹರಣೆಗೆ ದಾವಣಗೆರೆಯ ಬಗ್ಗೆ ಹೇಳುವುದಾದರೆ, ಆಕ್ಟ್ರಾಯಿಯನ್ನು ವಸೂಲು ಮಾಡುತ್ತಿದ್ದಾಗ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಈಗ ಅದನ್ನು ನಿಲ್ಲಿಸಿರುವುದರಿಂದ ದಾವಣಗೆರೆ ಪುರಸಭೆಯ

ಆದಾಯ ೭೫ ಲಕ್ಷ ರೂಪಾಯಿಗಳಿಗೆ ಇಳಿದಿದೆ. ಅಂದರೆ ಅರ್ಧದಷ್ಟು ಆದಾಯವೇ ಕಡಿಮೆ ಯಾದಂತಾಗಿರುತ್ತದೆ. ಇದರಿಂದ ಪುರಸಭೆಗಳನ್ನು ನಡೆಸುವುದಕ್ಕೆ ಬಹಳ ಕಷ್ಟಕರವಾಗಿರುತ್ತದೆ. ಬೆಲೆಗಳು ಜಾಸ್ತಿಯಾಗಿರುತ್ತದೆ, ಸಂಬಳಗಳು ಜಾಸ್ತಿ ಕೊಡಬೇಕಾಗಿರುತ್ತದೆ, ಇವೆಲ್ಲವನ್ನೂ ಪೂರೈಸಿ ಕೊಂಡು ಪುರಸಭೆಗಳು ಈವತ್ತಿನ ದಿವಸ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಗರಸಭೆ ಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅನುದಾನವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ದೊಡ್ಡ ದೊಡ್ಡ ನಗರಸಭೆಗಳ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳು ಬರತಕ್ಕಂಥದ್ದು ಸ್ವಾಭಾವಿಕವಾಗಿರುತ್ತದೆ. ಸಾಮಾನ್ಯವಾಗಿ ಬರಗಾಲ ಎಲ್ಲಕಡೆಯೂ ಇರುವುದರಿಂದ ಹಳ್ಳಿಗಳಲ್ಲಿ ಇರತಕ್ಕಂಥ ಜನರು ತಮ್ಮ ಜೀವನೋಪಾಯಕ್ಕಾಗಿ ನಗರ ಪ್ರದೇಶಗಳಿಗೆ ಕೆಲಸವನ್ನು ಹುಡುಕಿಕೊಂಡು ಬರತಕ್ಕಂಥಾದ್ದು ಇರುತ್ತದೆ. ಹೀಗೆ ಬರತಕ್ಕಂಥ ಜನರು ಈವತ್ತಿನ ದಿವಸ ಏನು ಮಾಡಬೇಕು ಎನ್ನುವುದು ಸಮಸ್ಯೆಯಾಗಿದೆ. ಇದರಿಂದ ನಗರದಲ್ಲಿರತಕ್ಕಂಥ ಜನರಿಗೂ ಸಮಸ್ಯೆಯಾಗಿರುತ್ತದೆ. ಅವರು ವಾಸಮಾಡಬೇಕಾದರೆ ಎಲ್ಲಿಯಾದರೂ ಜಾಗ ಸಿಕ್ಕಿದಕಡೆಯಲ್ಲಿ ಅಂದರೆ ಕೊಳಚೆ ಪ್ರದೇಶವಾಗಿದ್ದರೂ ಅಲ್ಲಿ ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ಅವರಿಗೂ ಕೂಡ ಕೆಲವೊಂದು ನಾಗರೀಕ ಸೌಲಭ್ಯಗಳನ್ನು ಸರ್ಕಾರದವರು ಕೊಡಬೇಕು. ಕೊಡದಿದ್ದರೆ ಅಪರಾಧ ಮಾಡಿದಂತಾಗುತ್ತದೆ. ಸಾಮಾನ್ಯ ಸೌಲಭ್ಯಗಳಾದ ಕುಡಿಯುವ ನೀರು, ದೀಪ, ಕಕ್ಕಸು ಇದನ್ನಾದರೂ ಒದಗಿಸದೇ ಇದ್ದರೆ ನಗರದಲ್ಲಿರತಕ್ಕಂಥ ಜನರಿಗೆ ಒಂದಲ್ಲ ಒಂದು ರೀತಿಯಲ್ಲಿ ರೋಗಗಳು ಹರಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಕೊಳಚೆ ನಿರ್ಮೂಲನಾ ಮಂಡಲಿ ಎಂದೇ ಇರುತ್ತದೆ. ಇದು ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ಹೆಚ್ಚು ಹಣವನ್ನು ಒದಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ದಾವಣಗೆರೆ ನಗರಾಭಿವೃದ್ಧಿ ಮಂಡಲಿಯನ್ನು ಸುಮಾರು ೧೨–೧೪ ವರ್ಷಗಳ ಹಿಂದೆ ಆರಂಭಿಸಲಾಯಿತು. ಇದರ ಮುಖಾಂತರ ನಡೆದಿರತಕ್ಕಂಥ ಕೆಲಸವೇನೆಂದರೆ, ಇಲ್ಲಿಯ ತನಕ ಒಂದೇ ಒಂದು ಲೇಔಟ್‌ನ್ನು ಗುರುತಿಸಿ ಜಮೀನುಗಳನ್ನು ಹಂಚಿದ್ದಾರೆ. ದಾವಣಗೆರೆ ನಗರಾಭಿವೃದ್ಧಿ ಮಂಡಲಿಯವರು ಲೇಔಟ್‌ನ್ನು ರಚಿಸಿದ್ದರೂ ಇದರ ಬಗ್ಗೆ ಸ್ಟೇ ತಂದಿದ್ದಾರೆ. ಈ ಸ್ಟೇ ಏನು ಇರುತ್ತದೆ ಅದನ್ನು ವೆಕೇಟ್ ಮಾಡಿಸಬೇಕು. ಇದು ಐದು ಮೈಲಿ ದೂರದಲ್ಲಿ ರಚನೆ ಮಾಡಿರುವುದರಿಂದ ಸಾಮಾನ್ಯವಾಗಿ ಜನರಿಗೆ ಗೊತ್ತೇ ಆಗುತ್ತಿಲ್ಲ. ಮತ್ತೆ ಯಾವ ಪ್ರದೇಶಗಳಲ್ಲಿ ನಗರ ಯೋಜನಾ ಪ್ರಾಧಿಕಾರವು ಮೈದಾನ, ಸ್ಕೂಲ್, ಮಾರ್ಕೆಟ್ ಇವುಗಳನ್ನು ಗುರುತಿಸಿ ನಿವೇಶನಗಳನ್ನು ಕಾದಿರಿಸುತ್ತಾರೋ ಅದೇ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿರತಕ್ಕಂಥ ನಿದರ್ಶನಗಳು ಇರುತ್ತವೆ. ಇಂಥ ಹಲವಾರು ಘಟನೆಗಳು ಇರುವುದರಿಂದ ಯಾವುದೇ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂಥ ಸ್ಥಳಗಳ ದುರುಪಯೋಗವಾಗುತ್ತಿರುತ್ತದೆಯೋ ಅಂಥ ಪ್ರದೇಶಗಳು ದುರುಪಯೋಗವಾಗದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು, ಮನೆ ನಿವೇಶನಗಳಿಗೆ ಅನುಕೂಲವಾಗುವಂಥ ಪ್ರದೇಶಗಳನ್ನು ಜನರಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ದಾವಣಗೆರೆ ನೀರು ಸರಬರಾಜು ಬಗ್ಗೆ ಹೇಳುವುದಾದರೆ, ಈಗಾಗಲೇ ನೀರಿನ ಸರಬರಾಜು ಕೊರತೆಯನ್ನು ಜನರು ಎದುರಿಸತಕ್ಕಂಥ ಪರಿಸ್ಥಿತಿ ಇರುತ್ತದೆ. ನೀರು ನೀರು ಎಂದು ಜನರು ಹಾಹಾಕಾರ ಮಾಡುತ್ತಿರುತ್ತಾರೆ. ಆದ್ದರಿಂದ ಪ್ರಾಧಿಕಾರಕ್ಕೆ ಬಹಳವಾಗಿ ಹೇಳುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ನೀರಿನ ಸಮಸ್ಯೆ ಬಹಳವಾಗಿ ಉಂಟಾಗುವ ಸಂದರ್ಭವಿರುವುದರಿಂದ ದಾವಣಗೆರೆ ಅಭಿವೃದ್ಧಿ ಪ್ರಾಧಿಕಾರವು ಈಗಿನಿಂದಲೇ ಪ್ರಯತ್ನ ಪಟ್ಟರೆ ಈ ತೊಂದರೆಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ದಾವಣಗೆರೆಯಲ್ಲಿ ಬಹಳ ದೊಡ್ಡದಾದ ಒಂದು ಆಸ್ಪತ್ರೆಯು ಇರುತ್ತದೆ. ಸುಮಾರು ಸುತ್ತಮುತ್ತಲಿರುವ ಹಳ್ಳಿಗಳಿಂದ ಈ ಆಸ್ಪತ್ರೆಗೆ ರೋಗಿಗಳು ಬರುತ್ತಾರೆ. ಬಂದರೆ ಇಲ್ಲಿ ಅವರಿಗೆ ಬೇಕಾದ ಔಷಧಿ ದೊರೆಯುವುದಿಲ್ಲ. ಸಾಮಾನ್ಯವಾಗಿ ಸಾರ್ವಜನಿಕ ಆಸ್ಪತ್ರೆಗೆ ಬರತಕ್ಕಂಥವರು ಸಾಮಾನ್ಯ ಜನರಾಗಿರುತ್ತಾರೆ. ಅವರು

ಖಾಸಗೀ ಆಸ್ಪತ್ರೆಗಳಿಗೆ ಹೋಗಲು ಸಾಮರ್ಥ್ಯವಿಲ್ಲದ ಕಾರಣ ಇಲ್ಲಿಗೆ ಬರುತ್ತಾರೆ. ಆಸ್ಪತ್ರೆಗಳಲ್ಲಿ ಔಷಧಿಗಳು ಸರಿಯಾದ ರೀತಿಯಲ್ಲಿ ಸರಬರಾಜಾಗದ ಕಾರಣ ಅವರು ಬರೆದುಕೊಟ್ಟು ಬಿಡುತ್ತಾರೆ. ಹೊರಗಡೆ ಕೊಂಡುಕೊಳ್ಳಬೇಕಾದರೆ ಅದರ ಬೆಲೆ ಜಾಸ್ತಿಯಿರುತ್ತದೆ. ಮತ್ತು ಕೆಲವು ಸಂದರ್ಭಗಳಲ್ಲಿ ಅವುಗಳು ದೊರಕುವುದೇ ಇಲ್ಲ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಔಷಧಿಗಳನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ದಾವಣಗೆರೆಯಲ್ಲಿರತಕ್ಕಂಥ ಸಿ.ಬಿ. ಆಸ್ಪತ್ರೆಯಲ್ಲಿ ಗ್ಲೂಕೋಸ್ ತಯಾರು ಮಾಡತಕ್ಕಂಥ ಯಂತ್ರ ಇರುತ್ತದೆ. ಇದು ದಾವಣಗೆರೆ ಮಾತ್ರವಲ್ಲ ಸುತ್ತಮುತ್ತಲಿರುವ ಐದು ಜಿಲ್ಲೆಗಳಿಗೆ ಗ್ಲೂಕೋಸನ್ನು ಒದಗಿಸತಕ್ಕಂಥ ಸಾಮರ್ಥ್ಯವನ್ನು ಹೊಂದಿರುತ್ತದೆ. ಶಿವಮೊಗ್ಗ, ಚಿತ್ರದುರ್ಗ ಇವೇ ಮೊದಲಾದ ಆಸ್ಪತ್ರೆಗಳಿಗೆ ಗ್ಲೂಕೋಸ್ ವಾಟರ್‌ನ್ನು ಒದಗಿಸುತ್ತಿರುತ್ತದೆ. ಇದು ಬಹಳ ಉಪಯುಕ್ತವಾದುದಾಗಿರುತ್ತದೆ. ಇಂಥ ಒಂದು ಪ್ಲಾಂಟ್ ಕೆಟ್ಟು ಹೋದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಬದಲಿಸಬೇಕು, ಜೊತೆಗೆ ಹೊಸ ಯಂತ್ರವನ್ನು ಕೊಳ್ಳುವುದಕ್ಕೆ ಮಂಜೂರಾತಿಯನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯವಾದ ವಿಚಾರವೆಂದರೆ, ಭಾರತೀಯ ವೈದ್ಯಕೀಯ ಪದ್ಧತಿ ಬಹಳ ಪುರಾತನ ಕಾಲದಿಂದಲೂ ಪ್ರಖ್ಯಾತಿಯನ್ನು ಪಡೆದಿರತಕ್ಕಂಥದ್ದಾಗಿತ್ತು. ಋಷ್ಯಾಶ್ರಮಗಳಲ್ಲಿ. ಹಳ್ಳಿಗಾಡಿನ ರೈತರ ಮನೆಗಳಲ್ಲಿ ಗಿಡಮೂಲಿಕೆಗಳಿಂದ ಔಷಧಗಳನ್ನು ತಯಾರಿಸಿ ಕಾಯಿಲೆಯನ್ನು ನಿವಾರಣೆ ಮಾಡುತ್ತಿದ್ದರು. ಸಾಮಾನ್ಯ ಜನರಿಗೆ ಈ ಒಂದು ವೈದ್ಯಕೀಯ ಪದ್ಧತಿಯ ಬಗ್ಗೆ ಬಹಳವಾಗಿ ನಂಬಿಕೆ ಇತ್ತು. ಈಗ ಆ ನಂಬಿಕೆಯ ಭಾವನೆ ಹೋಗಿ ಪ್ರತಿಯೊಬ್ಬರೂ ಇಂಗ್ಲೀಷ್ ಔಷಧಿಗಳಿಗೆ ಮಾರು ಹೋಗಿದ್ದಾರೆ. ಇಂಥ ಒಂದು ಪರಿಸ್ಥಿತಿ ಇರುವುದರಿಂದ ಆದಷ್ಟು ಚಾಲನಗೆ ಈ ಪದ್ಧತಿಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಕಡಿಮೆ ವೆಚ್ಚದಲ್ಲಿ ಆಗುವುದಲ್ಲದೆ ಇದರಿಂದ ಸಾಮಾನ್ಯ ಜನರಿಗೂ ಔಷಧಿಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಈಗಾಗಲೇ ಈ ಒಂದು ವ್ಯವಸ್ಥೆಗಾಗಿ ಸರ್ಕಾರದವರು ಖರ್ಚುಮಾಡುತ್ತಿರುವ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ. ಇದನ್ನು ಉಪಯೋಗಿಸಲು ಬಡವರು ಇಲ್ಲವೋ ಅಥವಾ ಯಾವುದೇ ರೋಗಗಳು ಇಲ್ಲವೋ ತಿಳಿಯುತ್ತಿಲ್ಲ. ಆದ್ದರಿಂದ ಈ ಒಂದು ಔಷಧಿಗಳನ್ನು ಉಪಯೋಗಿಸಲು ನಂಬಿಕೆ ಹೋಗದಂತೆ, ನಂಬಿಕೆ ಉಳಿಸಿಕೊಂಡು ಬರತಕ್ಕಂಥಾದ್ದರ ಬಗ್ಗೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಈಗ ಆಸ್ಪತ್ರೆಗಳನ್ನು ಪ್ರಾರಂಭಿಸಬೇಕಾದರೆ ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳನ್ನು ಪ್ರಾರಂಭಿಸತಕ್ಕಂಥ ಯೋಜನೆ ಇರುತ್ತದೆ. ಅನೇಕ ಕಡೆ ದೊಡ್ಡ ದೊಡ್ಡ ಗ್ರಾಮಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳು ಇದ್ದರೂ ಡಾಕ್ಟರುಗಳು ಇರುವುದಿಲ್ಲ. ಡಾಕ್ಟರುಗಳು ಇದ್ದರೆ ಔಷಧಿಗಳು ದೊರೆಯುವುದಿಲ್ಲ. ಆಸ್ಪತ್ರೆ ಎಂದು ದೊಡ್ಡದಾಗಿ ಬೋರ್ಡ್ ಮಾತ್ರ ಇರುತ್ತದೆ. ಈ ರೀತಿ ಆಸ್ಪತ್ರೆಗಳನ್ನು ಮುಂದುವರಿಸಿಕೊಂಡು ಹೋದರೆ ಸಾಮಾನ್ಯ ಜನರ ಹಿತರಕ್ಷಣೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಪರಿಸ್ಥಿತಿಗೆ ಬರಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆಯೂ ಕೂಡ ಮಾನ್ಯ ಸಚಿವರು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರತಕ್ಕಂಥ ಡಾಕ್ಟರುಗಳು ಮತ್ತು ನರ್ಸ್‌ಗಳು ಹೆಚ್ಚಿನ ಶಿಕ್ಷಣಕ್ಕಾಗಿ ಹೊರದೇಶಗಳಿಗೆ ಹೋಗತಕ್ಕಂಥಾದ್ದು ಇರುತ್ತದೆ. ವರ್ಷವಾದರೂ ಅವರ ಅಟೆಂಡೆನ್ಸ್ ಹಾಗೆಯೇ ಇರುತ್ತದೆ. ಅಂದರೆ ಅವರು ಹೊರ ದೇಶಕ್ಕೆ ಹೋಗಿದ್ದರೂ ಇಲ್ಲಿಯೆ ಇರುತ್ತಾರೆಂದು ಅರ್ಥವಾಗುತ್ತದೆ.

ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿರುವ ಡಾಕ್ಟರ್‌ಗಳು, ನರ್ಸ್‌ಗಳು, ದಾದಿಗಳು ಹೊರದೇಶಕ್ಕೆ ಹೋಗಿರುತ್ತಾರೆ. ಆದರೆ ಅವರ ಅಟೆಂಡೆನ್ಸ್ ಇಲ್ಲಿ ಇರುತ್ತದೆ. ಇದು ವರ್ಷಾನುಗಟ್ಟಲೆ ನಡೆಯುತ್ತಲೇ ಇದೆ. ಅವರು ಹೊರದೇಶಕ್ಕೆ ಹೋದರೂ ಕೂಡ ಅವರು ಇಲ್ಲೇ ಇದ್ದಾರೆ ಎನ್ನುವ ಅರ್ಥ ಇದರಿಂದ ಬರುತ್ತದೆ. ಆದ್ದರಿಂದ ಇಲ್ಲಿರತಕ್ಕ ರೋಗಿಗಳಿಗೆ ತೊಂದರೆಯಾಗುತ್ತದೆ. ಈ ಸ್ಥಾನವನ್ನು ಭರ್ತಿಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವಂತೆ ಮಾನ್ಯ

ಸಚಿವರನ್ನು ಕೇಳಿಕೊಳ್ಳುತ್ತೇನೆ. ಅನೇಕರು ಅಂಗವಿಕಲರಾಗಿರುತ್ತಾರೆ. ಅಪಘಾತಗಳಿಂದ ಕೈಕಾಲುಗಳನ್ನು ಮುರಿದುಕೊಳ್ಳುತ್ತಾರೆ. ಕೃತಕ ಕೈಕಾಲುಗಳನ್ನು ಹಾಕುವ ವ್ಯವಸ್ಥೆ ಮಣಿಪಾಲ್‌ನಲ್ಲಿದೆ. ಪೂನಾದಲ್ಲಿದೆ. ಆದರೆ ಇಂತಹ ಒಂದು ವ್ಯವಸ್ಥೆಯನ್ನು ದಾವಣಗೆರೆಯಂತಹ ದೊಡ್ಡ ಆಸ್ಪತ್ರೆಯಲ್ಲಿ ಮಾಡಿದರೆ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ. ಎಲ್ಲರೂ ಪುಣೆಗೆ, ಅಥವಾ ಮಣಿಪಾಲಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಬಡವರಿಗೆ ಹತ್ತಿರದಲ್ಲಿ ಇಂತಹ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ಬಹಳ ಆಸಕ್ತಿಯಿಂದ ಯೋಚನೆ ಮಾಡುವುದು ಅಗತ್ಯ. ದಾವಣಗೆರೆಯಲ್ಲಿ ಇಂತಹ ಒಂದು ಕೃತಕ ಕೈಕಾಲುಗಳನ್ನು ಜೋಡಣೆ ಮಾಡುವ ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಮಾನಸಿಕ ರೋಗ. ಈ ಮಾನಸಿಕ ರೋಗ ಏನಾದರೂ ಇದ್ದರೆ ಅವರು ಬೆಂಗಳೂರಿಗೆ ಬರಬೇಕು. ಬೆಂಗಳೂರಿಗೆ ಎಲ್ಲರೂ ಹೆಚ್ಚು ಕಡಿಮೆ ಬರಬೇಕಾಗುತ್ತದೆ. ದಾವಣಗೆರೆಯಲ್ಲಿರುವ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಅದಕ್ಕೆ ಬೇಕಾದಂತಹ ಅನುಕೂಲಗಳನ್ನು ತಾವು ಒದಗಿಸಿದರೆ ಜನರು ಇಲ್ಲಿಗೆ ಬರುವುದು ಕಡಿಮೆಯಾಗುತ್ತದೆ. ತಾವೇ ನೋಡಿದ ಹಾಗೆ ಮಾನಸಿಕ ಆಸ್ಪತ್ರೆಗೆ ಯಾವಾಗಲೂ ತುಂಬಾ ಜನರು ಬರುತ್ತಾರೆ ಅವರುಗಳು ಪರಸ್ಥಳದಿಂದ ಬರಬಹುದು. ಅಥವಾ ಬೇರೆ ಬೇರೆ ಗ್ರಾಮಗಳಿಂದ ಇಲ್ಲಿಗೆ ಬಂದರೆ ಅವರುಗಳಿಗೆ ತುಂಬಾ ತೊಂದರೆಯಾಗುತ್ತದೆ. ಅವರನ್ನು ನೋಡಿಕೊಳ್ಳತಕ್ಕ ಜನರು ಜೊತೆಯಲ್ಲಿ ಬರಬೇಕಾಗುತ್ತದೆ. ಅವರು ಹೆಚ್ಚು ಹಣವನ್ನು ಖರ್ಚುಮಾಡತಕ್ಕ ಪ್ರಸಂಗ ಬರುತ್ತದೆ. ದಾವಣಗೆರೆಯಲ್ಲಿ ಚಿಗಟೇರಿ ಎಂಬ ದೊಡ್ಡ ಜನರಲ್ ಆಸ್ಪತ್ರೆ ಇದೆ. ಇಂತಹ ದೊಡ್ಡ ಆಸ್ಪತ್ರೆ ಇದ್ದರೂ ಕೂಡ ಮೇಲಿನ ರೀತಿಯ ಒಂದು ವ್ಯವಸ್ಥೆಯನ್ನು ಮಾಡಬೇಕು. ಕಾಲೇಜು ಇರತಕ್ಕ ಜಾಗದಲ್ಲಿ ಇಂತಹ ವ್ಯವಸ್ಥೆಯನ್ನು ತಾವು ಮಾಡಿದರೆ ಖಂಡಿತವಾಗಿ ಅಲ್ಲಲ್ಲಿ ಆ ರೋಗಿಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಾವು ಇದನ್ನು ಯೋಚನೆ ಮಾಡಬೇಕು. ಆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಚಿಗಟೇರಿ ಆಸ್ಪತ್ರೆಯಲ್ಲಿ ತಾವು ಒಂದು ನರ್ಸಿಂಗ್ ಟ್ರೈನಿಂಗ್ ಸ್ಕೂಲನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಇದಕ್ಕಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಅದಷ್ಟು ಜಾಗ್ರತೆ ಈ ಅನುಮತಿಯನ್ನು ಕೊಟ್ಟಿದ್ದೀರಿ. ಈಗಾಗಲೇ ಸಂದರ್ಶನಗಳನ್ನು ಕರೆಯುವ ವ್ಯವಸ್ಥೆಯಾಗಿದೆ. ಇನ್ನೊಂದು ವಿಷಯವೇನೆಂದರೆ, ಚಿಗಟೇರಿ ಆಸ್ಪತ್ರೆಯ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ೧.೩೦ ಲಕ್ಷ ರೂಪಾಯಿಗಳನ್ನು ತಾವು ಒದಗಿಸಿದ್ದೀರಿ. ಅದು ಯಾವ ಜಾಗ ಎಂಬುದನ್ನು ನೋಡಬೇಕು. ಆ ಜಾಗವನ್ನು ಟಿ.ಬಿ. ಆಸ್ಪತ್ರೆಗೆ ಕೇಳಿದ್ದರು ಅದರ ಬಗ್ಗೆ ತಿಳಿಸಿದರೆ ಅನುಕೂಲವಾಗುತ್ತದೆ. ದಾವಣಗೆರೆಯಲ್ಲಿ ಸಿ.ಜಿ. ಆಸ್ಪತ್ರೆ ಇರುವುದು ಒಂದು ಭಾಗದಲ್ಲಿ ಇನ್ನೊಂದು ಭಾಗದಲ್ಲಿ ಊರು ಬೆಳವಣಿಗೆಯಾಗಿದೆ ಬೆಳವಣಿಗೆ ಯಾಗಿರುವುದು ಯಾವುದೆಂದರೆ ಆಜಾದ್‌ನಗರ, ಮತ್ತು ಅಹಮದ್‌ನಗರ. ಈ ಜಾಗದಲ್ಲಿ ಹೆಚ್ಚು ಜನಸಂಖ್ಯೆ ಇದೆ ಮಂಡಕ್ಕಿ ಕೆಲಸಗಾರರು, ಮತ್ತು ಬೀಡಿ ಕೆಲಸಗಾರರು ಅಲ್ಲಿ ಇದ್ದಾರೆ. ಹೀಗೆ ದುಡಿಯತಕ್ಕ ಹಲವಾರು ಜನರು ಅಲ್ಲಿದ್ದಾರೆ ಅವರು ಇರತಕ್ಕ ಜಾಗಕ್ಕೂ ಆಸ್ಪತ್ರೆಗೂ ಸುಮಾರು ೪–೫ ಕಿಲೋಮೀಟರ್ ಆಗುತ್ತದೆ. ಆದ್ದರಿಂದ ಅವರು ಇರುವ ಭಾಗದಲ್ಲೇ ಒಂದು ಆಸ್ಪತ್ರೆಯನ್ನು ಕಟ್ಟುವುದಕ್ಕೆ ಈಗಿನಿಂದಲೇ ಒಂದು ಯೋಜನೆಯನ್ನು ರೂಪಿಸಿಕೊಳ್ಳಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವನ್ನು ನಮ್ಮ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತೇನೆ. ನಗರ ನೈರ್ಮಲ್ಯ ಗೊಳಿಸುವುದಕ್ಕೆ ಕೆಲಸಗಾರರು ಇದ್ದಾರೆ. ಅವರಲ್ಲಿ ಕಸ ಹೊಡೆಯತಕ್ಕವರು ಸಹಾ ಇದ್ದಾರೆ. ಚರಂಡಿ ಶುದ್ಧಿ ಮಾಡುವ ಜನರೂ ಇದ್ದಾರೆ. ಅವರನ್ನು ಪೌರ ಕಾರ್ಮಿಕರೆಂದು ಕರೆಯುತ್ತಾರೆ. ತಾವು ಅವರುಗಳಿಗೆ ಪುಕ್ಕಟೆಯಾಗಿ ಔಷಧಿಗಳನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು. ಏಕೆಂದರೆ, ಅವರು ಮಾಡತಕ್ಕ ಕೆಲಸವೇ ಅವರಿಗೆ ಯಾವ ಕಾಯಿಲೆಯನ್ನಾದರೂ ತರಬಹುದು. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಹಣ ಕೊಟ್ಟು ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಪೌರಕಾರ್ಮಿಕರಿಗೆ ಕಡ್ಡಾಯವಾಗಿ ಬೇಕಾದಂತಹ ಯಾವುದೇ ಔಷಧಿಯಾದರೂ ಸರಿಯೇ ಅದು ಪುಕ್ಕಟೆಯಾಗಿ ಸಿಗತಕ್ಕ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕು. ಏಕೆಂದರೆ, ಇಡೀ ನಗರವನ್ನು ಸ್ವಚ್ಛಗೊಳಿಸತಕ್ಕ ಜನ ಅವರು ಅವರ ಆರೋಗ್ಯ ಬಹಳ ಮುಖ್ಯವಾದುದು. ಅವರ ಆರೋಗ್ಯಕ್ಕೆ ಬೇಕಾದಂತಹ ಅನುಕೂಲಗಳನ್ನು ತಾವು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೊನೆಗೆ

ಅಧ್ಯಕ್ಷರು ನನಗೆ ನಾಲ್ಕು ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎ. ಜಾರ್ಜ್ (ಭಾರತೀನಗರ).—ಆರೋಗ್ಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯ ಮೇಲೆ ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಸರ್ಕಾರ ಬಂದ ಮೇಲೆ ನಗರ ಪ್ರದೇಶಗಳಲ್ಲಿರತಕ್ಕ ಜನತೆಗೆ ತುಂಬಾ ಅನ್ಯಾಯವಾಗಿದೆ. ಅದರಲ್ಲೂ ನಗರ ಪ್ರದೇಶಗಳಲ್ಲಿರುವ ಬಡವರ ವಿಚಾರದಲ್ಲಿ ಇವರು ಹಾಕಿಕೊಂಡಿರುವ ಕಾರ್ಯಕ್ರಮ ಬಹಳ ನಿರ್ಲಕ್ಷ್ಯದಿಂದ ಕೂಡಿದೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಹಲವಾರು ಯೋಜನೆಗಳನ್ನು ಬಡವರಿಗಾಗಿ ಘೋಷಣೆ ಮಾಡಿದಿರಿ. ಆ ಪ್ರಣಾಳಿಕೆ ನಮ್ಮ ಕಾರ್ಯಕ್ರಮ ಎಂಬುದಾಗಿ ಹೇಳಿ, ಅದನ್ನು ಜಾರಿಗೆ ತರಲಿಕ್ಕೆ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಹೇಳಿದರು. ಅಷ್ಟೇ ಅಲ್ಲದೆ, ಆ ಪ್ರಣಾಳಿಕೆಯಲ್ಲಿ ಬಡವರಿಗೆ ೧೦ ಕೆ.ಜಿ. ಅಕ್ಕಿಯನ್ನು ೨ ರೂಪಾಯಿನಂತೆ ಕೊಡುತ್ತೇವೆಂದು ಹೇಳಿದ್ದಾರೆ. ನಗರ ಪ್ರದೇಶದ ಬಡವರಿಗೆ ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಅವರಿಗೆ ಆದ್ಯತೆಯನ್ನು ಕೊಡಬೇಕು. ಬಡವರ ವಿಚಾರವನ್ನು ಕಡೆಗಣಿಸಿದರೆ ನೀವು ಏಳಿಗೆ ಆಗುವುದು ಸಾಧ್ಯವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವರು ಬಡವರ ವಿರೋಧೀ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಹೇಳುತ್ತೇನೆ. ಕೊಳಚೆ ಪ್ರದೇಶ ಏನು ಇದೆ, ಆ ಕೊಳಚೆ ಪ್ರದೇಶಗಳಿಗೆ ಹಣವನ್ನು ಕೊಟ್ಟಿದ್ದಾರೆ. ಆ ಹಣವನ್ನು ಅವರುಗಳಿಗಾಗಿ ಖರ್ಚುಮಾಡದೆ ಆ ಜನಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದನ್ನು ಈ ವಾರ್ಷಿಕ ವರದಿಯ ಪ್ರಕಾರ ಹೇಳುತ್ತಾ ಇದ್ದೇನೆ. ಮೊನ್ನೆ ಹೇಳಿದರು ೧೯೮೫–೮೬ನೇ ಇಸವಿಯವರೆವಿಗೂ ೭೫ ಸಾವಿರ ಜನ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಾ ಇದ್ದರು ಎಂದು, ಸುಮಾರು ೧೧೬ ಕೊಳಚೆ ಕೇರಿಗಳನ್ನು ಇಂಪ್ರೂವ್ ಮಾಡಲಿಕ್ಕೆ ೧೨೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಇಟ್ಟುಕೊಂಡಿದ್ದರು. ಆದರೆ ೧೨೭ ಲಕ್ಷ ರೂಪಾಯಿಗಳಲ್ಲಿ ೬೦ ಲಕ್ಷ ರೂಪಾಯಿಗಳನ್ನು ಸರ್ಕಾರ ಈ ಡಿಸೆಂಬರ್‌ನಲ್ಲಿ ಅಂದರೆ ೧೯೮೫ರಲ್ಲಿ ಖರ್ಚುಮಾಡಿದ್ದಾರೆ. ೩೫ ಕೊಳಚೆ ಪ್ರದೇಶಗಳಿಗೆ ಮಾತ್ರ ಮೂಲಭೂತವಾದ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದೇವೆ ಎಂಬುದನ್ನು ತಮ್ಮ ವರದಿಯಲ್ಲಿ ಹೇಳಿದ್ದೀರಿ. ನಾನು ಹೇಳುತ್ತಾ ಇದ್ದೇನೆ– ಇವರು ಕೊಟ್ಟಂತಹ ಹಣವನ್ನು ಇವರೇ ಕೈಯಿಂದ ಖರ್ಚು ಮಾಡುವುದಕ್ಕೆ ಆಗುತ್ತಾ ಇಲ್ಲ, ಈ ರೀತಿ ಬಡವರ ಕಾರ್ಯಕ್ರಮದಲ್ಲಿ ಉದಾಸೀನರಾಗಿ ಇವರು ಕೆಲಸ ಮಾಡುತ್ತಾ ಇದ್ದಾರೆ ಎಂಬುದನ್ನು ಹೇಳಲಿಕ್ಕೆ ಬಯಸುತ್ತೇನೆ. ಇವರು ತಮ್ಮ ವಾರ್ಷಿಕ ವರದಿಯಲ್ಲಿ ಒಂದು ಮಾತನ್ನು ಹೇಳುತ್ತಾರೆ ಸದಸ್ಯರಿಗೆ ಉತ್ತರ ಕೊಡುವಾಗ ಒಂದು ಮಾತನ್ನು ಹೇಳುತ್ತಾರೆ. ಇವತ್ತು ಈ ವಾರ್ಷಿಕ ವರದಿಯಲ್ಲಿ ನಮ್ಮ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ೧೯೮೫–೮೬ನೇ ಇಸವಿಯಲ್ಲಿ ೨೭ ಲಕ್ಷ ೩೨ ಸಾವಿರ ರೂಪಾಯಿಗಳನ್ನು ಕೊಳಚೆ ಪ್ರದೇಶಗಳಲ್ಲಿರತಕ್ಕ ಮನೆಗಳನ್ನು ಕಟ್ಟಲಿಕ್ಕೆ ಖರ್ಚುಮಾಡಿದೆ ಎಂಬ ಮಾತನ್ನು ಈ ವರದಿಯಲ್ಲಿ ಹೇಳಿದ್ದಾರೆ. ತಾ. ೨೭-೨-೧೯೮೬ರಲ್ಲಿ ನನಗೆ ಉತ್ತರ ಕೊಡುವಾಗ – ಸುಮಾರು ೧೭ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆಂದು ಹೇಳಿದರು. ಇವರು ವಾರ್ಷಿಕ ವರದಿಯಲ್ಲಿ ಒಂದು ಮಾತನ್ನು ಹೇಳುತ್ತಾರೆ. ಈ ಸದನದಲ್ಲಿ ಉತ್ತರ ಕೊಡುವಾಗ ಒಂದು ಮಾತನ್ನು ಹೇಳುತ್ತಾರೆ. ಈ ಸರ್ಕಾರವನ್ನು ತಪ್ಪು ದಾರಿಗೆ ಎಳೆಯುವಂತಹ ಒಂದು ಪ್ರಸಂಗವನ್ನು ಇವರು ಮಾಡುತ್ತಿದ್ದಾರೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಸದನದ ಗೌರವವನ್ನು ಸರಿಯಾದ ರೀತಿಯಲ್ಲಿ ಪಾಲಿಸುತ್ತಿಲ್ಲ. ಇವತ್ತು ಬಿ.ಡಿ.ಎ. ವಿಚಾರದಲ್ಲಿ ಮಾತನಾಡಬೇಕಾದರೆ ಹಿಂದೆ ಕೆಲವು ಹಿರಿಯ ಅಧಿಕಾರಿಗಳು ಇದ್ದರು. ಅವರು ನಿಷ್ಠಾವಂತರಾಗಿದ್ದರು. ಅವರು ಒಳ್ಳೆಯ ಕೆಲಸವನ್ನು ಮಾಡಿದರು. ಅವರು ನನ್ನ ಜೊತೆ ಖಾಸಗಿಯಾಗಿ ಮಾತಾಡುವಂತಹ ಸಂದರ್ಭ ಬಂದಾಗ ಇವತ್ತು ಬಿ.ಡಿ.ಎ ನಲ್ಲಿ ಲಂಚ ನಡೆಯುತ್ತಿಲ್ಲ ಭ್ರಷ್ಟಾಚಾರ ನಡೆಯುತ್ತಿಲ್ಲ, ಫೋರ್ಜರಿ ನಡೆಯುತ್ತಾ ಇದೆಯೆಂದು ಹೇಳಿದರು. ಬಿ.ಡಿ.ಎ.ನಲ್ಲಿ ಒಂದು ಸೈಟನ್ನು ಅಲಾಟ್ ಮಾಡಬೇಕಾದರೆ ಫೋರ್ಜರಿ ನಡೆಯುತ್ತಾ ಇದೆಯಂತೆ. ಇನ್ನೂ ಕೆಲವು ವಿಚಾರಗಳನ್ನು ಹೇಳಬೇಕಾದರೆ, ಯಾರೋ ಸೈಟಿನ ಮೇಲೆ ಬೇರೆಯವರು ಮನೆಗಳನ್ನು ಕಟ್ಟಿದ್ದಾರಂತೆ. ಅವರು ಎಂಟು ಹತ್ತು ವರ್ಷಗಳಿಂದ ಇದ್ದರೂ ಕೂಡ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ.

ಇವತ್ತು ಯಾರು ಎರಡು ವರ್ಷಗಳವರೆಗೆ ಮನೆ ಕಟ್ಟುವುದಿಲ್ಲ ಅಂತಹವರ ಸೈಟನ್ನು ಬಿ.ಡಿ.ಎ. ನವರು ವಶಪಡಿಸಿಕೊಂಡು ಬೇರೆಯವರಿಗೆ ಅಲಾಟ್ ಮಾಡಬೇಕೆಂದು ಕಾನೂನು ಇದ್ದರೂ ಕೂಡಬೇರೆಯವರಿಗೆ ಇವುಗಳನ್ನು ಕೊಡುವ ಬಗ್ಗೆ ಬಿ.ಡಿ.ಎ.ನವರೂ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಬೆಂಗಳೂರು ನಗರ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವಾಗ ನಗರದಲ್ಲಿ ಬೇಕಾದವರಿಗೆ ಒಂದು ಸೈಟು ಕೊಡಬೇಕಾದಂಥ ಒಂದು ಜವಾಬ್ದಾರಿ ಬಿ. ಡಿ. ಎ ನವರ ಮೇಲಿದೆ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ, ಅದರಲ್ಲೂ ಹಿಂದುಳಿದವರಿಗೆ ಮನೆಕಟ್ಟಿ ಕೊಡುವಂಥ ಒಂದು ಕ್ರಮ ಇದುವರೆಗೂ ತೆಗೆದುಕೊಂಡಿಲ್ಲವೆಂದು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಹಾಗೆಯೇ, ವಾಟರ್ ಸಪ್ಲೈ ಮತ್ತು ಸೀವರೇಜ್ ಬೋರ್ಡ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಬೆಂಗಳೂರಿನ ಜನರು ಕುಡಿಯುವ ನೀರು ಇಲ್ಲದೆ ಪರದಾಡುತ್ತಿರುವಂತಹ ಪ್ರಸಂಗ ಬಂದಿದೆ. ಏತಕ್ಕೆ ಹೀಗೆ ಆಗಿದೆ ? ನಮ್ಮ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಬಹಳ ಚೆನ್ನಾಗಿ ಕೆಲಸ ಮಾಡಿ ತೋರಿಸುತ್ತಿದ್ದಾರೆ. ಅದನ್ನು ಅವರು ಮಾಡಿ ತೋರಿಸಿದ್ದಾರೆ. ಕಾವೇರಿ ಎರಡನೇ ಹಂತದ ಕೆಲಸವನ್ನು ಮಾಡಿ ನಮಗೆ ಕೆಲಸ ಮಾಡುವ ಶಕ್ತಿ ಇದೆ ಎಂಬುದನ್ನು ಮಾಡಿ ತೋರಿಸಿದ್ದಾರೆ. ಆದ್ದರಿಂದ ಸರ್ಕಾರ ಸಾಕಷ್ಟು ಹಣ ಒದಗಿಸಿಕೊಟ್ಟು ಕಾವೇರಿ ೩ನೇ ಹಂತದ ಕೆಲಸವನ್ನು ತುರ್ತಾಗಿ ಮಾಡಬೇಕು. ಮೂರನೇ ಹಂತ ಮಾತ್ರವಲ್ಲ ನಾಲ್ಕನೇ ಹಂತವನ್ನು ಕೂಡ ಆದಷ್ಟು ಬೇಗ ತೆಗೆದುಕೊಂಡು ಕೆಲಸ ಮಾಡದೇ ಇದ್ದರೆ ಮುಂದೆ ಗಂಡಾಂತರ ಪರಿಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಖಂಡಿತವಾಗಿಯೂ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬೋರ್‌ವೆಲ್ ಹಾಕಿಸುತ್ತಿದ್ದಾರೆ. ಬಹುಶಃ ಮಾನ್ಯ ಕೃಷ್ಣನ್‌ರವರು ಹೇಳಿದಹಾಗೆ, ರಾಜಾಜಿನಗರದಲ್ಲಿ ಎರಡು ದಿವಸಕ್ಕೆ ಒಂದು ಸಲ ಮಾತ್ರ ನೀರು ಕೊಡುತ್ತಿದ್ದಾರೆ. ಆದರೆ ಎಲ್ಲಿ ಪೈಪ್ ಇದೆ, ಅಲ್ಲಿ ಎರಡು ದಿವಸಕ್ಕೆ ಒಂದು ಸಲವಾದರೂ ನೀರು ಬರುತ್ತದೆ. ನನ್ನ ಕ್ಷೇತ್ರದಲ್ಲಿ ಪೈಪ್ ವ್ಯವಸ್ಥೆ ಇಲ್ಲದೆ ವರ್ಷಕ್ಕೆ ೩೬೫ ದಿವಸವೂ ನೀರು ಇಲ್ಲದೆ ಜನರು ಒದ್ದಾಡುತ್ತಿದ್ದಾರೆ, ಪರದಾಡುತ್ತಿದ್ದಾರೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ನೀರಿನ ಸೌಕರ್ಯ ಇಲ್ಲ, ಅಂತಹ ಸ್ಥಳಗಳಲ್ಲಿ ಆದಷ್ಟು ಬೇಗ, ಈಗೇನೋ ಬೋರ್‌ವೆಲ್‌ಗಳನ್ನು ಹಾಕಿಸುತ್ತಿದ್ದಾರೆ, ಅಲ್ಲಿ ಇನ್ನೂ ಹೆಚ್ಚು ಬೋರ್‌ವೆಲ್‌ಗಳನ್ನು ಹಾಕಿಸಿ ಬಡವರಿಗೆ ನೀರು ಒದಗಿಸುವ ಕೆಲಸ ಮಾಡಬೇಕು. ಈಗ ಸರ್ಕಾರದವರು ಏನು ಮಾಡುತ್ತಿದ್ದಾರೆ ಎಂದರೆ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ಬೋರ್‌ವೆಲ್ ಹಾಕಿಸಲಿಕ್ಕೆ ಹಣ ಸಾಲವಾಗಿ ಕೊಡುತ್ತಿದ್ದಾರೆ. ಅದಕ್ಕೆ ಬಡ್ಡಿಯನ್ನೂ ಸೇರಿಸಿ ಕೊಡುತ್ತಾರೆ ಎಂದು ಕೇಳಿದ್ದೇನೆ. ಜಲ ಮಂಡಳಿಯವರು ಬಡವರಿಗೆ ಉಚಿತವಾಗಿ ನೀರು ಕೊಡುವ ಸಲುವಾಗಿ ಇದನ್ನು ಸಾಲವಾಗಿ ಪರಿಗಣಿಸದೆ ಗ್ರಾಂಟ್ ಆಗಿ ಕೊಟ್ಟು, ಹೆಚ್ಚೆಚ್ಚು ಬೋರ್‌ವೆಲ್‌ಗಳನ್ನು ಹಾಕಿಸುವುದರಿಂದ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಮತ್ತು ಇವತ್ತು ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಯಾವರೀತಿ ವ್ಯವಹಾರಗಳು ನಡೆಯುತ್ತಿವೆ. ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳು ಇವೆ, ಹೆಲ್ತ್ ಡಿಪಾರ್ಟ್‌ಮೆಂಟ್. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಹೀಗೆ ವಿವಿಧ ಇಲಾಖೆಗಳಲ್ಲಿ ಪರಸ್ಪರ ಕೋ ಆರ್ಡಿನೇಶನ್ ಇಲ್ಲದೆ ಸರಿಯಾಗಿ ಕೆಲಸಗಳು ಆಗುತ್ತಿಲ್ಲ. ಇವತ್ತು ಬೆಂಗಳೂರು ಮೆಟ್ರೊಪಾಲಿಟನ್ ರೀಜನಲ್ ಡೆವಲಪ್‌ಮೆಂಟ್ ಅಥಾರಿಟಿ ಇನ್ನೂ ಜಾರಿಗೆ ಬಂದಿಲ್ಲ, ಬಂದರೂ ಸಹಿತ ಡಿವಿಜನ್ ವೈಸ್ ಆಗಿ ಕೋಆರ್ಡಿನೇಶನ್ ಬರದೇ ಇದ್ದರೆ ಯಾವ ಕೆಲಸವನ್ನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕೆ ಒಂದು ಕೋಆರ್ಡಿನೇಶನ್ ಕಮಿಟಿ ಮಾಡಬೇಕು ಮತ್ತು ಯಾವುದೇ ರೋಡ್‌ನ್ನು ಅಗೆಯುವಾಗ, ಅಥವಾ ಟಾರ್ ಹಾಕುವಾಗ ಬೇರೆ ಬೇರೆ ಇಲಾಖೆಗಳಲ್ಲಿ ಹೊಂದಾಣಿಕೆ ಇದ್ದರೆ ಪದೇ ಪದೇ ರಸ್ತೆಯನ್ನು ಅಗೆಯುವ ಅವಶ್ಯಕತೆ ಇರುವುದಿಲ್ಲ. ಆಮೇಲೆ ಮಾನ್ಯ ಅಧ್ಯಕ್ಷರೇ, ಈ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಏನು ಮಾಡುತ್ತಿದ್ದಾರೆ ? ಪ್ರತಿಯೊಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಮನೆಮನೆಗೂ ಹೋಗಿ ಮನೆ ಕಂದಾಯ ಕಲೆಕ್ಟ್ ಮಾಡುತ್ತಿದ್ದಾರೆ. ಇದರಿಂದ ಅವ್ಯವಹಾರಕ್ಕೆ ಆಸ್ಪದ ಇದೆ. ಅದರ ಬದಲು ಮನೆ ಪಕ್ಕದಲ್ಲಿ ಯಾವುದಾದರೂ ಬ್ಯಾಂಕ್ ಇದ್ದರೆ, ಆಯಾಯ ಬ್ಯಾಂಕಿನಲ್ಲೇ ಪ್ರತಿಯೊಬ್ಬರೂ ಕಂದಾಯ ಪಾವತಿ ಮಾಡುವುದರ ಮೂಲಕ ಈ ಹಣ ದುರುಪಯೋಗವಾಗುವುದನ್ನು ತಪ್ಪಿಸಬಹುದು. ಇನ್ನೊಂದು ನನ್ನ ಸಲಹೆ ಎಂದರೆ, ಬೆಂಗಳೂರು ನಗರ ಅಭಿವೃದ್ಧಿಯಾಗಲು, ಬೇದಕಾರಿಂಗ್‌ರೋಡ್ ಅವಶ್ಯಕತೆ ಇದೆ. ಇದನ್ನು ಆದಷ್ಟು ಬೇಗ ಮಾಡಬೇಕು.

ಹಾಗೆಯೇ ವೃತ್ತ ರೈಲ್ವೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟು ಬೆಂಗಳೂರಿಗೆ ಆದಷ್ಟು ಬೇಗ ಇದನ್ನು ತರುವ ಕೆಲಸ ಮಾಡಬೇಕು. ಬೆಂಗಳೂರು ಎಂದರೆ ಕೇವಲ, ಬೆಂಗಳೂರಿನ ಜನರಿಗೆ ಮಾತ್ರ ವಲ್ಲ, ಇದು ಕರ್ನಾಟಕದ ರಾಜಧಾನಿ. ಆದ್ದರಿಂದ ಬೆಂಗಳೂರಿಗೆ ಆದಷ್ಟು ಹೆಚ್ಚಿಗೆ ಹಣವೊದಗಿಸಿ, ಈ ಯೋಜನೆ ರೀತ್ಯಾ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕಡೆಯದಾಗಿ ನನ್ನ ಒಂದು ಮಾತು ಏನೆಂದರೆ, ಮುನಿಸಿಪಲ್ ಡೈರೆಕ್ಟೋರೇಟ್ ಕೆಲಸ ಮಾಡುತ್ತಿದೆ ಎಂಬುದಾಗಿ ಹೇಳಿದ್ದಾರೆ. ಇದರಲ್ಲಿ ಇಂಟರ್ನಲ್ ಟ್ರಾನ್ಸಫರ್ ಮಾಡಲಿಕ್ಕೆ ಅವಕಾಶ ಇರಬೇಕು. ಯಾರು ಹದಿನೈದು-ಇಪ್ಪತ್ತು ವರ್ಷಗಳಿಂದ ಒಂದೇ ಇಲಾಖೆಯಲ್ಲಿ ಬೇರು ಬಿಟ್ಟಿದ್ದಾರೆ, ಅವರನ್ನು ಬೇರೆ ಇಲಾಖೆಗಳಿಗೆ ಬದಲಾಯಿಸಿದರೆ ಮಾತ್ರ ನಿಜವಾಗಿಯೂ ಒಳ್ಳೆಯ ರೀತಿಯಿಂದ ಕೆಲಸ ಮಾಡಲಿಕ್ಕೆ ಸಾಧ್ಯವೆಂದು ಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪ್ರಭಾಕರ ರಾಣೆ (ಕಾರವಾರ).—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಪೌರಾಡಳಿತ ಇಲಾಖೆಯ ಮೇಲೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ, ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ನೋಡುವಾಗ, ನಿಜವಾಗಿಯೂ ಯಾವ ಶಬ್ದಗಳನ್ನು ಉಪಯೋಗಿಸಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈ ಆರೋಗ್ಯ ಇಲಾಖೆಯಲ್ಲಿ ಪ್ರತಿಯೊಂದು ಕಡೆಗೂ, ಪ್ರತಿಯೊಂದು ಕ್ಷೇತ್ರದಲ್ಲೂ ಅವ್ಯವಸ್ಥೆ ತುಂಬಿ ತುಳುಕುತ್ತಿದೆ. ಉದಾಹರಣೆಗೆ, ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನೋಡುವುದಾದರೆ, ನಮ್ಮ ಜಿಲ್ಲೆ ಅತಿಯಾಗಿ ಮಳೆ ಬೀಳುವ ಜಿಲ್ಲೆ ವಿಶಿಷ್ಟವಾದ ಅರಣ್ಯದಿಂದ ಕೂಡಿದ ಗುಡ್ಡಗಾಡು ಪ್ರದೇಶವೂ ಇಲ್ಲಿದೆ. ನಿಜವಾಗಿಯೂ ಹೇಳಿದರೆ ಜನರ ಆರೋಗ್ಯ ಹಿತದೃಷ್ಟಿಯಿಂದ ಆರೋಗ್ಯ ಇಲಾಖೆ ಹೆಚ್ಚಿನ ಒಂದು ಸೇವೆಯನ್ನು ಸಲ್ಲಿಸುವ ಅವಕಾಶ ಇದೆ. ಇದನ್ನು ಮಾಡಬೇಕು. ಆದರೆ ಈ ಕಾರ್ಯದಲ್ಲಿ ಕರ್ತವ್ಯಚ್ಯುತಿ ಆಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅನೇಕ ಸ್ಥಳಗಳಲ್ಲಿ. ನನ್ನ ಕ್ಷೇತ್ರವಾದ ಕಾರವಾರ ಮತ್ತು ಸೂಪಾ ತಾಲ್ಲೂಕು ತೆಗೆದುಕೊಂಡರೆ ಕೇವಲ ಹೆಸರಿಗೆ ಮಾತ್ರ ಪ್ರಾಥಮಿಕ ಆರೋಗ್ಯ ಘಟಕಗಳು ಅಥವಾ ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಗಳು ಇವೆ. ಆದರೆ ಕೆಲವು ಕಡೆ ಆರೋಗ್ಯಾಧಿಕಾರಿಗಳು ಇದ್ದರೆ ಇನ್ನು ಕಡೆ ಔಷಧಿಗಳ ಪೂರೈಕೆ ಇರುವುದಿಲ್ಲ. ಔಷಧಿಗಳ ಪೂರೈಕೆ ಇದ್ದರೆ ಇನ್ನು ಉಳಿದ ಉಪಕರಣಗಳ ವ್ಯವಸ್ಥೆ ಇಲ್ಲ. ಇಂತಹ ಒಂದು ಅಸ್ತವ್ಯಸ್ಥತೆ ಇರುವಾಗ ಪ್ರಾಕೃತಿಕವಾಗಿ ಮತ್ತು ಭೌಗೋಳಿಕವಾದ ಕಾರಣದಿಂದ ಇಲ್ಲಿಯ ಜನರು ಆರೋಗ್ಯದ ಬಗ್ಗೆ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ನಿರ್ಲಕ್ಷ್ಯದಿಂದ ಕೆಲಸ ಮಾಡುತ್ತಿರುವುದು ವಿಷಾದನೀಯವಾದ ಸಂಗತಿಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಆರೋಗ್ಯ ವಿಚಾರ ತೆಗೆದುಕೊಂಡರೆ, ಉತ್ತರ ಕನ್ನಡ ಜಿಲ್ಲೆಗೆ ಸರ್ಕಾರ ತುಂಬಾ ಅನ್ಯಾಯ ಮಾಡಿದೆ ಎಂದು ನಿರ್ವಿವಾದವಾಗಿ ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯವರೇ ಮುಖ್ಯ ಮಂತ್ರಿಗಳಾಗಿರುವಾಗ ನಮ್ಮ ಜಿಲ್ಲೆಗೆ ಆರೋಗ್ಯ ಇಲಾಖೆ ಒಂದೇ ಅಲ್ಲ, ಬೇರೆ ಬೇರೆ ಇಲಾಖೆಗಳಿಂದ ಹೆಚ್ಚಿನ ಪಾಲು ಸಿಗುತ್ತದೆ ಎಂಬ ನಿರೀಕ್ಷೆ ನಮಗೆ ಇತ್ತು. ಆದರೆ ಆ ನಿರೀಕ್ಷೆ ಸುಳ್ಳಾಗಿದೆ. ನಮ್ಮ ಜಿಲ್ಲೆಯವರೇ ಮುಖ್ಯ ಮಂತ್ರಿಗಳಾಗಿರುವುದರಿಂದ ಈ ಅನ್ಯಾಯವಾಗುತ್ತಿದೆ ಎನ್ನುವ ಸಂಶಯ ಜನರಲ್ಲಿ ಮೂಡುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಕಳೆದ ಮೂರು ವರ್ಷಗಳಿಂದ ನಮ್ಮ ಕಾರವಾರ ತಾಲ್ಲೂಕಿನಲ್ಲಿ ಅದರಲ್ಲೂ ಕಾರವಾರದಲ್ಲಿ ಜನಸಂಖ್ಯೆ ಸುಮಾರು ೧ ಲಕ್ಷ ೨೦ ಸಾವಿರಕ್ಕೂ ಮೀರಿ ಇದೆ. ಇವತ್ತು ಹಳೇ ಮೈಸೂರು ಮತ್ತು ಉಳಿದ ಜಿಲ್ಲೆಗಳಲ್ಲಿ ನೋಡಿದಾಗ ಕೇವಲ ೮೦ ಸಾವಿರ ಅಥವಾ ಒಂದು ಲಕ್ಷ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ೩-೪ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿರುವುದನ್ನು ನೋಡುತ್ತೇವೆ. ಆದರೆ ಇಲ್ಲಿ ಮಾತ್ರ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದ್ದರೂ ಸಹಿತ, ಪ್ರಾಕೃತಿಕವಾಗಿ, ಭೌಗೋಳಿಕವಾಗಿ ಅನೇಕ ವೈಶಿಷ್ಟ್ಯಗಳು ಇದ್ದರೂ ಸಹ ಇದುವರೆಗೆ ಸರ್ಕಾರ ಜನರ ಆರೋಗ್ಯದ ಬಗ್ಗೆ ಯಾವ ಹೆಚ್ಚಿನ ವ್ಯವಸ್ಥೆಯನ್ನೂ ಮಾಡಿಲ್ಲವೆಂದು ನಾನು ಹೇಳಬೇಕಾಗಿದೆ.

ಏಕೆಂದರೆ, ನಾನು ಈಗಾಗಲೇ ಹೇಳಿದ ಪ್ರಕಾರ ಅಲ್ಲಿ ಒಂದು ಲಕ್ಷಕ್ಕಿಂತ ಜಾಸ್ತಿ ಜನರಿದ್ದರೂ ಸಹ ಕೇವಲ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ೩೦ ಸಾವಿರ ಜನರಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂಬ ನಿಯಮವಿದ್ದರೂ ಸಹ ನಮ್ಮ ಕಾರವಾರ ತಾಲ್ಲೂಕ್‌ನಲ್ಲಿ ಒಂದು ಮಾತ್ರ ಇದೆ. ನಮ್ಮ ಕಾರವಾರ ತಾಲ್ಲೂಕ್ ಕಾಳಿ ನದಿ ಯೋಜನೆ ಸಂಬಂಧದಲ್ಲಿ ಒಂದಕ್ಕೆ ಎರಡರಷ್ಟು

ಬೆಳೆದಿದೆ. ಆದ್ದರಿಂದ ಅಲ್ಲಿಗೆ ಆರೋಗ್ಯ ಸೇವೆಯನ್ನು ವಿಸ್ತರಿಸಬೇಕೆಂದು ಕಳೆದ ಮೂರು ವರ್ಷಗಳಿಂದ ಕೇಳುತ್ತಿದ್ದರೂ ಸಹ ಸರ್ಕಾರದವರು ಅದರ ಕಡೆಗೆ ಗಮನ ಕೊಟ್ಟಿಲ್ಲ. ಈಗ ರಾಜ್ಯದ ಬೇರೆ ಕಡೆಗಳಲ್ಲಿ ಯಾವ ರೀತಿ ಆರೋಗ್ಯ ಸೇವೆಗಳನ್ನು ವಿಸ್ತರಣೆ ಮಾಡಲಾಗಿದೆಯೋ ಅದಕ್ಕಿಂತ ವಿಶೇಷವಾದಂಥ ಹೆಚ್ಚಿನ ಸೌಲಭ್ಯವನ್ನು ನಮ್ಮ ತಾಲ್ಲೂಕಿಗೆ ಕೊಡದಿದ್ದರೂ ಸಹ, ಬೇರೆ ಕಡೆಗೆ ಕೊಟ್ಟಿರುವಷ್ಟೇ ಸೌಲಭ್ಯವನ್ನು ನಮ್ಮ ತಾಲ್ಲೂಕಿಗೂ ಒದಗಿಸಬೇಕೆಂದೂ ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಅದರಲ್ಲಿಯೂ ಉತ್ತರ ಕರ್ನಾಟಕದ ಬಗ್ಗೆ ಈ ಸರ್ಕಾರ ಮಲತಾಯಿ ಧೋರಣೆಯನ್ನು ಪ್ರತಿಯೊಂದು ವಿಚಾರದಲ್ಲಿಯೂ ಅನುಸರಿಸುತ್ತಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಹಳೆಯ ಮೈಸೂರು ಭಾಗ ಹಾಗೂ ಇನ್ನಿತರ ಜಿಲ್ಲೆಗಳಿಗೆ ಸರ್ಕಾರ ನೀಡಿದಷ್ಟು ಪ್ರೋತ್ಸಾಹವನ್ನು ನಮ್ಮ ಜಿಲ್ಲೆಗೆ ನೀಡುತ್ತಿಲ್ಲ. ಬೇರೆ ಕಡೆಗಳಷ್ಟು ವಿಸ್ತರಣಾ ಕಾರ್ಯ ನಮ್ಮಲ್ಲಿ ಆಗದಿರುವುದಕ್ಕೆ ನಮಗೆ ಖಂಡಿತವಾಗಿಯೂ ಖೇದವಾಗುತ್ತದೆ. ಇದನ್ನೆಲ್ಲಾ ನೋಡಿದರೆ ನಾವು ಈ ರಾಜ್ಯದಲ್ಲಿದ್ದೇವೋ ಅಥವಾ ಇಲ್ಲವೋ ಎಂಬ ಸಂಶಯ ಬರುತ್ತದೆ. ಇದೇ ಮಾತನ್ನು ನಾನು ವಿದ್ಯಾ ಇಲಾಖೆ ಮೇಲೆ ಮಾತನಾಡುವಾಗ ಸಹ ಹೇಳಿದ್ದೇನೆ. ನಮ್ಮ ಸೂಪಾ ತಾಲ್ಲೂಕ್ ಅತಿ ದೊಡ್ಡದಾದಂಥ ಅರಣ್ಯದಿಂದ ಮತ್ತು ಗುಡ್ಡಗಾಡು ಪ್ರದೇಶದಿಂದ ಕೂಡಿದೆ. ಆ ಭಾಗದ ಜನರು ಈ ದೇಶದ ಸಲುವಾಗಿ ಮತ್ತು ಈ ರಾಜ್ಯದ ಸಲುವಾಗಿ ಬಹಳಷ್ಟು ತ್ಯಾಗ ಮಾಡಿದ್ದಾರೆ. ಆದರೆ ಅಂತಹ ಜನರಿಗೆ ಒದಗಿಸುತ್ತಿರುವ ಸೌಲಭ್ಯಗಳನ್ನು ನೋಡಿದಾಗ ವ್ಯವಹಾರ ಪ್ರಜ್ಞೆ ಇರುವಂತಹ ಜನರು ತಲೆಬಾಗ ಬೇಕಾಗುತ್ತದೆ.

ಇನ್ನು ನಮ್ಮ ಕಾರವಾರ ಜಿಲ್ಲಾ ಆಸ್ಪತ್ರೆಯ ಅವ್ಯವಸ್ಥೆ ಬಗ್ಗೆ ನನಗೆ ತಿಳಿದ ಮಟ್ಟಿಗೆ ಹೇಳುತ್ತೇನೆ ಮೊನ್ನೆ ಆರೋಗ್ಯ ಇಲಾಖೆಯ ರಾಜ್ಯ ಮಂತ್ರಿಗಳು ಅಲ್ಲಿಗೆ ಮೊದಲೇ ಸೂಚನೆ ಕೊಟ್ಟು ಬಂದಿದ್ದರಿಂದ ಅಲ್ಲಿನ ಅಧಿಕಾರಿಗಳು ಆ ದಿನ ಒಳ್ಳೆಯ ರೀತಿಯಿಂದ ವ್ಯವಸ್ಥೆ ಮಾಡಿದ್ದರು. ಬೇರೆ ಸಮಯದಲ್ಲಿ ಅಲ್ಲಿ ನಡೆಯುವಂತಹ ಭ್ರಷ್ಟಾಚಾರದ ಬಗ್ಗೆ ಮತ್ತು ಅವ್ಯವಹಾರಗಳ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ತಿಳಿಸಿದ್ದೇವೆ. ಈಗ ಅಲ್ಲಿರುವ ವೈದ್ಯಾಧಿಕಾರಿಗಳನ್ನು ಖಾಸಗಿಯಾಗಿ ನೋಡಿಕೊಂಡರೆ ಮಾತ್ರ ರೋಗಿಗಳಿಗೆ ಚೆನ್ನಾಗಿ ಉಪಚಾರ ಮಾಡುತ್ತಾರೆ. ಇಲ್ಲದಿದ್ದರೆ ಯೋಗ್ಯವಾದಂಥ ಉಪಚಾರ ಮಾಡುವುದಿಲ್ಲ. ಹಿಂದೆ ತಪ್ಪು ಮಾಡಿದಂಥ ಅಧಿಕಾರಿಗಳನ್ನು ಅಂಡಮಾನ್ ಮತ್ತು ನಿಕೋಬಾರ್‌ಗೆ ವರ್ಗ ಮಾಡುತ್ತಿದ್ದರಂತೆ. ಅದೇ ರೀತಿ ಈಗ ಬೇರೆ ಕಡೆ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳು ಏನಾದರೂ ತಪ್ಪು ಮಾಡಿದರೆ, ಅಂತಹವರಿಗೆ ಕಾರವಾರಕ್ಕೆ ವರ್ಗ ಮಾಡಲಾಗುತ್ತದೆಂದು ಹೇಳುತ್ತಿದ್ದಾರೆ. ಬೇರೆ ಕಡೆಗಳಲ್ಲಿ ಕಾನೂನುಬಾಹಿರವಾಗಿ ನಡೆದುಕೊಂಡವರನ್ನು ನಮ್ಮ ಜಿಲ್ಲೆಗೆ ವರ್ಗ ಮಾಡುತ್ತಿದ್ದಾರೆ. ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿ ಅಯೋಗ್ಯರಾದಂಥ, ಅದಕ್ಷರಾದಂಥ ಅಧಿಕಾರಿಗಳೇ ಇದ್ದಾರೆ. ಇಂತಹವರಿಂದಲೇ ಭ್ರಷ್ಟಾಚಾರ ಜಾಸ್ತಿಯಾಗುತ್ತಿರುವುದು. ನಮ್ಮ ಜಿಲ್ಲೆಯಲ್ಲಿರುವ ಇಂತಹ ಅಧಿಕಾರಿಗಳನ್ನು ತೆಗೆದು ಯೋಗ್ಯರಾದಂಥ ಅಧಿಕಾರಿಗಳನ್ನು ಅಲ್ಲಿಗೆ ವರ್ಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಲೇಡಿ ಡಾಕ್ಟರ್‌ಗಳೇ ಇಲ್ಲ. ಈಗ ಖಾಲಿ ಇರುವ ಹುದ್ದೆಗಳನ್ನೆಲ್ಲಾ ಜಾಗ್ರತೆ ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕುಟುಂಬ ಕಲ್ಯಾಣ ಯೋಜನೆಯಲ್ಲಿ ಸಹ ತಮ್ಮ ವರದಿ ಪ್ರಕಾರ ನಮ್ಮ ಜಿಲ್ಲೆ ಇಡೀ ರಾಜ್ಯದಲ್ಲಿ ಕೊನೆಯ ಸ್ಥಾನದಲ್ಲಿದೆ. ಇದಕ್ಕೆ ಕಾರಣಗಳು ಬಹಳಷ್ಟು ಇವೆ. ಇಲ್ಲಿ ಜನರು ಮುಂದೆ ಬರುತ್ತಿಲ್ಲ ಎಂಬ ಪ್ರಶ್ನೆ ಇಲ್ಲ. ಅಲ್ಲಿನ ಒಂದು ಪ್ರಾಕೃತಿಕ ಮತ್ತು ಭೌಗೋಳಿಕ ಸಮಸ್ಯೆ ಒಂದು ಕಡೆ ಆದರೆ, ಮತ್ತೊಂದು ಕಡೆ, ಸರ್ಕಾರದವರು ಇದಕ್ಕೆ ಯೋಗ್ಯವಾದಂಥ ವ್ಯವಸ್ಥೆಯನ್ನು ಕಲ್ಪಿಸಿಲ್ಲ. ಆದ್ದರಿಂದ ಇನ್ನು ಮುಂದೆಯಾದರೂ ಇದಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಇನ್ನು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಕಾರವಾರ ನಗರದಲ್ಲಿ ನೌಕಾ ನೆಲೆ ಸ್ಥಾಪನೆಯಿಂದಾಗಿ, ಅಣುವಿದ್ಯುತ್ ಕೇಂದ್ರದ ಸ್ಥಾಪನೆಯಿಂದಾಗಿ ಮತ್ತು ಬಂದರು ಯೋಜನೆಯಿಂದಾಗಿ ಬಹಳ ಶೀಘ್ರವಾಗಿ ನಮ್ಮ ಕಾರವಾರ ನಗರ ಬೆಳೆಯುತ್ತಿದೆ. ಈ ನಗರದ ಜನರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದಂಥ ನಗರಸಭೆ ಆರ್ಥಿಕವಾಗಿ ಬಹಳಷ್ಟು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದೆ ಎಂದು ನಾನು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಬೆಳೆಯುತ್ತಿರುವ

ಅಲ್ಲಿನ ನಗರದ ಜನತೆಗೆ ಪ್ರಾಥಮಿಕ ಸೌಕರ್ಯಗಳನ್ನೂ ಸಹ ಒದಗಿಸಿಕೊಡುವಂತಹ ಶಕ್ತಿ ಅಲ್ಲಿನ ನಗರದ ಸಭೆಗೆ ಇಲ್ಲ. ಈ ಕಾರಣದಿಂದ ಆ ನಗರಸಭೆಗೆ ವಿಶೇಷವಾದಂಥ ಸಹಾಯಧನವನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ಅತ್ಯಂತ ಆಗ್ರಹಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಾಗರೀಕ ಸೌಲಭ್ಯಗಳಾದಂಥ ರಸ್ತೆ, ದೀಪ, ಚರಂಡಿ ಮುಂತಾದ ವ್ಯವಸ್ಥೆಗಳನ್ನು ಕಲ್ಪಿಸಿಕೊಡಲು ಸರ್ಕಾರದವರು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ನಗರಸಭೆಯ ಸರಹದ್ದನ್ನು ವಿಸ್ತರಣೆ ಮಾಡುವಂತಹ ಬೇಡಿಕೆ ಈಗ ಸರ್ಕಾರದ ಮುಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಮಾಡಿದ್ದೇವೆ.

ಶ್ರೀ ಪ್ರಭಾಕರ್ ರಾಣೆ.—ಅಲ್ಲಿನ ನಗರಸಭೆ ಲಾಭವಾಗದಂಥ ಪ್ರದೇಶವನ್ನು ಸೇರಿಸಿ ಅಲ್ಲಿನ ಸರಹದ್ದನ್ನು ವಿಸ್ತರಣೆ ಮಾಡಿದ್ದಾರೆ. ಅದಕ್ಕೆ ಬದಲು ಕಾಸ್ಟಿಕ್ ಸೋಡಾ ಕಾರ್ಖಾನೆ ಇರುವಂತಹ ಬಿಣಗಾ ಪ್ರದೇಶವನ್ನು ಅಲ್ಲಿನ ನಗರಸಭೆ ವ್ಯಾಪ್ತಿಗೆ ಸೇರಿಸಿದ್ದರೆ ನಗರಸಭೆಯ ಉತ್ಪನ್ನ ಜಾಸ್ತಿಯಾಗುತ್ತಿತ್ತು. ಈ ಬಗ್ಗೆ ಅಲ್ಲಿನ ನಗರಸಭೆಯು ಒಂದು ನಿರ್ಣಯವನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ, ಆದರೆ ಆ ಭಾಗವನ್ನು ಬಿಟ್ಟು ಬೇರೆ ಭಾಗಗಳನ್ನು ನಗರಸಭೆಗೆ ಸೇರಿಸುತ್ತಿದ್ದಾರೆ. ಇದನ್ನು ನೋಡಿದಾಗ ಈ ಸರ್ಕಾರದವರು ಆ ಕಾರ್ಖಾನೆಯವರ ಹಿಡಿತಕ್ಕೆ ಒಳಗಾಗಿದ್ದಾರೆ ಎಂಬ ಸಂಶಯ ಬಂದಿದೆ. ಆದ್ದರಿಂದ ಅದನ್ನು ದೂರ ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಕಾರವಾರದಲ್ಲಿ ರಾಜ್ಯದ ಯೋಜನೆಗಳು ಮತ್ತು ಕೇಂದ್ರದ ಯೋಜನೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಡಿಸೆಂಬರ್ ೨೫ ರಂದು ಅಲ್ಲಿ ಒಂದು ಸಭೆ ಕರೆದಿದ್ದರು ಆ ಸಂದರ್ಭದಲ್ಲಿ ಅವರು ಮಾತನಾಡುತ್ತಾ, ಕಾರವಾರ ನಗರದ ಅಭಿವೃದ್ಧಿಗಾಗಿ ಒಂದು ಗ್ರೇಟರ್ ಟೌನ್ ಅಥಾರಿಟಿ ಮಾಡುತ್ತೇವೆಂದು ಹೇಳಿದರು, ಆದ್ದರಿಂದ ಸರ್ಕಾರದ ಪರವಾಗಿ ಈ ಸದನದಲ್ಲಿ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಈ ಬಗ್ಗೆ ಕೊಡಬೇಕು. ನಾನು ಕಾರವಾರ ನಗರದ ಅಭಿವೃದ್ಧಿ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕಾರವಾರ ಅಭಿವೃದ್ಧಿ ಇಡೀ ರಾಜ್ಯದ ಅಭಿವೃದ್ಧಿಗೆ ನಾಂದಿಯಾಗಿದೆ ಮತ್ತು ಪೂರಕವಾಗಿದೆ. ಈಗಾಗಲೇ ಅಲ್ಲಿನ ಜನರು ನಾನಾ ಯೋಜನೆಗಳಿಗೆಂದು ತಮ್ಮ ಮನೆ ಮಾರುಗಳನ್ನು ಜಮೀನುಗಳನ್ನು ಬಿಟ್ಟು ಕೊಟ್ಟಿದ್ದಾರೆ. ನಾನಾ ರೀತಿಯಿಂದ ತ್ಯಾಗ ಮಾಡಿದ್ದಾರೆ. ಆದ್ದರಿಂದ ಅದಕ್ಕೆ ಪ್ರತಿಫಲವನ್ನು ದೊರಕಿಸಿಕೊಡುವ ರೀತಿಯಲ್ಲಿ ಸರ್ಕಾರದವರು ಕೆಲಸ ಮಾಡಲು ಹಿಂದೆ ಬೀಳಬಾರದು. ಅಲ್ಲಿನ ಜನರಿಗೆ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿಕೊಡದಿದ್ದರೆ ಅದೊಂದು ದೊಡ್ಡ ಕೊಳಚೆ ಪ್ರದೇಶವಾಗಿ ಮಾರ್ಪಾಡಾಗುತ್ತದೆ, ಆದ್ದರಿಂದ ಕಾರವಾರ ನಗರದ ಅಭಿವೃದ್ಧಿಗೆ ಸರ್ಕಾರದವರು ವಿಶೇಷ ರೀತಿಯಿಂದ ಹಣದ ಸಹಾಯ ಮಾಡಬೇಕು. ಕಾರವಾರದ ಬಳಿ ಜೋಣಿನಾಲಾ ಎಂಬ ಒಂದು ಹಳ್ಳ ಇದೆ. ಇದು ಸೊಪ್ಪು ಬೆಳೆಯುವ ಪ್ರದೇಶವಾಗಿವೆ. ಆದ್ದರಿಂದ ಆ ಭಾಗವನ್ನು ಅಭಿವೃದ್ಧಿ ಪಡಿಸಬೇಕೆಂದು ನಾವು ಅನೇಕ ಸಲ ಕೇಳಿಕೊಂಡಿದ್ದರೂ ಸಹ ಇನ್ನೂ ಅದರ ಕಡೆಗೆ ಗಮನ ಕೊಟ್ಟಿಲ್ಲ. ಹಿಂದೆ ಶ್ರೀ ಚಂದ್ರಶೇಖರ್ ಅವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಆ ಭಾಗಕ್ಕೆ ಭೇಟಿ ಕೊಟ್ಟು ನೋಡಿದ ನಂತರ ಅದಕ್ಕೆ ಏನಾದರು ಒಂದು ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು ಆದರೆ ಯಾವುದೇ ಕ್ರಮವನ್ನು ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಮೊನ್ನೆ ಮಾನ್ಯ ಲಕ್ಷ್ಮೀಸಾಗರ್ ಅವರು ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಆಗ ನಾನು ಇರಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಆ ನಗರದ ಅಭಿವೃದ್ಧಿಗೆ ಅಲ್ಲಿನ ನಗರಸಭೆಯವರೇ ಸಂಪನ್ಮೂಲಗಳನ್ನು ರೂಢಿಸಿ ಕೊಳ್ಳಬೇಕೆಂದು ಹೇಳಿ ಬಂದಿದ್ದಾರೆ. ಕಾರವಾರ ನಗರ ಅಭಿವೃದ್ಧಿ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಅಂತಹ ಒಂದು ನಿಲುವನ್ನು ತಳೆಯುವುದಕ್ಕೆ ಸಾಧ್ಯವಿಲ್ಲ. ಅಲ್ಲಿನ ಅನೇಕ ಯೋಜನೆಗಳಿಗೆ ಅಲ್ಲಿನ ಜನರು ನಾನಾ ರೀತಿಯಿಂದ ತ್ಯಾಗ ಮಾಡಿರುವುದರಿಂದ, ವಿಶೇಷವಾದಂಥ ಸಹಾಯಧನವನ್ನು ಸರ್ಕಾರದವರು ಅಲ್ಲಿನ ನಗರಸಭೆಗೆ ಕಲ್ಪಿಸಿಕೊಡಬೇಕು. ಇದು ಸರ್ಕಾರದ ಆದ್ಯಕರ್ತವ್ಯ. ಈ ರೀತಿ ಮಾಡದಿದ್ದರೆ ಅಲ್ಲಿನ ಜನರು ಬೇರೆ ರೀತಿಯ ಭಾವನೆಯನ್ನು ತಾಳಬೇಕಾಗುತ್ತದೆ. ನಮ್ಮನ್ನು ಶೋಷಣೆ ಮಾಡುವುದಷ್ಟೇ ಈ ಸರ್ಕಾರದ ಕೆಲಸವಾಗಿದೆ. ಯಾವ ಸಹಾಯವನ್ನೂ ಮಾಡುತ್ತಿಲ್ಲ, ನಮ್ಮ ಬಗ್ಗೆ ಮಲತಾಯಿ ಧೋರಣೆಯನ್ನು ಈ ಸರ್ಕಾರ ಅನುಸರಿಸುತ್ತಿದೆ ಎಂಬ ಭಾವನೆ ಈಗಾಗಲೇ ಅಲ್ಲಿನ ಜನರಿಗೆ ಬಂದಿದೆ. ಅದು ಜನರ ಭಾವನೆಯಾಗಿದ. ಹೆಚ್ಚಿನ ಸೌಕರ್ಯ ಇರುವ ಗೋವಾಕ್ಕೆ ಏಕೆ ಹೋಗಬಾರದು ಎಂಬ ಜನಗಳು ಆ ಕಡೆ ಹೋಗುತ್ತಿದ್ದಾರೆ. ಈ ತರಹ ಜನಗಳಲ್ಲಿರುವ ಭಾವನೆಯನ್ನು ಸರ್ಕಾರ ಹೋಗಲಾಡಿಸಬೇಕು. ಕಾರವಾರದ ಸರ್ವಾಂಗೀಣ ಅಭಿವೃದ್ಧಿಗಾಗಿ

ಕಾರವಾರದ ಡೆವಲಪ್‌ಮೆಂಟ್ ಅಥಾರಿಟಿಯನ್ನು ಸ್ಥಾಪಿಸಬೇಕು. ಅದರ ಜೊತೆಗೆ ಕಾರವಾರದ ಅಭಿವೃದ್ಧಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಇದರ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ಹೊರಡಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಜೇವರ್ಗಿ) —ಮಾನ್ಯ ಅಧ್ಯಕ್ಷರೇ, ಆರೋಗ್ಯ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಕಾನೂನು ಇಲಾಖೆಯ ಬೇಡಿಕೆಗಳನ್ನು ಈ ದಿನ ಸದನದ ಮುಂದೆ ಮಂಡಿಸಿದ್ದಾರೆ. ಈ ದಿವಸ ನಗರಾಭಿವೃದ್ಧಿ ಇಲಾಖೆಯ ಮೇಲೆ ಕೆಲವೊಂದು ಮಾತುಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಯ ಬೇಡಿಕೆಯನ್ನು ಮಂಡಿಸಿದಾಗ ಪರ್‌ಫಾರ್ಮೆನ್ಸ್ ಬಜೆಟ್ ಏನು ಇದೆ ಅದನ್ನು ಮಾನ್ಯ ಮಂತ್ರಿಯವರು ನಮಗೆ ಒದಗಿಸಿಕೊಡಬೇಕಾಗಿತ್ತು. ಅದನ್ನು ಅವರು ಒದಗಿಸಿಲ್ಲ. ಯಾವುದಾದರೂ ಇಲಾಖೆ ಮೇಲೆ ಹೇಳಬೇಕಾದರೆ, ಹಿಂದಿನ ವರ್ಷದಲ್ಲಿ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎನ್ನುವುದನ್ನು ಮೊದಲು ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನಾವು ಟೀಕೆ ಟಿಪ್ಪಣಿಗಳನ್ನು, ಸಲಹೆ, ಸೂಚನೆಗಳನ್ನು ಕೊಡಬೇಕಾಗುತ್ತದೆ, ಮಾನ್ಯ ಸಚಿವರು ಅವರ ಇಲಾಖೆಯ ಬಗ್ಗೆ ಪ್ರಾಮಾಣಿಕವಾಗಿ ಹೇಳಿದ್ದಾರೆ, ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲವು ಅಧಿಕಾರಿಗಳು ಚೇಂಜ್ ಆಗಿದ್ದಾರೆ ಆದ್ದರಿಂದ ಕೆಲಸಗಳು ಆಗುವುದು ಸ್ವಲ್ಪ ತಡವಾಗಿದೆಯೆಂದು. ಹೋದ ಸಲ ಈ ಇಲಾಖೆ ಬಗ್ಗೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರು ತೀವ್ರತರ ಗಮನವನ್ನು ಕೊಡಬೇಕು ಎಂದು ಹೇಳಿದ್ದೆ. ಈ ದಿನ ಪರ್‌ಫಾರ್ಮೆನ್ಸ್ ಬಜೆಟ್ ಇಲ್ಲದ ಕಾರಣ ಇಲ್ಲಿಯವರೆಗೆ ಇವರ ಇಲಾಖೆಯಲ್ಲಿ ಎಷ್ಟು ಸಾಧನೆ ಮಾಡಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬರುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಹೇಳಬೇಕಾದರೆ, ೧೯೮೫-೮೬ರಲ್ಲಿ ತಾವು ತಮ್ಮ ಇಲಾಖೆಗೆ ಬಜೆಟ್‌ನಲ್ಲಿ ಕೊಟ್ಟಿದ್ದು ೬೦.೯೦ ಕೋಟಿ ರೂಪಾಯಿಗಳು. ೪ ಕೋಟಿ ಜನಸಂಖ್ಯೆ ಇರುವ ನಮ್ಮ ಕರ್ನಾಟಕ ರಾಜ್ಯಕ್ಕೆ ಇದು ಸಾಲದು. ಅರ್ಬನ್ ಏರಿಯಾಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚು ಜನರು ಈಗ ವಾಸ ಮಾಡುತ್ತಿದ್ದಾರೆ. ಈ ಜನರ ಸಮಸ್ಯೆಗಳನ್ನು ಹೋಗಲಾಡಿಸುವುದಕ್ಕೆ ನೀವು ಕೊಡುವ ಹಣದಿಂದ ಸಾಧ್ಯವಾಗುವುದಿಲ್ಲ. ೧೯೮೬-೮೭ನೇ ಸಾಲಿನಲ್ಲಿ ನಿಮ್ಮ ಇಲಾಖೆಗೆ ಬರುವ ಎಲ್ಲಾ ಸಂಸ್ಥೆಗಳಿಗೂ ಎಷ್ಟೆಷ್ಟು ಹಣವನ್ನು ಒದಗಿಸುತ್ತೀರಿ ? ಅರ್ಬನ್ ವಾಟರ್ ಸಪ್ಲೈ ಸ್ಕೀಮಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ? ಸ್ಲಮ್ ಬೋರ್ಡ್‌ಗೆ ಎಷ್ಟು ಹಣವನ್ನು ಒದಗಿಸಿದ್ದೀರಿ ? ಇದರ ಬಗ್ಗೆ ನೀವು ಸರಿಯಾಗಿ ಹೇಳಬೇಕಾಗಿದೆ. ಇವತ್ತು ತಮ್ಮ ರಿಪೋರ್ಟ್‌ನಲ್ಲಿ ಏನು ಹೇಳಿದ್ದೀರಿ ಎಂದರೆ, ಇವತ್ತು ಎಲ್ಲಾ ಕಾರ್ಪೊರೇಷನ್‌ಗಳು ಸರಿಯಾಗಿ ಹಣವನ್ನು ಸಂಗ್ರಹಿಸಿಲ್ಲ ಎಂದು ೧೯೭೯ರಲ್ಲಿ ಆಕ್ಟ್ರಾಯಿ ವಸೂಲು ಮಾಡುವುದನ್ನು ಸರ್ಕಾರ ರದ್ದುಗೊಳಿಸಿತು. ಆಕ್ಟ್ರಾಯಿ ರದ್ದುಗೊಳಿಸಿದ್ದಕ್ಕಾಗಿ ಸರ್ಕಾರವು ಕಾರ್ಪೊರೇಷನ್‌ಗಳಿಗೆ ಕಾಂಪನ್‌ಸೇಷನ್ ಕೊಡುತ್ತಿದೆ. ೧೯೭೮ರಲ್ಲಿ ಸರ್ಕಾರ ಏನು ಕಾಂಪನ್‌ಸೇಷನ್ ಕೊಡುತ್ತಿತ್ತೋ ಅಷ್ಟೇ ಹಣವನ್ನು ಈಗಲೂ ಕೊಡುತ್ತಿದ್ದೀರಿ. ಇದರಿಂದ ಕಾರ್ಪೊರೇಷನ್‌ಗಳು ಸರಿಯಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಇವತ್ತು ರಾಜ್ಯದ ಬಜೆಟ್ ಒಟ್ಟು ೨ ಸಾವಿರದ ೩೯೦ ಕೋಟಿ ರೂಪಾಯಿಗಳು ಇದೆ. ಇದರಲ್ಲಿ ಅರ್‌ಬನ್ ಏರಿಯಾದ ಜನರು ೧ ಸಾವಿರದ ೧೮೪ ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಕೊಡುತ್ತಿದ್ದಾರೆ. ನಾನು ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ. ಅರ್‌ಬನ್ ಏರಿಯಾದಲ್ಲಿ ಇರತಕ್ಕಂಥ ಜನರಿಂದ ವಸೂಲಿ ಮಾಡತಕ್ಕ ಎಕ್ಸೈಸ್ ಡ್ಯೂಟಿಯಾಗಲೀ, ಮೋಟರ್ ಟ್ಯಾಕ್ಸ್ ಆಗಲೀ, ನಗರ ಆಸ್ತಿ ತೆರಿಗೆಯಾಗಲೀ ಇದರಿಂದ ಬಂದಂಥ ಹಣವನ್ನು ಸರಿಯಾಗಿ ಅರ್‌ಬನ್ ಏರಿಯಾ ಡೆವಲಪ್‌ಮೆಂಟಿಗೆ ಉಪಯೋಗಿಸುತ್ತಿಲ್ಲ. ಎಕ್ಸೈಸ್ ಡ್ಯೂಟಿಯಿಂದ ೨೩೬ ಕೋಟಿ ರೂಪಾಯಿಗಳನ್ನು ತೆರಿಗೆ ವಸೂಲು ಮಾಡುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್‌ನಿಂದ ೬೮೦ ಕೋಟಿ ರೂಪಾಯಿ ತೆರಿಗೆ ಬರುತ್ತದೆ. ವೆಹಿಕಲ್ ಟ್ಯಾಕ್ಸ್‌ನಿಂದ ಈ ವರ್ಷ ೧೦೮ ಕೋಟಿ ರೂಪಾಯಿಗಳನ್ನು ವಸೂಲು ಮಾಡುತ್ತಾರೆ. ಹೋದ ವರ್ಷ ವೆಹಿಕಲ್ ಟ್ಯಾಕ್ಸ್‌ನಿಂದ ೫೫ ಕೋಟಿ ರೂಪಾಯಿಗಳು ಬರುತ್ತಿತ್ತು. ಆದರೆ ಈ ವರ್ಷ ಇವರು ೧೦೮ ಕೋಟಿ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಎಲೆಕ್ಟ್ರಿಸಿಟಿ ಟ್ಯಾಕ್ಸ್‌ನಿಂದ ೬೫ ಕೋಟಿ ರೂಪಾಯಿ ಬರುತ್ತದೆ. ಈ ತರಹ ತೆರಿಗೆಗಳಿಂದ ನಗರ ಪ್ರದೇಶದ ಜನರು ೧,೧೮೪ ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಒಂದು ವರ್ಷಕ್ಕೆ ಕೊಡುತ್ತಿದ್ದಾರೆ. ಈ ಹಣದಿಂದ ಅರ್‌ಬನ್ ಡೆವಲಪ್‌ಮೆಂಟಿಗೆ ಹೋದ ವರ್ಷ ೬೦

ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಸಾರಿ ೬೫ ಕೋಟಿ ರೂಪಾಯಿ ಖರ್ಚು ಮಾಡುತ್ತಿರಬಹುದು, ಅಥವಾ ಇನ್ನೂ ಕಡಿಮೆಯನ್ನೂ ಮಾಡಿರಬಹುದು. ಪಟ್ಟಣ ಪ್ರದೇಶಗಳಲ್ಲಿರುವ ಜನರ ಸಮಸ್ಯೆ ಏನು ಇದೆ. ಅವರುಗಳ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಏನೂ ಮಾಡಿಲ್ಲ. ಅದರ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕಾಗುತ್ತದೆ. ೧೯೮೭-೮೮ರ ಬೇಡಿಕೆಗೆ ನಾವು ಒಪ್ಪಿಗೆ ಕೊಡಬೇಕಾದರೆ, ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗುತ್ತದೆ ಎಂಬುದನ್ನು ನಮಗೆ ತಿಳಿಸಬೇಕು. ಡೆವಲಪ್‌ಮೆಂಟ್ ಪ್ಲಾನ್‌ಗಳಿಗೆ ೬.೧೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ತಾವು ೨ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇದರಿಂದ ಏನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ ? 'ಗುಲಾಟಿ ಕಮಿಷನ್' ಇವರು ರೆಕಮೆಂಡ್ ಮಾಡಿದ ರೀತಿಯಲ್ಲಿ ನಾವು ಟ್ಯಾಕ್ಸ್ ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಆದರೆ ಅದರ ಬಗ್ಗೆ ವಿಷಯವೇ ಇಲ್ಲ. ೧೯೮೩ ರಿಂದ ೧೯೮೭ರವರೆಗೆ ನೀವು ಏನು ಸಾಧನೆ ಮಾಡಿದ್ದೀರಿ ? ನೀವು ಬೆಂಗಳೂರು ನಗರದಿಂದ ಆರಿಸಿ ಬಂದಿದ್ದೀರಿ, ನಿಮಗೆ ನಗರದ ಜನರ ಸಮಸ್ಯೆಗಳು ಗೊತ್ತಿರುತ್ತವೆಂದು. ಜನರ ಹಿತವನ್ನು ಕಾಪಾಡಿಕೊಂಡು ಹೋಗುವ ಬಗ್ಗೆ ತಾವು ಕೆಲಸ ಮಾಡುತ್ತೀರೆಂದು ತಿಳಿದು ಮಾನ್ಯ ಮುಖ್ಯ ಮಂತ್ರಿಯವರು ನಿಮಗೇ ನಗರಾಭಿವೃದ್ಧಿ ಇಲಾಖೆಯನ್ನು ಕೊಟ್ಟಿದ್ದಾರೆ. ಹಿಂದೆ ಬೆಂಗಳೂರು ನಗರದವರೇ ಆಗಿದ್ದ ಚಂದ್ರಶೇಖರ್‌ರವರು ನಗರಾಭಿವೃದ್ಧಿ ಮಂತ್ರಿಯಾಗಿದ್ದರು. ಈ ೩ ವರ್ಷಗಳ ಅವಧಿಯಲ್ಲಿ ಏನು ಕೆಲಸ ಕಾರ್ಯಗಳನ್ನು ಮಾಡಿದ್ದೀರಿ, ಜನರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಏನು ಪ್ರಯತ್ನವನ್ನು ನೀವು ಮಾಡಿಲ್ಲವೆಂದು ನಾನು ಆಪಾದನೆಯನ್ನು ಸರ್ಕಾರಕ್ಕೆ ಮಾಡಬೇಕಾಗಿದೆ. ನೀವು ಮಾಡಿರುವ ಚಿಂತನ ಚಿಲುಮೆಯವರು ಬರೆದಿರುವ ಪುಸ್ತಕವನ್ನು ನಾನು ಓದಿದ್ದೇನೆ, ಅದರಲ್ಲೂ ಸಹ ನೀವು ಕಾರ್ಪೊರೇಷನ್‌ಗೆ ಕೊಡುತ್ತಿರುವ ಕಾಂಪನ್‌ಸೇಷನ್‌ನ್ನು ಹೆಚ್ಚು ಮಾಡಬೇಕೆಂದು ತಿಳಿಸಲಾಗಿದೆ. ಅರ್‌ಬನ್ ಏರಿಯಾ ಡೆವಲಪ್‌ಮೆಂಟ್ ಏಜೆನ್ಸಿಯನ್ನು ಕಾನ್ಸ್ಟಿಟ್ಯೂಟ್ ಮಾಡಬೇಕೆಂದು ಸಹಾ ಅವರು ಹೇಳಿದ್ದಾರೆ, ಆದರೆ ನೀವು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಬರಬೇಕಾದ ತೆರಿಗೆಗಳನ್ನು ವಸೂಲಿ ಮಾಡುತ್ತಿಲ್ಲ. ಅರ್‌ಬನ್ ಏರಿಯಾದಲ್ಲಿ ವಾಟರ್ ಪ್ರಾಬ್ಲಮ್ ಏನು ಇದೆ ಅದನ್ನು ಸಾಲ್ವ್ ಮಾಡಿಲ್ಲ.

ಇವತ್ತು ಸರ್ಕಾರ ಕರ್ನಾಟಕ ಟ್ಯಾಕ್ಸೇಶನ್ ರಿವ್ಯೂ ಕಮಿಟಿ ಎಂದು ಮಾಡಿದೆ. ಇದಕ್ಕೂ ಮೊದಲು ಸೆಂಟ್ರಲ್ ಇವಾಲ್ಯುಯೇಷನ್ ಕಮಿಟಿ ಮಾಡಬೇಕು ಎಂದು ಪ್ರೊಪೋಸಲ್ ಇತ್ತು. ಇದರ ಬಗ್ಗೆ ಏನು ಮಾಡಿದ್ದೀರೆಂದು ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ಹೋದಸಲ ನಾನು ಮಾತನಾಡುವಾಗ, ೧೯೮೫-೮೬ರಲ್ಲಿ ೬೦.೮೧ ಕೋಟಿ ರೂಪಾಯಿಗಳನ್ನು ತಾವು ಒದಗಿಸಿದ್ದೀರೆಂದು ಹೇಳಿದ್ದೆ. ಆದರಲ್ಲಿ ನೀವು ಖರ್ಚು ಮಾಡಿದ್ದು ೪೯.೧೯ ಕೋಟಿ ರೂಪಾಯಿಗಳು. ೧೧ ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಆದರ ಪ್ರಕಾರ ೧೯೮೬-೮೭ರಲ್ಲಿ ತಾವು ೭೮.೭೨ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ. ಖರ್ಚು ಮಾಡಿರುವುದು ೫೭.೯೧ ಕೋಟಿ ರೂಪಾಯಿಗಳು ಮಾತ್ರ. ಅಂದರೆ, ೨೦.೮೧ ಕೋಟಿ ರೂಪಾಯಿ ಲ್ಯಾಪ್ಸ್ ಆಗಿದೆ. ಈಗ ೧೯೮೭-೮೮ರಲ್ಲಿ ತಾವು ಎಷ್ಟು ಹಣವನ್ನು ಒದಗಿಸಿದ್ದೀರೆಂದು ಹೇಳಬೇಕು. ಹಾಗೂ ನಾನು ಕಳೆದಸಲ ಹೇಳಿದಹಾಗೆ ಹಣ ಲ್ಯಾಪ್ಸ್ ಆಗಲು ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನೂ ತಾವು ತಿಳಿಸಬೇಕು. ಇವತ್ತಿನ ದಿವಸ ನಿಮ್ಮ ಪರ್ಫಾರ್ಮೆನ್ಸ್ ಬಜೆಟ್‌ನ ಪುಟ ೩೧ರಲ್ಲಿ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ನೀವು ಒಟ್ಟು ೪೩೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಕೊಳಚೆ ಪ್ರದೇಶದ ಸಮಸ್ಯೆ ಒಂದು ಬೃಹದಾಕಾರವಾದ ಸಮಸ್ಯೆ. ಇಲ್ಲಿಗೆ ೪೩೫ ಲಕ್ಷ ರೂಪಾಯಿಗಳನ್ನು ನೀವು ಕೊಳಚೆ ಪ್ರದೇಶಗಳ ನಿವೇಶನಗಳ ಮೇಲೆ ಒದಗಿಸಿದ್ದೀರಿ. ಆದರೆ ನೀವು ಖರ್ಚು ಮಾಡಿದ್ದು ಕೇವಲ ೨೭ ಲಕ್ಷ ರೂಪಾಯಿಗಳು ಮಾತ್ರ, ಅಂದರೆ ಅಲ್ಲೂ ಕೂಡ ೪೦೮ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿವೆ. ನಿಮ್ಮ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಏನು ಮಾಡುತ್ತಿದೆ ? ನೀವು ಮೊದಲೇ ಅತಿ ಕಡಿಮೆ ಹಣವನ್ನು ಒದಗಿಸಿರುವುದಲ್ಲದೆ, ಒದಗಿಸಿದ ಹಣವನ್ನೂ ಕೂಡ ಸರಿಯಾಗಿ ಖರ್ಚು ಮಾಡುವುದಿಲ್ಲವೆಂದು ನಾನು ಆರೋಪ ಮಾಡಬೇಕಾಗಿದೆ. ಎಲ್ಲಿ ದುರ್ಬಲ ವರ್ಗದವರು ಮತ್ತು ಕಡು ಬಡವರು ಸರ್ಕಾರದಿಂದ ಒಳ್ಳೆಯ ಕೆಲಸವನ್ನು ನಿರೀಕ್ಷೆ ಮಾಡುತ್ತಿದ್ದಾರೋ, ಅಂತಹ ಕಡೆಗಳಲ್ಲಿ ನೀವು ಫೇಲ್ ಆಗಿದ್ದೀರಿ. ಮತ್ತೆ ನಾನು ಸ್ಕೇರ್ಸಿಟಿ ರಿಲೀಫ್ ವಾಟರ್ ಸಪ್ಲೈ ಬಗ್ಗೆ ಹೇಳಬೇಕಾದರೆ ನೀವು ಪಟ್ಟಣ ಪ್ರದೇಶಗಳಲ್ಲಿ ೨೮೦ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದ್ದು, ಅದರಲ್ಲಿ ೨೧೫ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು

ಮಾಡಿದ್ದೀರಿ ೨೫ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿವೆ. ನಿಗದಿ ಮಾಡಿದ ಹಣವನ್ನು ಖರ್ಚು ಮಾಡಲೂ ಕೂಡ ನಿಮಗೆ ಆಗುತ್ತಿಲ್ಲ. ನಿಮ್ಮ ಸಿಬ್ಬಂದಿವರ್ಗ ಏನು ಮಾಡುತ್ತಿದೆ ? ತಾವು ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುದರ ಬಗ್ಗೆ ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಎರಡನೆಯದಾಗಿ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಹೇಳಬೇಕಾದರೆ, ೧೯೮೨-೮೩ ರಲ್ಲಿ ಖರ್ಚು ಮಾಡಿದ್ದು ೧೦.೬೬ ಕೋಟಿ, ೧೯೮೩-೮೪ರಲ್ಲಿ ಖರ್ಚು ಮಾಡಿದ್ದು ೬.೭೦ ಕೋಟಿ ೧೯೮೪-೮೫ರಲ್ಲಿ ೭.೬೦ ಕೋಟಿ, ೧೯೮೪-೮೫ ೧.೨೭ ಕೋಟಿ ಲ್ಯಾಪ್ಸ್ ಮಾಡಿದ್ದೀರಿ. ಹಾಗೆ ೧೯೮೫-೮೬ಕ್ಕೆ ೪.೭೭ ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಖರ್ಚು ಮಾಡಿದ್ದು ೪.೩೦ ಕೋಟಿ ರೂಪಾಯಿಗಳು ಮಾತ್ರ. ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ, ತಮಗೆ ತಿಳಿದಿರುವ ಹಾಗೆ, ಇಂದು ಪಟ್ಟಣ ಪ್ರದೇಶಗಳಲ್ಲಿ ಜನಸಂಖ್ಯೆಯು ಬೃಹದಾಕಾರವಾಗಿ ಬೆಳೆಯುತ್ತಿದೆ. ಮುಂದಿನ ೨ ಸಾವಿರ ಇಸವಿಯೊಳಗೆ ಪ್ರಪಂಚದ ಅರ್ಧ ಭಾಗದಷ್ಟು ಜನಸಂಖ್ಯೆಯು ಪಟ್ಟಣ ಪ್ರದೇಶಗಳಲ್ಲಿರುತ್ತವೆ ಎಂದು ಒಂದು ವರದಿಯು ತಿಳಿಸುತ್ತದೆ. ಇದನ್ನು ತಾವೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂತಹ ಬೃಹದಾಕಾರವಾದ ಜನಸಂಖ್ಯೆಗೆ ನೀರನ್ನು ಒದಗಿಸುವುದರ ಬಗ್ಗೆ ತಾವು ಯಾವುದೇ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ, ಮುಂದೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಈ ಬಗ್ಗೆ ಸರ್ಕಾರದವರು ಗಂಭೀರವಾಗಿ ಚಿಂತೆ ಮಾಡಬೇಕಾಗುತ್ತದೆ. ಅವೂ ಅಲ್ಲದೆ, ಬರಗಾಲ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಬೋರ್‌ವೆಲ್‌ಗಳನ್ನು ಹಾಕಿ ಕುಡಿಯುವ ನೀರನ್ನೊದಗಿಸುವ ಕಾರ್ಯವನ್ನು ಸರ್ಕಾರವು ಮಾಡಬೇಕಾಗುತ್ತದೆ. ತಾವು ಬರಗಾಲ ಪ್ರದೇಶಗಳಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಿ ಕುಡಿಯುವ ನೀರನ್ನು ಒದಗಿಸಿದ್ದೇವೆಂದು ಏನು ಹೇಳುತ್ತಿದ್ದೀರಿ, ಅದು ಸತ್ಯಕ್ಕೆ ದೂರವಾದ ಮಾತಾಗಿದೆ, ಇವತ್ತು ಅರ್ಬನ್‌ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಪೈಪ್ಡ್ ವಾಟರ್ ಸ್ಕೀಂ ಇದೆ. ಬೇರೆ ಬೇರೆ ಹಂತಗಳಲ್ಲಿ ವಾಟರ್ ಸಪ್ಲೈ ಬೋರ್ಡ್ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಎಲ್ಲಿಯವರೆಗೆ ಕರ್ನಾಟಕ ಸರ್ಕಾರ ಹೆಚ್ಚು ಹಣವನ್ನು ಒದಗಿಸುವುದಿಲ್ಲವೋ, ಅಲ್ಲಿಯವರೆಗೆ ಎಲ್‌ಐಸಿ ಕೂಡ ಹಣವನ್ನು ಒದಗಿಸುವುದಿಲ್ಲ. ತಮಗೆ ತಿಳಿದಿರುವಂತೆ, ಇದು ಇಂಟರ್‌ನ್ಯಾಷನಲ್ ವಾಟರ್ ಡಿಕೇಡ್ ಆಗಿದೆ. ೧೯೮೧-೯೧ ರವರೆಗೆ ೧೦ ವರ್ಷಗಳ ಅವಧಿಯಲ್ಲಿ ಪಟ್ಟಣ ಪ್ರದೇಶಗಳಿಗೆ ನೀರಿನ ವ್ಯವಸ್ಥೆ ಮಾಡಬೇಕೆಂದು ಇದರ ಉದ್ದೇಶ. ಈ ಬಗ್ಗೆ ಈಗಾಗಲೇ ಒಂದು ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ. ಅದಕ್ಕನುಗುಣವಾಗಿ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ೯೨.೨೨ ಕೋಟಿಯ ಯೋಜನೆ ತಯಾರಾಗಿದ್ದು, ೨೪೨ ಪಟ್ಟಣ ಮತ್ತು ನಗರಗಳು ಕವರ್ ಆಗಿವೆ. ಈ ಇಂಟರ್‌ನ್ಯಾಷನಲ್ ವಾಟರ್ ಡಿಕೇಡ್ ಏನು ಪ್ರಾರಂಭ ಮಾಡಿದ್ದೀರಿ ಇದಕ್ಕಾಗಿ ಬೇರೆ ಬೇರೆ ಏಜೆನ್ಸಿಗಳಿಂದ ಮತ್ತು ಕೇಂದ್ರ ಸರ್ಕಾರದಿಂದ ಹಣ ದೊರೆಯುತ್ತಿದೆ. ಈಗಾಗಲೇ ೧೯೮೬ಕ್ಕೆ ಕಾಲಿಟ್ಟಿದ್ದೇವೆ. ಈ ಆರು ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದರ ಬಗ್ಗೆ ತಾವು ತಮ್ಮ ರಿಪೋರ್ಟ್‌ನಲ್ಲಿ ಹೇಳಿಲ್ಲ. ಕೇವಲ ಇಂಟರ್‌ನ್ಯಾಷನಲ್ ವಾಟರ್ ಡಿಕೇಡ್ ಪ್ರಾರಂಭವಾಗಿದೆ ಎಂದು ಮಾತ್ರ ತಿಳಿಸಿದ್ದೀರಿ. ನೀವು ಇದರ ಬಗ್ಗೆ ಯಾವ ಹಣವನ್ನೂ ಒದಗಿಸಿಲ್ಲ. ಮತ್ತು ಇದರ ಬಗ್ಗೆ ಯಾವುದೇ ಪ್ರಮುಖವಾದ ಪ್ರಯತ್ನವೂ ನಡೆದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ, ಕರ್ನಾಟಕ ವಾಟರ್ ಸಪ್ಲೈ ಬೋರ್ಡ್ ಅತಿ ಮಹತ್ವದ್ದು. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ೧೯೮೧ರ ಸೆನ್ಸಸ್ ಪ್ರಕಾರ, ಬೆಂಗಳೂರು ನಗರದಲ್ಲಿ ೨೧ ಲಕ್ಷ ಜನಸಂಖ್ಯೆ ಇದೆ. ಮುಂದೆ ೭ನೆಯ ಯೋಜನೆಯ ಪ್ರಕಾರ, ಅಂದಾಜು ೪೫ಕ್ಕೆ ಹೆಚ್ಚಾಗುತ್ತದೆ. ೨ ಸಾವಿರ ಎ.ಡಿ. ಯವರೆಗೆ ೭೦ ಲಕ್ಷ ಆಗಬಹುದು. ಇವತ್ತು ಪ್ರಪಂಚದಲ್ಲಿ ಎಲ್ಲಾ ಕಡೆ ಜನರು ನಗರಕ್ಕೆ ವಲಸೆ ಬರುತ್ತಿದ್ದಾರೆ. ಇವತ್ತಿನ ದಿವಸ, ಕಾವೇರಿ ಥರ್ಡ್ ಸ್ಟೇಜ್‌ಗೆ ಮಾನ್ಯ ಮುಖ್ಯಮಂತ್ರಿಗಳು ಫೌಂಡೇಶನ್ ಹಾಕಿದ್ದಾರೆ. ೭ನೇ ಯೋಜನೆಯಲ್ಲಿ ಈ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಕಾವೇರಿ ೨ನೇ ಹಂತದಲ್ಲಿ ೯೦ ಎಂಜಿಡಿ ನೀರು ಬರುತ್ತಿದೆ. ೩ನೇ ಹಂತದಲ್ಲಿ ೧೫೦ ಎಂಜಿಡಿ ನೀರು ನಿರೀಕ್ಷಿಸಲಾಗಿದೆ. ಆಗ ಪರ್ ಕ್ಯಾಪಿಟಾ — ಪರ್ ಡೇ, ೩೭ ಲಕ್ಷ ಜನರಿಗೆ ೧೫ ಗ್ಯಾಲನ್ ಬೇಕಾಗುತ್ತದೆ. ಕಾವೇರಿ ಸೆಕೆಂಡ್ ಸ್ಟೇಜ್‌ನಲ್ಲಿ ೫೫ ಕೋಟಿ ಖರ್ಚು ಮಾಡಬೇಕಾದರೆ, ೩ನೇ ಹಂತಕ್ಕೆ ೨೪೦ ಕೋಟಿ ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಬೇರೆ ಬೇರೆ ಏಜೆನ್ಸಿಗಳವರು ಹಣ ಕೊಡುತ್ತಿದ್ದಾರೆ. ಇದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣ ಒದಗಿಸಬೇಕಾಗುತ್ತದೆ.

ಆದರೆ ಈ ಬಾಬಿಗೆ ತಾವುಗಳು ಎಷ್ಟು ಹಣವನ್ನು ಒದಗಿಸಿದ್ದೀರಿ? ಈ ಕಾವೇರಿ ಮೂರನೇ ಹಂತಕ್ಕೆ ಅಂದರೆ ಅದನ್ನು ಮುಗಿಸಲಿಕ್ಕೆ ಎಷ್ಟು ಹಣವನ್ನು ಇಡಬೇಕಾಗಿತ್ತೋ ಅಷ್ಟನ್ನು ಸರಕಾರದವರು ಇಡಲಿಲ್ಲ ಎಂದು ಹೇಳುತ್ತೇನೆ. ಕಾವೇರಿ ಎರಡನೇ ಹಂತವು ಪ್ರಾರಂಭ ಆದಾಗ ಮಾನ್ಯ ವೀರಪ್ಪ ಮೊಯಿಲಿಯವರು ಅರ್ಥ ಸಚಿವರು ಆಗಿದ್ದರು, ನಾನು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯಾಗಿದ್ದೆ ಸುಮಾರು ೫೫ ಕೋಟಿ ರೂಪಾಯಿಗಳನ್ನು ಎರಡನೇ ಹಂತಕ್ಕಾಗಿ ಖರ್ಚು ಮಾಡಲಾಗಿದೆ. ೧೯೮೦-೮೧ರಲ್ಲಿ ೯.೫೦ ಕೋಟಿ ರೂಪಾಯಿಗಳು, ೧೯೮೧-೮೨ರಲ್ಲಿ ೨೨.೯೮ ಕೋಟಿ ರೂಪಾಯಿಗಳು, ೧೯೮೨-೮೩ರಲ್ಲಿ ೨.೪೦ ಕೋಟಿ ರೂಪಾಯಿಗಳು, ಹೀಗೆ ಖರ್ಚು ಮಾಡಲಾಗಿದೆ. ಅಂದರೆ ಎರಡನೇ ಹಂತಕ್ಕೆ ೫೫ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ ಹಾಗೆ ಆಗಿದೆ. ಅಭಿವೃದ್ಧಿ ಹೊಂದುತ್ತಿರುವ ನಮ್ಮ ಬೆಂಗಳೂರು ನಗರದ ನೀರು ಸರಬರಾಜು ಯೋಜನೆ ಬಗ್ಗೆ ಅದರ ಗಂಭೀರತೆಯನ್ನು ಅರಿತುಕೊಂಡು, ರಾಜಧಾನಿಗೆ ನೀರು ಪೂರೈಕೆ ಮಾಡುವಲ್ಲಿ ಹೆಚ್ಚಿನ ಒಂದು ಗಮನ ಕೊಡಬೇಕೆಂದು ಮಾಡಿದ್ದಾರೆ.

ಕಾವೇರಿ ಮೂರನೇ ಹಂತವನ್ನು ಮುಗಿಸಬೇಕಾಗಿದೆ. ಆಗ ಆರನೇ ಪ್ಲಾನ್‌ನಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿ ಇದಕ್ಕೆ ಕ್ಲಿಯರೆನ್ಸ್ ಕೂಡಾ ಸಿಕ್ಕಿದೆ. ಅದನ್ನು ತಾವು ಪ್ರಾರಂಭ ಮಾಡಿದ್ದೀರಿ. ಅಂದರೆ ಎರಡನೇ ಹಂತವನ್ನು ಮುಗಿಸಲಿಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಹಾಗೆಯೇ ನಾವು ಈಗ ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಮೂರನೇ ಹಂತದ ಬಗ್ಗೆ ಗಮನ ಕೊಡಬೇಕು. ಹಾಗೆಯೇ ಈ ಬಗ್ಗೆ ಬೇರೆ ಸ್ಕೀಮ್‌ಗಳನ್ನು ಕೂಡಾ ತೆಗೆದುಕೊಳ್ಳಬೇಕಾಗುತ್ತದೆ, ಒಟ್ಟಿನಲ್ಲಿ ಮುಂದಿನ ದಿನಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನೀರು ಸರಬರಾಜಿನ ಬಗ್ಗೆ ಹೆಚ್ಚಿನ ಗಮನಕೊಡಬೇಕು, ಈಗಾಗಲೇ ಬೆಂಗಳೂರು ನಗರದ ಎಲ್ಲಾ ಕಡೆಗಳಲ್ಲಿಯೂ ನೀರು ಸಿಗುತ್ತಾ ಇಲ್ಲ. ಇದನ್ನು ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ನಿನ್ನೆ ಇಲ್ಲಿ ಪ್ರಸ್ತಾಪ ಮಾಡಿದ್ದರು. ಇಲ್ಲಿ ೧೧೦ ಕಿ ಎಮ್ ಪೈಪ್‌ಲೈನ್‌ಗಳು ಇವೆ, ಇವುಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೀರಿ ? ಈಗಾಗಲೇ ಇರುವ ಪೈಪ್‌ಗಳು ಎಲ್ಲಾ ಕಡೆಗಳಲ್ಲಿಯೂ ಚೆನ್ನಾಗಿ ಇಲ್ಲ. ನೀರು ಸರಿಯಾಗಿ ಬರುತ್ತಿಲ್ಲ ಎಂದು ತಕರಾರು ಇದೆ. ಇದನ್ನು ನಾನು ವಿವರವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಬೆಂಗಳೂರು ನಗರ ನೀರು ಸರಬರಾಜಿಗೆ ಸರಕಾರದವರು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ.

ಈಗ ಗ್ರೀನ್ ಬೆಲ್ಟ್ ಏರಿಯಾ ಎಂದು ಮಾಡಿದ್ದಾರೆ ಮತ್ತು ಬೆಂಗಳೂರು ಮೆಟ್ರೋಪಾಲಿಟನ್ ಅಥಾರಿಟಿ ಎಂದು ಮಾಡಿದ್ದಾರೆ. ಇಡೀ ದೇಶದಲ್ಲಿ ಕಲ್ಕತ್ತ ಮುಂಬಾಯಿ, ಮದ್ರಾಸ್ ಬಿಟ್ಟರೆ ನಮ್ಮ ರಾಜ್ಯದಲ್ಲಿ ಈ ತೆರನಾದುದು ಇರುವುದೆಂದು ಕಾಣುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿದ್ದಾರೆ ಇದನ್ನು ನಮ್ಮ ಕಾಲದಲ್ಲಿ ಸ್ಥಾಪಿಸಬೇಕೆಂದು ಮಾಡಿದ್ದವು. ಇವೊತ್ತು ಪ್ರಪಂಚದಲ್ಲಿಯೇ ಬೆಂಗಳೂರು ಆರನೆಯ ಅತಿ ಹೆಚ್ಚು ಬೆಳೆಯುತ್ತಿರುವ ಮಹಾನಗರಗಳಲ್ಲಿ ಒಂದಾಗಿದೆ. ಈಗಲೇ ನಗರದ ಕೆಲವುಕಡೆಗಳಲ್ಲಿ ನೀರಿನ ಬವಣೆ ಹೆಚ್ಚುತ್ತಿದೆ, ಕೆಲವುಕಡೆಗಳಲ್ಲಿ ನೀರು ಸರಬರಾಜು ಇಲ್ಲದ ಪರಿಸ್ಥಿತಿ ಬಂದಿದೆ. ಸುಮಾರು ೧,೫೦೦ ಫೀಟ್ ನೀರನ್ನು ನಾವು ಲಿಫ್ಟ್ ಮಾಡಬೇಕಾಗುತ್ತದೆ. ಬೊಂಬಾಯಿಯಲ್ಲಿ ಎಷ್ಟು ಜನಸಂಖ್ಯೆ ಇದ್ದರೂ ಕೂಡಾ ಅಲ್ಲಿ ಗ್ರೆವಿಟಿ ಇರುವುದರಿಂದ ಅವರಿಗೆ ನೀರು ಬರುತ್ತದೆ. ಬೆಂಗಳೂರು ನಗರದ ಜನಸಂಖ್ಯೆ ಬೆಳೆಯುತ್ತಾ ಇದೆ. ಅದನ್ನು ನಾವು ಸಮತೋಗಿಸ ಬೇಕಾಗುತ್ತದೆ. ಅದನ್ನು ಸಮತೂಗಿಸ ಬೇಕಾದರೆ ಬೆಂಗಳೂರು ಮೆಟ್ರೋಪಾಲಿಟನ್ ಆಥಾರಿಟಿಯವರ ಜೊತೆಗೆ ಸ್ಲಮ್ ಬೋರ್ಡ್ ಆಗಲಿ, ಹೌಸಿಂಗ್ ಬೋರ್ಡ್ ಆಗಲಿ, ವಾಟರ್ ಸಪ್ಲೈ ಬೋರ್ಡ್ ಆಗಲಿ, ಕೆ.ಇ.ಬಿ.ಆಗಲಿ, ಇವೆಲ್ಲವೂ ಕೂಡಿ ಒಂದಾಗಿ ಕೆಲಸ ಕೊಡಬೇಕಾಗುತ್ತದೆ. ಈ ಮೆಟ್ರೋಪಾಲಿಟನ್ ಅಥಾರಿಟಿಗೆ ಸರಿಯಾದ ಒಂದು ಅಧಿಕಾರವನ್ನು ಕೊಡಬೇಕು.

ಮಾನ್ಯ ನಗರಾಭಿವೃದ್ಧಿ ಸಚಿವರು ಬೆಳೆಯುತ್ತಿರುವ ಬೆಂಗಳೂರು ನಗರದ ಬಗ್ಗೆ ಹೆಚ್ಚಿನ ಒಂದು ನಿಗಾ ವಹಿಸಿ ಕಾರ್ಯಪ್ರವೃತ್ತರಾಗಬೇಕು ಈ ಮಹಾನಗರಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸುವಲ್ಲಿ ಯೋಜನೆಯನ್ನು ಕ್ರಮವಾಗಿ ಹಾಕಿಕೊಳ್ಳಬೇಕು. ಇಲ್ಲದಿದ್ದರೆ, ಬೆಳೆಯುತ್ತಿರುವ ಈ ನಗರವನ್ನು ಹತೋಟಿಯಲ್ಲಿ ಕ್ರಮಬದ್ಧವಾಗಿ ಇಟ್ಟುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪೌರಸೌಲಭ್ಯಗಳು, ಕುಡಿಯುವ ನೀರು ಇವುಗಳನ್ನು ಒದಗಿಸುವುದು ಒಂದು ದೊಡ್ಡ ಸಮಸ್ಯೆಯಾಗಿ ಉಳಿದೀತು ಈ ಸುಂದರವಾದ ನಗರವನ್ನು ಹೆಚ್ಚು ಕಾಳಜಿಪೂರ್ವಕವಾಗಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಇದಕ್ಕೆ ತಾವುಗಳು ಎಲ್ಲಾ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಅವರ ಸಲಹೆ ಸೂಚನೆಗಳನ್ನು ಪಡೆಯುವಂತಹ ಒಂದು ವ್ಯವಸ್ಥೆ ಇರಬೇಕು. ಪದೇ ಪದೇ ಮಾನ್ಯ

ಲಕ್ಷ್ಮೀಸಾಗರ್‌ರವರು ಹೇಳುತ್ತಾ ಇರುತ್ತಾರೆ, ತಾವೇ ನಿರ್ಧಾರಕ್ಕೆ ಬರುತ್ತಾರೆ. ಹಾಗೆ ಮಾಡಬಾರದು, ಆಫೀಸರ್‌ಗಳ ಮತ್ತು ಶಾಸಕರುಗಳ ಸಲಹೆಯನ್ನು ಪಡೆದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ತಾವುಗಳು ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನರ ಹಿತಾಸಕ್ತಿಯನ್ನು ಕಾಪಾಡುವವರಾಗಿದ್ದೀರಿ ತಾವುಗಳು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡಿದ್ದೀರಿ, ಆದರೆ ಅವುಗಳಿಗೆ ಆರ್ಥಿಕ ಭದ್ರತೆಯನ್ನು ಮಾಡದೇ ಹೋದರೆ ಹೇಗೆ ಸಾಧ್ಯ ? ಈ ಬಗ್ಗೆ ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು, ಸಮಯದ ಅಭಾವದ ಕಾರಣ ಆಗುತ್ತಿಲ್ಲ. ಇನ್ನು ನಮ್ಮ ಮಾನ್ಯ ಸದಸ್ಯರಾದ ಶರಣಪ್ಪನವರು ಹೇಳುತ್ತಾ ಇದ್ದಾರೆ, ಗುಲ್ಬರ್ಗದಲ್ಲಿ ೪.೫೭ ಕೋಟಿ ರೂಪಾಯಿಗಳ ಒಂದು ವಾಟರ್ ಸಪ್ಲೈ ಸ್ಕೀಮ್ ಇದೆ, ೧ ೨೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ನೀವು ಖರ್ಚು ಮಾಡಿದ್ದೀರಿ, ಪೈಪ್ ಲೈನ್ಸ್ ಹಾಕಿದರೆ ಒಂದು ಕೋಟಿ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಗುಲ್ಬರ್ಗ ನಗರದ ಜನಸಂಖ್ಯೆ ಈಗಾಗಲೇ ೪–೫ ಲಕ್ಷಗಳಷ್ಟು ಆಗುತ್ತಾ ಇದೆ. ಇದು ಹೈದ್ರಾಬಾದ್ ಕರ್ನಾಟಕ ಪ್ರದೇಶ. ಇದಕ್ಕೆ ತಾವುಗಳು ಹೆಚ್ಚಿನ ಗಮನವನ್ನು ಕೊಡಬೇಕು. ಇನ್ನು ಶಹಾಬಾದ್ ಪಟ್ಟಣದ ಬಗ್ಗೆ ಬೇರೆ ಸಮಸ್ಯೆಗಳು ಇವೆ.

ಅಧ್ಯಕ್ಷರು.—ಧರ್ಮಸಿಂಗ್‌ರವರೆ, ದಯವಿಟ್ಟು ಮುಕ್ತಾಯ ಮಾಡಿ.

ಶ್ರೀ ಧರ್ಮಸಿಂಗ್.—ಹಾಗೆಯೇ ಗದಗ ನಗರದ ವಿಷಯದಲ್ಲಿ ಕೇಳಬೇಕಾಗಿದೆ, ಸಮಯದ ಅಭಾವದಿಂದ ಆಗಲಿಲ್ಲ, ಆದ್ದರಿಂದ ತಮ್ಮ ಮೂಲಕ ನಾನು ಕೊಟ್ಟ ಸೂಚನೆಗಳಿಗೆ ಮಾನ್ಯ ಮಂತ್ರಿಗಳವರನ್ನು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೆ, ಗದಗ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅವಕಾಶ ಕೊಡಿ, ಮಾನ್ಯ ಲಕ್ಷ್ಮೀಸಾಗರ್‌ರವರು ಆಗಾಗ್ಯೆ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುತ್ತಾ ಇರುತ್ತಾರೆ. ಗದಗ ನಗರ ಸಭೆಯ ವಿಚಾರವೂ ತಮಗೆ ಗೊತ್ತಿದೆ. ನಾವುಗಳು ನಮ್ಮ ನಗರ ಸಭೆಯನ್ನು ಮಾದರಿ ನಗರಸಭೆ ಎಂದು ಡಿಕ್ಲೇರ್ ಮಾಡಿದ್ದೀರಿ. ನಿಮ್ಮ ಪಕ್ಷದವರು ಅಲ್ಲಿ ಅಧ್ಯಕ್ಷರಿದ್ದಾರೆ ಎಂದು ಮಾಡಿದ್ದೀರೋ ಏನೋ ಗೊತ್ತಿಲ್ಲ, ಸಂತೋಷದ ವಿಚಾರ. ಆದರೆ ಇಂತಹ ಒಂದು ನಗರ ಸಭೆಯು ಮಾದರಿ ನಗರ ಸಭೆ ಆಗುವುದಾದರೆ, ರಾಜ್ಯದ ಉಳಿದ ನಗರ ಸಭೆಗಳ ಪರಿಸ್ಥಿತಿ ಏನು ಮತ್ತು ಹೇಗಿರಬಹುದು ಎಂದು ನಮ್ಮ ಅನುಮಾನ. ದೊಡ್ಡ ದೊಡ್ಡ ಗೋಡೌನ್‌ಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಮೂವತ್ತು ವರ್ಷಗಳ ಕಾಲ ಅವರಿಗೇ ಕೊಡಬೇಕೆಂದು ಹಿಂದೆ ಠರಾವು ಕೂಡಾ ಆಗಿತ್ತು. ಈಗ ಒಂದೊಂದು ವಾರಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಡಿಸಿದ್ದಾರೆ ಕೆಲವರಿಂದ ಎಂಬ ಸುದ್ದಿ ಇದೆ, ಅಂತಹವರಿಗೆ ಕೊಡುತ್ತಾರೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚನೆಯನ್ನು ಕೊಟ್ಟಿದ್ದಾರೆ. ಠರಾವನ್ನು ಅರಿತು ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ಹೈಕೋರ್ಟಿನಲ್ಲಿ ಸಹ ತೀರ್ಮಾನ ಆಗಿತ್ತು, ಕಮಿಶನರ್‌ರವರು ೧೫ ವರ್ಷಕ್ಕೆ ನಿಗದಿ ಮಾಡಿದ್ದಾರೆ ಎಂಬ ವದಂತಿಯೂ ಇದೆ. ಹಾಗಿದ್ದರೆ ಇದು ನೇರವಾಗಿ ಭ್ರಷ್ಟಾಚಾರ ಅಲ್ಲವೆ ? ನಗರ ಸಭೆಯವರೆಗೆ ಬರತಕ್ಕಂತಹ ಹಣವನ್ನು ಈ ರೀತಿಯಾಗಿ ಮಾಡುವುದು ಸರಿಯೆ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು. ಈಗ ಆರೋಗ್ಯ ಇಲಾಖೆ ಬೇಡಿಕೆ ಮೇಲೆ ಆರೋಗ್ಯ ಮಂತ್ರಿಯವರಿಂದ ಉತ್ತರ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಮ್ಮ ಇಲಾಖೆ ಬೇಡಿಕೆ ಬಗ್ಗೆ ಮಾತನಾಡಿ ಸಲಹೆಗಳನ್ನು ಕೊಟ್ಟಿರತಕ್ಕ ಎಲ್ಲಾ ಸದಸ್ಯರಿಗೂ ಕೂಡ ನಾನು ಧನ್ಯವಾದಗಳನ್ನು ಅರ್ಪಿಸಿ ಉತ್ತರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಉತ್ತರವನ್ನು ಹೇಳುವುದಕ್ಕೆ ಮುಂಚೆ ಮುಂದಿನ ವರ್ಷ ನಾವು ಏನು ಮಾಡುತ್ತೇವೆ ಎನ್ನುವುದರ ಬಗ್ಗೆ ಕೆಲವು ಪ್ರಕಟಣೆಗಳನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟ ಮೊದಲನೆಯದಾಗಿ, ಎಲ್ಲ ಕಡೆಯಲ್ಲೂ ಅದರಲ್ಲೂ ಹಳ್ಳಿಯಲ್ಲಿರುವಂಥ ವೈದ್ಯರುಗಳಿಗೆ ವಸತಿ ಕೊರತೆ ಇರತಕ್ಕಂಥಾದ್ದನ್ನು ಪರಿಹಾರ ಮಾಡಬೇಕೆಂದು ಯೋಚನೆ ಮಾಡಿ ೧೯೮೬–೮೭ನೇ ವರ್ಷದಲ್ಲಿ ೩೦೦ ವೈದ್ಯರುಗಳಿಗೆ ವಸತಿಯನ್ನು ೨೦೦ ಜನ ದಾದಿಯರಿಗೆ ಮತ್ತು ೨೦೦ ಜನ ಫಾರ್ಮಸಿಸ್ಟ್‌ಗಳಿಗೆ ವಸತಿಯನ್ನು ಕಲ್ಪಿಸಿಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಇದಕ್ಕಾಗಿ ಸುಮಾರು ೬ ಲಕ್ಷ ರೂಪಾಯಿಗಳ ಮೇಲೆ ಖರ್ಚಾಗುತ್ತದೆ.

ಇದಕ್ಕಾಗಿ ಹುಡ್‌ಕೋ ನೆರವನ್ನು ತೆಗೆದುಕೊಳ್ಳಲಾಗುತ್ತದೆ. ಇನ್ನು ೫-೬ ವರ್ಷಗಳಲ್ಲಿ ಹಳ್ಳಿಗಳಲ್ಲಿರುವ ಎಲ್ಲಾ ವೈದ್ಯರು, ದಾದಿಯರು, ಫಾರ್ಮಸಿಸ್ಟ್‌ಗಳಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡುವ ಬಗ್ಗೆ ತೀರ್ಮಾನ ಮಾಡಿದ್ದೇವೆ. ಇನ್ನೂ ಒಂದು ಪ್ರಕಟಣೆ ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ೧೫ ಸಾವಿರ ಪ್ರಜಾ ಸಂಖ್ಯೆ ಎಲ್ಲಿ ಇರುತ್ತದೆ ಅಂತಹ ಕಡೆಗಳಲ್ಲಿ ಒಂದೊಂದು ಆಸ್ಪತ್ರೆಯನ್ನು ನಾವು ಕೊಡುತ್ತೇವೆ. ಇದರ ಜೊತೆಗೆ ರಾಜ್ಯ ಸರ್ಕಾರವು ೧೯೮೫—೮೬ರಲ್ಲಿ ೬೦ ಆರೋಗ್ಯ ಘಟಕಗಳನ್ನು ಸ್ಥಾಪಿಸಲಾಗಿತ್ತು. ೧೯೮೬—೮೭ರಲ್ಲಿ ೧೧೫ ಆರೋಗ್ಯ ಘಟಕಗಳನ್ನು ತೆರೆಯುವುದಕ್ಕೆ ಉದ್ದೇಶಿಸಿದ್ದೇವೆ ಮಾನ್ಯ ಮುಖ್ಯ ಮಂತ್ರಿಯವರು, ಈ ಆರೋಗ್ಯ ಘಟಕಗಳನ್ನು ತೆರೆಯುವುದಕ್ಕೆ ಬೇಕಾಗುವ ಹಣವನ್ನು ಮಂಜೂರು ಮಾಡಿಕೊಡುವುದಕ್ಕೆ ಈಗಾಗಲೇ ಒಪ್ಪಿದ್ದಾರೆ. ಆದ್ದರಿಂದ ಸದನದ ಪರವಾಗಿ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ರೀತಿಯ ಆರೋಗ್ಯ ಘಟಕಗಳನ್ನು ಸ್ಥಾಪನೆ ಮಾಡಲು ಜಮೀನುಗಳು ಹಾಗೂ ೨೫ ಸಾವಿರದವರೆಗೆ ಹಣವನ್ನು ಕೊಟ್ಟಿರುವ ೪೫ ಜನ ದಾನಿಗಳು ಇದ್ದಾರೆ. ಇನ್ನೂ ಹೆಚ್ಚಿನ ದಾನಿಗಳನ್ನು ಸಂಪರ್ಕಮಾಡಿ ಅವರುಗಳ ಸಹಾಯವನ್ನು ಪಡೆದು ಈ ಆರೋಗ್ಯ ಘಟಕಗಳನ್ನು ಆದಷ್ಟು ಬೇಗ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದೂ ಅಲ್ಲದೆ, ಇನ್ನೂ ೫೦ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೂ ಸಹ ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿಗೆ ಕೊಟ್ಟಿದ್ದಾರೆ. ಅದನ್ನು ಮುಂದಿನ ವರ್ಷ ಮಾಡುತ್ತೇನೆಂದು ಸದನಕ್ಕೆ ಆಶ್ವಾಸನೆಯನ್ನು ಕೊಡುತ್ತೇನೆ. ಈ ವರ್ಷ ೫೦ ಸಬ್‌ಸಿಡರಿ ಹೆಲ್ತ್ ಸೆಂಟರ ಗಳನ್ನು ಆರೋಗ್ಯ ಕೇಂದ್ರಗಳಾಗಿ ಕನ್‌ವರ್ಟ್ ಮಾಡಿದ್ದೇವೆ. ಇದರ ಬಗ್ಗೆ ಹೋದ ತಿಂಗಳು ೨೭ನೇ ತಾರೀಖು ಆಜ್ಞೆಯನ್ನು ಹೊರಡಿಸಿದ್ದೇವೆ. ಯಾವ ಯಾವ ಜಿಲ್ಲೆಗಳಲ್ಲಿ ಇದನ್ನು ಪರಿವರ್ತಿಸಿದ್ದೇವೆ ಎಂದರೆ, ಬೆಂಗಳೂರು ಜಿಲ್ಲೆಯಲ್ಲಿ ೨, ಚಿತ್ರದುರ್ಗ ಜಿಲ್ಲೆಯಲ್ಲಿ ೨, ಕೋಲಾರ ಜಿಲ್ಲೆಯಲ್ಲಿ ೪, ತುಮಕೂರು ಜಿಲ್ಲೆಯಲ್ಲಿ ೧, ಬೆಳಗಾವ್ ಜಿಲ್ಲೆಯಲ್ಲಿ ೨, ಬಿಜಾಪುರ ಜಿಲ್ಲೆಯಲ್ಲಿ ೩, ಧಾರವಾಡ ಜಿಲ್ಲೆಯಲ್ಲಿ ೬, ಉತ್ತರ ಕನ್ನಡ ಜಿಲ್ಲೆಯಲ್ಲಿ ೨, ಬಳ್ಳಾರಿ ಜಿಲ್ಲೆಯಲ್ಲಿ ೨, ಬೀದರ್ ಜಿಲ್ಲೆಯಲ್ಲಿ ೧, ರಾಯಚೂರು ಜಿಲ್ಲೆಯಲ್ಲಿ ೧, ಗುಲ್ಬರ್ಗ ಜಿಲ್ಲೆಯಲ್ಲಿ ೬, ಚಿಕ್ಕಮಗಳೂರು ಜಿಲ್ಲೆಯಲ್ಲಿ ೪, ಹಾಸನ ಜಿಲ್ಲೆಯಲ್ಲಿ ೪, ಮಂಡ್ಯ ಜಿಲ್ಲೆಯಲ್ಲಿ ೨, ಮೈಸೂರು ಜಿಲ್ಲೆಯಲ್ಲಿ ೩, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩, ಇಷ್ಟು ಸಬ್‌ಸೀಡರಿ ಹೆಲ್ತ್ ಸೆಂಟರುಗಳನ್ನು ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸಿದ್ದೇವೆ. ಎಲ್ಲಾ ಜಿಲ್ಲೆಯಲ್ಲೂ ಸರಿಸಮಾನವಾಗಿ ಮಾಡುವುದಕ್ಕಾಗಲಿಲ್ಲ. ಎಲ್ಲೆಲ್ಲಿ ಸಾಧ್ಯವಾಗಿದೆಯೋ ಅಂತಹ ಕಡೆ ಮಾತ್ರ ಮಾರ್ಪಡಿಸಿದ್ದೇವೆ. ಮಾನ್ಯ ಸದಸ್ಯರಾದ ಪ್ರಭಾಕರ ರಾಣೆಯವರು, ನಮ್ಮ ಜಿಲೆಯಲ್ಲಿ ಸಾಕಷ್ಟು ಆರೋಗ್ಯ ಕೇಂದ್ರಗಳು ಇಲ್ಲವೆಂದು ಹೇಳಿದ್ದರು. ಈಗ ಅವರ ಜಿಲ್ಲೆಯಲ್ಲಿ ೨ ಸಬ್‌ಸೀಡರಿ ಹೆಲ್ತ್ ಸೆಂಟರುಗಳನ್ನು ಆರೋಗ್ಯ ಕೇಂದ್ರಗಳಾಗಿ ಮಾಡಿದ್ದೇವೆ. ಅಂದರೆ ಈಗಿರುವುದಕ್ಕಿಂತ ೨ ಕೇಂದ್ರಗಳು ಜಾಸ್ತಿ ಆದಹಾಗೆ ಆಯಿತು. ಇದರ ಜೊತೆಗೆ ಇನ್ನೂ ಒಂದು ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಒಂದು ಆಜ್ಞೆಯನ್ನು ಇದೇ ತಿಂಗಳ ೩ನೇ ತಾರೀಖು ಮಾಡಿದ್ದೇವೆ. ಬೆಳಗಾವ್ ಜಿಲ್ಲೆಯಲ್ಲಿರುವ ಬೈಲಹೊಂಗಲದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಆಜ್ಞೆ ಹೊರಡಿಸಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿದ್ದೇವೆ. ಇದರ ಜೊತೆಗೆ ೧೯೮೫—೮೬ರಲ್ಲಿ ರಾಜ್ಯದಲ್ಲಿ ಹೊಸದಾಗಿ ೬ ಕಡೆ ಮೆಟರ್ನಿಟಿ ಹೋಮ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಂಸಿ ಗ್ರಾಮದಲ್ಲಿರುವ ಆಸ್ಪತ್ರೆಯನ್ನು, ಹೊಸ ಕಟ್ಟಡಕ್ಕೆ ವರ್ಗಾವಣೆ ಮಾಡಿದ್ದೇವೆ. ಮತ್ತು ಕಳೆದ ವರ್ಷ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಂಚಾರಿ ಆರೋಗ್ಯ ಘಟಕವನ್ನು ಮಂಜೂರು ಮಾಡಲು ಅನುಮತಿಯನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಪ್ರತಿಯೊಂದು ಜಿಲ್ಲೆಗೂ ೪ ಕಡೆ ಆಡಳಿತ ಘಟಕಗಳನ್ನು ಪ್ರಾರಂಭ ಮಾಡುತ್ತೇವೆ. ೧೯೮೬—೮೭ರಲ್ಲಿ ಇನ್ನೂ ಹೆಚ್ಚಿನ ಸಂಚಾರಿ ಆರೋಗ್ಯ ಘಟಕಗಳನ್ನು ಮಂಜೂರು ಮಾಡುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೂ ಅಲ್ಲದೆ ಚಿತ್ರದುರ್ಗ ಜಿಲ್ಲೆಗೆ ಒಂದು ಆಪ್ತಾಲ್‌ಮಿಕ್ ಮೊಬೈಲ್ ಯುನಿಟ್‌ನ್ನು ಮಂಜೂರು ಮಾಡಿದ್ದೇವೆ. ಇದೇ ಪ್ರಥಮಬಾರಿಗೆ ನಮ್ಮ ಕರ್ನಾಟಕ ರಾಜ್ಯದ ೪ ಕಡೆ ಅಂದರೆ ಬೆಂಗಳೂರು, ಮೈಸೂರು, ಬಳ್ಳಾರಿ, ಹುಬ್ಬಳ್ಳಿಗಳಲ್ಲಿ ಮೆಡಿಕಲ್ ಕಾಲೇಜ್ ಇರುವ ಆಸ್ಪತ್ರೆಗಳಿಗೆ ಲೈಸರ್ ಫೋಟೋ ಸೆಂಟರ್‌ಗಳನ್ನು ಮಂಜೂರು ಮಾಡಿದ್ದೇವೆ. ಮೊದಲು ಇದರ ಉಪಯೋಗಕ್ಕಾಗಿ ಮದ್ರಾಸ್ ಮತ್ತು ಇತರೆ

ರಾಜ್ಯಗಳಿಗೆ ಹೋಗಬೇಕಾಗಿತ್ತು. ಈ ೯ ಸೆಂಟರುಗಳನ್ನು ಮಂಜೂರು ಮಾಡಿರುವುದರಿಂದ ರಾಜ್ಯದ ಜನತೆಗೆ ಬಹಳ ಅನುಕೂಲವಾಗುತ್ತದೆ. ಈ ಸೆಂಟರ್‌ಗೆ ಬೇಕಾಗುವ ಅಗತ್ಯ ಮೆಷನರಿಗಳನ್ನು ಮುಂದಿನ ವರ್ಷ ಕೊಳ್ಳುವವರಿದ್ದೇವೆ. ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಪ್ರತಿಯೊಂದು ಹಳ್ಳಿಗಳಿಗೂ ಹೋಗಿ ರೋಗ ನಿರೋಧಕ ಚುಚ್ಚುಮದ್ದುಗಳನ್ನು ಕೊಡುವುದಕ್ಕೆ ಸೂಚನೆ ನೀಡಿದ್ದೇವೆ. ಹುಬ್ಬಳ್ಳಿ ಆಸ್ಪತ್ರೆಗೆ ವಾಟರ್ ಸಪ್ಲೈ ಮಾಡುವುದಕ್ಕೆ ಎಂಟೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಬೋರಿಂಗ್ ಲೇಡಿ ಕರ್ಜನ್ ಹಾಸ್ಪಿಟಲ್‌ಗೆ ವಾಟರ್ ಸಪ್ಲೈ ಮಾಡುವುದಕ್ಕೆ ೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಮಂಗಳೂರಿನಲ್ಲಿರತಕ್ಕ ವೆನ್‌ಲ್ಯಾಕ್ ಆಸ್ಪತ್ರೆಯ ೪ನೇ ದರ್ಜೆ ನೌಕರರಿಗೆ ಮತ್ತು ಬೆಳಗಾವ್ ಜಿಲ್ಲೆಯಲ್ಲಿರುವ ಆಸ್ಪತ್ರೆಯ ೪ನೇ ದರ್ಜೆ ನೌಕರರಿಗೆ ಮತ್ತು ನರ್ಸ್‌ಗಳಿಗೆ ವಸತಿಯನ್ನು ಕೊಡುವುದಕ್ಕೆ ಹಣವನ್ನು ಮಂಜೂರು ಮಾಡಿದ್ದೇವೆ. ಮುಂದಿನ ವರ್ಷ ಮಂಗಳೂರಿನಲ್ಲಿರತಕ್ಕ ವೆನ್‌ಲಾಕ್ ಆಸ್ಪತ್ರೆಯಲ್ಲಿ, ಗುಲ್ಬರ್ಗಾದಲ್ಲಿರುವ ಆಸ್ಪತ್ರೆಯಲ್ಲಿ, ಬೆಳಗಾವ್‌ನಲ್ಲಿರುವ ಆಸ್ಪತ್ರೆಯಲ್ಲಿ, ಡಯಾಲಿಸಿಸ್‌ಗೆ ಸಂಬಂಧಪಟ್ಟಂತೆ ಅಂದರೆ ಮೂತ್ರ ರೋಗಕ್ಕೆ ಸಂಬಂಧಪಟ್ಟಂತೆಯೂನಿಟ್‌ಗಳನ್ನು ತೆರೆಯುವುದಕ್ಕೆ ಆಯಾ ಆಸ್ಪತ್ರೆಯ ಮ್ಯಾನೇಜ್‌ಮೆಂಟ್‌ನವರೊಡನೆ ಮಾತುಕತೆ ನಡೆಸಿದ್ದೇವೆ. ಮುಂದಿನ ವರ್ಷ ಈ ಕೆಲಸವನ್ನು ಮಾಡುತ್ತೇವೆ.

ಇದು ಈಗಾಗಲೇ ನಮ್ಮ ವಿಕ್ಟೋರಿಯಾ ಆಸ್ಪತ್ರೆಯಲ್ಲಿದೆ. ಆ ಮೇಲೆ ಮೈಸೂರು, ಹುಬ್ಬಳ್ಳಿ, ಮತ್ತು ಬಳ್ಳಾರಿಯಲ್ಲಿ ಡಯಾಲಿಸಿಸ್ ಯೂನಿಟ್ ತೆರೆಯುವುದಕ್ಕೆ ೧೯೮೫-೮೬ನೇ ಸಾಲಿನಲ್ಲಿ ಹಣ ಇಟ್ಟಿದ್ದೇವೆ. ಅದನ್ನು ಮಾರ್ಚಿಯೊಳಗೆ ಕೊಡುತ್ತಿದ್ದೇವೆ. ಮಂಗಳೂರಿನಲ್ಲಿ ಕೋಬಾಲ್ಟ್ ಯೂನಿಟ್ ಪ್ರಾರಂಭ ಮಾಡಬೇಕೆಂದಿದ್ದೇವೆ. ಇದನ್ನು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಅವರ ಸಹಾಯವನ್ನು ತೆಗೆದುಕೊಂಡು ಮಾಡಬೇಕೆಂದಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದಿಂದ ೧೨ ಲಕ್ಷ ರೂಪಾಯಿಗಳು ಬರುತ್ತದೆ. ಲೋಕಲ್ ಆಗಿ ೩೦ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿ, ಮಾಡಬೇಕೆಂದು ಇದ್ದೇವೆ. ಗುಲ್ಬರ್ಗಾದಲ್ಲಿ ಜಿಲ್ಲಾಧಿಕಾರಿಗಳು ೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮಿಕ್ಕ ಹಣವನ್ನು ಉಪಯೋಗಿಸಿಕೊಂಡು, ಅಲ್ಲಿ ಕೋಬಾಲ್ಟ್ ಯೂನಿಟ್ ಅದಷ್ಟು ಜಾಗ್ರತೆ ಮಾಡುತ್ತೇವೆ. ೧೯೮೫-೮೬ ರಲ್ಲಿ ಮೆಡಿಕಲ್ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ಕೆಲಸ ಮಾಡಬೇಕೆಂಬುದನ್ನು ಈಗಾಗಲೇ ಮಾಡುತ್ತಿದ್ದೇವೆ. ಮಾನ್ಯ ಪಂಪಾಪತಿಯವರು ಹೇಳಿದಹಾಗೆ, ಅವರ ಬೇಡಿಕೆಯು ಬಹಳ ವರ್ಷಗಳಿಂದ ಇತ್ತು. ಅವರ ಇಚ್ಛೆಯಂತೆ ನರ್ಸಿಂಗ್ ಸ್ಕೂಲನ್ನು ದಾವಣಗೆರೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಈಗ ವಿದ್ಯಾರ್ಥಿಗಳ ಸಂದರ್ಶನ ನಡೆಯುತ್ತಿದೆ, ಇದಾದ ತಕ್ಷಣ ಆರಂಭ ಮಾಡುತ್ತೇವೆ. ಇನ್ನು ಪ್ಯಾಡಿಯಾಟ್ರಿಕ್ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಚಾರದಲ್ಲಿ ನಮ್ಮಲ್ಲಿ ಪೋಸ್ಟ್ ಗ್ರಾಜುಯೇಟ್ಸ್ ಇರಲಿಲ್ಲ. ಈಗ ಆ ಪೋಸ್ಟ್ ಮಾಡಿದ್ದು, ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಆರಂಭ ಮಾಡಿದ್ದೇವೆ. ಇದಕ್ಕೆ ಬೇಕಾದ ಎಕ್ವಿಪ್‌ಮೆಂಟ್‌ಗಾಗಿ, ಆಸ್ಪತ್ರೆ ಮತ್ತಿತರ ವೆಚ್ಚಗಳಿಗೆ ೨೦ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಅನಂತರ ಬೌರಿಂಗ್ ಆಸ್ಪತ್ರೆಯಲ್ಲಿ, ಕೆ. ಎಂ. ಸಿ. ಆಸ್ಪತ್ರೆಯಲ್ಲಿ, ಬಳ್ಳಾರಿ, ಮೈಸೂರು, ಹುಬ್ಬಳ್ಳಿ ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಇಂಟೆನ್ಸಿವ್ ಕಾರ್ಡಿಯಾಕ್ ಯೂನಿಟ್ ತೆಗೆದುಕೊಳ್ಳುವುದಕ್ಕೆ ನಾವು ದುಡ್ಡನ್ನು ಇಟ್ಟುಕೊಂಡಿದ್ದೇವೆ. ಇದನ್ನು ಈ ವರ್ಷಮುಗಿಯುವುದರೊಳಗೆ ಮಾಡುತ್ತೇವೆ. ಚೆಲುವಾಂಬ ಆಸ್ಪತ್ರೆ, ಮೈಸೂರು ಮತ್ತು ಎಸ್. ಟಿ. ಸ್ಯಾನಿಟೋರಿಯಂ ಆಸ್ಪತ್ರೆ ಇವೆರಡಕ್ಕೂ ಅಂಬುಲೆನ್ಸ್ ವ್ಯಾನ್ ತೆಗೆದುಕೊಳ್ಳುವುದಕ್ಕೆ ಆಜ್ಞೆ ಮಾಡಿದ್ದೇವೆ. ಹುಬ್ಬಳ್ಳಿಯಲ್ಲಿ ಡೀಪ್ ಎಕ್ಸ್‌ರೇ ಯೂನಿಟ್ ಪ್ರೊವೈಡ್ ಮಾಡಬೇಕೆಂಬುದು ಬಹಳ ವರ್ಷಗಳಿಂದ ಇತ್ತು. ಅದಕ್ಕೆ ಈಗ ೧೦ ಲಕ್ಷ ರೂಪಾಯಿ ಹಣ ಪ್ರೊವೈಡ್ ಮಾಡಿದ್ದೇವೆ. ಆ ಮೇಲೆ ಮೂರು ಇಂಟೆನ್ಸಿವ್ ಯೂನಿಟ್‌ಗಳಾದ ಗುಲ್ಬರ್ಗಾ, ಬೆಳಗಾಂ ಮತ್ತು ಬಳ್ಳಾರಿಯಲ್ಲಿ ಏರ್ ಕಂಡೀಷನ್ ಅನುಕೂಲ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಡೆಂಟಲ್ ಕಾಲೇಜಿಗೆ ಅಗತ್ಯವಾಗಿ ಬೇಕಾದ ಎಕ್ವಿಪ್‌ಮೆಂಟ್‌ಗಾಗಿ ೫ ಲಕ್ಷ ಹಣ ಇಟ್ಟಿದ್ದೇವೆ. ದಾವಣಗೆರೆಯಲ್ಲಿ ಎಕ್ಸ್‌ರೇ ಯೂನಿಟ್‌ಗೆ ೧೫ ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆ. ಆ ಮೇಲೆ ಲೇಸರ್ ಎಕ್ವಿಪ್ ಮೆಂಟ್‌ಗಾಗಿ ಬೆಂಗಳೂರು ಬಳ್ಳಾರಿ ಮತ್ತು ಹುಬ್ಬಳ್ಳಿಯಲ್ಲಿ ಒಂದೊಂದಕ್ಕೂ ೭ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ''ಅಲ್ಟ್ರಾ ಸೋಡಿಯಂ'' ನ್ನು ಗುಲ್ಬರ್ಗಾದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ೧೯೮೬-೮೭ ರಲ್ಲಿ ಏನೇನು ಮಾಡಬೇಕು ಅದನ್ನು ಹೇಳಿದ್ದೇನೆ. ಇನ್ನು ನಮ್ಮಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮದ ಕೆಲಸ ಇಲ್ಲಿಯವರೆಗೂ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಕಳೆದ

ವರ್ಷ ನಮ್ಮ ದುರಾದೃಷ್ಟವಶಾತ್ ೬೬ ಪರ್ಸೆಂಟ್ ಮಾತ್ರ ಸಾಧನೆ ಆಗಿದೆ. ಆ ವರ್ಷ ಈಗಾಗಲೇ ೮೮ ಪರ್ಸೆಂಟ್ ಆಗಿದೆ. ಈ ತಿಂಗಳು ಕೊನೆಯೊಳಗೆ ೧೦೦ ಪರ್ಸೆಂಟ್ ಅಚೀವ್ ಮಾಡುವಂಥ ಭರವಸೆ ಇದೆ. ಕಳೆದ ವರ್ಷ ಒಂದು ಕೋಟಿ ರೂಪಾಯಿ ಬಹುಮಾನ ಬಂದಿತ್ತು. ಈ ವರ್ಷ ಶೇಕಡ ೧೦೦ ರಷ್ಟು ಅಚೀವ್ ಮಾಡಿದರೆ, ಎರಡೂವರೆ ಕೋಟಿ ರೂಪಾಯಿಗಳ ಬಹುಮಾನ ಬರಬಹುದು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಷ್ಟಪಟ್ಟು ಕೆಲಸ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಈ ವಿಚಾರದಲ್ಲಿ ಹೆಚ್ಚಿಗೆ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳೂ ಸ್ವತಃ ಜವಾಬ್ದಾರಿಯ ಮೇಲೆ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಭಾಗದ ಅಧಿಕಾರಿಗಳೂ ಕೂಡ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾರೆ. ೮-೧೦ ಜಿಲ್ಲೆಗಳಲ್ಲಿ ೧೦೦ ಪರ್ಸೆಂಟ್ ಅಚೀವ್ ಮಾಡಿದ್ದೇವೆ, ಇನ್ನುಳಿದ ಜಿಲ್ಲೆಗಳಲ್ಲಿಯೂ ಆಗುತ್ತದೆ. ರಾಯಚೂರು ಜಿಲ್ಲೆಯಲ್ಲಿ ನೂರಕ್ಕೆನೂರು ಅಚೀವ್ ಆಗಿದೆ. ಈ ರೀತಿ ಎಲ್ಲಾ ಜಿಲ್ಲೆಗಳಲ್ಲೂ ಈ ಕೆಲಸ ಆಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಡಿಸೋಜಾರವರು ಮಾತನಾಡುತ್ತಾ, ೨೦೦೦ ವರ್ಷಕ್ಕೆ ಎಲ್ಲರಿಗೂ ಆರೋಗ್ಯ ಕೊಡುವುದಕ್ಕಾಗುತ್ತದೆಯೋ ಎಂದು ಕೇಳಿದರು. ೨೦೦೦ ವರ್ಷಕ್ಕೆ ಆರೋಗ್ಯಭಾಗ್ಯ ಕೊಡುವುದಕ್ಕೆ ಆರೋಗ್ಯ ಇಲಾಖೆ ಒಂದೇ ಕೆಲಸ ಮಾಡಿದರೆ ಆಗುವುದಿಲ್ಲ. ಗ್ರಾಮಾಭಿವೃದ್ಧಿ ಇಲಾಖೆ ಮತ್ತು ಪಟ್ಟಣಗಳನ್ನು ಅಭಿವೃದ್ಧಿ ಮಾಡತಕ್ಕಂಥ ಮತ್ತಿತರ ೪-೫ ಇಲಾಖೆಗಳೂ ಸೇರಿ ಕೆಲಸ ಮಾಡಬೇಕು. ಇದಕ್ಕಾಗಿ ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ, ೧೪-೧೫ ವರ್ಷದಲ್ಲಿ ಯಾವರೀತಿ ಸಾಧನೆ ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಹಳ್ಳಿಗಳಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ಪ್ರಿವೆನ್‌ಷನ್ ಮಾಡತಕ್ಕಂಥಾದನ್ನು ಮಾಡುತ್ತಿದ್ದೇವೆ. ಖಾಯಿಲೆಗಳು ಬರದಹಾಗೆ ಮಾಡುವುದು ಇದರ ಉದ್ದೇಶ. ನಿಮಗೆಲ್ಲರಿಗೂ ಗೊತ್ತಿರುವಹಾಗೆ, ಕಾಲರ, ಸಿಡುಬು, ಮಲೇರಿಯಾ ಇರತಕ್ಕಂಥಾದ್ದನ್ನು ಇಲ್ಲಿ ನೋಡಿದ್ದೇವೆ. ಮಲೇರಿಯಾ ನಮ್ಮ ದೇಶದಲ್ಲಿ ಹೋಗಿತ್ತು. ತಮಿಳುನಾಡಿನಿಂದ, ಆಂಧ್ರ ಪ್ರದೇಶದಿಂದ ಕೆಲಸಗಾರರು ಬಂದು, ಈ ಖಾಯಿಲೆಗಳನ್ನು ತೆಗೆದುಕೊಂಡು ಬಂದಿದ್ದಾರೆ. ಎಲ್ಲಿ ಪಿ. ಡಬ್ಲ್ಯೂ. ಡಿ. ಕ್ಯಾಂಪುಗಳು ಇವೆ ಅಲ್ಲಿ ಈ ಖಾಯಿಲೆಗಳು ಶುರುವಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ೧೦೦ಕ್ಕೆ ೫೦ ರೂಪಾಯಿ ಕೊಡುತ್ತಿದ್ದಾರೆ. ನಾವು ೧೦೦ಕ್ಕೆ ೫೦ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಕೇಂದ್ರದಿಂದ ಒಂದು ತಂಡ ಬಂದು, ಭೇಟಿ ಮಾಡಿ, ಉತ್ತಮವಾದ ಕೆಲಸವನ್ನು ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ, ಕೇಂದ್ರ ಸರ್ಕಾರದಿಂದ ೧೨೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ನಾವು ೪೪೦ ಲಕ್ಷ ರೂಪಾಯಿ ಖರ್ಚು ಮಾಡಿ, ಮಲೇರಿಯಾ ಕಡಿಮೆ ಮಾಡುವುದಕ್ಕೆ ಬೇಕಾದ ಕೆಲಸವನ್ನು ಮಾಡುತ್ತಿದ್ದೇವೆ. ಪ್ರಿವೆನ್‌ಷನ್ ವಿಚಾರದಲ್ಲಿ ಒಟ್ಟು ಇಮ್ಯುನೀಸೇಷನ್ ಪ್ರೋಗ್ರಾಂನ್ನು ಕೇಂದ್ರ ಸರ್ಕಾರದವರು ಲಾಂಚ್ ಮಾಡಿದ್ದಾರೆ. ಹಾಸನ ಜಿಲ್ಲೆಯಲ್ಲಿ ಆರಂಭ ಮಾಡಿದ್ದೇವೆ. ಕೆಲಸ ಚೆನ್ನಾಗಿ ನಡೆಯುತ್ತಿದೆ. ಕೋಲಾರ ಜಿಲ್ಲೆಯಲ್ಲೂ ಮಾಡಿದ್ದೇವೆ. ಮುಂದಿನ ವರ್ಷದಿಂದ ೪ ವರ್ಷಗಳಲ್ಲಿ ಪ್ರತಿ ವರ್ಷ ೪-೪ ಜಿಲ್ಲೆಗೆ ಇದನ್ನು ನಡೆಸಿಕೊಡುತ್ತೇವೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಭರವಸೆ ಕೊಟ್ಟಿದ್ದಾರೆ. ಇದಕ್ಕಾಗಿ ರೋಟರಿ ಮತ್ತಿತರ ಸಂಸ್ಥೆಗಳು ಮುಂದೆ ಬರುತ್ತಿವೆ. ೪ ವರ್ಷದಲ್ಲಿ ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಪ್ರತಿಯೊಂದು ಖಾಯಿಲೆ ವಿಚಾರದಲ್ಲೂ ಕೂಡ ಪೋಲಿಯೋ, ಡಫ್ತಾರ ಗಂಟಲು ಬೇನೆ, ಧನುರ್ವಾಯು ಖಾಯಿಲೆಗಳಿಗೆ ಚುಚ್ಚುಮದ್ದು ಹಾಕಿ, ಇದರ ಬಗ್ಗೆ ಒಳ್ಳೆಯ ಸಾಧನೆ ಮಾಡಬೇಕೆಂದು ಸರ್ಕಾರದಲ್ಲಿ ಮುಖ್ಯ ಮಂತ್ರಿಗಳೂ ಸೇರಿ ತೀರ್ಮಾನ ಮಾಡಿದ್ದೇವೆ. ನಾಲ್ಕೈದು ವರ್ಷಗಳಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಅದ್ದರಿಂದ ನಮಗೆ ಖಾಯಿಲೆಗಳು ಬರದಹಾಗೆ ಮತ್ತು ಖಾಯಿಲೆಗಳನ್ನು ವಾಸಿ ಮಾಡುವ ಕೆಲಸಕ್ಕೆ ಪ್ರಾಮುಖ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಸಾಧನೆ ಮಾಡತಕ್ಕಂಥ ಭರವಸೆ ಇದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಆಸ್ಪತ್ರೆಗಳಲ್ಲಿ ಕ್ಲೀನ್ಲಿನೆಸ್ (ಸ್ವಚ್ಛತೆ) ಇಲ್ಲ, ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ನಾನು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಮೊಟ್ಟ ಮೊದಲು ನೋಡುವುದು ಅಲ್ಲಿರತಕ್ಕ ಕಕ್ಕಸ್ಸುಗಳನ್ನು. ಅವು ಶುಚಿಯಾಗಿದ್ದರೆ, ಬೇರೆ ಕಡೆಯೂ ಶುಚಿಯಾಗಿರುತ್ತದೆಂಬ ಭಾವನೆ. ಬಹಳ ಕಡೆ ಇದರ ಬಗ್ಗೆ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಎಷ್ಟೋ ಕಡೆ ಬಾಯಿ, ಮೂಗು ಮುಚ್ಚಿಕೊಂಡು ಹೋಗತಕ್ಕಂಥ ಪ್ರಸಂಗ ಇದೆ. ಇಲಾಖೆಯ ಅಧಿಕಾರಿಗಳಾಗಲೀ, ಅಥವಾ ಯಾರಾದರೂ ಸಚಿವರಾಗಲಿ ಬರುತ್ತಾರೆ ಎಂದರೆ, ಆ ದಿನ ಶುಚಿಯಾಗಿಡುತ್ತಾರೆ.

ಅದೇ ಬೇರೆ ದಿನ ಈ ರೀತಿ ಮಾಡಲು ನಿರ್ಲಕ್ಷ್ಯ ತೋರಿಸುತ್ತಾರೆ. ೪ನೇ ದರ್ಜೆ ಕೆಲಸಗಾರರ ಕೈಯಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ರಾಜ್ಯ ಸರ್ಕಾರದವರು, ಇಲಾಖಾ ಅಧಿಕಾರಿಗಳು, ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ, ಎಲ್ಲಾ ವೈದ್ಯಾಧಿಕಾರಿಗಳ ಜೊತೆ ಒಬ್ಬರು ಅಥವಾ ಇಬ್ಬರು ಉಪ ವೈದ್ಯರುಗಳನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ನಾವೂ ಕೂಡ ಭೇಟಿ ಮಾಡಿ ಸರಿಯಾನ ವ್ಯವಸ್ಥೆ ಮಾಡುತ್ತೇವೆ. ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗೆ ೫೦ ಬೆಡ್‌ಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಸರ್ಕಾರದ ನೀತಿ ಇರತಕ್ಕಂಥಾದ್ದು, ಪ್ರತಿಯೊಂದು ತಾಲ್ಲೂಕಿಗೂ ೩೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಕೊಡಬೇಕೆಂದು.

ಜೊತೆಗೆ ಸಬ್‌ಡಿವಿಷನ್ ಹೆಡ್‌ಕ್ವಾರ್ಟರ್ಸ್ ಇರತಕ್ಕಂಥಾ ಕಡೆಗಳಲ್ಲಿ ೫೦ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ನಾವು ಇನ್ನೂ ೪೫ ಕೇಂದ್ರಗಳಲ್ಲಿ ಈ ಆಸ್ಪತ್ರೆಗಳನ್ನು ಹೆಚ್ಚಿಗೆ ಮಾಡಬೇಕಾಗಿದೆ. ಈ ೪೫ರಲ್ಲಿ ಈಗಾಗಲೇ ನಮ್ಮ ಐ ಪಿ.ಪಿ. ಪ್ರೋಗ್ರಾಂನಲ್ಲಿ ಸುಮಾರು ೧೭ ತಾಲ್ಲೂಕುಗಳಲ್ಲಿರುವ ಆಸ್ಪತ್ರೆಗಳು ಉತ್ತಮ ದರ್ಜೆಯಲ್ಲಿರುತ್ತವೆ. ಇನ್ನು ೨೮ ಉಳಿಯುತ್ತದೆ. ಅದಲ್ಲದೆ ಬೇರೆ ಕಡೆಯೂ ಕೂಡ ವೈದ್ಯಾಧಿಕಾರಿಗಳನ್ನು ಕೊಡಬೇಕಾಗಿದೆ. ಅಲ್ಲದೆ ಅಲ್ಲಿ ೩೫–೬೦ ಹಾಸಿಗೆಗಳನ್ನು ಹೆಚ್ಚಿಗೆ ಮಾಡಬೇಕಾಗಿದೆ. ಉಳಿದಿರುವ ೨೮ ಆಸ್ಪತ್ರೆಗಳಲ್ಲಿ ಈಗ ೭ ಮಂಜೂರಾಗಿದೆ. ರಾಜ್ಯಾದ್ಯಂತ ಸುಮಾರು ಇನ್ನೂ ೪೮ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕಾಗಿದೆ. ಒಟ್ಟು ೧೭೫ ತಾಲ್ಲೂಕುಗಳಲ್ಲಿ ಈ ೪೮ ಬಿಟ್ಟರೆ ಉಳಿದವೆಲ್ಲಾ ಅಪ್‌ಗ್ರೇಡ್ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಒಂದೆರಡು ವರ್ಷದಲ್ಲಿ ಇದನ್ನು ಪೂರೈಸುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಇನ್ನು ಇವೆಲ್ಲವನ್ನೂ ಅಪ್‌ಗ್ರೇಡ್ ಮಾಡಿದ ಮೇಲೆ ಈಗ ಇರತಕ್ಕಂಥಾ ವ್ಯವಸ್ಥೆ ಪ್ರಕಾರ ಒಂದೇ ಆಸ್ಪತ್ರೆಯಲ್ಲಿ ೪ ಜನ ಡಾಕ್ಟರ್ಸ್ ಇರಬೇಕಾಗುತ್ತದೆ. ಪ್ರತಿಯೊಂದು ಆಸ್ಪತ್ರೆಯಲ್ಲೂ ಒಬ್ಬ ಸ್ಪೆಷಲಿಸ್ಟ್, ಕಿವಿ ನೋಡುವ ಡಾಕ್ಟರ್, ಗಂಟಲು ನೋಡುವ ಡಾಕ್ಟರ್ಸ್ ಇರಬೇಕಾಗುತ್ತದೆ. ಇದಲ್ಲದೆ ಬಹಳ ಜನ ಡಾಕ್ಟರ್ಸ್ ನಾವು ಇಂಥಾ ಕಡೆಯೇ ಇರಬೇಕೆಂದು ಪ್ರೆಷರ್ ತರುತ್ತಾರೆ. ಇದನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕೆಂದು ಇದ್ದೇವೆ. ಇದಕ್ಕೆ ಎಲ್ಲರ ಸಹಕಾರ ಬೇಕು. ಪ್ರತಿಯೊಂದು ಆಸ್ಪತ್ರೆಯಲ್ಲೂ ಕೂಡ ಎಲ್ಲಾ ಚಿಕಿತ್ಸೆಗಳೂ ದೊರೆಯುವ ಹಾಗೆ ಮಾಡುವವರಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರವನ್ನು ನಾನು ಕೋರುತ್ತೇನೆ. ಏಕೆಂದರೆ, ನಾನು ಮೊದಲೇ ಹೇಳಿದ ಹಾಗೆ, ಪ್ರತಿಯೊಂದು ಕಡೆಯೂ ೪ ಜನ ಡಾಕ್ಟರ್ಸ್ ಏನು ಇರಬೇಕು, ಆ ಬಗ್ಗೆ ಇಂತಿಂಥಾವರನ್ನೇ ಪೋಸ್ಟ್ ಮಾಡಿ ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. ಈ ವಿಚಾರದಲ್ಲಿ ತಮ್ಮೆಲ್ಲರ ಸಹಕಾರವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಐ ಪಿ ಪಿ ಇರತಕ್ಕಂಥಾ ೬ ಜಿಲ್ಲೆಗಳಲ್ಲಿ ೧೭ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ಒಂದು ಲಿಸ್ಟ್ ಇದೆ. ಅದನ್ನು ತಮ್ಮ ಮುಂದೆ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಬೆಳಗಾಂನಲ್ಲಿ ೪, ಬಿಜಾಪುರ ಜಿಲ್ಲೆಯಲ್ಲಿ ಅಥಣಿ, ರಾಯದುರ್ಗ, ಬಾದಾಮಿ, ಬಾಗೇವಾಡಿ, ರೋಣ್ ಮತ್ತು ಧಾರವಾಡದಲ್ಲೂ ಕೆಲವು ಇವೆ ಹಾಗೆಯೇ ರಾಯಚೂರು ಜಿಲ್ಲೆಯಲ್ಲಿ, ದೇವದುರ್ಗ, ಮಾನ್ವಿ, ಕುಷ್ಟಗಿ, ಸಿಂಧನೂರು ಈ ಭಾಗದಲ್ಲಿರುವ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದಿದ್ದೇವೆ. ಇನ್ನು ಕೆಲವು ಭಾಗಗಳಲ್ಲಿ ಅಲ್ಲಲ್ಲಿ ಡಾಕ್ಟರ್ಸ್ ಇಲ್ಲ ಎಂದು ಹೇಳಿದ್ದಾರೆ. ಇನ್ನು ವೆನ್‌ಲಾಕ್ ಆಸ್ಪತ್ರೆಯಲ್ಲಿ ಕ್ವಾರ್ಟರ್ಸ್ ಕಟ್ಟುವುದಕ್ಕೆ ಜಾಗ ಇದ್ದರೂ ಕೂಡ ಕಟ್ಟಿಸುತ್ತಾ ಇಲ್ಲ ಎಂದು ಹೇಳಿದರು. ಅಲ್ಲಿ ಕ್ವಾರ್ಟರ್ಸ್‌ನ್ನು ಕಟ್ಟಿಸುವ ಕೆಲಸ ಮಾಡುತ್ತೇನೆ. ಇನ್ನು ಡಾಕ್ಟರ್ಸ್ ಕೊರತೆ ಬಗ್ಗೆ ಹೇಳಿದ್ದಾರೆ. ತಮಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ, ನಮಗೆ ಸುಮಾರು ೧೫೦ ಜನ ಡಾಕ್ಟರ್ಸ್ ಕೊರತೆ ಮಾತ್ರ ಇದೆ. ಈ ಬಗ್ಗೆ ಪಿ.ಎಸ್.ಸಿ. ಯಲ್ಲಿ ಈಗಾಗಲೇ ಸಂದರ್ಶನ ನಡೆಯುತ್ತಾ ಇದೆ. ಎಲ್ಲೆಲ್ಲಿ ವೇಕೆನ್ಸಿ ಇದೆ ಅಲ್ಲೆಲ್ಲಾ ಈ ತಿಂಗಳ ಕೊನೆಯೊಳಗೆ ಭರ್ತಿ ಮಾಡುತ್ತೇವೆನ್ನುವ ಮಾತನ್ನು ಹೇಳುತ್ತೇನೆ. ಇದಲ್ಲದೆ ನಮ್ಮಿಂದ ಇ.ಎಸ್.ಐ ಗೆ ಹೋಗಿರತಕ್ಕಂಥಾ ೬೦ ಜನ ಡಾಕ್ಟರ್ಸ್ ವಾಪಸ್ ಬರುತ್ತಿದ್ದಾರೆ. ಅಲ್ಲಿಗೆ ಒಟ್ಟು ೧೯೦ ಜನ ಡಾಕ್ಟರ್ಸ್ ಆಗುತ್ತಾರೆ. ಪಿ.ಎಸ್.ಸಿ. ಯಿಂದ ಸೆಲೆಕ್ಟ್ ಮಾಡುವುದು ೧೫೦ ಜನ, ಇ ಎಸ್.ಐ. ನಿಂದ ವಾಪಸ್ಸು ಬರುವವರು ೪೦ ಜನ ಡಾಕ್ಟರ್ಸ್. ಒಟ್ಟು ೧೯೦ ಜನ ಡಾಕ್ಟರ್ಸ್ ಆಗುತ್ತಾರೆ. ನಾನು ಮೊದಲೇ ಹೇಳಿದ ಹಾಗೆ, ಈ ತಿಂಗಳ ಕೊನೆಯೊಳಗೋ ಅಥವಾ ಮುಂದಿನ ತಿಂಗಳು ೧೫ ದಿವಸದೊಳಗೆ ವೇಕೆನ್ಸಿ ಇರುವುದನ್ನೆಲ್ಲಾ ಭರ್ತಿ ಮಾಡುತ್ತೇನೆಂದು ನಾನು ಮತ್ತೊಮ್ಮೆ

ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಡೀಸೌಜಾರವರು ಕೇಳಿದಂಥಾ ವಿಷಯಕ್ಕೆಲ್ಲಾ ನಾನು ಸಾಮಾನ್ಯವಾಗಿ ಉತ್ತರ ಹೇಳಿದ್ದೇನೆ. ಇನ್ನು ಆಸ್ಪತ್ರೆಗಳಲ್ಲಿ ಸರಿಯಾದಂಥಾ ಎಕ್ವಿಪ್‌ಮೆಂಟ್ಸ್ ಇಲ್ಲ ಎಂದು ಹೇಳಿದರು. ಎಲ್ಲೆಲ್ಲಿ ಎಕ್ವಿಪ್‌ಮೆಂಟ್ಸ್ ಇಲ್ಲವೋ ಅಲ್ಲೆಲ್ಲಾ ಎಕ್ವಿಪ್‌ಮೆಂಟ್ಸ್‌ನ್ನು ತರಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ.

ಇನ್ನು ಔಷಧಿಗಳು ಸಪ್ಲೈ ಆಗುತ್ತಾ ಇರುವುದು ಕಡಿಮೆ, ಪ್ಯಾಕೇಜ್‌ನಲ್ಲಿ ಕೊಡುತ್ತಿದ್ದಾರೆ. ಅಲ್ಲದೆ ಕೆಲವು ಡಾಕ್ಟರ್ಸ್ ಸರಿಯಾಗಿ ಔಷಧಿಗಳನ್ನು ಕೊಡುತ್ತಾ ಇಲ್ಲ. ಸಪ್ಲೈ ಕಡಿಮೆ ಎಂದು ಹೇಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕಾದರೆ, ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಆ ಜಿಲ್ಲೆಯಲ್ಲಿರುತಕ್ಕಂಥಾ ಜಿಲ್ಲಾ ವೈದ್ಯಾಧಿಕಾರಿಗಳು ಅಲ್ಲಿಗೆ ಯಾವ್ಯಾವ ಔಷಧಿಗಳು ಬೇಕು ಎನ್ನುವುದನ್ನು ಲಿಸ್ಟ್ ಮಾಡಿ ಕೊಡುತ್ತಾರೆ. ಅದರಲ್ಲಿ ೧೦೦ ರೂಪಾಯಿ ಔಷಧಿಗಳಲ್ಲಿ ೬೦ ರೂಪಾಯಿನಷ್ಟು ಮಾತ್ರ ಬೆಂಗಳೂರಿನಿಂದ ಅವರಿಗೆ ಕಳುಹಿಸಿಕೊಡುತ್ತೇವೆ. ಇನ್ನು ೪೦ ರೂಪಾಯಿನಷ್ಟು ಅಲ್ಲಿಯ ಜಿಲ್ಲಾ ವೈದ್ಯಾಧಿಕಾರಿಗಳ ಮುಖಾಂತರ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕಂಥಾ ಡಾಕ್ಟರ್ಸ್ ಏನು ಇದ್ದಾರೆ ಅವರು ಅದನ್ನು ತೆಗೆದುಕೊಳ್ಳುತ್ತಾರೆ. ಆ ಔಷಧಿಗಳನ್ನು ಬಡವರಿಗೆ ಕೊಡಬೇಕು. ಅದು ಡಾಕ್ಟರ್ಸ್ ಜವಾಬ್ದಾರಿ. ಅವರು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಈ ರೀತಿ ಹೇಳುತ್ತಿದ್ದಾರೇ ವಿನಾ ಅದರಲ್ಲಿ ನಿಜಾಂಶ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ೧೦೦ ರೂಪಾಯಿಯಲ್ಲಿ ೬೦ ರೂಪಾಯಿನಷ್ಟು ಔಷಧಿಗಳನ್ನು ಇಲ್ಲಿಂದ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಕಳುಹಿಸಿಕೊಡುತ್ತಿದ್ದೇವೆ, ಇನ್ನು ೪೦ ರೂಪಾಯಿನಷ್ಟು ಔಷಧಿಗಳನ್ನು ಅಲ್ಲಿಯ ಜಿಲ್ಲಾ ವೈದ್ಯಾಧಿಕಾರಿಗಳ ಮುಖಾಂತರ ಅಲ್ಲಿಯ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಡಾಕ್ಟರ್ಸ್ ತರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇವೆ. ತಮ್ಮ ಗಮನಕ್ಕೆ ತರಬೇಕಾದರೆ, ಹೋದಸಲಕ್ಕಿಂತ ಈ ಸಲ ಔಷಧಿಗಳನ್ನು ಎಲ್ಲಾ ಕಡೆಯಲ್ಲೂ ಹೆಚ್ಚಾಗಿ ಕೊಡುತ್ತಿದ್ದೇವೆ. ಅವರು ಈ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ೮ ಸಾವಿರ ಇದ್ದ ಕಡೆ, ೨೦ ಸಾವಿರ, ೨೦ ಸಾವಿರ ಇದ್ದ ಕಡೆ ೩೦ ಸಾವಿರ, ೩೦ ಸಾವಿರ ಇದ್ದ ಕಡೆ ೪೦ ಸಾವಿರ, ಒಂದು ಲಕ್ಷ ಇದ್ದ ಕಡೆ ೩ ಲಕ್ಷ, ಹಾಗೆಯೇ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ೧೦ ಲಕ್ಷ ಇರುವ ಕಡೆ ೧೫ ಲಕ್ಷ, ೧೫ ಲಕ್ಷ ಇರುವ ಕಡೆ ೨೦ ಲಕ್ಷ, ಈ ರೀತಿಯಾಗಿ ಹೆಚ್ಚು ಔಷಧಿಗಳನ್ನು ತೆಗೆದುಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಲಾಗಿದೆ. ಈ ಡಾಕ್ಟರ್ಸ್ ಔಷಧಿಗಳನ್ನು ಒಳಗೆ ಇಟ್ಟುಕೊಂಡು ಔಷಧಿ ಬಂದರೆ ಅದನ್ನು ಮಾರತಕ್ಕಂಥಾದ್ದಾಗಲಿ ಅಥವಾ ಪ್ರೈವೇಟ್ ಪ್ರಾಕ್ಟೀಸ್ ಇರುವವರು ಈ ಔಷಧಿಗಳನ್ನು ಏನು ಉಪಯೋಗಿಸಿಕೊಳ್ಳುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಆಯಾಯಾ ಕೇಂದ್ರಗಳಲ್ಲಿ ಸಂದರ್ಶಕರ ಸಮಿತಿಯನ್ನು ಮಾಡುತ್ತೇವೆ. ಆ ಸಮಿತಿಯವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಈ ಔಷಧಿಗಳು ಸಾರ್ವತ್ರಿಕವಾಗಿ ಎಲ್ಲರಿಗೂ ದೊರೆಯುವ ಹಾಗೆ ಜವಾಬ್ದಾರಿ ಇರತಕ್ಕಂಥಾ ಶಾಸಕರು ಮತ್ತು ಇತರೇ ಸದಸ್ಯರೂ ಸಹ ನೋಡಿಕೊಂಡು ಇದು ಪ್ರಯೋಜನವಾಗುವ ರೀತಿ ಕೆಲಸ ಮಾಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಡಯಾಲಿಸಿಸ್ ಯೂನಿಟ್ ಬಗ್ಗೆ ಹೇಳಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾತ್ರ ಎಲ್ಲಾ ಸ್ಪೆಷಲಿಸ್ಟ್ ಇದ್ದಾರೆ, ಬೇರೆ ಕಡೆಯಲ್ಲಿ ಎಲ್ಲೂ ಇಲ್ಲ ಎಂದು ಹೇಳಿದ್ದಾರೆ. ತಮಗೆ ಹೇಳಬೇಕಾದರೆ, ರಾಜಧಾನಿಯಲ್ಲಿರತಕ್ಕಂಥಾ ಎಲ್ಲಾ ಕಡೆಯಲ್ಲೂ ಸ್ಪೆಷಲಿಸ್ಟ್ ಅನ್ನು ಒದಗಿಸಿಕೊಡಬೇಕಾದುದು ಮುಖ್ಯ. ಅದು ಬೆಂಗಳೂರಿಗೇ ಸೀಮಿತವಾಗಿಲ್ಲ. ಬೆಂಗಳೂರಿನಲ್ಲಿ ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಕಿದ್ವಾಯಿ ಆಸ್ಪತ್ರೆಯಲ್ಲಿ, ನಿಮಾನ್ಸ್ ಆಸ್ಪತ್ರೆಯಲ್ಲಿ ಎಲ್ಲಾ ರೋಗಿಗಳನ್ನೂ ನೋಡುವುದಕ್ಕೆ ಅಲ್ಲೆಲ್ಲಾ ಸ್ಪೆಷಲಿಸ್ಟ್‌ಗಳನ್ನು ನೇಮಿಸಿದ್ದೇವೆ. ದುಡ್ಡು ಇದ್ದವರಿಗೆ ಛಾರ್ಜು ಜಾಸ್ತಿ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಯೋಚನೆ ಮಾಡುತ್ತೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಿಂಡಿಕೇಟ್ ಬ್ಯಾಂಕ್‌ನವರು ನಮಗೆ ಸ್ಪೆಷಲ್ ವಾರ್ಡನ್ನು ಕಟ್ಟಿಕೊಡಿ, ನಾವು ಹೆಚ್ಚು ದುಡ್ಡು ಕೊಡುತ್ತೇವೆ, ಅಲ್ಲದೆ ಈ ಸ್ಪೆಷಲ್ ವಾರ್ಡ್‌ನ್ನು ಕಟ್ಟುವುದಕ್ಕೆ ನಾವು ಸಾಲ ಕೊಡುತ್ತೇವೆ ಎಂದು ಹೇಳಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಸ್ಪೆಷಲ್ ವಾರ್ಡ್ ಕಟ್ಟಿ ಅದಕ್ಕೆ ೫೦ ರೂಪಾಯಿ ಛಾರ್ಜು ಮಾಡುವ ಹಾಗೆ ತೀರ್ಮಾನ ಮಾಡಿದ್ದೇವೆ. ಆದರೆ ಅದನ್ನು ಯಾವ್ಯಾವ ಊರಿನಲ್ಲಿ ಕಟ್ಟಬೇಕು ಎನ್ನುವುದರ ಬಗ್ಗೆ ನಕ್ಷೆಯನ್ನೂ ಮತ್ತು ಪ್ಲಾನ್ ಅನ್ನೂ ಸಹ ಈಗ ಮಾಡಿಸುತ್ತಿದ್ದೇವೆ.

ಇನ್ನು ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦ ವೇಕೆನ್ಸಿ ಇದೆ ಅಲ್ಲಿಗೆ ಡಾಕ್ಟರ್ಸ್‌ನ್ನು ಭರ್ತಿ ಮಾಡಬೇಕು ಎಂದು ಹೇಳಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಈಗ ೧೯೦ ಜನ ಡಾಕ್ಟರ್ಸ್ ಏನು ಬರುತ್ತಾರೋ ಅವರು ಬಂದ ಮೇಲೆ ಅಲ್ಲಿರುವ ವೇಕೆನ್ಸಿಯನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀ ರಾಮಯ್ಯನವರು ಜನಸಂಖ್ಯೆಯನ್ನು ನಿಯಂತ್ರಣ ಮಾಡುವ ವಿಚಾರದಲ್ಲಿ ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ತಮಗೆಲ್ಲಾ ಗೊತ್ತಿದ್ದ ಹಾಗೆ, ಕಳೆದ ತಿಂಗಳು ೧೨ನೇ ತಾರೀಖು ಈ ಬಗ್ಗೆ ಶಾಸಕರ ಒಂದು ಸಮ್ಮೇಳನ ಮಾಡಬೇಕೆಂದು ಪ್ರಯತ್ನ ಮಾಡಿದಾಗ ಕಾರಣಾಂತರದಿಂದ ಆ ಸಮ್ಮೇಳನ ಆಗಲಿಲ್ಲ. ನಾನು ನಮ್ಮ ಶಾಸಕರ ಮಿತ್ರರಲ್ಲಿ ಪ್ರಾರ್ಥಿಸುತ್ತೇನೆ. ಏನೆಂದರೆ, ಈ ಜನಸಂಖ್ಯೆ ನಿಯಂತ್ರಣ ಆಗಲೇಬೇಕು, ಇಲ್ಲದೇ ಹೋದರೆ ನಾವು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದರೂ ಕೂಡ ಇದರಿಂದ ಏನೂ ಪ್ರಯೋಜನವಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ದೇಶದಲ್ಲಿ, ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷಕ್ಕೆ ೮ ಸಾವಿರ ಜನಸಂಖ್ಯೆ ಜಾಸ್ತಿಯಾಗುತ್ತಾ ಹೋಗುತ್ತಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದನ್ನು ಈಗಿನಿಂದಲೇ ನಿಯಂತ್ರಣ ಮಾಡದೇ ಹೋದರೆ ಮುಂದೆ ಇದರ ೨-೩ ಪಟ್ಟು ಜನಸಂಖ್ಯೆ ಜಾಸ್ತಿಯಾಗುವುದಲ್ಲದೆ, ನಾವು ಈಗ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಏನು ಖರ್ಚು ಮಾಡುತ್ತಿದ್ದೇವೋ ಅವೆಲ್ಲಾ ವ್ಯರ್ಥವಾದಂತಾಗುತ್ತದೆ. ಆದುದರಿಂದ ಈ ಬಗ್ಗೆ ನಾವೆಲ್ಲಾ ಯೋಚನೆ ಮಾಡಿಕೊಂಡು ಈ ವಿಚಾರದಲ್ಲಿ ಆಯಾಯ ಜಿಲ್ಲೆಯ ವೈದ್ಯಾಧಿಕಾರಿಗಳ ಜೊತೆ ಮಾನ್ಯ ಸದಸ್ಯರೆಲ್ಲರೂ ಕೂಡ ಸಹಕರಿಸಿ ಅವರವರ ಕ್ಷೇತ್ರದಲ್ಲಿ ಇದರ ಬಗ್ಗೆ ೧೦೦ಕ್ಕೆ ೧೨೦ರಷ್ಟು, ೧೩೦ರಷ್ಟು ಸಹಾಯ ಮಾಡಬೇಕೆಂದು ತಮ್ಮನ್ನು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಈಗಾಗಲೇ ಮಹಾರಾಷ್ಟ್ರದಲ್ಲಿ ನೂರಕ್ಕೆ ೧೩೦ರಷ್ಟು ಸಾಧನೆ ಮಾಡಿದ್ದಾರೆ. ತಮಿಳುನಾಡಿನಲ್ಲಿ ೧೦೦ಕ್ಕೆ ೧೨೫ರಷ್ಟು ಸಾಧನೆ ಮಾಡಿದ್ದಾರೆ. ನಮ್ಮಲ್ಲಿ ೧೦೦ಕ್ಕೆ ೧೦೦ ಆದರೂ ಆಗಬಹುದು. ತಮ್ಮೆಲ್ಲರ ಸಹಕಾರ ಇದ್ದರೆ ಸಂಪೂರ್ಣವಾಗಿ, ಖಂಡಿತವಾಗಿ ಜನಸಂಖ್ಯೆ ನಿಯಂತ್ರಣ ಆಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂಗೆ ಹೆಚ್ಚಿನ ದುಡ್ಡನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ನಮ್ಮ ರಾಜ್ಯದಷ್ಟು ಹೆಚ್ಚಿಗೆ ದುಡ್ಡನ್ನು ಬೇರೆಯವರು ತೆಗೆದುಕೊಳ್ಳುತ್ತಾ ಇಲ್ಲ, ಸಾಧ್ಯವಾದಷ್ಟು ನಾವು ತೆಗೆದುಕೊಳ್ಳುತ್ತಾ ಇದ್ದೇವೆ. ಆಮೇಲೆ ಮಲೇರಿಯ ನಿರ್ಮೂಲನಾ ಕೆಲಸದಲ್ಲಿ ನಮಗೆ ೪೦೦ ಲಕ್ಷ ಕೊಟ್ಟಿದ್ದಾರೆ, ಇನ್ನೂ ಹೆಚ್ಚಿಗೆ ಕೆಲಸ ಮಾಡಿದರೆ ೬೦೦ ಲಕ್ಷ ಕೊಡುತ್ತೇವೆಂದು ಹೇಳಿದ್ದಾರೆ. ೧೦೦ಕ್ಕೆ ೩೦ ಭಾಗ ನಾವು ಹಾಕಿ ಕೆಲಸ ಮಾಡುವಂಥಾದ್ದು ಇದು. ಆಮೇಲೆ ಔಷಧಿಗಳನ್ನು ಬೆಂಗಳೂರಿನಿಂದ ತೆಗೆದುಕೊಂಡು ಹೋಗುತ್ತಾರೆ, ಇದು ತಪ್ಪಬೇಕು ಎಂದು ಹೇಳಿದ್ದಾರೆ. ೪ ಡಿವಿಜನಗಳಲ್ಲಿ ಔಷಧಿಗಳನ್ನು ಡಿಸ್ಟ್ರಿಬ್ಯೂಟ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮೈಸೂರಿನಲ್ಲಿ ಜಾಗ ಇದೆ, ಬೇರೆ ಕಡೆ ಕಟ್ಟಡಗಳನ್ನು ಕಟ್ಟಿ ಮಾಡಬೇಕಾಗಿದೆ. ಮೈಸೂರಿನಲ್ಲಿ ಆದಷ್ಟು ಜಾಗ್ರತೆ ಒಂದು ಡಿವಿಜನ್ ಡ್ರಗ್ ಸ್ಟೋರನ್ನು ಮಾಡಬೇಕು ಎನ್ನತಕ್ಕಂಥ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆಂದು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಬಡ ರೋಗಿಗಳನ್ನು ಸರಿಯಾಗಿ ಕಾಣುತ್ತಾ ಇಲ್ಲ, ಇಸಿಜಿಯವರು ದುಡ್ಡು ಕೇಳುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ಈ ಒಂದು ಕಾಯಿಲೆ ಬಹಳ ಆಸ್ಪತ್ರೆಗಳಲ್ಲಿದೆ. ಇವತ್ತಿನ ದಿವಸ ನಮ್ಮ ಸಮಾಜದಲ್ಲಿ ರೋಸ್ಟರ್ ಸಿಸ್ಟಂ ಪ್ರಕಾರ ಬರತಕ್ಕಂಥ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಯಾರಿಗೆ ಸೇವಾ ಮನೋಭಾವನೆ ಇದೆ, ಯಾರು ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಎಂಬುದನ್ನು ನೋಡಿ ಆಯ್ಕೆ ಮಾಡತಕ್ಕಂಥ ಪದ್ಧತಿ ನಮ್ಮಲ್ಲಿಲ್ಲ. ರೋಸ್ಟರ್ ಸಿಸ್ಟಂ ಮೇಲೆ ಆಯ್ಕೆ ಮಾಡಿದಮೇಲೆ ಬಹಳ ಕಡೆ ಡಾಕ್ಟರ್ಸ್ ದುಡ್ಡನ್ನು ಕೇಳುತ್ತಾ ಇದ್ದಾರೆ ಎನ್ನುವ ದೂರು ಬಂದಿದೆ. ನಾನು ಹೋದ ಕಡೆಯಲ್ಲೆಲ್ಲಾ ಮೊಟ್ಟ ಮೊದಲನೆಯದಾಗಿ ಬುದ್ಧಿವಾದ ಹೇಳತಕ್ಕಂಥಾದ್ದು ಏನೆಂದರೆ, ಈರೀತಿ ಜನಗಳಿಂದ ದುಡ್ಡನ್ನು ವಸೂಲು ಮಾಡಿದರೆ ದೇವರು ನಿಮಗೆ ಒಳ್ಳೆಯದು ಮಾಡುವುದಿಲ್ಲ, ಎಂದು ಹೇಳುತ್ತಾ ಇದ್ದೇನೆ. ದುಡ್ಡನ್ನು ವಸೂಲು ಮಾಡುವುದು ಪ್ರೂವ್ ಆದರೆ ಸರ್ಕಾರದವರು ಡಿಸ್‌ಮಿಸ್ ಮಾಡಿ ಮನೆಗೆ ಕಳಿಸಬಹುದು, ಆದರೆ ಜನಗಳ ರೋಷಕ್ಕೆ ತುತ್ತಾದರೆ ಹೆಚ್ಚಿನ ಕಷ್ಟ ಅನುಭವಿಸಬೇಕಾಗುತ್ತದೆ, ದೇವರು

ನಿಮಗೆ ಒಳ್ಳೆಯ ಅವಕಾಶ ಕೊಟ್ಟಿದ್ದಾನೆ, ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಕೊಡದೆ ಇರತಕ್ಕಂಥ ಜನಗಳ ಸೇವೆ ಮಾಡತಕ್ಕಂಥ ಸದವಕಾಶವನ್ನು ದೇವರು ನಿಮಗೆ ಕೊಟ್ಟಿದ್ದಾನೆ, ಜನಗಳ ಸೇವೆ ಮಾಡಿ ಪುಣ್ಯ ಕಟ್ಟಿಕೊಳ್ಳಿ, ದುಡ್ಡನ್ನು ಸಂಪಾದನೆ ಮಾಡುವುದಾದರೆ ಬೇರೆ ಯಾವ ವೃತ್ತಿಯಿಂದಲಾದರೂ ಸಂಪಾದನೆ ಮಾಡಬಹುದು, ಡಾಕ್ಟರಾಗಿ ಬರುವ ಅವಶ್ಯಕತೆ ಇಲ್ಲ ಎಂದು ಎಲ್ಲಾ ಕಡೆ ಹೇಳಿದ್ದೇನೆ. ಆದರೂ ಕೂಡ 'ಗೋರ್ಕಲ್ಲ ಮೇಲೆ ಮಳೆ ಹೊಯ್ದಂತೆ ಸರ್ವಜ್ಞ' ಎಂದ ಹಾಗೆ ಬಹಳ ಕಡೆ ನಾವು ಹೇಳಿದ ಮಾತನ್ನು ಆಚರಣೆ ಮಾಡುತ್ತಿಲ್ಲ. ಎಲ್ಲೆಲ್ಲಿ ಈ ರೀತಿ ಕೆಲಸ ಆಗುತ್ತಿದೆ ಅವರ ಮೇಲೆ ಹೆಚ್ಚಿನ ಕಾರ್ಯಕ್ರಮ ತೆಗೆದುಕೊಂಡು, ಡ್ರಾಪ್ ಮಾಡುವ ಅವಶ್ಯಕತೆ ಇದ್ದರೂ ಕೂಡ ಲೋಕಾಯುಕ್ತ ಬಂದಮೇಲೆ ಡ್ರಾಪ್ ಮಾಡುವುದನ್ನು ನಿಲ್ಲಿಸಿದ್ದೇವೆ. ಅವರಿಗೂ ಕೂಡ ಬರೆದು ಜಿಲ್ಲೆಯಲ್ಲಿರತಕ್ಕ ಉಪ ಜಿಲ್ಲಾ ವೈದ್ಯಾಧಿಕಾರಿಯವರಿಗೆ ಜವಾಬ್ದಾರಿ ಕೊಟ್ಟು ಆಗಾಗ ತಪಾಸಣೆ ಮಾಡಿ ಎಲ್ಲೆಲ್ಲಿ ಜನಗಳಿಂದ ಹೆಚ್ಚಿಗೆ ದೂರುಗಳು ಬರುತ್ತದೆ ಅಂತಹ ಕಡೆ ಡಾಕ್ಟರ್ಸ್ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರೇ ಸರಿಯಾಗಿರುವುದಿಲ್ಲ.

ಶ್ರೀ ಯು. ಭೂಪತಿ.—ಮಾನ್ಯ ಮಂತ್ರಿಗಳು ರೋಸ್ಟರ್ ಸಿಸ್ಟಂಗೂ, ಕರಪ್‌ಷನ್‌ಗೂ ಲಿಂಕ್‌ಮಾಡಿ ರೋಸ್ಟರ್ ಸಿಸ್ಟಂನಿಂದ ಬಂದವರು ದುಡ್ಡು ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ ರೋಸ್ಟರ್ ಸಿಸ್ಟಂನವರು ಬಿಟ್ಟು ಉಳಿದವರು, ದುಡ್ಡು ತೆಗೆದು ಕೊಳ್ಳುವುದಿಲ್ಲ ಎಂದು ಹೇಳುತ್ತೀರಾ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡುವಾಗ ಸತ್ಯವಂತರು ಇರಬಹುದು. ಆದರೆ ಯಾರಿಗೆ ಆಸಕ್ತಿ ಇದೆ ಅವರು ಡಾಕ್ಟರ್ ಆದಮೇಲೆ ಜನಗಳನ್ನು ಒಳ್ಳೆಯ ರೀತಿಯಿಂದ ನೋಡುತ್ತಾರೆ. ಎಂದು ಆಯ್ಕೆ ಮಾಡಿದರೆ ನೂರಕ್ಕೆ ನೂರರಷ್ಟು ಜನ ಸರಿಯಾದ ಡಾಕ್ಟರ್ಸ್ ಬರಬಹುದು. ಬರೀ ಮಾರ್ಕ್ಸ್ ನೋಡಿ, ರೋಸ್ಟರ್‌ಸಿಸ್ಟಂ ಪ್ರಕಾರ ನಮೂದಾಗಿರುವ ಆಧಾರದ ಮೇಲೆ ಸೀಟು ಕೊಡುತ್ತೇವೆ. ಇಂತಹವರು ಒಳ್ಳೆಯ ರೀತಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ಅನುಭವದಿಂದ ಬಂದಿರತಕ್ಕಂಥಾದ್ದು. ಆಸ್ಪತ್ರೆಗಳಲ್ಲಿ ಬಡವರು ದುಡ್ಡನ್ನು ಸಾಮಾನ್ಯವಾಗಿ ಕೇಳುವುದಿಲ್ಲ, ದುಡ್ಡಿನ ಶಕ್ತಿ ಇದ್ದರೂ ಕೂಡ ದುಡ್ಡನ್ನು ಕೇಳುತ್ತಾರೆ. ರೋಸ್ಟರ್ ಸಿಸ್ಟಂನಲ್ಲಿ ಇದು ತಪ್ಪು. ಇವತ್ತಿನ ದಿವಸ ಆಯ್ಕೆ ಮಾಡುವುದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಸಮಾಜದಲ್ಲಿ ಬೇರೆ ಕಡೆ ಸೈಕಲಾಜಿಕಲ್ ಟೆಸ್ಟ್‌ಮಾಡಿ ಯಾರಿಗೆ ಆಸಕ್ತಿ ಇದೆ ಎಂದು ನೋಡಿ ತೆಗೆದುಕೊಳ್ಳುವುದು ಕಷ್ಟ. ನಮ್ಮ ದೇಶದಲ್ಲಿ ಬೇರೆ ಇಲಾಖೆಗಳಲ್ಲಿ ಏನು ನ್ಯೂನತೆಗಳಿವೆ ಅದರಂತೆ ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ನ್ಯೂನತೆ ಇದೆ, ಇದೊಂದೆ ಸೀಮಿತವಾಗಿರತಕ್ಕಂಥಾದ್ದಲ್ಲ ಎಂದು ಹೇಳಿದೆ. ಆಮೇಲೆ ಮಾನ್ಯ ರೋಷನ್‌ಬೇಗ್‌ರವರು ಬೌರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ, ಯೂರಾಲಜಿ ಮತ್ತು ಕಾರ್ಡಿಯಾಲಜಿ ಡಿಪಾರ್ಟ್‌ಮೆಂಟನ್ನು ಆರಂಭ ಮಾಡಿ ಎಂದು ಹೇಳಿದ್ದಾರೆ ಅದನ್ನು ಆರಂಭ ಮಾಡುತ್ತೇವೆ. ಆಮೇಲೆ ನರ್ಸ್‌ಗಳನ್ನು ಪೋಸ್ಟ್ ಮಾಡಿ ಎಂದು ಹೇಳಿದ್ದಾರೆ, ಅಲ್ಲಿ ೧೧೩ ಜನ ಕೆಲಸ ಮಾಡುತ್ತಾ ಇದ್ದಾರೆ, ಒಬ್ಬಿಬ್ಬರು ರಜಾ ಹೋಗಿ ಬಂದಿಬಹುದು. ರೇಷಿಯೋ ೧ : ೬ ಇದೆ. ಆ ಆಸ್ಪತ್ರೆಯಲ್ಲಿ ೪ನೇ ದರ್ಜೆ ವರ್ಕರ್ಸ್ ಪೈಕಿ ೨೧೯ ರಲ್ಲಿ ೨೧೫ ಜನ ಕೆಲಸ ಮಾಡುತ್ತಾ ಇದ್ದಾರೆ, ೬ ವೆಕೆನ್ಸಿ ಇದೆ. ಡ್ರಗ್ ಪೊಸಿಷನ್ ಏನಿದೆ ಅದನ್ನು ಕಳೆದ ವರ್ಷಕ್ಕಿಂತ ಎರಡರಷ್ಟು ಕೊಟ್ಟಿದ್ದೇವೆ. ಅಲ್ಲದೆ ಅವರು ಲಿಫ್ಟ್ ಅಪರೇಟರ್ ಮತ್ತು ಸೆಕ್ಯೂರಿಟಿ ವಿಚಾರದಲ್ಲಿ ಹೇಳಿದ್ದಾರೆ. ಸೆಕ್ಯೂರಿಟಿ ವಿಚಾರದಲ್ಲಿ ಹೇಳುವುದಾದರೆ, ಅಲ್ಲಿ ಪೋಲೀಸ್ ಠಾಣೆಯ ಶಾಖೆ ಇದೆ. ಅದಕ್ಕಿಂತಲೂ ಹೆಚ್ಚಿಗೆ ನಾವು ದುಡ್ಡನ್ನು ಖರ್ಚುಮಾಡಿ ಸೆಕ್ಯೂರಿಟಿ ಮಾಡತಕ್ಕಂಥಾ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಕಳೆದ ವರ್ಷ ಒಂದು ಮಗು ಹೋದದ್ದು ಸಿಕ್ಕಿಲ್ಲ ಎಂದು ಹೇಳಿದ್ದಾರೆ, ತಾಯಿ ಈ ಬಗ್ಗೆ ದೂರು ಕೊಟ್ಟಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಪೋಲೀಸರಿಗೆ ದೂರು ಕೊಟ್ಟಿದ್ದಾರೆ

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಪೋಲೀಸರಿಗೆ ದೂರು ಕೊಟ್ಟಿದ್ದರೆ ವಿಚಾರಣೆ ಮಾಡುತ್ತಾರೆ, ಶ್ರೀಮಾನ್ ಧರ್ಮಪ್ಪನವರು ಅವರ ಕ್ಷೇತ್ರದಲ್ಲಿರತಕ್ಕ ವಿಶೇಷವಾದ ಪರಿಸ್ಥಿತಿ ಬಗ್ಗೆ ಹೇಳಿದರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ಕಾಗೆ ಹಾರಿದಂತೆ ಹೋದರೆ ೩-೪ ಮೈಲಿಯಾಗುತ್ತದೆ,

ರಸ್ತೆಯಲ್ಲಿ ಹೋಗಬೇಕಾದರೆ ೫೦–೬೦ ಮೈಲಿಯಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಆ ಕಡೆ ಡಾಕ್ಟರ್ಸ್ ಇಲ್ಲ ಎಂದು ಹೇಳಿದ್ದಾರೆ. ಈ ವರ್ಷ ನಾವು ಅರ್ಜಿ ಕರೆದಾಗಲೇ ಹಳ್ಳಿಗಳಲ್ಲಿ ಕೆಲಸ ಮಾಡಬೇಕು, ಪಿ. ಜಿ. ಓದುತ್ತಾ ಇದ್ದರೆ ಅದನ್ನು ರಿಸೈನ್ ಮಾಡಬೇಕು ಎಂದು ಹೇಳಿದ್ದೇವೆ. ಸಂದರ್ಶನ ಮಾಡತಕ್ಕ ಕಾರ್ಡ್‌ನಲ್ಲಿ ಪಿಎಸ್‌ಸಿಯವರು ಬರೆದಿದ್ದಾರೆ. ಆಯ್ಕೆ ಹೊಂದುವಾಗ ಹಳ್ಳಿಗಳಿಗೆ ಹೋಗುವುದಿಲ್ಲ ಎಂದು ಹೇಳುವ ಹಾಗಿದ್ದರೆ ಆಯ್ಕೆಗೆ ಆಗುವುದಿಲ್ಲ. ಆದುದರಿಂದ ಹಳ್ಳಿಗಳಲ್ಲಿರತಕ್ಕ ವೆಕೆನ್ಸಿಗಳನ್ನು ಫಿಲಪ್ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮೂಡ್ಲಗಿರಿಯಪ್ಪನವರು ಫ್ಯಾಮಿಲಿ ಪ್ಲಾನಿಂಗ್ ವಿಚಾರದಲ್ಲಿ ಹೇಳಿದರು, ಅವರಿಗೆ ಧನ್ಯವಾದಗಳು. ಆಮೇಲೆ ತುಂಗಳ್‌ರವರು ಮಹಿಳಾ ವೈದ್ಯಾಧಿಕಾರಿಗಳ ಕೊರತೆ ವಿಚಾರ ಹೇಳಿದ್ದಾರೆ. ಈರೀತಿ ಇರತಕ್ಕಂಥಾದ್ದನ್ನು ಸರಿ ಮಾಡತಕ್ಕ ಪ್ರಯತ್ನ ಮಾಡುತ್ತಾ ಇದ್ದೇವೆ. ಆಮೇಲೆ ಡಾಕ್ಟರ್ಸ್ ವಾಪಸ್ ಬರುತ್ತಾ ಇದ್ದಾರೆ, ಆಯುರ್ವೇದ ವೈದ್ಯರನ್ನು ಹಾಕಿ ಎಂದು ಹೇಳಿದ್ದಾರೆ. ಎಂ.ಬಿ.ಬಿ.ಎಸ್. ಡಾಕ್ಟರ್ಸ್ ಜಾಗದಲ್ಲಿ ಆಯುರ್ವೇದ ಡಾಕ್ಟರನ್ನು ಹಾಕುವುದಕ್ಕೆ ಸಾಧ್ಯವಿಲ್ಲ. ಆಮೇಲೆ ಕೆ.ಎಂ.ಸಿ. ಆಸ್ಪತ್ರೆ ದುರಂತದಲ್ಲಿದೆ ಎಂದು ಹೇಳಿದ್ದಾರೆ. ಹೆಸರಾಗಿರತಕ್ಕಂಥ ವೈದ್ಯರಿಲ್ಲ ಎಂಬ ದೂರು ಇದೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮಾನ್ಯ ಬೊಮ್ಮಾಯಿಯವರನ್ನೂ ಕೂರಿಸಿಕೊಂಡು ಮೀಟಿಂಗ್ ಮಾಡಿ ಯಾವ ಯಾವ ಕಡೆ ಬೇಕಾಗುತ್ತದೆ ಎಂದು ನೋಡಿ ಆ ಡಾಕ್ಟರ್ಸನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಕೆ.ಎಂ.ಸಿ. ಆಸ್ಪತ್ರೆ ದುರಂತದಲ್ಲಿದೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದುದು. ಹೆಸರು ಗಳಿಸಿರತಕ್ಕ ವೈದ್ಯರುಗಳನ್ನು ಹಾಕತಕ್ಕ ಕೆಲಸವನ್ನು ಆದಷ್ಟು ಜಾಗ್ರತೆ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಕ್ವಾರ್ಟರ್ಸ್ ವಿಚಾರದಲ್ಲಿ ಹೇಳುತ್ತಾ ದುಡ್ಡನ್ನು ಕೇಳುತ್ತಾರೆ ಎಂದು ಹೇಳಿದ್ದಾರೆ. ಎಲ್ಲಾ ಆಸ್ಪತ್ರೆಗಳಲ್ಲೂ ಸಂದರ್ಶನ ಸಮಿತಿಯನ್ನು ಮಾಡುತ್ತಾ ಇದ್ದೇವೆ. ಆಮೇಲೆ ಪ್ರಕೃತಿ ಚಿಕಿತ್ಸಾ ಕೇಂದ್ರಗಳನ್ನು ತೆರೆಯಿರಿ ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್‌ನಲ್ಲಿ ಹೇಳಿದ್ದಾರೆ. ಪ್ರಕೃತಿ ಚಿಕಿತ್ಸಾ ಕೇಂದ್ರಗಳನ್ನು ತೆರೆಯಬೇಕು. ಅದಕ್ಕೋಸ್ಕರ ದುಡ್ಡನ್ನು ಇಟ್ಟಿದೆ. ಬೆಂಗಳೂರಿನ ಜಯನಗರದಲ್ಲಿ ನಾವೇ ಮಾಡತಕ್ಕಂಥಾದ್ದು ಅಥವಾ ಖಾಸಗಿಯವರಿಂದ ಮಾಡಿಸಿ ದುಡ್ಡು ಕೊಡತಕ್ಕಂಥಾದ್ದು ಇದೆ, ಇದನ್ನು ಮಾಡುತ್ತೇವೆ.

ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿರಬಹುದು. ಎಲ್ಲಾ ಪಾಠಶಾಲೆಗಳಲ್ಲಿ, ಎಲ್ಲೆಲ್ಲಿ ಫಿಸಿಕಲ್ ಕಲ್ಚರ್ ಇನ್‌ಸ್ಟ್ರಕ್ಟರ್ ಇದ್ದಾರೆ ಅವರಿಗೆ ಯೋಗವನ್ನು ಹೇಳಿಕೊಡತಕ್ಕಂಥಾದ್ದನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಈಗಾಗಲೇ ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ಆದಷ್ಟು ಬೇಗ ಜಾರಿಗೆ ತರುವುದಕ್ಕೆ ಅವರ ಸಹಕಾರವನ್ನು ತೆಗೆದುಕೊಂಡು ಜಾರಿಗೆ ತರುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಚಿನ್ನಪ್ಪನವರು ಹಳ್ಳಿಗಳಲ್ಲಿ ಔಷಧಿ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಹಾಗೂ ಪೌಷ್ಟಿಕ ಆಹಾರ ಸಿಗುತ್ತಿಲ್ಲವೆಂದು ಏನು ಹೇಳಿದ್ದಾರೆ. ಅದು ತುಂಬಾ ಅವಶ್ಯಕವಾದುದು, ನಮ್ಮ ಇಲಾಖೆ ಯಿಂದ ಈ ಆಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಅಂಗನವಾಡಿ ಸ್ಕೀಮ್ ಇರುವ ಕಡೆಗೆ ನಾವು ಮತ್ತು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಒಟ್ಟಿಗೆ ಕೆಲಸ ಮಾಡುತ್ತಿರುವ ಕಡೆಗೆ ತಾಯಿಯರಿಗೆ, ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತೇನೆ. ವೈದ್ಯಕೀಯ ಯೂನಿವರ್ಸಿಟಿ ಬಗ್ಗೆ ಹಿಂದೆ ಈ ಸದನದಲ್ಲಿ ತೀರ್ಮಾನವಾಗಿದೆ. ಕೇಂದ್ರ ಸರ್ಕಾರದವರು ಯು.ಜಿ.ಸಿ. ಇದ್ದಹಾಗೆ ವೈದ್ಯಕೀಯ ಯೂನಿವರ್ಸಿಟಿ ಮಾಡಿದರೆ, ಅದಕ್ಕೋಸ್ಕರ ಸ್ಪೆಷಲ್ ಗ್ರ್ಯಾಂಟನ್ನು ಏನು ಕೊಡಬೇಕಾಗುತ್ತದೆ, ಅದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಲ್ಲ. ಈ ಬಗ್ಗೆ ನಿಧಾನವಾಗಿ ಹೋಗಿ ಎಂದು ಕೇಂದ್ರ ಸರ್ಕಾರದಿಂದ ಸೂಚನೆ ಬಂದ ಮೇಲೆ ಇದು ಮುಂದೆ ಹೋಗಿಲ್ಲ. ಆದ್ದರಿಂದ ಪುನಃ ಕೇಂದ್ರದೊಂದಿಗೆ ಪತ್ರವ್ಯವಹಾರ ಮಾಡಿ, ಅವರು ಮಾಡುವುದಕ್ಕೆ ಅವಕಾಶ ಕೊಟ್ಟರೆ ಮಾಡುತ್ತೇವೆ. ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದು, ಆ ಕಮಿಟಿಯವರನ್ನು ಈ ಕೆಲಸದಲ್ಲಿ ಮುಂದುವರಿಯುವಂತೆ ಹೇಳುತ್ತೇನೆ. ಇನ್ನು ಹಲವಾರು ಕಡೆಗಳಲ್ಲಿ ಜನರೇಟರ್ಸ್ ಅನ್ನು ಕೊಟ್ಟಿದ್ದೇವೆ. ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಜನರೇಟರ್ಸ್ ಕೊಡಬೇಕಾದರೆ ಬಹಳ ದುಡ್ಡು ಖರ್ಚಾಗುತ್ತದೆ. ಕೆಲವು ಕಡೆಗಳಲ್ಲಿ ರೋಟರಿ ಸಂಸ್ಥೆಯವರು, ಲಯನ್ಸ್ ಸಂಸ್ಥೆಯವರು ಜನರೇಟರ್ಸ್‌ನ್ನು ಕೊಡುತ್ತಿದ್ದಾರೆ. ಎಲ್ಲೆಲ್ಲಿ ರೋಟರಿ ಸಂಸ್ಥೆಗಳಿವೆ,

ಎಲ್ಲೆಲ್ಲಿ ಲಯನ್ಸ್ ಸಂಸ್ಥೆಗಳಿವೆ ಹಾಗೂ ಬೇರೆ ಸಾರ್ವಜನಿಕ ಉದಾರಿಗಳು ಯಾರಿದ್ದಾರೆ, ಅವರಿಂದ ಜನರೇಟರ್ ಅನ್ನು ಕೊಡತಕ್ಕಂಥಾದ್ದರ ಬಗ್ಗೆ ಪ್ರಯತ್ನಪಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಡಗಿನಲ್ಲಿ ಹೆಚ್ಚು ಆಸ್ಪತ್ರೆಗಳನ್ನು ಹಿಂದೆ ಸರ್ಕಾರದವರು ತೆರೆದಿದ್ದಾರೆ. ವೈದ್ಯಕೀಯ ವಿಚಾರದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಹೆಚ್ಚು ತೊಂದರೆಯಾಗಿದೆ. ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಬೆಡ್ಸ್, ಡಯಟ್ ಅನ್ನು ಕೊಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಬೆಡ್ಸ್ ಇದೆ ಅಲ್ಲಿ ಡಯಟ್ ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಇನ್ನು ಕೊಡಗಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಿ ಎಂದು ಹೇಳಿದ್ದಾರೆ. ಅದು ಬಹಳ ದೊಡ್ಡ ಪ್ರಶ್ನೆ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ. ಮಾನ್ಯ ಮಲ್ಲಪ್ಪನವರು ಗ್ರಾಮಾಂತರ ಪ್ರದೇಶದವರಿಗೆ ನರ್ಸ್‌ಗಳ ಕೆಲಸ ಸಿಗುತ್ತಿಲ್ಲ, ಅವರು ಸೆಲೆಕ್ಟ್ ಆಗುವುದಿಲ್ಲವೆಂದು ಹೇಳಿ, ಶೇಕಡ ೫೦ ರಷ್ಟನ್ನು ಗ್ರಾಮಾಂತರದವರಿಗೆ ಮೀಸಲಿಡಬೇಕೆಂದು ಬಹಳ ಉಪಯುಕ್ತವಾದ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದರ ಬಗ್ಗೆ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಹಾಗೂ ಪ್ರಯತ್ನ ಪಟ್ಟು ಹಳ್ಳಿಗಳಿಂದ ಬಂದಿರತಕ್ಕಂತಹವರಿಗೆ ಮೀಸಲಾತಿಯನ್ನು ಇಡುವುದಕ್ಕೆ ಪ್ರಯತ್ನಿಸುತ್ತೇನೆಂದು ಹೇಳತಕ್ಕಂತಹ ಭರವಸೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಆಚಾರ್‌ರವರು ನಮ್ಮ ಇಲಾಖೆಯಲ್ಲಿ ಉದಾಸೀನ ಇದೆ, ಪರಿಶ್ರಮ ಇರಬೇಕೆಂದು ಹೇಳಿದ್ದಾರೆ. ಕೆಲವು ಕಡೆ ಉದಾಸೀನ ಇರಬಹುದು, ಕೆಲವು ಕಡೆ ಪರಿಶ್ರಮ ಇದೆ. ಹೆಚ್ಚಿನ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೌತ್ ಕೆನರಾದ ಎಸ್.ಎಂ.ಪಿ. ನರ್ಸ್‌ಗಳಿಗೆ ತಿಂಗಳಿಗೆ ೩೦೦ ರೂಪಾಯಿ ಕೊಡುತ್ತಿದ್ದೇವೆ. ಈ ೩೦೦ ರೂಪಾಯಿಯನ್ನು ಕೊಡುವುದನ್ನು ಬಿಟ್ಟರೆ, ಅವರ ಮೇಲೆ ನಮ್ಮ ಹತೋಟಿ ಇರುವುದಿಲ್ಲ. ನಮಗೆ ಹೆಚ್ಚು ದುಡ್ಡು ಕೊಡಿ ಇಲ್ಲವೇ ನಮ್ಮನ್ನು ಪರ್ಮನೆಂಟ್ ಗವರ್ನ್‌ಮೆಂಟ್ ಸರ್ವೆಂಟ್ ಎಂದು ಮಾಡಿ ಎಂದು ಅವರು ಹೇಳುತ್ತಾರೆ. ಅದು ಸಾಧ್ಯವಿಲ್ಲ. ಜಿಲ್ಲಾ ವೈದ್ಯಾಧಿಕಾರಿಗಳು ಸ್ವಲ್ಪವಾದರೂ ಉಚಿತವಾಗಿ ಔಷಧಿ ಕೊಡಿ ಎಂದು ಹೇಳಿದ್ದಾರೆ. ಈ ಸ್ಕೀಮ್ ಮುಗಿದ ಕೂಡಲೇ ನಿಲ್ಲಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಕುಂದಾಪುರದಲ್ಲಿ ಬ್ಲಡ್ ಬ್ಯಾಂಕ್ ಮಾಡಲು ರೋಟರಿಯವರು ಮುಂದೆ ಬಂದಿದ್ದು, ಇದನ್ನು ಆದಷ್ಟು ಜಾಗ್ರತೆ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ವೈದ್ಯಕೀಯ ಉಗ್ರಾಣದಲ್ಲಿನ ಔಷಧಿಗಳನ್ನು ಸರಿಯಾಗಿ ಕಳಿಸಿಕೊಡುತ್ತಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಇಲ್ಲಿಯವರೆಗೆ ಯಾವ ದೂರುಗಳೂ ಬಂದಿಲ್ಲ. ದೂರುಗಳು ಬರದ ಹಾಗೆ ಕೆಲಸ ನಡೆಯುತ್ತಿವೆ. ಬೆಂಗಳೂರಿನಲ್ಲಿ ಒಂದು ವೈದ್ಯಕೀಯ ಉಗ್ರಾಣವಿದ್ದು ಎಲ್ಲಾ ಕಡೆ ಔಷಧಿಗಳನ್ನು ಕಳಿಸುವುದಕ್ಕೆ ಆಗುವುದಿಲ್ಲವಾದ್ದರಿಂದ ಡಿವಿಜನ್‌ಗೆ ಒಂದೊಂದು ಮಾಡಬೇಕೆಂದು ಇದ್ದೇವೆ. ಇದನ್ನು ಹಂತ ಹಂತವಾಗಿ ಜಾರಿಗೆ ತಂದು ಆದಷ್ಟು ಜಾಗ್ರತೆ ಔಷಧಿಗಳು ದೊರಕುವಂತೆ ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಾನಸಿಕ ಆರೋಗ್ಯದ ವಿಚಾರದಲ್ಲಿ ಎಲ್ಲರೂ ಬೆಂಗಳೂರಿಗೆ ಬರಬೇಕೆಂದು ಹೇಳುತ್ತಿದ್ದಾರೆ. ತಮಗೆ ಎಲ್ಲಾ ಗೊತ್ತಿದೆಯೆಂದು ನಾನು ಭಾವಿಸಿದ್ದೇನೆ. ಮಾನಸಿಕ ಆರೋಗ್ಯದ ವಿಚಾರದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಒಂದು ಎಕ್ಸ್‌ಪರಿಮೆಂಟ್ ಅನ್ನು ಮಾಡಬೇಕೆಂದು ನಿಮ್ಹಾನ್ಸ್‌ನವರು ಡಾಕ್ಟರ್ಸ್‌ನ್ನು ಅಲ್ಲಿಗೆ ಕಳಿಸಿ ನಮ್ಮಲ್ಲಿರತಕ್ಕಂತಹ ಡಾಕ್ಟರ್ಸ್‌ಗಳಿಗೆ ಈ ಬಗ್ಗೆ ಟ್ರೈನಿಂಗ್ ಕೊಡಿಸಿ ಮಾನಸಿಕ ರೋಗವಿರತಕ್ಕಂತಹವರ ಮನೆ ಬಾಗಿಲಲ್ಲೇ ಪರೀಕ್ಷೆ ಮಾಡಿ ಸಣ್ಣಪುಟ್ಟ ಖಾಯಿಲೆಗಳಿದ್ದರೆ ಅಲ್ಲೇ ಔಷಧಿಯನ್ನು ಕೊಡತಕ್ಕಂತಹ ಪ್ರಯೋಗ ನಡೆದಿದೆ. ೧೦೦ಕ್ಕೆ ೯೯ ಭಾಗದಷ್ಟು ಪ್ರದೇಶಗಳಲ್ಲಿ, ಎಲ್ಲಾ ಕಡೆ ಮಾಡಬೇಕೆಂದು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಬಳ್ಳಾರಿಯಲ್ಲಿ ನಡೆಯತಕ್ಕಂತಹ ಪ್ರಯೋಗ ಏನಿದೆ, ಅದು ಪೂರ್ತಿಯಾದ ಮೇಲೆ ಎಲ್ಲಾ ಜಿಲ್ಲೆಯಲ್ಲೂ ಕೂಡ ಡಾಕ್ಟರ್‌ಗಳಿಗೆ ತರಬೇತಿ ಕೊಟ್ಟು ಈ ಮಾನಸಿಕ ಖಾಯಿಲೆ ಇರತಕ್ಕಂತಹವರು ಯಾರಿದ್ದಾರೆ, ಅವರಿಗೆ ಖಾಯಿಲೆ ಏನಿದೆ ಎಂದು ಪತ್ತೆಹಚ್ಚಿ ಅಲ್ಲೇ ಔಷಧಿಕೊಡತಕ್ಕಂಥ ಪ್ರಯತ್ನ ಮಾಡುತ್ತಾರೆ. ಬೆಂಗಳೂರಿಗೆ ಬರಲೇ ಬೇಕಾಂತಹ ಪರಿಸ್ಥಿತಿಯಿದ್ದರೆ, ಅಂತಹವರು ಮಾತ್ರ ಬರಬಹುದು. ಇದು ಬಹಳ ಉಪಯುಕ್ತವಾದ ಸಲಹೆ, ಇದನ್ನು ಜಾರಿಗೆ ತರುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ಹೇಳಿ ವೈದ್ಯಕೀಯ ವಿಚಾರದಲ್ಲಿ ನನ್ನ ಶಾಸಕ ಮಿತ್ರರ ಸಹಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ನಾವು ಕೊಡತಕ್ಕಂತಹ ಔಷಧಿಯನ್ನು ಹೆಚ್ಚು ಸದುಪಯೋಗವಾಗುವಂತೆ ಹಾಗೂ ಉಚಿತ ಚಿಕಿತ್ಸೆ ಆಗುವ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಈ ಸಮಿತಿಯನ್ನು ಏನು ಮಾಡಿದ್ದೇವೆ ಆ ಸಮಿತಿಯವರು ಸ್ವಲ್ಪ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ, ನನ್ನ ಈ ಮಾತನ್ನು ಮುಗಿಸುತ್ತೇನೆ.

ಶ್ರೀ ಯಂ. ಭೂಪತಿ.—ಆಯುರ್ವೇದದ ಬಗ್ಗೆ, ಹೋಮಿಯೋಪತಿ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಆಯುರ್ವೇದ, ಯುನಾನಿ, ಹೋಮಿಯೋಪತಿ ಬಗ್ಗೆ ನಮ್ಮ ಸರ್ಕಾರ ಹೆಚ್ಚಿನ ಆಸಕ್ತಿ ತೆಗೆದುಕೊಂಡಿದೆಯೆಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಯುರ್ವೇದ, ಯುನಾನಿ, ಹೋಮಿಯೋಪತಿಯಲ್ಲಿ ನಾಲ್ಕು ವರ್ಷ ಯಾರು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿರುತ್ತಾರೆ, ಅಂತಹವರಿಗೆ ನಾಲ್ಕು ಚಿನ್ನದ ಮೆಡಲ್‌ಗಳನ್ನು ಕೊಡಬೇಕೆಂದು ತೀರ್ಮಾನಮಾಡಿ, ಅದನ್ನು ಈ ವರ್ಷ ಅನೌನ್ಸ್ ಮಾಡಿದ್ದೇವೆ. ಆರು ಜನಕ್ಕೆ ೨೫೦ ರೂಪಾಯಿಗಳಂತೆ ಮಾಸಾಶನ ಕೊಡ ಬೇಕೆಂದು ಇದ್ದೇವೆ. ಯಾರು ಬಹಳ ಉತ್ತಮವಾದ ಸೇವೆ ಮಾಡುತ್ತಿದ್ದಾರೆ ಅಂತಹವರಿಗೆ ಇದನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಖಾಸಗಿ ಕಾಲೇಜುಗಳಿಗೆ ೧೦೦ಕ್ಕೆ ೭೫ ಭಾಗದಷ್ಟು ಹಣ ವನ್ನು ಅನುದಾನವಾಗಿ ಕೊಡುತ್ತಿದ್ದೇವೆ. ಆಯುರ್ವೇದಕ್ಕೆ ೧೦೦ಕ್ಕೆ ೯೦ ರಷ್ಟನ್ನು ಮಾಡಬೇಕೆಂದು, ಅದನ್ನು ಚೆಕ್ಸ್ ಮುಖಾಂತರವಾಗಿ ಕೊಡಬೇಕೆಂದು ಇದ್ದೇವೆ. ೧೦೦ಕ್ಕೆ ೧೦೦ರಷ್ಟು ಅನುದಾನಕೊಡಿ ಎಂದು ಕೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ವರ್ಷ ಪ್ರಕೃತಿ ಚಿಕಿತ್ಸೆಗೆಂದು ಹೆಚ್ಚಿಗೆ ಫಂಡ್ಸನ್ನು ಅಂದರೆ ೧೦ ಲಕ್ಷ ರೂಪಾಯಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿದ್ದಾರೆ. ಬೆಂಗಳೂರಿನ ಒಂದು ಕಡೆ ನಾವೇ ಅಥವಾ ಖಾಸಗಿಯವರ ಮುಖಾಂತರ ಜಯನಗರದಲ್ಲಿ ಪ್ರಕೃತಿ ಚಿಕಿತ್ಸಾ ಕೇಂದ್ರವೇನಿದೆ, ಅಂಥಾ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಪ್ರಯತ್ನ ಪಡುತ್ತಿದ್ದೇವೆ. ಮೈಸೂರಿನಲ್ಲಿ ಈ ಕೆಲಸ ಚೆನ್ನಾಗಿ ನಡೆಯುತ್ತಿದೆ. ಇನ್ನು ನಮ್ಮಲ್ಲಿರತಕ್ಕಂತಹ ಇನ್‌ಛಾರ್ಜ್ ಡೈರೆಕ್ಟರ್‌ರವರನ್ನು ಫುಲ್ ಟೈಮ್ ಡೈರೆಕ್ಟರ್ ಆಗಿ ಮಾಡಬೇಕೆಂಬ ಪ್ರಶ್ನೆ ಸರ್ಕಾರ ಪರಿಶೀಲನೆಯಲ್ಲಿದೆ. ಈ ಯುನಾನಿ ವಿಚಾರದಲ್ಲಿ ಹೇಳಬೇಕೆಂದರೆ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಅನ್ನು ಕೇಂದ್ರ ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ. ನಾವು ೪೦ ಎಕರೆ ಜಮೀನನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದವರು ಕೆಲಸ ಇನ್ನೂ ಪ್ರಾರಂಭ ಮಾಡಿಲ್ಲ. ಬೆಂಗಳೂರಿನಲ್ಲಿ ಹೋಮಿಯೋಪತಿ ಕಾಲೇಜನ್ನು ಈ ವರ್ಷ ಆರಂಭ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಯಾಂಕ್ಷನ್ ಮಾಡಿದ್ದಾರೆ. ಸೋಮವಾರಪೇಟೆಯಲ್ಲಿ ಹೋಮಿಯೋಪತಿ ಕಾಲೇಜು ನಡೆದಿದೆ.

ಶ್ರೀ ಎಂ. ರಾಮಪ್ಪ.—ಬಳ್ಳಾರಿಯಲ್ಲಿ ಟಿ. ಬಿ. ಸ್ಯಾನಿಟೋರಿಯಂ ಆಸ್ಪತ್ರೆ ಇದೆ, ಅದಕ್ಕೆ ಕಾಂಪೌಂಡ್ ಇಲ್ಲ ಅಲ್ಲಿ ಇರತಕ್ಕ ಹಾಸಿಗೆಗಳ ಮೇಲೆ ಮನುಷ್ಯರು ಮಲಗುವ ಹಾಗಿಲ್ಲ. ಆಸ್ಪತ್ರೆಯಲ್ಲಿ ಕುಡಿಯುವ ನೀರಿಲ್ಲ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನು ನರ್ಸಿಂಗ್ ಸೆಂಟರ್ ಒಂದು ಇದೆ, ಅಲ್ಲಿಗೆ ಹೋಗುವುದಕ್ಕೆ ಬರುವುದಕ್ಕೆ ವಾಹನಗಳ ಸೌಕರ್ಯ ಇಲ್ಲ. ಮಾನ್ಯ ಮಂತ್ರಿಯವರು ಬಂದಾಗ ಈ ವಿಷಯ ತಿಳಿಸಿದ್ದಕ್ಕೆ ೨–೩ ಲಕ್ಷ ಕೊಟ್ಟು ರಿಪೇರಿ ಮಾಡಿಸಿಕೊಡುತ್ತೇನೆಂದು ಹೇಳಿದ್ದರೂ ಇದುವರೆಗೆ ಏನೂ ಆಗಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನರ್ಸಿಂಗ್ ಸೆಂಟರ್ ವಿಚಾರದಲ್ಲಿ ಕಟ್ಟಡವನ್ನು ರಿಪೇರಿ ಮಾಡಿಸಿ ವರ್ಗ ಮಾಡಿಸುತ್ತೇನೆ. ಅಲ್ಲಿ ಮುನಿಸಿಪಾಲಿಟಿಯವರದು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ನರ್ಸಿಂಗ್ ಸೆಂಟರ್ ಬೇರೆ, ಎ.ಎನ್.ಎಂ.ಎಸ್. ಸೆಂಟರ್ ಬೇರೆ ಇದೆ. ನರ್ಸಿಂಗ್ ಸೆಂಟರ್‌ನಲ್ಲಿ ಪಿ.ಡಬ್ಲ್ಯು.ಡಿ.ನವರು ಸಿಮೆಂಟ್ ಇಟ್ಟು ಕೊಂಡಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಎರಡನ್ನೂ ಮಾಡಿಸುತ್ತೇನೆ. ಕಾಂಪೌಂಡ್ ಹಾಕಿಸುವ ಬಗ್ಗೆ ಕೂಡ ವಿಚಾರ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಹಣಕಾಸಿನ ತೊಂದರೆ ಬಾರದಂಥ ಒಂದು ಸಲಹೆ ಕೊಟ್ಟಿದ್ದೆ. ಪಿ.ಹೆಚ್.ಯು.ಗಳಿಗೆ ಹೆರಿಗೆ ಭತ್ಯವನ್ನು ಕೊಡತಕ್ಕ ಅಧಿಕಾರವನ್ನು ಕೊಟ್ಟಿಲ್ಲ. ಪಿ.ಹೆಚ್.ಸಿ.ಗೆ ಕೊಟ್ಟಿದ್ದೀರಿ. ಹೆಣ್ಣು ಮಕ್ಕಳು ೧೫–೨೦ ಮೈಲಿ ಹೋಗಿಬರಬೇಕಾಗುತ್ತದೆ. ಪಿ.ಹೆಚ್.ಯು. ಆದರೆ ೧೦–೧೨ ಯೂನಿಟ್‌ಗಳು ಇವೆ. ಇದರಿಂದ ಹಣಕಾಸಿನ ತೊಂದರೆ ಕೂಡ ಬರುವುದಿಲ್ಲ ಮತ್ತೆ ಸಮುದಾಯ ಆರೋಗ್ಯ ಮಾರ್ಗದರ್ಶಕರಿಗೆ ಗೌರವಧನ ಕೊಡುತ್ತಿದ್ದೀರಿ, ಅದನ್ನು ಹೆಚ್ಚಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಭಾರತೀಯ ವೈದ್ಯ ಪದ್ಧತಿಯಲ್ಲಿ ಅವ್ಯವಸ್ಥೆಯಾಗಿದ್ದು ಪಾಠ ಪ್ರವಚನಗಳು ಸಮಯಕ್ಕೆ ಸರಿಯಾಗಿ ನಡೆಯುತ್ತಿಲ್ಲ ಪರೀಕ್ಷೆಗಳು ಕೂಡ ನಡೆಯುತ್ತಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹೆರಿಗೆ ಭತ್ಯ ಕೊಡುವುದಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಘಟಕದ ಅಧಿಕಾರಿಗಳಿಗೆ ಡ್ರಾಯಿಂಗ್ ಪವರ್ಸ್ ಇಲ್ಲ. ಆರೋಗ್ಯ ಕೇಂದ್ರದ ವೈದ್ಯರುಗಳಿಗೆ ಅಧಿಕಾರ ಇದೆ ಅದು ನಮ್ಮ ದುಡ್ಡು ಅಲ್ಲ. ತಮ್ಮ ಸಲಹೆಯನ್ನು ಒಪ್ಪಿಕೊಂಡರೆ ವಿಚಾರ ಮಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲಾ ಸರ್ಕಾರದ ದುಡ್ಡು ತಾನೆ ? ಅಲ್ಲಿನ ಅಧಿಕಾರಿಗಳಿಗೆ ಡ್ರಾಯಿಂಗ್ ಪವರ್ಸ್ ಕೊಡಿ

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸಮುದಾಯಿಕ ವರ್ಕರ್ಸ್ ಬಗ್ಗೆ ಕೇಂದ್ರ ಸರ್ಕಾರದವರು 50 ರೂಪಾಯಿ ಕೊಡುತ್ತಿದ್ದಾರೆ. ಕನಿಷ್ಟ 100 ರೂಪಾಯಿಯಾದರೂ ಕೊಡಿ ಎಂದು ಹೇಳಿದ್ದೇವೆ. ಅದನ್ನು ಒಪ್ಪಿಕೊಂಡರೆ ಕಾರ್ಯರೂಪಕ್ಕೆ ತರುತ್ತೇವೆ. ಭಾರತೀಯ ವೈದ್ಯ ಪದ್ಧತಿಯಲ್ಲಿ ಕೆಲವು ಹುದ್ದೆಗಳನ್ನು ಭರ್ತಿ ಮಾಡಿರಲಿಲ್ಲ, ಇತ್ತೀಚೆಗೆ ಫಿಲಪ್ ಮಾಡಿದ್ದೇವೆ. ಅಲ್ಲಿರತಕ್ಕ ತೊಂದರೆಗಳ ಬಗ್ಗೆ ಆದಷ್ಟು ಬೇಗ ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.—ಹೆರಿಗೆ ಭತ್ಯವನ್ನು ಆರೋಗ್ಯ ಇಲಾಖೆಯಿಂದ ಕೊಡಿಸಿದರೆ ಜನಗಳಿಗೆ ತಲುಪುವುದಿಲ್ಲ, ತಾಲ್ಲೂಕುಬೋರ್ಡಿನಿಂದ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ತುಮಕೂರು ಜಿಲ್ಲಾ ಆಸ್ಪತ್ರೆಯ ಕಟ್ಟಡ ಸ್ಥಗಿತಗೊಂಡಿದೆ. ಅದನ್ನು ಬೇಗ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ತುಮಕೂರಿಗೆ ಒಂದು ಗ್ಲೂಕೋಸ್ ಕೇಂದ್ರವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಹಿರೇಹಳ್ಳಿಯಲ್ಲಿ 200 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶವಿದ್ದು, ಅಲ್ಲಿಗೆ ಅವಶ್ಯಕವಾಗಿ ಒಂದು ಪಿ. ಹೆಚ್. ಸಿ. ಸೆಂಟರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಪಿ. ಹೆಚ್. ಸಿ. ಸೆಂಟರ್ ಮಾಡುವ ವಿಚಾರದಲ್ಲಿ ಮಾನ್ಯ ಉಪಾಧ್ಯಕ್ಷರು ಕೇಳಿದ್ದಾರೆ, ಅದರ ಬಗ್ಗೆ ಯೋಚನೆ ಮಾಡಲಾಗುವುದು. ಗ್ಲೂಕೋಸ್ ಸೆಂಟರ್ ವಿಚಾರದಲ್ಲಿ ಸಬ್ ಪ್ಲಾನ್‌ನಲ್ಲಿ ದುಡ್ಡು ಕೊಡಿಸಿ, ಮಾಡಬೇಕಾಗುವುದರಿಂದ ನಿಧಾನವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷದಿಂದ ಅದೇ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಮೆಡಿಕಲ್ ಸಬ್ ಸೆಂಟರ್ ನನ್ನ ಕ್ಷೇತ್ರವಾದ ಹತ್ತಿಕೊಣಿ ಎಂಬ ಹಳ್ಳಿಯಲ್ಲಿ ಇತ್ತು. ಮಂತ್ರಿಮಂಡಲದ ಮಂತ್ರಿಯೊಬ್ಬರು ನನ್ನ ಕ್ಷೇತ್ರದಿಂದ ತೆಗೆದು ತಮ್ಮ ಕ್ಷೇತ್ರಕ್ಕೆ ಹಾಕಿಕೊಂಡರು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು, ತಾವು ಕೂಡ ಆಶ್ವಾಸನೆ ಕೊಟ್ಟಿದ್ದಿರಿ ತಕ್ಷಣ ಶಿಫ್ಟ್ ಮಾಡಿಸುತ್ತೇನೆಂದು, ಇದುವರೆವಿಗೂ ಮಾಡಿಲ್ಲ. ಇದಕ್ಕೆ ಕಾರಣ ಏನು ? ಗುಲ್ಬರ್ಗದಲ್ಲಿ ಹೊರರೋಗಿಗಳ ವಿಭಾಗವನ್ನು ಮಾಡಬೇಕೆಂದು ತಾವು ಗುಲ್ಬರ್ಗಕ್ಕೆ ಬಂದಾಗ ಅನೇಕ ಮನವಿ ಮಾಡಿದ್ದರು. ಅಲ್ಲದೆ, ಬರ್ನಿಂಗ್ಸ್ ವಾರ್ಡ್ ಮಾಡಬೇಕೆಂಬ ಬೇಡಿಕೆಯನ್ನು ಕೂಡ ಇಟ್ಟಿದ್ದರು. ಹೊರರೋಗಿಗಳ ವಿಭಾಗಕ್ಕೆ ಜಾಗವನ್ನು ಕೂಡ ತೋರಿಸಿದ್ದರು. ಇದರ ಬಗ್ಗೆ ತಾವು ಪ್ರಸ್ತಾಪ ಮಾಡಲಿಲ್ಲ. ಇಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಮೆಡಿಕಲ್ ಕಾಲೇಜಿಗಾಗಿ ಎಷ್ಟು ಅರ್ಜಿಗಳು ಬಂದಿವೆ ? ಯಾವ ಯಾವ ಅರ್ಜಿಗಳನ್ನು ಕನ್ಸಿಡರ್ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೀರಿ, ಕೊಡಬಾರದೆಂದು ನಿರ್ಧಾರ ತೆಗೆದುಕೊಳ್ಳಲಾಗಿದೆಯೇ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸಬ್ ಸೆಂಟರ್ ಬಗ್ಗೆ ಡೈರೆಕ್ಟರ್‌ಗೆ ಹೇಳಿ ಕಾರ್ಯಗತ ಮಾಡಿಸುತ್ತೇನೆ. ಬರ್ನಿಂಗ್ಸ್ ವಾರ್ಡ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಕಾಲೇಜ್ ಮ್ಯಾನೇಜ್‌ಮೆಂಟಿನವರು ಕೂಡ ದುಡ್ಡು ಕೊಡುವುದರಿಂದ ಕೋಬಾಲ್ಟ್ ಯೂನಿಟ್ ಕೂಡ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಮೆಡಿಕಲ್ ಕಾಲೇಜುಗಳ ಬಗ್ಗೆ ಬಂದಿರತಕ್ಕ ಅರ್ಜಿಗಳ ಬಗ್ಗೆ ತೀರ್ಮಾನತೆಗೆದುಕೊಂಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ಅರ್ಜಿಗಳು ಬಂದಿವೆ ? ಮೆಡಿಕಲ್ ಕಾಲೇಜು ಕೊಡುವುದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು ? ಸಬ್ ಸೆಂಟರ್ ಬಗ್ಗೆ ಮೂರು ವರ್ಷದಿಂದಲೂ ಹೇಳುತ್ತಿದ್ದೀರಿ ? ನಿಮ್ಮ ಮಾತನ್ನು ಡೈರೆಕ್ಟರ್ ಕೇಳುವುದಿಲ್ಲವೆ ? ನನ್ನ ಕ್ಷೇತ್ರಕ್ಕೆ ಕೊಡಬಾರದೆಂದು ತೀರ್ಮಾನಮಾಡಲಾಗಿದೆಯೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ವಿಶ್ವವಿದ್ಯಾನಿಲಯ ಶಿಫಾರಸ್ಸು ಮಾಡಿದಂಥ ಅರ್ಜಿಗಳು ಸರ್ಕಾರಕ್ಕೆ ಬಂದಿಲ್ಲ. ನೇರವಾಗಿ ನನಗೆ ಕೆಲವು ಅರ್ಜಿಗಳು ಬಂದಿವೆ. ಅವುಗಳ ಮೇಲೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಈಗಾಗಲೇ ನನ್ನ ಕ್ಷೇತ್ರದಲ್ಲಿ ಎರಡು ಸರ್ಕಾರಿ ಆಸ್ಪತ್ರೆಗಳು ಕೆಲಸ ಮಾಡುತ್ತಿವೆ. ಸರ್ಕಾರಿ ಬಿಲ್ಡಿಂಗ್‌ನಲ್ಲೇ ಇವೆ ಇವಕ್ಕೆ ಬಿಲ್ಡಿಂಗ್ ಕಟ್ಟುವುದಕ್ಕೆ ಎಸ್ಟಿಮೇಟಾಗಿ ಟೆಂಡರ್ ಕರೆದು ವರ್ಕ್ ಕೂಡ ಕಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದಾರೆ. ಹೋದ ಸಲ ನಾನು ಇಲ್ಲಿ ಪ್ರಸ್ತಾಪ ಮಾಡಿದಾಗ ಅವರೇ ಖುದ್ದು ಸ್ಥಳ ಪರಿಶೀಲನೆ ಮಾಡಿ ಬೇರೆ ಕಡೆ ಆದರೆ ಕೊಡುತ್ತೇನೆ ಎಂದಿದ್ದರು. ಆಸ್ಪತ್ರೆಗಳ ಕಟ್ಟಡದ ಕೆಲಸ ಕಂಟ್ರಾಕ್ಟ್‌ದಾರರಿಗೆ ವಹಿಸಿದ ಮೇಲೆ ಸ್ಟೇ ಆರ್ಡರ್ ಕೊಟ್ಟು ಕೆಲಸ ನಿಲ್ಲಿಸಿದ ರೀತಿ ಸೂಕ್ತವಲ್ಲ. ಡೆವಲಪ್‌ಮೆಂಟ್ ಕೆಲಸಗಳು ನಿಂತು ಹೋದರೆ ಹಣ ಲ್ಯಾಪ್ಸಾಗುತ್ತದೆ. ನಿಮ್ಮ ಅಧಿಕಾರಿಗಳೇ ಎಲ್ಲ ನೋಡಿ ಏನು ರಿಪೋರ್ಟ್ ಕೊಟ್ಟಿದ್ದಾರೆ ಅದರಂತೆ ಬೇಗ ಕೊಡಿ. ಅಧಿಕಾರಿಗಳಲ್ಲೇ ನಿಮಗೆ ವಿಶ್ವಾಸ ಇಲ್ಲದಿದ್ದರೆ ತಕ್ಷಣ ಇನ್ನೊಂದು ವಾರದಲ್ಲೇ ಸ್ಥಳ ಪರಿಶೀಲನೆ ಮಾಡಿ ನಿಮ್ಮ ಮನಸ್ಸಿಗೇ ತೃಪ್ತಿ ಬರುವ ಕಡೆ ಕೊಡಿ. ಹೀಗೆ ಮಾಡುತ್ತೇನೆಂದು ಹಿಂದೆಯೂ ಭರವಸೆ ಕೊಟ್ಟಿದ್ದಿರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ಕೆಲಸದ ಬಗ್ಗೆ ನಾನೂ ಮಾದೇಗೌಡರೂ ಇಬ್ಬರು ಜೊತೆಯಲ್ಲೇ ಹೋಗಿ ಸ್ಥಳ ಪರಿಶೀಲನೆ ಮಾಡಿಕೊಡುವವರೆಗೆ ನನಗೆ ತೃಪ್ತಿ ಇಲ್ಲ. ಹೀಗೆ ಹೋದ ಸಲ ಮಾಡಬೇಕೆಂದಿರುವಾಗಲೇ ಚುನಾವಣೆ ಬಂದು ನನ್ನ ಮೇಲೆ ಆರೋಪ ಬಂದು ಗವರ್ನರ್ ಹತ್ತಿರ ದೂರು ಕೊಟ್ಟು, ಹೈಕೋರ್ಟಿಗೆ ಅರ್ಜಿ ಕೂಡ ಹೋಯಿತು. ಈಗ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ. ನೀವು ಹೇಳಿದ್ದ ಜಾಗ ಹ್ಯಾಮ್ಲೆಟ್‌ನಲ್ಲಿದೆ. ಆ ಕಡೆ ಈ ಕಡೆ ಮನೆಗಳು ಬಂದುಬಿಟ್ಟಿವೆ. ಆದ್ದರಿಂದ ಹತ್ತಾರು ಊರುಗಳಿಗೆ ಮಧ್ಯೆ ಬರುವ ಹಾಗೆ ಒಳ್ಳೆಯ ಜಾಗದಲ್ಲಿ ಮಾಡಿಸೋಣ, ಹೋಗಿ ನೋಡೋಣ ಎಂದಿದ್ದೆ. ಆದರೆ ಜನರೇ ಅದಕ್ಕೆ ಒಪ್ಪುತ್ತಿಲ್ಲ. ಈಗಲೂ ಕೂಡ ನಾವಿಬ್ಬರೂ ಹೋಗಿ ೮–೧೦ ಹಳ್ಳಿಗಳ ಮಧ್ಯೆವಾಗುವಂತೆ ಎಲ್ಲೆಲ್ಲಿ ಒಳ್ಳೆಯ ಜಾಗ ಇದೆಯೋ ಅದನ್ನು ನೀವೂ, ಜನತೆ ಒಪ್ಪಿಕೊಳ್ಳುವುದಕ್ಕಾದರೆ ನಾನು ಮಾಡಿಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಒಂದು ಗುಂಟೆ ಜಮೀನನ್ನು ಕೂಡ ಯಾರೂ ಕೊಡುವವರಿಲ್ಲ. ನಾನು ಮಂತ್ರಿಯಾಗಿದ್ದಾಗ ಅದೇ ಸೂಕ್ತ ಸ್ಥಳವೆಂದು ತಿಳಿದೇ ನಾನು ಆ ಜಾಗ ಆರಿಸಿದ್ದೆ. ನನ್ನಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ನೀವೇ ಯಾವುದು ಬೇಕೋ ಆಯ್ದುಕೊಂಡು ಮಾಡಿಸಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತಾವು ಕೊಡಿಸಿರುವ ಜಮೀನಿನ ಸುತ್ತ ಆ ಕಡೆ ಈ ಕಡೆ ಮನೆಗಳು ಬಂದು ಬಿಟ್ಟಿವೆ. ಅಲ್ಲಿ ಕಟ್ಟಲು ಆಗುವುದಿಲ್ಲ. ಮಾನ್ಯ ಮಾದೇಗೌಡರ ಬಗ್ಗೆ ನನಗೆ ನಂಬಿಕೆ ಇಲ್ಲವೆಂದರೆ ಅದು ನಿಜವಲ್ಲ. ಆದ್ದರಿಂದ ಇನ್ನು ಹದಿನೈದು ದಿವಸ ಟೈಮ್ ಕೊಡಿ. ಜೊತೆಯಲ್ಲೇ ಹೋಗಿ ತೀರ್ಮಾನ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನವು ಎರಡು ಪ್ರಶ್ನೆ. ಒಂದನೆಯದು, ಈ ಬೆಂಗಳೂರು ಡೆಂಟಲ್ ಕಾಲೇಜಿನಲ್ಲಿ ೩೩ ಪೋಸ್ಟ್ಸ್ ಅಪ್‌ಗ್ರೇಡೇಷನ್ ಆಗಿ ಸರ್ಕಾರ ಆಜ್ಞೆ ಹೊರಡಿಸಿ ೬ ತಿಂಗಳಾಯಿತು ಆದರೂ ಸಹ ಇಲ್ಲಿಯವರೆಗೆ ಆ ಪೋಸ್ಟ್‌ಗಳನ್ನು ಭರ್ತಿ ಮಾಡಿಲ್ಲ. ನೀವು ಕೊಡುವುದರಲ್ಲಿ ಅವರೆಲ್ಲ ಮ್ಯಾಕ್ಸಿಮಮ್ ಗ್ರೇಡ್ ರೀಚಾಗಿ ಪ್ರಮೋಷನ್ ಕೊಟ್ಟರೂ ಸಹ ಅಡಿಷನಲ್ ಎಮಾಲ್ಯುಮೆಂಟ್ಸ್ ಬರುವುದಿಲ್ಲ. ಆದ್ದರಿಂದ ಫಾರ್ಮಲಿಟೀಸ್ ಬಿಟ್ಟು ಆಜ್ಞೆಯನ್ನು ಈಡೇರಿಸುವ ಭರವಸೆ ಕೊಡುತ್ತೀರಾ ಎರಡನೆಯದೆಂದರೆ, ರಾಜಾಜಿನಗರಕ್ಕೆ ಸಾರ್ವಜನಿಕ ಆಸ್ಪತ್ರೆ ಇಲ್ಲವೇ ಇಲ್ಲ. ಈಗ ಮಲ್ಲೇಶ್ವರಕ್ಕೆ ಹೋಗಬೇಕಾಗಿದೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಉತ್ತರಕ್ಕೆ ಒಂದು ಆಸ್ಪತ್ರೆ ಮಾಡಿಸಿಕೊಡಿ ಎಂದು ಕಳೆದ ಸಲ ಕೇಳಿದ್ದೆ. ಯೋಚನೆ ಮಾಡೋಣ ಎಂದಿದ್ದಿರಿ. ಹೇಗೂ ಬಿ.ಡಿ.ಎ ನವರದು ಸಾಣೆಗುರವನಹಳ್ಳಿಯಲ್ಲಿ ಜಮೀನು ಇದೆ. ತಕ್ಷಣ ನೀವು ಆಜ್ಞೆ ಹೊರಡಿಸಿದರೆ ಅದು ಸಿಗಬಹುದು. ಈ ಬಗ್ಗೆ ಭರವಸೆ ಕೊಡುವಿರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಡೆಂಟಲ್ ಕಾಲೇಜ್ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ರಾಜಾಜಿನಗರದಲ್ಲಿ ಇನ್ನೊಂದು ಆಸ್ಪತ್ರೆ ಕೊಡುವ ಬಗ್ಗೆ ಸಧ್ಯಕ್ಕೆ ಹಣಕಾಸಿನ

ಸ್ಥಿತಿ ಕಷ್ಟವಿದೆ. ಆದ್ದರಿಂದ ಬೆಂಗಳೂರು ಕಾರ್ಪೊರೇಷನ್‌ನವರು ಈ ಜಾಗದಲ್ಲಿ ಬಿಲ್ಡಿಂಗ್ ಕಟ್ಟಿಸಿ ಕೊಟ್ಟರೆ ನಾವು ಡಾಕ್ಟರ್ಸ್, ಔಷಧ ಎಲ್ಲ ಇಟ್ಟು ಆಸ್ಪತ್ರೆ ನಡೆಸುತ್ತೇವೆ. ಇದಕ್ಕೆ ವ್ಯವಸ್ಥೆ ಮಾಡಿಸಿದರೆ ನಾನು ಮಾಡಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮೆಡಿಕಲ್ ಕಾಲೇಜುಗಳಲ್ಲಿ ಗವರ್ನಮೆಂಟ್ ಕೋಟಾ ಸೀಟ್ಸ್ ಏನಿವೆ ಅನೇಕ ಸೀಟ್‌ಗಳು ಫಿಲ್ ಅಪ್ ಆಗದೆ ಹಾಗೇ ಉಳಿದಿವೆ ಎಂದು ತಿಳಿದುಬಂತು. ಏನಾದರೂ ಆ ತರಹ ಉಳಿದಿದ್ದರೆ ಮೆರಿಟ್ ಮೇಲೆ ಹಂಚಲು ಕ್ರಮ ಕೈಗೊಂಡಿದ್ದೀರಾ ? ಇಲ್ಲ ತೆಗೆದುಕೊಳ್ಳುತ್ತೀರಾ ? ಮತ್ತು ಮೈಸೂರು ಕೆ. ಆರ್. ಆಸ್ಪತ್ರೆಯಲ್ಲಿ ಅಂಗವಿಕಲರಿಗೋಸ್ಕರ ಒಂದು ಶಾಖೆ ತೆರೆಯಬೇಕೆಂಬ ಒಂದು ಯೋಜನೆ ಇದೆಯೆಂದು ನನ್ನ ಗಮನಕ್ಕೆ ಬಂತು. ಇದನ್ನು ಕಾರ್ಯರೂಪಕ್ಕೆ ತಂದರೆ ಶೇಕಡ ನೂರರಷ್ಟು ಸಬ್ಸಿಡಿ ಕೇಂದ್ರ ಸರ್ಕಾರ ಕೊಡುತ್ತದಂತೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ. ತಿಳಿಸಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮೆಡಿಕಲ್ ಕಾಲೇಜಿನಲ್ಲಿ ನಮ್ಮ ಸೀಟುಗಳು ಭರ್ತಿ ಆಗದೇ ಇರುವುದು ಅಲ್ ಅಮೀನ್ ಕಾಲೇಜಿನಲ್ಲಿ ಮಾತ್ರ. ಅದೂ ನಾಲ್ಕೈದು ಇದ್ದು ಈಗಾಗಲೇ ಸ್ಟೂಡೆಂಟ್ಸನ್ನು ಕಳಿಸಿದ್ದೇವೆ. ಒಂದು ಪಕ್ಷ ಅವರು ಅಡ್ಮಿಟ್ ಆಗದಿದ್ದರೆ ಮೆರಿಟ್ ಆಧಾರದ ಮೇಲೆ ಮತ್ತೆ ಬೇರೆಯವರನ್ನು ಕಳುಹಿಸುತ್ತೇನೆ. ಇನ್ನು ಮೈಸೂರಿನಲ್ಲಿ ಅಂಗವಿಕಲರಿಗೋಸ್ಕರ ಶಾಖೆ ತೆರೆಯಲು ಕೇಂದ್ರ ಸರ್ಕಾರದ ಸ್ಕೀಮು ನಮ್ಮ ಇಲಾಖೆಗೆ ಬಂದಿಲ್ಲ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಬಂದಿದೆ. ಇದು ನನಗೆ ಗೊತ್ತಾದ ಮೇಲೆ ನಮ್ಮ ಕಾರ್ಯದರ್ಶಿಗೆ ಹೇಳಿ ಆ ಡಿಪಾರ್ಟ್‌ಮೆಂಟಿನ ಕಾರ್ಯದರ್ಶಿಯನ್ನು ಕೇಳಿ ನಮ್ಮಲ್ಲಿ ಜಾಗ ಇದೆ, ನೀವು ಅವರನ್ನು ಕೇಳಿ ನಾವೇ ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳಿದ್ದೆ. ಅವರು ಕೇಳಿದ್ದಾರೆ. ಉತ್ತರ ಇನ್ನೂ ಬಂದಿಲ್ಲ. ನಮಗೆ ಅವರು ವಹಿಸಿ ಕೊಡುವುದಾದರೆ ನಾವು ಆ ಸ್ಕೀಮನ್ನು ಕಾರ್ಯಗತಗೊಳಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಂತ್ರಿಗಳು ಉತ್ತರ ಕೊಡುವಾಗ ರೋಗಕ್ಕಿಂತ ರೋಗ ಬರದಂತೆ ಮುಂಜಾಗ್ರತೆ ವಹಿಸುವುದೇ ಒಳ್ಳೆಯದೆಂದರು. ಆದರೆ ನಮ್ಮ ಉಳ್ಳಾಳ ಕ್ಷೇತ್ರದಲ್ಲಿ ಸೊಳ್ಳೆಗಳ ಕಾಟ ತುಂಬ ಇದೆ. ಸೊಳ್ಳೆ ಕಚ್ಚಿ ಗುಳ್ಳೆ ಬಂದು ರೋಗ ಬರತಕ್ಕಂಥ ಪರಿಸ್ಥಿತಿಯಾಗಿ ನಾವು ತೊಂದರೆಯಲ್ಲಿದ್ದೇವೆ. ಆ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಗೆ ನಾವು ತಿಳಿಸಿದರೂ ಕೂಡ ಅವರು ಆ ಬಗ್ಗೆ ಹೆಚ್ಚಿನ ಒಂದು ಮೆಹನತ್ ತೆಗೆದುಕೊಳ್ಳಲಿಲ್ಲ. ಇದಕ್ಕೆ ಆದೇಶ ಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ನಮ್ಮ ಉಳ್ಳಾಲದಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರ ಇದೆ. ಅಲ್ಲಿ ಒಬ್ಬ ಲೇಡಿ ಡಾಕ್ಟರ್ ಬೇಕೆಂದು ಕೇಳಿದ್ದೆ. ಈಗಲಾದರೂ ಕೊಡಿ. ಒಂದು ಜೀಪನ್ನು ಹಳ್ಳಿಗಳಲ್ಲಿ ಓಡಾಡಲು ಕೊಡಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತಮ್ಮ ಜಿಲ್ಲೆಯ ಆರೋಗ್ಯ ಅಧಿಕಾರಿಗಳು ನಿರ್ಲಕ್ಷ್ಯದಿಂದ ಅವರು ತಪ್ಪು ಮಾಡಿದ್ದಾರೆ. ಅದನ್ನು ಅವರಿಗೆ ತಿಳಿಸಿ ಈ ಸೊಳ್ಳೆ ಕಡಿಮೆ ಮಾಡುವ ಕಾರ್ಯಕ್ರಮದ ಬಗ್ಗೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಲೇಡಿ ಡಾಕ್ಟರ್ ವಿಚಾರದಲ್ಲಿಯೂ ಸಹ ಆರೋಗ್ಯ ಕೇಂದ್ರದಲ್ಲಿ ಸ್ಯಾಂಕ್ಷನ್ ಇಲ್ಲದೇ ಇದ್ದರೆ ಅದರ ಬಗ್ಗೆ ತಾವು ನನಗೆ ಪತ್ರ ಬರೆದರೆ ನಾನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಕಳಿಸಿ ಸ್ಯಾಂಕ್ಷನ್ ಮಾಡಿಸಿಕೊಂಡು ಲೇಡಿ ಡಾಕ್ಟರನ್ನು ಕಳಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನನ್ನ ಮತದಾರ ಕ್ಷೇತ್ರದ ಕಲ್ಲೂರಿನಲ್ಲಿ ನೇಯ್ಗೆ ಕಾರ್ಮಿಕರು ಮೂರು ನಾಲ್ಕು ಸಾವಿರ ಜನ ಇದ್ದಾರೆ. ಅಲ್ಲಿ ಮೊದಲು ತಾಲ್ಲೂಕು ಬೋರ್ಡ್ ವತಿಯಿಂದ ಒಂದು ಆಸ್ಪತ್ರೆ ನಡೆಯುತ್ತಿತ್ತು, ಅದನ್ನು ಈಗ ಅಪ್‌ಗ್ರೇಡ್ ಮಾಡಿದ್ದೇವೆಂದು ಹೇಳುತ್ತಾರೆ. ಆ ಊರಿನವರು ಆಸ್ಪತ್ರೆಗೋಸ್ಕರ ೩-೪ ಎಕರೆ ಜಮೀನನ್ನು ಮತ್ತು ೨೫ ಸಾವಿರ ರೂಪಾಯಿ ಹಣವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕಾರ್ಮಿಕರಿಗೆ ಅನುಕೂಲವಾಗುವಂತೆ ಸರ್ಕಾರ ಬೇಗ ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕು. ಗುಬ್ಬಿಯಲ್ಲಿ ೫೦ ಬೆಡ್ಡುಗಳ ಆಸ್ಪತ್ರೆಯನ್ನು ಕಟ್ಟುತ್ತೇವೆಂದು ಮಾನ್ಯ ರೇವಣ್ಣನವರು ಮಂತ್ರಿಗಳಾಗಿದ್ದಾಗಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಅದರ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ ತಮಗೆ ಬಂದಿದೆ. ಅದನ್ನು ಅಪ್ರೂವ್ ಮಾಡಿ ಈ ವರ್ಷ ಕೆಲಸವನ್ನು ಮಾಡುತ್ತೀರಾ ? ಯಾವುದೇ ಹಳ್ಳಿಗೂ ಡಾಕ್ಟರುಗಳು ಹೋಗುವುದಿಲ್ಲ. ಡಾಕ್ಟರುಗಳನ್ನು ಹಳ್ಳಿಗೆ ಪೋಸ್ಟ್ ಮಾಡಿದರೆ

ಅವರು ನಮ್ಮ ಹತ್ತಿರ ಬರುತ್ತಾರೆ, ಇಲ್ಲದಿದ್ದರೆ ನಿಮ್ಮ ಹತ್ತಿರ ಬರುತ್ತಾರೆ. ಹಳ್ಳಿಗಳಲ್ಲಿ ಕ್ವಾರ್ಟರ್ಸ್ ಇರುವುದಿಲ್ಲ, ಆದ್ದರಿಂದ ಹಳ್ಳಿಗಳಿಗೆ ಹೋಗತಕ್ಕ ಡಾಕ್ಟರುಗಳಿಗೆ ಇನ್‌ಸೆಂಟೀವ್ ಜಾಸ್ತಿ ಮಾಡಿ. ಅವರು ತೆಗೆದುಕೊಳ್ಳುವ ಸಂಬಳದಲ್ಲಿ ನೂರು ರೂಪಾಯಿ ಜಾಸ್ತಿ ಮಾಡಿ. ೧೫-೨೦ ರೂಪಾಯಿ ಹೌಸ್ ರೆಂಟ್ ಅಲೋಯನ್ಸ್ ಕೊಟ್ಟರೆ ಹಳ್ಳಿಗಳಿಗೆ ಯಾರು ಹೋಗುತ್ತಾರೆ ? ಹಳ್ಳಿಗಳಲ್ಲೂ ಸಹ ೧೫೦-೨೦೦ ರೂಪಾಯಿಗಳಿಗೆ ಮನೆ ಸಿಗುವುದಿಲ್ಲ. ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಟ್ಟರೆ ನಿಜವಾಗಿಯೂ ಅನುಕೂಲವಾಗುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ಕ್ವಾರ್ಟರ್ಸ್‌ಗಳನ್ನು ಕಟ್ಟುವ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಈ ವರ್ಷದಿಂದ ಹಂತ ಹಂತವಾಗಿ ಕ್ವಾರ್ಟರ್ಸ್‌ಗಳನ್ನು ಕಟ್ಟುತ್ತೇವೆ. ವೈದ್ಯರುಗಳಿಗಾಗಿ ೩೦೦ ಕ್ವಾರ್ಟರ್ಸ್‌ಗಳನ್ನು ಕಟ್ಟಲಾಗುತ್ತದೆ. ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ಅದರಲ್ಲಿ ಬರುತ್ತದೆ ಎಎನ್‌ಎಂ, ಫಾರ್ಮಸಿಸ್ಟ್ ಇವರುಗಳಿಗಾಗಿ ೨೦೦ ಕ್ವಾರ್ಟರ್ಸ್‌ಗಳನ್ನು ಕಟ್ಟಲಾಗುತ್ತದೆ. ನಾಲ್ಕನೇ ದರ್ಜೆ ನೌಕರರುಗಳಿಗೆ ೨೦೦ ಕ್ವಾರ್ಟರ್ಸ್‌ಗಳನ್ನು ಕಟ್ಟುತ್ತೇವೆ. ಮಾನ್ಯ ಸದಸ್ಯರು ಹಳ್ಳಿಗಳಿಗೆ ಹೋಗತಕ್ಕ ಡಾಕ್ಟರುಗಳಿಗೆ ರೂರಲ್ ಅಲೋಯೆನ್ಸ್ ಕೊಡಬೇಕೆಂದು ಹೇಳಿದ್ದಾರೆ. ೮ನೇ ಫೈನಾನ್ಸ್ ಕಮಿಷನ್‌ನ ಮುಂದೆ ಈ ಬೇಡಿಕೆಯನ್ನು ಇಟ್ಟಿದ್ದೇವೆ. ಅವರು ಇನ್ನೂ ಮನ್ನಣೆಯನ್ನು ಕೊಟ್ಟಿಲ್ಲ. ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಕೆಲಸ ಮಾಡತಕ್ಕ ೧೩೭೯ ಜನ ಡಾಕ್ಟರುಗಳಿದ್ದಾರೆ. ಅವರಿಗೆ ತಿಂಗಳಿಗೆ ನೂರು ರೂಪಾಯಿಯಂತೆ ಎಷ್ಟಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಕ್ವಾರ್ಟರ್ಸ್‌ಗಳನ್ನು ಕಟ್ಟಲಿಕ್ಕೆ ಹಂಡ್ಕೋ ಯೋಜನೆ ಬೇರೆ ಯೋಜನೆಗಳಿಂದ ಹಣವನ್ನು ಪಡೆದು ೧೯೮೬-೮೭ ರಲ್ಲಿ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಗುಬ್ಬಿ ಆಸ್ಪತ್ರೆ ವಿಚಾರದಲ್ಲಿ ಹೇಳುವುದಾದರೆ ೪೫ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕಾಗಿದೆ. ಅದರಲ್ಲಿ ಮಾನ್ಯ ಸದಸ್ಯರು ಹೇಳತಕ್ಕ ಆಸ್ಪತ್ರೆಯೂ ಸೇರಿ ಹೋಗಿದೆ. ಎರಡು ಮೂರು ವರ್ಷಗಳಲ್ಲಿ ಅದನ್ನು ಮಾಡುತ್ತೇವೆ. ಈ ವರ್ಷದಲ್ಲಿಯೇ ಮಾಡಿಯೆಂದು ತಾವು ಹೇಳಿದರೆ ಹಣಕಾಸಿನ ಪರಿಸ್ಥಿತಿ ಏನೆಂಬುದು ತಮಗೆ ಗೊತ್ತಿದೆ. ಈ ವರ್ಷ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಡುವುದು ಸರಿಯಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಅಂದರೆ ೧೯೮೪ರಲ್ಲಿ ಕಿರಣಗಿ ಮತ್ತು ಶಹಬಾದ್‌ನಲ್ಲಿ ೨೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಸ್ಪತ್ರೆಯನ್ನು ಕಟ್ಟಿಸಲಿಕ್ಕೆ ಫೌಂಡೇಶನ್ ಸ್ಟೋನ್ ಇಟ್ಟು ಬಂದಿದ್ದಾರೆ. ೩೨ ಬೆಡ್ ಆಸ್ಪತ್ರೆಗೆ ದಯಮಾಡಿ ಹೆಚ್ಚು ಹಣವನ್ನು ಕೊಡಬೇಕು. ೫೦ ಸಾವಿರ ಜನಸಂಖ್ಯೆ ಇರತಕ್ಕ ಶಹಬಾದ್‌ಗೆ ಬೇಗ ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕು. ಕಿರಣಗಿಯಲ್ಲಿ ಲ್ಯಾಂಡ್ ಪ್ರಾಬ್ಲಮ್ ಇತ್ತು, ಈಗ ಅದೆಲ್ಲಾ ಮುಗಿದಿದೆ, ಈ ಎರಡೂ ಆಸ್ಪತ್ರೆಗಳನ್ನು ಕಟ್ಟಿಸಲಿಕ್ಕೆ ಮಾನ್ಯಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು.

ಶ್ರೀ. ಹೆಚ್. ಎಲ್. ತಿಮ್ಮೇಗೌಡ.— ನಾನು ಬಂದು ನೋಡುತ್ತೇನೆ, ಆಮೇಲೆ ನೋಡೋಣ.

ಶ್ರೀ ಕೆ. ಮಲ್ಲಪ್ಪ.— ಮಾನ್ಯ ಆರೋಗ್ಯ ಸಚಿವರು ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ ಶೇಕಡ ೫೦ ರಷ್ಟು ಸೀಟುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಗ್ರಾಮಾಂತರ ಪ್ರದೇಶಗಳ ಜನರ ಪರವಾಗಿ ನಾನು ಅವರಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ದಾವಣಗೆರೆ ತಾಲ್ಲೂಕು ಮಾಯಕೊಂಡ ಮತದಾರ ಕ್ಷೇತ್ರದಲ್ಲಿರುವ ಆಯುರ್ವೇದಿಕ್ ಆಸ್ಪತ್ರೆಯನ್ನು ಅಲೋಪತಿ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕು. ಹಣಬೂರು ಮತ್ತು ಐಗೂರು ಆಸ್ಪತ್ರೆಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ,

ಶ್ರೀ ಎಚ್. ಎಲ್. ತಿಮ್ಮೇಗೌಡ.— ಆಯುರ್ವೇದಿಕ್ ಆಸ್ಪತ್ರೆಯನ್ನು ಅಲೋಪತಿ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಲಿಕ್ಕೆ ಆಯುರ್ವೇದಿಕ್‌ನಲ್ಲಿ ನಂಬಿಕೆಯಿರುವವರು ವಿರೋಧ ಮಾಡುತ್ತಿದ್ದಾರೆ. ಎರಡು ಆಸ್ಪತ್ರೆಗಳನ್ನು ಮಂಜೂರು ಮಾಡತಕ್ಕ ವಿಚಾರದಲ್ಲಿ ಮಾನ್ಯ ಮಲ್ಲಪ್ಪನವರು ಬರೆದ ಪತ್ರವನ್ನು ಇಟ್ಟುಕೊಂಡಿದ್ದೇನೆ. ಈಗಾಗಲೇ ೪೫ ಜನರು ಹಣವನ್ನು ಕೊಟ್ಟಿದ್ದಾರೆ. ಅವರಿಗೆ ಆಸ್ಪತ್ರೆಗಳನ್ನು ಕೊಡುವಾಗ ತಮಗೂ ಕೊಡಲಿಕ್ಕೆ ಯೋಚನೆ ಮಾಡೋಣ.

ಶ್ರೀ ಪಟಮಕ್ಕಿ ರತ್ನಾಕರ.— ಮಾನ್ಯ ಉಪಾಧ್ಯಕ್ಷರೇ, ಮಂಗನ ಕಾಯಿಲೆ ಬಗ್ಗೆ ಗಮನ ಸೆಳೆಯುವ ಸೂಚನೆಯು ಮುಖಾಂತರ ಸರ್ಕಾರ ಮತ್ತು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ.

ಈ ಕಾಯಿಲೆಗೆ ಔಷಧಿಯನ್ನೇನಾದರೂ ಕಂಡುಹಿಡಿಯಲಾಗಿದೆಯೆ ? ಅಥವಾ ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡಲಾಗಿದೆಯೇ ಎನ್ನುವುದರ ಬಗ್ಗೆ ತಿಳಿಸಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.— ನಾನು ಉತ್ತರ ಹೇಳತಕ್ಕ ಕಾಲದಲ್ಲಿ ಹೇಳಬೇಕಾಗಿತ್ತು, ಆಗ ಹೇಳಲಿಲ್ಲ. ದಯವಿಟ್ಟು ಕ್ಷಮಿಸಬೇಕು. ಮಂಗನ ಕಾಯಿಲೆ ೪೦೦ ಜನಗಳಿಗೆ ಬಂದಿತ್ತು. ಪಾಸಿಟೀವ್ ಅಲ್ಲದಿದ್ದರೂ ೪೦೦ ಜನಗಳಿಗೆ ಕಾಯಿಲೆ ಬಂದಾಗ ಒಂದೆರಡು ಡೆತ್ ಆಗಿದೆ. ಲಸಿಕೆಯನ್ನು ತಯಾರು ಮಾಡಿ ಪ್ರಾಣಿಗಳ ಮೇಲೆ ಪ್ರಯೋಗ ಮಾಡುತ್ತಿದ್ದೇವೆ. ಪೂರ್ತಿ ಲಸಿಕೆಯನ್ನು ತಯಾರು ಮಾಡಲಿಕ್ಕೆ ಎಕ್ವಿಪ್‌ಮೆಂಟ್ ಸಿಗುತ್ತಿಲ್ಲ, ಬೇರೆ ದೇಶಗಳಿಂದ ಎಕ್ವಿಪ್‌ಮೆಂಟ್ ತರಿಸಿ ತಯಾರು ಮಾಡಬೇಕಾಗಿದೆ. ಒಬ್ಬರು ಲಸಿಕೆಯನ್ನು ತಯಾರು ಮಾಡಿ ರಾಜ್ಯ ಸರ್ಕಾರಕ್ಕೆ ಬಳುವಳಿಯಾಗಿ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಅವರ ಜೊತೆಯಲ್ಲಿ ಪತ್ರ ವ್ಯವಹಾರ ಮಾಡಿದ ಮೇಲೆ ಅವರೇ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಶಿವಮೊಗ್ಗದಲ್ಲಿ ಲಸಿಕೆಯನ್ನು ತಯಾರು ಮಾಡಲಿಕ್ಕೆ ಎಕ್ವಿಪ್‌ಮೆಂಟನ್ನೂ ಸಹ ಅವರೇ ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ದೆಹಲಿಗೆ ಹೋಗಿ ಮಾತನಾಡಲಾಗಿದೆ. ಎರಡು ಎಕ್ವಿಪ್‌ಮೆಂಟ್‌ಗಳನ್ನು ಒದಗಿಸಿ ಕೊಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಬರೆದಿದ್ದೇವೆ, ಇನ್ನೂ ಪರ್ಮಿಷನ್ ಬಂದಿಲ್ಲ, ಲಸಿಕೆಯನ್ನು ತಯಾರು ಮಾಡಿ ಕೊಡುತ್ತೇವೆಂದು ಒಪ್ಪಿಕೊಂಡಿರುವವರ ಹತ್ತಿರ ಎಕ್ವಿಪ್‌ಮೆಂಟ್ ಇದೆ, ಅದನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದೇವೆ.

ಶ್ರೀ ಡಿ. ಎ. ಚಿಣ್ಣಪ್ಪ.— ಕೇಂದ್ರ ಸರ್ಕಾರದ ಯೋಜನೆಯಲ್ಲಿ ಎರಡು ಹೆಣ್ಣು ಮಕ್ಕಳು ಇದ್ದು ಅಂತಹವರು ಕುಟುಂಬ ಕಲ್ಯಾಣ ಯೋಜನೆಗೆ ಒಳಗಾಗಿದ್ದರೆ ಅಂತಹವರ ಹೆಸರಿನಲ್ಲಿ ೧ ಲಕ್ಷ ರೂಪಾಯಿ ಡಿಪಾಸಿಟ್ ಇಡಲಾಗುತ್ತದೆಂದು ಇದೆ. ಅದನ್ನು ತಾವು ಕಾರ್ಯಗತ ಮಾಡುತ್ತಿದ್ದೀರಾ ? ಮಡಿಕೇರಿಯಲ್ಲಿ ೧ ಕೋಟಿ ೫೦ ಲಕ್ಷ ರೂಪಾಯಿ ವೆಚ್ಚದಲ್ಲಿ ಆಸ್ಪತ್ರೆಯ ಕಟ್ಟಡದ ಕೆಲಸ ನಡೆಯುತ್ತಿದೆ. ಅದು ಬಹಳ ನಿಧಾನವಾಗಿ ನಡೆಯುತ್ತಿದೆ. ಆ ಕೆಲಸ ಆದಷ್ಟು ಬೇಗ ಆಗಬೇಕು, ಈ ವರ್ಷದಲ್ಲಿ ಆ ಕೆಲಸವನ್ನು ಪೂರ್ತಿ ಮಾಡಿ ಆ ಆಸ್ಪತ್ರೆಯ ಉಪಯೋಗ ಜನರಿಗೆ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್, ಎಲ್. ತಿಮ್ಮೇಗೌಡ.— ೧ ಲಕ್ಷ ರೂಪಾಯಿ ಡಿಪಾಸಿಟ್ ಇಡತಕ್ಕ ವಿಚಾರ ನನಗೆ ಎರಡು ಮಕ್ಕಳು ಇರತಕ್ಕ ಕೇಂದ್ರ ಸರ್ಕಾರದ ನೌಕರರು ರಾಜ್ಯ ಸರ್ಕಾರದ ನೌಕರರು ಕುಟುಂಬ ಕಲ್ಯಾಣ ಯೋಜನೆಗೆ ಒಳಗಾದರೆ ಅಂತಹವರಿಗೆ ಎರಡು ಇನ್‌ಕ್ರಿಮೆಂಟ್ ಕೊಡುವುದು ಇದೆ. ಬಾಂಡ್‌ನ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಡಿ. ಎ. ಚಿಣ್ಣಪ್ಪ.—ಬರೀ ಎರಡು ಹೆಣ್ಣು ಮಕ್ಕಳು ಇದ್ದವರಿಗೆ ಮಾತ್ರ ೧ ಲಕ್ಷ ರೂಪಾಯಿ ಬಾಂಡ್ ಕೊಡತಕ್ಕ ಯೋಜನೆ ಸರ್ಕಾರದಲ್ಲಿದೆ.

ಡಾ. ಎಚ್. ಎಲ್. ತಿಮ್ಮೇಗೌಡ — ಅದನ್ನು ನಾನು ನೆಲ್ಲೀಡುತ್ತೇನೆ. ಕಟ್ಟಡ ಕಟ್ಟಿಸುವ ಬಗ್ಗೆ ಆದಷ್ಟು ಬೇಗ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಕುಟುಂಬ ಕಲ್ಯಾಣ ಯೋಜನೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಮಕ್ಕಳು ಆದರೆ ಏನು ಪರಿಹಾರ ಕೊಡುತ್ತೀರಿ ? ಮೆಡಿಕಲ್ ಸೀಟು ತೆಗೆದು ಕೊಳ್ಳಬೇಕಾದರೆ ನಮ್ಮ ರಾಜ್ಯದವರಿಗೆ ಒಂದೂವರೆ ಲಕ್ಷ ರೂಪಾಯಿ ಕೊಡಬೇಕು, ಹೊರ ರಾಜ್ಯಗಳವರು ಎರಡು-ಎರಡೂವರೆ ಲಕ್ಷ ರೂಪಾಯಿ ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಎಷ್ಟು ಮೆಡಿಕಲ್ ಕಾಲೇಜುಗಳಿವೆ ? ಮೆಡಿಕಲ್ ಕಾಲೇಜುಗಳಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಎಷ್ಟು ಜನರು ಇದ್ದಾರೆ ಹೊರರಾಜ್ಯದ ವಿದ್ಯಾರ್ಥಿಗಳು ಎಷ್ಟು ಜನರು ಇದ್ದಾರೆ ? ಅದರಲ್ಲಿ ರಾಜ್ಯದ ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿಗಳು ಎಷ್ಟು ಜನರು ಇದ್ದಾರೆ ? ಕಳೆದ ವರ್ಷ ಮೆಡಿಕಲ್ ಸೀಟು ತೆಗೆದುಕೊಳ್ಳಬೇಕಾದರೆ ಒಂದೂವರೆ ಲಕ್ಷ ಎರಡೂವರೆ ಲಕ್ಷ ಕೊಡಬೇಕಾಗಿತ್ತು, ಈ ವರ್ಷ ಅಂದರೆ ೧೯೮೭-೮೮ರಲ್ಲಿ ಮೆಡಿಕಲ್ ಸೀಟು ತೆಗೆದುಕೊಳ್ಳಬೇಕಾದರೆ ಕ್ಯಾಪಿಟೇಶನ್ ಶುಲ್ಕದ ರೇಟನ್ನು ಜಾಸ್ತಿ ಮಾಡಿದ್ದೀರಾ? ಮೂರೂವರೆ ಲಕ್ಷ-ನಾಲ್ಕು ಲಕ್ಷಕ್ಕೆ ಏರಿಸಿದ್ದೀರಾ ನನ್ನ ಮತದಾರ ಕ್ಷೇತ್ರದಲ್ಲಿರುವ ಆಸ್ಪತ್ರೆಯಲ್ಲಿ ಡಾಕ್ಟರುಗಳು ಇಲ್ಲದೆ ಒಂದೂವರೆ ತಿಂಗಳಾಯಿತು. ಇದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳವರ ಹತ್ತಿರ ಹೇಳಿದ್ದೇನೆ. ತಾವು ಬರೆದು ಕೊಡಿ, ಡೈರೆಕ್ಟರ್‌ಗೆ ಕಳುಹಿಸುತ್ತೇನೆಂದು ಹೇಳಿದ್ದೀರಿ, ಆದಷ್ಟು ಬೇಗ ಅಲ್ಲಿಗೆ ಡಾಕ್ಟರುಗಳನ್ನು ಪೋಸ್ಟ್ ಮಾಡಬೇಕು. ಇರತಕ್ಕ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ

ಎಕ್ವಿಪ್‌ಮೆಂಟ್‌ಗಳು ಇಲ್ಲ, ಇದ್ದರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆಸ್ಪತ್ರೆಗಳು ಏನಿವೆ ಅವು ದನದ ಆಸ್ಪತ್ರೆಯೋ ಜನರ ಆಸ್ಪತ್ರೆಯೋ ಅಥವಾ ಯಮನ ಆಸ್ಪತ್ರೆಯೋ ಗೊತ್ತಿಲ್ಲ. ಅದೇ ರೀತಿ ಕ್ಯಾದಗಿಯಲ್ಲಿ ಒಂದು ಆಸ್ಪತ್ರೆ ಇದೆ. ಆ ಆಸ್ಪತ್ರೆ ಪ್ರಾರಂಭವಾದಾಗ ವೈದ್ಯರಾಗಿ ಬಂದವರು ಇದುವರೆಗೆ ಅಲ್ಲೇ ಇದ್ದಾರೆ. ಆರಾಮವಾಗಿ ಗಂಡ ಹೆಂಡತಿ ಇಬ್ಬರೂ ಅಲ್ಲೇ ಇದ್ದಾರೆ. ಆ ಬಗ್ಗೆ ಮಾನ್ಯ ತಿಮ್ಮೇಗೌಡರಿಗೆ ಹೇಳಿದ್ದೇನೆ. ಬಹುಶಃ ಅಧಿಕಾರಿಗಳು ಇವರ ಮಾತು ಕೇಳುತ್ತಾರೋ ಇಲ್ಲವೋ ಗೊತ್ತಿಲ್ಲ. ಡೈರೆಕ್ಟರಿಗೆ ಕಳುಹಿಸುತ್ತೇನೆಂದು ಹೇಳುತ್ತಾರೆ. ಯಾವ ಡೈರೆಕ್ಟರೋ ಗೊತ್ತಿಲ್ಲ. ಮೊನ್ನೆ ಬಂದ ಡೈರೆಕ್ಟರಿಗೆ ಕಳುಹಿಸುತ್ತಾರೋ ಅಥವಾ ಜವರೇಗೌಡರಿಗೆ ಕಳುಹಿಸುತ್ತಾರೋ ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಕ್ಕಳಾಗುವಲ್ಲಿ ತಪ್ಪು ಆಪರೇಷನ್ ಆಗಿ ಆಗುವುದನ್ನು ಸರಿ ಮಾಡುತ್ತೇವೆ. ಅದಕ್ಕೆ ಮತ್ತೆ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾತ್ರ ಇಲ್ಲ. ಮೆಡಿಕಲ್ ಕಾಲೇಜಿನಲ್ಲಿ ಹರಿಜನರು ಎಷ್ಟಿದ್ದಾರೆಂದರೆ ಅದಕ್ಕೆ ಈಗ ಉತ್ತರಿಸುವುದಕ್ಕೆ ಆಗುವುದಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ. ಸಿರಸಿ ಆಸ್ಪತ್ರೆ ಅಪ್‌ಗ್ರೇಡ್ ಆದ ಆಜ್ಞೆಯನ್ನು ಓದಿದೆ, ಆಗ ತಾವು ಇರಲಿಲ್ಲ. ಸಿರಸಿ ಆಸ್ಪತ್ರೆ ೩೦ ಬೆಡ್ ಇದ್ದದ್ದು ೫೦ ಬೆಡ್ ಆಸ್ಪತ್ರೆಯಾಗಿ ಮಾಡುವುದಕ್ಕೆ ಆಜ್ಞೆಯಾಗಿದೆ. ೫೦ ಬೆಡ್ ಆಸ್ಪತ್ರೆ ಆದ ಮೇಲೆ ಏನು ಸ್ಟಾಫ್ ಕೊಡಬೇಕು ಅದನ್ನು ಆದಷ್ಟು ಜಾಗ್ರತೆ ಕೊಡುತ್ತೇನೆಂಬ ಭರವಸೆ ಕೊಡುತ್ತೇನೆ. ವೈದ್ಯರ ಬಗ್ಗೆ ದೂರು ಬಂದಿದೆ ಎಂದು ಹೇಳಿದ್ದೀರಿ. ಆ ರೀತಿ ಇದ್ದರೆ ಅವರ ಹೆಸರು ಬರೆದು ಪತ್ರ ಬರೆಯಿರಿ, ಅವರನ್ನು ಅಲ್ಲಿಂದ ತೆಗೆದು ಹಾಕುತ್ತೇವೆ,

ಶ್ರೀ ಗೋಪಾಲ ಮುಕುಂದ ಕಾನಡೆ.—ಡೈರೆಕ್ಟರಿಗೆ ಹೇಳಿದ್ದೇವೆಂದು ದಯವಿಟ್ಟು ಹೇಳಬೇಡಿ. ಅವರು ನಿಮ್ಮ ಮಾತನ್ನು ಕೇಳುವುದಿಲ್ಲ, ಅವರು ಯಾರ ಮಾತನ್ನೂ ಕೇಳುವುದಿಲ್ಲ.

ಶ್ರೀ. ಹೆಚ್. ಎಲ್. ತಿಮ್ಮೇಗೌಡ.—ನನಗೆ ಪತ್ರ ಬರೆಯಿರಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಎಷ್ಟು ಪತ್ರಕ್ಕೆ ಉತ್ತರಿಸಿದ್ದೀರಿ ? ನಮ್ಮ ಊರಿನ ಆಸ್ಪತ್ರೆ ಬಗ್ಗೆ ಮಾತ್ರ ಕೇಳುತ್ತಿದ್ದೇನೆ. ತೊಂದರೆಯಾಗುತ್ತಿದೆ ಎಂದು ದೂರು ಕೊಟ್ಟು ೧೪ ತಿಂಗಳು ಆಗಿದೆ, ಇವರು ಯಾವತ್ತೂ ಡೈರೆಕ್ಟರ್, ಡೈರೆಕ್ಟರ್ ಅನ್ನುತ್ತಾರೆ.

ಉಪಾಧ್ಯಕ್ಷರು.—ಆಮೇಲೆ ಅವರ ಹತ್ತಿರ ಹೋಗಿ ನೋಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವಾಗ ಕೇಳಿದರೂ ಪಕ್ಕಕ್ಕೆ ಹೋಗಿ ನೋಡಿ ಅನ್ನುತ್ತೀರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಡೈರೆಕ್ಟರ್ ಮಾಡುವ ಕೆಲಸವನ್ನು ನಾನು ಮಾಡುವುದಕ್ಕಾಗುವುದಿಲ್ಲ. ನಮಗೆ ಹೇಳಿದರೂ ಡೈರೆಕ್ಟರ್ ಮೂಲಕವೇ ಮಾಡಿಸಬೇಕು. ಅವರು ನಮ್ಮ ಮಾತು ಕೇಳದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ನೀವು ಡೈರೆಕ್ಟರ್ ಹತ್ತಿರ ಹೋಗುವುದು ಬೇಕಾಗಿಲ್ಲ. ನನಗೆ ಪತ್ರ ಬರೆಯಿರಿ, ನಾನು ಮಾಡಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಶಿವಮೊಗ್ಗದಲ್ಲಿ ಕ್ಯಾಬಿನೆಟ್ ಮೀಟಿಂಗ್ ಆದಾಗ ಕೋಲಾರಕ್ಕೆ ೧೦೦ ಬೆಡ್ಸ್ ಜಾಸ್ತಿ ಕೊಡುತ್ತೇವೆಂದು ತೀರ್ಮಾನ ಮಾಡಿದ್ದರು, ಇನ್ನೂ ಕೊಟ್ಟಿಲ್ಲ. ದಯವಿಟ್ಟು ಈಗಲಾದರೂ ಕೊಡುತ್ತೀರಾ ? ಅಲ್ಲಿ ನರ್ಸಿಂಗ್ ಸ್ಟಾಫ್ ಇಲ್ಲ. ಈಗ ಇರತಕ್ಕ ಬೆಡ್‌ಗಳು ೧೦ ವರ್ಷ ಹಿಂದಿನವು. ಅವುಗಳ ಮೇಲೆ ಮಲಗುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಏನು ಹೇಳುತ್ತೀರಿ? ಮತ್ತೆ ಇನ್ಸ್‌ಪೆಕ್ಟರ್ ಬಗ್ಗೆ ಹೇಳಿದ್ದೆ. ಅದನ್ನು ತಾವು ಮರೆತ ಹಾಗೆ ಕಾಣುತ್ತದೆ. ಪಿ.ಹೆಚ್.ಯು.ಗಳಿಗೆ ೨೫ ಸಾವಿರ ಕೊಟ್ಟರೆ ಸಾಕು ಎಂದು ಕಟ್ಟಿಸಿಕೊಂಡಿದ್ದಾರೆ. ೬ ಬೆಡ್ಡಿನ ಮೆಟರ್ನಿಟಿ ಆಸ್ಪತ್ರೆಗೆ ೩೦ ಸಾವಿರ, ೧೦ ಬೆಡ್ಡಿನ ಆಸ್ಪತ್ರೆಗೆ ಒಂದು ಲಕ್ಷ ಕಟ್ಟಿಸಿಕೊಂಡಿದ್ದಾರೆ. ಈಗ ಎಕ್ಸ್‌ಕ್ಲನೇಷನ್ ಆಗಿರುವುದು ಸರ್ಕಾರದವರು ಕೊಡಲಿಲ್ಲವೆಂದು. ಅದಕ್ಕೆ ಪರ್ಮಿಷನ್ ಕೊಡಬೇಕು. ಅದರ ಜೊತೆಗೆ ಇನ್ನೂ ಹತ್ತಿಪ್ಪತ್ತು ಸಾವಿರ ಕೊಡಿ ಎಂದು ಹೇಳುತ್ತಾರೆ, ಮುಳಬಾಗಿಲಿನಲ್ಲಿ ೩೦ ಬೆಡ್ ಹಾಸ್ಪಿಟಲ್ ಕೊಡಬೇಕೆಂದು ಕೇಳಿದ್ದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹೆರಿಗೆ ಆಸ್ಪತ್ರೆ ಬಗ್ಗೆ ಪತ್ರ ಬರೆಯಿರಿ, ನೋಡುತ್ತೇನೆ. ಕೋಲಾರದಲ್ಲಿ ೧೦೦ ಬೆಡ್ ಹಾಸ್ಪಿಟಲ್ ಮಾಡತಕ್ಕದ್ದರ ಬಗ್ಗೆ ಶಿವಮೊಗ್ಗದಲ್ಲಿ ಕ್ಯಾಬಿನೆಟ್ ಮೀಟಿಂಗ್

ಆದಾಗ ತೀರ್ಮಾನವಾಗಿರುವುದು ಸದಸ್ಯರಿಗೋಸ್ಕರ. ಅದನ್ನು ಈಗ ಮಾಡುವುದಕ್ಕಾಗುವುದಿಲ್ಲ. ಹಣಕಾಸಿನ ಪರಿಸ್ಥಿತಿ ಸುಧಾರಿಸಿದಾಗ ಮಾಡುತ್ತೇವೆ. ತೆರಿಗೆ ಇನ್ಸ್‌ಪೆಕ್ಟರ್ ಬಗ್ಗೆ ಬರೆದಿದ್ದಾರೆ. ಅದು ತನಿಖೆ ಆಗುತ್ತಿದೆ. ಕೆಳವರ್ಗದವರ ಮೇಲೆ ಹಾಕಿರತಕ್ಕ ಕೇಸುಗಳು ನಿಜ, ದೂರು ಇರುವುದು ನಿಜ. ಆ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ೨೫ ಸಾವಿರ ರೂಪಾಯಿ ಕಟ್ಟಿಸಿಕೊಂಡಿರುವುದರ ಬಗ್ಗೆ ಪತ್ರ ಬರೆಯಿರಿ. ಎಲ್ಲಿ ತೊಂದರೆಯಾಗಿದೆ ಎಂದು ತಿಳಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಜನರಲ್ ಆಗಿ ಆಗಿದೆ. ಎರಡು ವರ್ಷಗಳಿಂದ ದುಡ್ಡು ತಮ್ಮ ಹತ್ತಿರ ಇದೆ. ಆಸ್ಪತ್ರೆಯನ್ನು ಇದುವರೆಗೆ ಮಂಜೂರ್ಮಾಡದೆ ಹಣ ಜಾಸ್ತಿ ಕೊಡಿ ಎನ್ನುತ್ತಿದ್ದೀರಿ.

ಶ್ರೀ : ಹೆಚ್. ಎಲ್. ತಿಮ್ಮೇಗೌಡ.—ತಮಗೆ ಸಂಬಂಧಪಟ್ಟದ್ದನ್ನು ಬರೆಯಿರಿ.

ಶ್ರೀ ಪಿ. ಎಸ್. ರಾಣೆ.—ನಮ್ಮ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಕೇಳಿದ್ದ. ಕಾರವಾರ ತಾಲ್ಲೂಕಿನ ಜನಸಂಖ್ಯೆ ಒಂದು ಲಕ್ಷದ ೨೦ ಸಾವಿರ ಇದೆ. ನಿಮ್ಮ ನಿಯಮದ ಪ್ರಕಾರ ೪ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಡಬೇಕು. ಆದರೆ ಇವತ್ತು ಅಲ್ಲಿ ಇರುವುದು ಒಂದೇ ಒಂದು ಕೇಂದ್ರ. ಅಲ್ಲಿ ಇನ್ನೊಂದು ಕೇಂದ್ರವನ್ನು ತೆರೆಯುತ್ತೇವೆಂದು ಹೇಳಿದ್ದೀರಿ. ಆ ಬಗ್ಗೆ ನಾವು ೩ ವರ್ಷಗಳಿಂದ ತಮ್ಮ ಹತ್ತಿರ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಕೇಳುತ್ತಿದ್ದೇವೆ. ಕಾರವಾರ ತಾಲ್ಲೂಕಿನ ಉತ್ತರ ಭಾಗಕ್ಕೇನೋ ಆಸ್ಪತ್ರೆ ಇದೆ, ಆದರೆ ದಕ್ಷಿಣ ಭಾಗಕ್ಕೆ ಇರುವುದಿಲ್ಲ. ಈಗ ಅಲ್ಲಿ ಅಣುಸ್ಥಾವರ ಯೋಜನೆಗಳು ಬರುತ್ತಿವೆ. ಆದ್ದರಿಂದ ಅಲ್ಲಿ ಆದಷ್ಟು ಜಾಗ್ರತೆ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದ್ದೆವು. ಅದರ ಬಗ್ಗೆ ಏನಾಯಿತು ? ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ ಸಲೈನ್ ವಾಟರ್ ಪ್ರೊಡಕ್ಷನ್ ಪ್ಲಾಂಟನ್ನು ಮಂಜೂರ್ಮಾಡಲಾಗಿತ್ತು. ಇವತ್ತು ಅದರ ಬಗ್ಗೆ ವಿಚಾರಣೆ ಮಾಡಿದರೆ ಅದನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆಂದು ತಿಳಿದು ಬಂದಿದೆ. ಮತ್ತೆ ಸರ್ಕಾರದವರು ಅದನ್ನು ಸ್ಥಾಪಿಸುವ ವ್ಯವಸ್ಥೆ ಮಾಡುತ್ತೀರಾ ? ಜಿಲ್ಲಾ ಆಸ್ಪತ್ರೆಗೆ ದೂರದೂರದ ಹಳ್ಳಿಗಳಿಂದ ರೋಗಿಗಳು ಬರುತ್ತಾರೆ, ಅವರು ಬರುವಾಗ ಅವರ ಕುಟುಂಬದ ಜನರು ಬರುವ ಆವಶ್ಯಕತೆ ಇರುತ್ತದೆ. ಅಂಥವರಿಗೆ ಉಳಿದುಕೊಳ್ಳಲು ಜಿಲ್ಲಾ ಆವರಣದಲ್ಲಿ ಧರ್ಮ ಶಾಲೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ? ಕಾರವಾರ ತಾಲ್ಲೂಕಿನ ಸೈನಿಕ ಮಂಡಳಿಯವರು ಲೋಕಲ್ ಕಾಂಟ್ರಿಬ್ಯೂಷನ್ ಎಂದು ಅದಕ್ಕೋಸ್ಕರ ೫೦ ಪರ್ಸೆಂಟ್ ಹಣ ಕೊಡಲು ಸಿದ್ಧವಾಗಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ,—ಅವರು ೫೦ ಪರ್ಸೆಂಟ್ ಕೊಟ್ಟರೆ ನಾವು ೫೦ ಪರ್ಸೆಂಟ್ ಹಾಕಿ ಕಟ್ಟಿಸೋಣ. ಆರೋಗ್ಯ ಘಟಕದ ಬಗ್ಗೆ ಕೇಳಿದ್ದು ಮೊನ್ನೆ ಎಂದು ಕಾಣುತ್ತದೆ. ಅದರ ಬಗ್ಗೆ ಮೊದಲೇ ಹೇಳಿದ ಹಾಗೆ ನೆನಪಿಟ್ಟುಕೊಂಡಿದ್ದೇನೆ. ತೀರ್ಮಾನ ಮಾಡತಕ್ಕ ಕಾಲದಲ್ಲಿ ಮಾಡೋಣ. ಸಲೈನ್ ವಾಟರ್ ಪ್ರೊಡಕ್ಷನ್ ಪ್ಲಾಂಟ್ ಮಂಜೂರಾಗಿ ಬೇರೆ ಕಡೆ ಹೋಗಿದ್ದರೆ ನೋಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಬಹಳ ಜಿಲ್ಲೆಗಳಲ್ಲಿ ಸಬ್ ಪ್ಲಾನ್‌ನಿಂದ ದುಡ್ಡು ಕೊಟ್ಟಿದ್ದಾರೆ. ಅದರಿಂದ ಕಾರವಾರದಲ್ಲಿ ನಿಮ್ಮೊಬ್ಬರಿಗೇ ಅಲ್ಲ, ಇಡೀ ಜಿಲ್ಲೆಗೆ ಪ್ರಯೋಜನವಾಗುತ್ತದೆ. ದಯಮಾಡಿ ಸಬ್ ಪ್ಲಾನ್‌ನಿಂದ ದುಡ್ಡು ಕೊಡಿಸಿದರೆ ಎಕ್ವಿಪ್‌ಮೆಂಟ್ ಕೊಡಿಸಿ ಬಿಲ್ಡಿಂಗ್ ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ, ಪಿ. ಎಲ್. ಉಸ್ತಾದ್.—ಹೋದವರ್ಷ ಬಿಜಾಪುರ ಜಿಲ್ಲೆಯಲ್ಲಿ ಮಾಸ್ ಟ್ರಾನ್ಸ್‌ಫರ್‌ಗಳು ಆದವು. ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಆದರೆ ಮುಖ್ಯ ಮಂತ್ರಿಗಳಿಂದ ಪೂರ್ವಾನುಮತಿ ತೆಗೆದುಕೊಂಡು ಮಾಡಬೇಕೆಂದು ರೂಲ್ ಇದೆ. ೧೯೮೫ರಲ್ಲಿ ಡಿ. ಎಚ್. ಓ. ಗಳನ್ನು ಮಾಸ್ ಟ್ರಾನ್ಸ್‌ಫರ್ ಮಾಡಿದರು. ಅದರ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅಥವಾ ತೆಗೆದುಕೊಳ್ಳುತ್ತೀರಿ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ವಿಚಾರದಲ್ಲಿ ಉತ್ತರಿಸುವುದು ಕಷ್ಟ. ಇದು ಅಡ್ಮಿನಿಸ್ಟ್ರೇಟೀವ್ ಮ್ಯಾಟರ್. ಮಾಸ್ ಟ್ರಾನ್ಸ್‌ಫರ್ ಆಗಲಿ, ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಆಗಲಿ ಅದರ ಬಗ್ಗೆ ಹೇಳುವುದು ಕಷ್ಟ.

ಶ್ರೀ ಎ, ಲಕ್ಷ್ಮೀಸಾಗರ್.—ಸನ್ಮಾನ್ಯ ಉಪಾಧ್ಯಕ್ಷರೇ, ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಹಲವಾರು ಸಲಹೆಸೂಚನೆಗಳನ್ನು ಕೊಟ್ಟಿದ್ದಾರೆ, ಆ ಎಲ್ಲಾ ಸಲಹೆ ಸೂಚನೆಗಳನ್ನು

ನಾನು ಬಹಳ ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ. ಅವರು ಕೊಟ್ಟಂಥ ಸಲಹೆ ಸೂಚನೆಗಳನ್ನು ಮತ್ತು ಟೀಕೆ ಟಿಪ್ಪಣಿಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಮಾಡಬೇಕಾದಂಥ ಅವಶ್ಯಕತೆ ಬಿದ್ದರೆ ಆ ತಿದ್ದುಪಡಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಪೂರ್ವಭಾವಿಯಾಗಿ ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ, ಮಾತನಾಡಿದಂಥ ಸನ್ಮಾನ್ಯ ಶ್ರೀ ಬ್ಲೇಸಿಯಸ್ ಡಿಸೋಜರವರು ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ನಗರಾಡಳಿತ ಮಂತ್ರಿಗಳು ಬೆಂಗಳೂರಿನವರು. ಅದರಿಂದ ಬೆಂಗಳೂರಿನ ಕಡೆ ಹೆಚ್ಚಿನ ಗಮನ ಇದ್ದು ಉಳಿದ ನಗರ ಪ್ರದೇಶಗಳ ಕಡೆ ಗಮನ ಹರಿಸುವುದಕ್ಕೆ ಅವರ ಕೈಯಲ್ಲಿ ಆಗಿಲ್ಲ ಎಂದು ಬಹುಶಃ ಈ ತರಹದ ಅಭಿಪ್ರಾಯ ಅನಿಸಿಕೆ ನನಗಿದೆ ಎಂದು ಅವರು ಬಹಳ ಸೂಚ್ಯವಾಗಿ ಹೇಳಿದ್ದಾರೆ. ನಾನು ಬೆಂಗಳೂರಿನವನು. ಬೆಂಗಳೂರಿನಿಂದ ಚುನಾಯಿತನಾಗಿದ್ದೇನೆ. ಆದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ನಗರ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಎಲ್ಲಾ ವಿಧವಾದ ಪ್ರಯತ್ನಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಪ್ರಯತ್ನ ಮಾಡುತ್ತೇನೆ ಎಂದು ಮತ್ತೊಮ್ಮೆ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಾಗಲೀ, ಮಂಗಳೂರಾಗಲೀ, ಧಾರವಾಡ ಆಗಲೀ, ಗುಲ್ಬರ್ಗ ಆಗಲೀ ಈ ರೀತಿಯ ಭೇದಭಾವಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಹಣಕಾಸಿನ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಅವರಿಗೆ ಹೇಳುತ್ತೇನೆ.

ಇನ್ನು ಪುರಸಭೆಗಳು ಮತ್ತು ನಗರಸಭೆಗಳು ಚೆನ್ನಾಗಿ ಕೆಲಸ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಆ ವಾದವನ್ನು ಒಪ್ಪಿಕೊಳ್ಳುತ್ತೇನೆ. ಚೆನ್ನಾಗಿ ಕೆಲಸ ಮಾಡಬೇಕು ನಿಜ. ಕರ್ನಾಟಕ ರಾಜ್ಯ ಸರ್ಕಾರಕ್ಕೆ ಅರ್ಧ ಭಾಗದಷ್ಟು ನಗರ ಪ್ರದೇಶಗಳಿಂದ ವರಮಾನ ಬರುತ್ತದೆ ಎನ್ನುವ ಮಾತನ್ನು ಬ್ಲೇಸಿಯಸ್ ಡಿಸೋಜ ಅವರು ಹೇಳಿದ್ದಾರೆ. ಅದೇ ಮಾತನ್ನು ಧರ್ಮಸಿಂಗ್ ಅವರೂ ಹೇಳಿದ್ದಾರೆ. ಅದಕ್ಕೆ ಉತ್ತರವನ್ನು ಧರ್ಮಸಿಂಗ್ ಅವರಿಗೆ ಈಗಾಗಲೇ ಹೇಳಿದ್ದೇನೆ. ಅವರ ವಾದ ಬಹಳ ಆಕರ್ಷಣೀಯವಾಗಿದೆ. ಅದಕ್ಕಾಗಿ ನಾನು ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಕೋಲಾರದಲ್ಲಿ ಚಿನ್ನದ ಗಣಿಯಲ್ಲಿ ಚಿನ್ನ ಸಿಗುತ್ತದೆ. ಚಿನ್ನದ ಒಟ್ಟು ಹಣವನ್ನೂ ಕೆಜಿಎಫ್.ಗೆ ಖರ್ಚು ಮಾಡಿ ಎಂದರೆ ಸಾಧ್ಯವಾಗುತ್ತದೆಯೇ? ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಚಿಕ್ಕಮಗಳೂರು, ಹಾಸನ ಕೊಡಗು ಜಿಲ್ಲೆಗಳಲ್ಲಿ ಕಾಫಿಯನ್ನು ಬೆಳೆಯುತ್ತಾರೆ. ಬಹಳಷ್ಟು ವಿದೇಶಿ ವಿನಿಮಯ ಬರುತ್ತದೆ, ಕೋಟಿಗಟ್ಟಲೇ ವಿದೇಶಿ ವಿನಿಮಯ ಬರುತ್ತದೆ, ಸೇಲ್ಸ್ ಟ್ಯಾಕ್ಸ್ ಬರುತ್ತದೆ, ಬೇರೆ ತೆರಿಗೆಗಳಿಂದಲೂ ಹಣ ಬರುತ್ತದೆ. ಈ ಹಣವೆಲ್ಲಾ ನಮ್ಮ ಜಿಲ್ಲೆಗಳಲ್ಲಿಯೇ ಖರ್ಚು ಮಾಡಿ ಎಂದು ಕೇಳಿದರೆ ಸಾಧ್ಯವೇ? ಮಾನ್ಯ ಧರ್ಮಸಿಂಗ್‌ರವರ ವಾದ ಕೇಳಿ ಇವತ್ತು ನನಗೆ ಆಶ್ಚರ್ಯ ಎನಿಸುತ್ತದೆ. ಹಿಂದುಳಿದ ಪ್ರದೇಶಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂಬ ಅವರ ವಾದವನ್ನು ಒಪ್ಪಿಕೊಳ್ಳುತ್ತೇನೆ. ಹೀಗಿರುವಾಗ ರಾಜ್ಯದಲ್ಲಿ ಹುಟ್ಟುವಳಿ ರೂಪದಲ್ಲಿ ಬರುವಂಥ ಆದಾಯವನ್ನು ರಾಜ್ಯ ಸಮಗ್ರ ಸಮತೋಲನದ ರೀತಿಯಲ್ಲಿ, ಬೆಳವಣಿಗೆಯಾಗತಕ್ಕ ರೀತಿಯಲ್ಲಿ ಉಪಯೋಗ ಮಾಡತಕ್ಕಂಥದ್ದು ಬುದ್ಧಿವಂತರ ಲಕ್ಷಣ. ಸನ್ಮಾನ್ಯ ಧರ್ಮಸಿಂಗ್‌ರವರು ಇಂತಹ ಪರಿಪಾಠವನ್ನು ಹಾಕಿಕೊಂಡು ಬಂದಿದ್ದಾರೆ. ಪರಿಪಾಠವನ್ನು ಬಿಟ್ಟು ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ಸರ್ಕಾರವೂ ಮಾಡುವುದಕ್ಕೆ ಸಾಧ್ಯ ಇಲ್ಲ. ಅವರ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ, ಈ ವಾದವನ್ನು ಒಪ್ಪಿಕೊಂಡರೆ ಅನೇಕ ವಿಧವಾದ ತೊಂದರೆಗಳು ಬರುತ್ತವೆ. ತೊಂದರೆಗಳಾಗಿ ಜನ ನಮ್ಮ ಮೇಲೂ, ನಿಮ್ಮ ಮೇಲೂ ದಂಗೆ ಏಳಬಹುದು. ಆದ್ದರಿಂದ ಇರತಕ್ಕಂಥ ಸಂಪನ್ಮೂಲಗಳನ್ನು ಆಯಾಯ ಪ್ರದೇಶದ ಅವಶ್ಯಕತೆಗಳಿಗೆ ಅನುಸಾರವಾಗಿ ಸಮತೋಲನದ ದೃಷ್ಟಿಯಿಂದ ಖರ್ಚು ಮಾಡತಕ್ಕಂಥ ವ್ಯವಸ್ಥೆಯನ್ನು ಎಲ್ಲಾ ಸರ್ಕಾರಗಳು ಅನೂಚಾನವಾಗಿ ನಡೆಸಿಕೊಂಡು ಬಂದಿವೆ. ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇವೆ.

ಇನ್ನು ಮಿಸ್ ಅಪ್ರೋಪ್ರಿಯೇಷನ್ ಆಫ್ ಫಂಡ್ಸ್ ಬೈ ಗೌರ್ನಮೆಂಟ್ ಎಂದು ಹೇಳಿದ್ದಾರೆ. ಇದು ಎಲ್ಲಿಂದ ಬಂತೋ ಗೊತ್ತಿಲ್ಲ. ಆಕ್ಟ್ರಾಯ್ ಗ್ರಾಂಟ್ ನಮಗಿಲ್ಲ. ಕಾರಣವೇನೆಂದರೆ, ಆಕ್ಟ್ರಾಯ್ ಅನ್ನು ತೆಗೆದುಹಾಕತಕ್ಕಂಥ ಸಂದರ್ಭದಲ್ಲಿ ಮಂಗಳೂರಿಗೆ ಹಾಕುತ್ತಾ ಇಲ್ಲ. ಆದ್ದರಿಂದ ಅವರಿಗೆ

ಆಕ್ಟ್ರಾಯ್ ಆಗಲೀ, ಅನುದಾನವನ್ನಾಗಲೀ ಕೊಡತಕ್ಕಂಥ ಪ್ರಶ್ನೆ ಬರಲಿಲ್ಲ. ಆ ರೀತಿ ಬಂದಂಥದನ್ನು ಸರ್ಕಾರದವರು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬ ಮಾತು ಇರಬಹುದು ಎಂದು ನಾನು ಭಾವಿಸುತ್ತೇನೆ. ಆಕ್ಟ್ರಾಯ್ ಅನುದಾನವನ್ನು, ಕೊಡದೇ ಹೋದರೆ ನಾವು ಏನೂ ಇಟ್ಟುಕೊಳ್ಳುವುದಿಲ್ಲ. ಉಳಿದ ಪುರಸಭೆಗಳಿಗೆ, ನಗರಸಭೆಗಳಿಗೆ ಹಣವನ್ನು ಹಂಚುತ್ತಿದ್ದೇವೆ. ಎಲ್ಲಾ ಸ್ನೇಹಿತರುಗಳ ಮೂಲಭೂತವಾದ ಪ್ರಶ್ನೆ ಎಂದರೆ ನಗರಸಭೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡಿ, ಆಕ್ಟ್ರಾಯನ್ನು ತೆಗೆದು ಹಾಕಿದ್ದೀರಿ ಎಂದು ಹೇಳುತ್ತಾರೆ. ಆಕ್ಟ್ರಾಯ್ ಇದ್ದ ಸಮಯದಲ್ಲಿ ಹೆಚ್ಚಿನ ವರಮಾನ ಇತ್ತು. ಸ್ಥಳೀಯ ಸಂಸ್ಥೆಗಳು ಆಕ್ಟ್ರಾಯ್ ಮತ್ತು ಅನುದಾನದ ಹಣವನ್ನು ನಂಬಿಕೊಂಡಿದ್ದರು. ಅದು ಹೋದ ಮೇಲೆ ನೀವು ಕೊಡತಕ್ಕಂಥ ಹಣ ಸಾಲದು ಎಂದು ಹೇಳುತ್ತಾರೆ. ಇನ್ನೂ ಮೂಲಭೂತವಾದ ಪ್ರಶ್ನೆಯನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿರತಕ್ಕಂಥ ಪುರಸಭೆಗಳು ಮತ್ತು ನಗರಸಭೆಗಳು ಸ್ವಾಯತ್ತ ಸಂಸ್ಥೆಗಳು. ಅವರಿಗೆ ಸಂಪೂರ್ಣವಾದಂತ ಸ್ವಯಂ ಅಧಿಕಾರವನ್ನು ಕೊಟ್ಟಿದ್ದೇವೆ. ಈ ಸ್ವಯಂ ಅಧಿಕಾರದ ಹಿನ್ನೆಲೆಯಲ್ಲಿ ಅವರು ಕೆಲಸ ಮಾಡಿ ಆಯಾಯ ಪ್ರದೇಶಗಳ ನಗರವಾಸಿಗಳಿಗೆ ಸರಿಯಾದಂಥ ಆಡಳಿತವನ್ನು ಕೊಡಬೇಕು, ಅವರ ಅವಶ್ಯಕತೆಗಳನ್ನು ಪೂರೈಸತಕ್ಕಂಥ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸಂಸ್ಥೆಗಳು. ಈ ರೀತಿ ಕೆಲಸ ಮಾಡಬೇಕಾದರೆ ಮೂಲವಾಗಿ ಈ ಸಂಸ್ಥೆಗಳು ಹಣಕಾಸಿನ ಕಡೆ ಗಮನ ಕೊಡಬೇಕಾಗಿರುವುದು. ಅವರು ಈಗಿರತಕ್ಕಂಥ ತೆರಿಗೆಯ ಮಟ್ಟದಲ್ಲಿ ಸರಿಯಾಗಿ ತೆರಿಗೆಯನ್ನು ವಸೂಲು ಮಾಡದೇ ೩-೪ ದಿನವೂ ಕೂಡ ಬೆಂಗಳೂರಿನಿಂದಲೇ ಹಣ ಬರಬೇಕು ಎಂದು ಕಾದುಕೊಂಡು ಕೂತರೆ ಸರಿಯಾಗಿ ಮತ್ತು ಸಂಪೂರ್ಣವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ೧೯೫೨ನೇ ಇಸವಿಯಿಂದ ಹಿಡಿದು ಇಲ್ಲಿಯವರೆಗೂ ಎಲ್ಲಾ ಸ್ಥಳೀಯ ಸಂಸ್ಥೆಗಳು ಯಾವ ರೀತಿ ಹಣವನ್ನು ಖರ್ಚು ಮಾಡುತ್ತಿವೆ, ಯಾವ ರೀತಿ ಹಣವನ್ನು ವಸೂಲು ಮಾಡುತ್ತಿವೆ ಎಂಬುದನ್ನು ನೋಡಿದರೆ ಅವುಗಳು ಈಗಿರತಕ್ಕಂಥ ತೆರಿಗೆಯ ಮಟ್ಟದಲ್ಲಿ ಗಮನಕೊಟ್ಟ ಹಾಗೆ ಕಾಣಿಸಲಿಲ್ಲ. ೫ ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಹಣವನ್ನು ತೆರಿಗೆ ರೂಪದಲ್ಲಿ ಈ ಸ್ಥಳೀಯ ಸಂಸ್ಥೆಗಳು ವಸೂಲು ಮಾಡಿದ ದಾಖಲೆಗಳು ನನ್ನ ಹತ್ತಿರ ಇಲ್ಲ. ಹಿಂದಿನ ಎಲ್ಲಾ ದಾಖಲೆಗಳನ್ನು ನೋಡಿದ್ದೇನೆ. ಸ್ಥಳೀಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ, ತಮ್ಮ ಕಾಲ ಮೇಲೆ ನಿಂತುಕೊಳ್ಳತಕ್ಕಂಥ ಪ್ರಯತ್ನ ಅವರು ಮಾಡದೇ ಹೋದರೆ ಸರ್ಕಾರದಿಂದ ಸದಾಕಾಲ ಹಣದ ಸಹಾಯ ಸಿಗುವುದು ಕಷ್ಟವಾಗುತ್ತದೆ, ಸಿಗುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಸರ್ಕಾರವನ್ನು ಪದೇ ಪದೇ ಕೇಳುತ್ತಾರೆ. ಈಗಿರತಕ್ಕಂಥ ತೆರಿಗೆಯನ್ನು ವಸೂಲು ಮಾಡದೇ ಪದೇ ಪದೇ ಸರ್ಕಾರವನ್ನು ಕೇಳುತ್ತಾ ಇರತಕ್ಕಂಥ ಪರಿಪಾಠ ಬಂದಿದೆ ಸ್ಥಳೀಯ ಸಂಸ್ಥೆಗಳವರು ಸರಿಯಾಗಿ ತೆರಿಗೆಗಳನ್ನು ವಸೂಲು ಮಾಡದೇ ಅವರಿಗೆ ಸರ್ಕಾರವಾದರೂ ಎಲ್ಲಿಂದ ಹಣವನ್ನು ನಗರಸಭೆಗಳಿಗೆ ಕೊಡತಕ್ಕಂತ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಸನ್ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡಿದ್ದಾರೆಂದು ನನ್ನ ಭಾವನೆ. ಇದಕ್ಕೆ ಪೂರಕವಾಗಿ ಕೊನೆಯಲ್ಲಿ ಉತ್ತರ ಕೊಡುತ್ತೇನೆ. ಸೌತ್ ಕೆನರಾ ಮುನಿಸಿಪಾಲಿಟಿಯವರಿಗೆ ಸಾಕಷ್ಟು ಸಹಾಯ ಕೊಡುತ್ತಾ ಇಲ್ಲ ಎಂದು ಹೇಳಿದ್ದಾರೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಬೇಕಾಗುತ್ತದೆ. ಅವರು ಈಗಿರತಕ್ಕಂಥ ತೆರಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಸೂಲು ಮಾಡುತ್ತಿದ್ದಾರೆಂದು ಹಿಂದೆಯೂ ಹೇಳಿದ್ದೇನೆ ಈಗಲೂ ಹೇಳಿದ್ದೇನೆ. ಸಿಟಿ ಮುನಿಸಿಪಾಲಿಟಿಗಳಾಗಲೀ ಟೌನ್ ಮುನಿಸಿಪಾಲಿಟಿಗಳಾಗಲೀ ಹಣವನ್ನು ತೆರಿಗೆಯ ಮಟ್ಟದಲ್ಲಿ ವಸೂಲು ಮಾಡಿದರೆ ಅವರಿಗೆ ಹಣಕಾಸಿನ ಪರಿಸ್ಥಿತಿಯಲ್ಲಿ ಯಾವ ಮುಗ್ಗಟ್ಟು ಬರುವುದಿಲ್ಲ ಎಂದು ನನಗನಿಸುತ್ತದೆ. ಅವರು ಹಣಕಾಸಿನ ಪರಿಸ್ಥಿತಿಯನ್ನು ಉತ್ತಮವಾಗಿಸಿಕೊಳ್ಳಬೇಕಾದರೆ ಅವರು ತೆರಿಗೆಯನ್ನು ಜಾಸ್ತಿ ಮಾಡಬೇಕಾಗುತ್ತದೆ. ಸೆಸ್ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ತಮ್ಮ ತಮ್ಮ ಜಾಗಗಳಲ್ಲಿ ಅಸೆಟ್ಸನ್ನು ಕ್ರಿಯೇಟ್ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡದೇ ಸದಾ ಸರ್ಕಾರವನ್ನು ನಂಬಿರತಕ್ಕಂಥದ್ದು ಸಾಧ್ಯವಿಲ್ಲ. ಸ್ವಾತಂತ್ರ್ಯವನ್ನು ಇಟ್ಟುಕೊಂಡಿರುವುದಕ್ಕೂ ಸಾಧ್ಯವಿಲ್ಲ.

ಇನ್ನು ಮಂಗಳೂರು ಕಾರ್ಪೊರೇಷನ್‌ಗೆ ೫೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾನ್ಯ ಬ್ಲೇಸಿಯಸ್ ಡಿಸೋಜರವರು ಹೇಳಿದ್ದಾರೆ. ಹುಬ್ಬಳ್ಳಿ, ಧಾರವಾಡ ಕಾರ್ಪೊರೇಷನ್‌ಗೆ ಕೊಟ್ಟಿದ್ದೀರಿ. ನಮಗೆ ಏತಕ್ಕೆ ಕೊಟ್ಟಿಲ್ಲ ಎಂದು ಕೇಳಿದ್ದಾರೆ. ಶ್ರೀ ಕೆ. ಎಚ್. ಪಾಟೀಲರು ಹೇಳಿದಾಗ ನಾನೂ

ಹೇಳಿದ್ದೆ. ಅದು ಒಂದು ಟೈಮ್ ಆಪರೇಷನ್ ಮಾಡಿ ಇದನ್ನೆಲ್ಲಾ ಸಮಯಕ್ಕೆ ಉಪಯೋಗಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ತಾವು ಮಾಡಿದ್ದಲ್ಲ, ಬೇರೆಯವರು ಮಾಡಿದ್ದು ಎಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆಯವರ ಕೂಸನ್ನು ನಾನು ಇಟ್ಟುಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಮಂಗಳೂರು ವಾಟರ್ ಸಪ್ಲೈ ಬಂದ್ ಆಗಿದೆ ಎಂದು ಹೇಳಿದ್ದಾರೆ. ಆ ಕೆಲಸವನ್ನು ಈ ತಿಂಗಳ ಕೊನೆಯ ಒಳಗೆ ಮುಗಿಸಿಕೊಡುವ ಆಶ್ವಾಸನೆಯನ್ನು ಸನ್ಮಾನ್ಯ ಬ್ಲೇಸಿಯಸ್ ಡಿಸೋಜರವರಿಗೆ ಕೊಡುವುದಕ್ಕೆ ಬಯಸುತ್ತೇನೆ. ಇದು ಮುಗಿದ ಮೇಲೆ ೯ ಎಂ.ಜಿ.ಡಿ. ಅಷ್ಟು ನೀರು ಸಿಗುತ್ತದೆ. ಆಗ ಮಂಗಳೂರಿನ ಜನರಿಗೆ ನೀರಿನ ತೊಂದರೆ ಇರುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ನೀರು ಸರಬರಾಜಿನ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಬೇರೆ ಸದಸ್ಯರೂ ನೀರು ಸರಬರಾಜಿನ ಬಗ್ಗೆ ಮಾತನಾಡಿರುವುದರಿಂದ ಆ ಸಂದರ್ಭದಲ್ಲೇ ಸನ್ಮಾನ್ಯ ಡಿಸೋಜ ಅವರಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಬರಬೇಕಾದ ತೆರಿಗೆಗಳ ಭಾಗ ಬರಲಿಲ್ಲ ಎಂದು ಹೇಳಿದ್ದಾರೆ. ಗುಲಾಟಿ ಕಮಿಷನ್ ರಿಪೋರ್ಟ್ ಬಗ್ಗೆ ಹೇಳಿದ್ದಾರೆ. ಸನ್ಮಾನ್ಯ ಧರ್ಮಸಿಂಗ್ ಅವರು ಜಾಕಬ್ ಕಮಿಟಿ, ಲಕ್ಷ್ಮಣರಾವ್ ಕಮಿಟಿ ರಿಪೋರ್ಟ್ ಬಗ್ಗೆ ಕೇಳಿದ್ದಾರೆ. ಸರ್ಕಾರಕ್ಕೆ ಅದು ಬಂದಿದೆ. ಅದರ ಬಗ್ಗೆ ಮಾತನಾಡಿದ ಎಲ್ಲ ಸದಸ್ಯರಿಗೂ ಒಂದೇ ಉತ್ತರ ಕೊಡುತ್ತೇನೆ. ವರದಿಯಲ್ಲಿ ಕೂಲಂಕಷವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಸರ್ಕಾರ ಅದನ್ನು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಕ್ಷ್ಮಣರಾವ್ ರಿಪೋರ್ಟ್ ಸದನದ ಮುಂದೆ ಇಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ನಿರ್ಣಯ ಏನು ಎಂಬುದು ಇನ್ನೂ ನಿರ್ಧಾರ ಆಗಿಲ್ಲ. ಆಮೇಲೆ ಬೆಗ್ಗರ್ ಹೌಸ್ ಸ್ಟಾರ್ಟ್ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮೊದಲು ಮಂಗಳೂರು ನಗರಸಭೆಯವರು ತೀರ್ಮಾನ ಮಾಡಲಿ. ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಹಾಯಕನಾಗಿರುತ್ತೇನೆ. ಮಂಗಳೂರು ಡೆವಲಪ್ಮೆಂಟ್ ಅಥಾರಿಟಿ ಮಾಡಬೇಕೆಂದು ಕೇಳಿದ್ದಾರೆ, ಹೆಸರು ಬದಲಾವಣೆ ಮಾಡುವುದರಿಂದ ಹೆಚ್ಚು ಅನುಕೂಲ ಆಗುವುದಿಲ್ಲ. ಮೊದಲು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟ್ ಬೋರ್ಡ್ ಎಂದು ಇತ್ತು. ಈಗ ಅದು ಬಿ.ಡಿ.ಎ. ಎಂದು ಆಗಿದೆ. ಆದರೆ ಹೆಚ್ಚಿನ ಪ್ರಯೋಜನ ಏನೂ ಆಗಿಲ್ಲ. ಮೂಲಭೂತವಾಗಿ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡು ಹಿಡಿಯುವುದಕ್ಕೆ ಈಗಿರತಕ್ಕ ಸಾಧನವೇ ಸರಿಯಾಗಿದೆ ಎಂದು ನನಗನ್ನಿಸುತ್ತದೆ. ಇನ್ನು ಕೊಳಚೆ ಪ್ರದೇಶದ ನಿರ್ಮೂಲನದ ಬಗ್ಗೆ ಕೆಲವು ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಸ್ಲಂಗಳನ್ನು ತೆಗೆಯಬಾರದು, ಎಲ್ಲೆಲ್ಲಿ ತೆಗೆದಿದ್ದಾರೋ ಅಲ್ಲಿ ಅವರಿಗೆ ಪರಿಹಾರ ಕೊಡಬೇಕು ಎಂದು ಹೇಳಿದ್ದಾರೆ. ಸ್ಲಂಗಳನ್ನು ತೆಗೆದಿರುವ ಕಡೆ ಆಲ್ಟರ್ನೇಟೀವ್ ಸೈಟುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರಕ್ಕೆ ಸರಾಸರಿ ೫ ಜನ ಇರತಕ್ಕ ೬೦-೭೦ ಸಂಸಾರಗಳು ಪ್ರತಿದಿನ ಬರುತ್ತವೆಂದು ಪೋಲೀಸ್ ಮೂಲಗಳು ತಿಳಿಸಿವೆ. ೧೯೭೫ರಿಂದ ೧೯೮೦ನೇ ಇಸವಿಯವರೆಗೆ ಬೆಂಗಳೂರು ನಗರದಲ್ಲಿ ೧೦ ಲಕ್ಷ ಜನ ಬಂದಿದ್ದಾರೆ. ಇಷ್ಟು ಜನ ಹೆಚ್ಚಾಗಿ ತಮಿಳುನಾಡಿನಿಂದಲೇ ಬಂದರೆ ಯಾವ ಸರ್ಕಾರವಾಗಲೀ ೧೨ ಲಕ್ಷ ಜನರಿಗೆ ೧೦ ವರ್ಷಗಳಲ್ಲಿ ಕನಿಷ್ಟ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಸದಸ್ಯರೆಲ್ಲರೂ ಗಂಭೀರವಾಗಿ ಪರಿಶೀಲನೆ ಮಾಡಬೇಕು. ನಮ್ಮ ಜವಾಬ್ದಾರಿ ಏನು ? ಆಂಧ್ರ ಪ್ರದೇಶದಿಂದ, ಕೇರಳದಿಂದ, ತಮಿಳುನಾಡಿನಿಂದ, ಮಹಾರಾಷ್ಟ್ರದಿಂದ ಅಥವಾ ಇತರ ನೆರೆರಾಜ್ಯಗಳಿಂದ ಜನರು ಬಂದರೆ, ಅದೂ ಒಬ್ಬರಲ್ಲ, ಇಬ್ಬರಲ್ಲ, ಸಾವಿರ ಅಲ್ಲ. ಲಕ್ಷಗಟ್ಟಲೆ ಜನ ನೆರೆರಾಜ್ಯಗಳಿಂದ ಬಂದು ಖಾಲಿ ಇರತಕ್ಕ ಜಾಗವನ್ನು ಆಕ್ರಮಿಸಿಕೊಂಡರೆ, ನೀವು ಅವರ ಪರವಾಗಿ ವಾದ ಮಾಡಿದರೆ, ನೀರು ಕೊಡಿ, ಮನೆ ಕಟ್ಟಿಸಿಕೊಡಿ, ಆಸ್ಪತ್ರೆ ಕೊಡಿ, ಎಲ್ಲ ಪೌರ ಸೌಲಭ್ಯಗಳನ್ನು ಕೊಡಿ ಎಂದರೆ ಕಾರ್ಪೋರೇಷನ್ ಮಾತ್ರವಲ್ಲ ಕೇಂದ್ರ ಸರ್ಕಾರವೇ ಪ್ರಯತ್ನ ಮಾಡಿದರೂ ಏನೂ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಕಷ್ಟವಾಗುತ್ತದೆ. ಅದಕ್ಕೋಸ್ಕರ ನಗರಾಡಳಿತ ಮಂತ್ರಿಗಳ ಸಭೆಯಲ್ಲಿ

ಒಂದು ಮಾತನ್ನು ಪ್ರಸ್ತಾಪ ಮಾಡಿದ್ದೇನೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾವಿರಗಟ್ಟಲೆ ಲಕ್ಷಗಟ್ಟಲೆ ಜನ ಹೋಗತಕ್ಕದ್ದನ್ನು ತಡೆಯುವುದಕ್ಕೆ ಸಂವಿಧಾನವೇನಾದರೂ ಬದಲಾವಣೆ ಮಾಡುವುದಕ್ಕೆ ಆಗುತ್ತದೆಯೋ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಅದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೫-೨೦ ವರ್ಷಗಳಿಂದ ಕೊಳಚೆ ಪ್ರದೇಶದಲ್ಲಿ ಇರತಕ್ಕವರಿಗೆ ಬೇರೆ ಜಾಗ ಕೊಟ್ಟು ಸ್ಥಳಾಂತರ ಮಾಡುತ್ತೇವೆಂದು ಹೇಳಿದ್ದೇವೆ. ಆ ರೀತಿ ಮಾಡುತ್ತಿದ್ದೇವೆ. ಸುಭಾಷ್‌ನಗರ ಟ್ಯಾಂಕ್‌ಬಂಡ್ ರಸ್ತೆಯಲ್ಲಿರುವವರಿಗೆ ಕಾಂಪೆನ್‌ಸೇಷನ್ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆ ಪ್ರಶ್ನೆ ಬರುವುದಿಲ್ಲ. ಆದರೂ ಕೂಡ ಮಾನವೀಯತೆ ದೃಷ್ಟಿಯಿಂದ ಕಾರ್ಪೊರೇಷನ್ ಕಟ್ಟಿಸತಕ್ಕ ಅಂಗಡಿಗಳಲ್ಲಿ ಕೊಡುವುದಕ್ಕೆ ಅವಕಾಶವಿದ್ದರೆ, ಅರ್ಜಿ ಹಾಕಿಕೊಂಡರೆ ಅಲ್ಲಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಇನ್ನು ಮುಂದೆ ಬೆಂಗಳೂರು ನಗರದಲ್ಲೇ ಆಗಲಿ, ರಾಜ್ಯದ ಇತರ ನಗರ ಪ್ರದೇಶದಲ್ಲಾಗಲೀ ಕೊಳಚೆ ಪ್ರದೇಶಗಳು ಬರುವುದನ್ನು ತಡೆಗಟ್ಟುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕೆಂದು ಈಗಾಗಲೇ ನಾನು ನಗರಾಡಳಿತ ಮುಖ್ಯಸ್ಥರಿಗೆ ಮತ್ತು ಚುನಾಯಿತ ಅಧ್ಯಕ್ಷರುಗಳಿಗೆ ಹೇಳಿದ್ದೇನೆ. ಇದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ಈ ಸರ್ಕಾರ ಇವರಿಗೆ ವಿರುದ್ಧವಾಗಿದೆ ಎಂದು ಒಂದು ವಾದ ಇದೆ. ನಾವು ಯಾರ ವಿರುದ್ಧವೂ ಇಲ್ಲ. ನಗರ ಪ್ರದೇಶದ ಜನರಿಗೆ ಕನಿಷ್ಟ ಪ್ರಮಾಣದ ಪೌರಸೌಲಭ್ಯ ಕೊಡತಕ್ಕ ಕರ್ತವ್ಯ ಹೊತ್ತಿರತಕ್ಕ ಸ್ಥಳೀಯ ಸಂಸ್ಥೆಗಳ ಗತಿ ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ಸರ್ಕಾರ ಎಷ್ಟೇ ಸಹಾಯ ಮಾಡಿದರೂ ಸಾಲದೆ ಬರುತ್ತದೆ. ೧೨ ಲಕ್ಷ ಜನರಿಗೆ ಯಾವ ಯೋಚನೆ ಮಾಡುತ್ತೀರಿ ? ಬೆಂಗಳೂರಿಗೆ ನೀರನ್ನು ಎಲ್ಲಿಂದ ತರುತ್ತೀರಿ ? ಕಾವೇರಿ ಎರಡನೇ ಹಂತ, ಮೂರನೇ ಹಂತ ಆಯಿತು. ನಾಲ್ಕನೇ ಹಂತಕ್ಕೆ ಗಮನ ಕೊಡಬೇಕಾಗಿದೆ. ಇದೇರೀತಿ ಜನಸಂಖ್ಯೆ ಹೆಚ್ಚಾಗುತ್ತಾ ಹೋದರೆ ಕಾವೇರಿ ನದಿಯನ್ನೇ ಬೆಂಗಳೂರಿಗೆ ತಿರುಗಿಸಿದರೂ ಸಾಲುವುದಿಲ್ಲ. ಶೇಕಡ ೭೭ರ ಗತಿಯಲ್ಲಿ ಬೆಂಗಳೂರು ನಗರ ಬೆಳೆದಿದ್ದೇ ಆದರೆ ಕಾವೇರಿ ನದಿಯನ್ನೇ ಈ ಕಡೆ ತಿರುಗಿಸಿದರೂ ಸಾಲದೇ ಬರುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಅರ್ಬನ್ ಲ್ಯಾಂಡ್ ಸೀಲಿಂಗ್ ಬದಲಾವಣೆ ಮಾಡಬೇಕೆಂದು ಮಾಸ್ಟ ಡಿಸೌಜ ಅವರು ಹೇಳಿದ್ದಾರೆ. ಅದು ಸೆಂಟ್ರಲ್ ಆಕ್ಟ್. ಅದನ್ನು ನಾವೇನೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಮತ್ತು ಕಾರ್ಪೊರೇಷನ್ ಆಕ್ಟನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ಎಲ್ಲ ಸಿದ್ಧವಾಗಿದ್ದು ಈ ಸಭೆಯಲ್ಲಿ ಅದನ್ನು ತರಬೇಕೆಂದಿದ್ದೆ. ಆದರೆ ಕಾರಣಾಂತರದಿಂದ ಸಾಧ್ಯವಾಗಲಿಲ್ಲ. ಈಗಾಗಲೇ ಈ ಸಭೆಯಲ್ಲಿ ನಾನು ವಚನ ಕೊಟ್ಟಿದ್ದೇನೆ. ಈ ಸಭೆಯಲ್ಲಿ ಪಾಸ್ ಆಗದೇ ಹೋದರೂ ಆರ್ಡಿನೆನ್ಸ್ ಮುಖಾಂತರವಾದರೂ ತರುವುದಕ್ಕೆ ಮನಸ್ಸು ಮಾಡುತ್ತೇನೆ. ಮೇಯರ್ ಅವರಿಗೆ ಅಧಿಕಾರ ಕೊಡಿ ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಅಡ್ಮಿನಿಸ್ಟ್ರೇಷನ್ ರೆಸ್ಪಾನ್ಸಿಬಿಲಿಟಿ ತಮಗೇನು ಕೊಡುವುದಕ್ಕಾಗುತ್ತದೆ ? ಅದೇರೀತಿ ಊರಿಗೆ ದೊಡ್ಡ ಮನುಷ್ಯ ಮೇಯರ್. ಸಭೆಯನ್ನು ಕರೆಯುವುದು, ಸಭೆಯನ್ನು ನಡೆಸುವುದು, ಕಾರ್ಯಕಲಾಪವನ್ನು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು. ಈ ಕೆಲಸ ಅವರು ಮಾಡುತ್ತಾರೆ. ಇಲ್ಲಿ ಯಾವ ರೀತಿಯಾಗಿ ಸ್ಪೀಕರ್, ಡೆಪ್ಯುಟಿ ಸ್ಪೀಕರ್ ಇರುತ್ತಾರೋ ಅದೇರೀತಿ ಅವರೂ ಇರುತ್ತಾರೆ. ಮೇಯರ್‌ಗೆ ಅಧಿಕಾರ ಕೊಡಿ ಎಂದು ಹೇಳಿದರೆ ಏನು ಕೊಡುವುದಕ್ಕಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್. ಇಲ್ಲಿ ಅಧ್ಯಕ್ಷರಿಗೆ ನಮ್ಮನ್ನು ಸಸ್ಪೆಂಡ್ ಮಾಡುವ ಅಧಿಕಾರ ಇದೆ. ಹೊರಗಡೆಗೆ ಎತ್ತಿ ಹಾಕುವುದಕ್ಕೆ ಅಧಿಕಾರ ಇದೆ ಮೇಯರ್ ಅವರಿಗೆ ಮತ್ತು ಡೆಪ್ಯುಟಿ ಮೇಯರ್ ಅವರಿಗೆ ಆ ಅಧಿಕಾರ ಇದೆಯೋ ?

ಶ್ರೀ ಎ ಲಕ್ಷ್ಮೀಸಾಗರ್.—ಅದು ಬೇಕಾಗಿಲ್ಲ. ಕಲ್ಕತ್ತದಲ್ಲಿ ಹೊಸ ವಿಧಾನವನ್ನು ತಂದಿದ್ದಾರೆಂದು ಹೇಳಿದ್ದಾರೆ. ಅಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳದೆ ಅಲ್ಲಿರುವ ಪದ್ಧತಿಯನ್ನು ಇಲ್ಲಿ ತನ್ನಿ ಎಂದು ಕೇಳುತ್ತಿದ್ದಾರೆ. ಆ ಆಕ್ಟನ್ನು ಅವರು ಓದಿಲ್ಲ. ಅಧಿಕಾರ ಬೇಕು ಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ ಎಚ್. ಪಾಟೀಲ್.—ಎಲೆಕ್ಟೆಡ್ ಜನರನ್ನು ಬ್ಯೂರಾಕ್ರೆಸಿಯವರು ಸರಿಯಾಗಿ ನೋಡುವುದಿಲ್ಲ ಎಂಬ ದೃಷ್ಟಿಯಿಂದ ಅವರು ಹೇಳಿದ್ದಾರೆ. ಮೇಯರ್ ಅವರಿಗೆ ಅಧಿಕಾರಿಗಳು ಗೌರವ ಕೊಡುವುದಿಲ್ಲ. ಐ.ಎ.ಎಸ್. ಅಧಿಕಾರಿಗಳನ್ನು ತಾವು ಅಲ್ಲಿ ನೇಮಕ ಮಾಡುತ್ತೀರಿ. ಮೇಯರ್

ಎಂದು ಅರಿಸಿದಾಗ ಅವರ ಗೌರವವನ್ನು ಕಾಪಾಡುವುದು ನಿಮ್ಮ ಕರ್ತವ್ಯ. ಮೇಯರ್ ಅವರ ಅಸಹಾಯಕರಾಗದಂತೆ ಅವರ ಸ್ಥಿತಿಯನ್ನು ಕಾಪಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ರಕ್ಷಣೆ ಇದೆ ಕಾನೂನಿನ ಚೌಕಟ್ಟಿನಲ್ಲಿ ಕೊಡುವುದನ್ನು ಕೊಟ್ಟಿದ್ದೇವೆ. ಎಗ್ಸಿಕ್ಯೂಟೀವ್ ಪವರ್ ಕೊಡಿ ಎಂದು ಕೇಳುತ್ತಿದ್ದಾರೆ. ಪ್ರಾಸಂಗೀವಾಗಿ ಅವರು ಹೇಳಿದ್ದರಿಂದ ನಾನೂ ಪ್ರಾಸಂಗಿಕವಾಗಿ ಉತ್ತರ ಹೇಳುತ್ತಿದ್ದೇನೆ ಇಂಟರ್‌ಫಿಯರೆನ್ಸ್ ಸರ್ಕಾರದ ಕಡೆಯಿಂದ ಆಗುತ್ತಿದೆ ಎಂದು ಹೇಳಿದ್ದಾರೆ. ಎಲ್ಲಿ ಮಾಡಿದ್ದೇವೆ ? ಕೆಲವು ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡಿ, ಅಲ್ಲಿ ಲಂಚ ಜಾಸ್ತಿ ಇದೆ ಎಂದು ನನ್ನ ಮೇಲೆ ಕೆಲವರು ಒತ್ತಡ ಹಾಕಿದ್ದರು. ಕಾನೂನು ಪ್ರಕಾರ ಆ ರೀತಿ ಮಾಡುವುದಕ್ಕಾಗುವುದಿಲ್ಲ, ಮೊದಲು ನೋಟೀಸ್ ಕೊಡಬೇಕು, ಅವರಿಗೆ ಅವಕಾಶ ಕೊಡಬೇಕು, ಅವರು ಸರಿಪಡಿಸಿಕೊಳ್ಳದಿದ್ದರೆ ನಂತರ ಸಮ್ಮೋಹನಾಸ್ತ್ರವನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಇದೆ, ಏಕಾಏಕಿ ನೆನೆಸಿಕೊಂಡ ತಕ್ಷಣ ಚುನಾಯಿತ ಸಭೆಗಳನ್ನು ರದ್ದು ಮಾಡತಕ್ಕ ಕೆಲಸಕ್ಕೆ ಹೋಗುವುದಿಲ್ಲ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಮುನಿಸಿಪಾಲಿಟಿ ವ್ಯವಹಾರದಲ್ಲಿ ಕೂಡ ಸರ್ಕಾರ ಪ್ರವೇಶ ಮಾಡುವುದಿಲ್ಲ. ನಾನಂತೂ ಆ ರೀತಿ ಮಾಡುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ —ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಎಕ್ಸ್‌ಪ್ಲನೇಷನ್ ಕೇಳಿದ್ದೇನೆ. ಈ ರೀತಿ ನಿಮ್ಮ ಮೇಲೆ ಆಪಾದನೆ ಬಂದಿದೆ ಏನು ಹೇಳುತ್ತೀರಿ ಎಂದು ಕೇಳಿದ್ದೇನೆ.

ಶ್ರೀ ಧರ್ಮಸಿಂಗ್.—ತಮಗೆ ಅಭಿನಂದನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು, ಸ್ವೀಕಾರ ಮಾಡಿದ್ದೇನೆ. ಆದರೆ ಚುನಾವಣೆಯನ್ನೇ ನಡೆಸದೇ ಇದ್ದ ಸಮಯ ಇತ್ತಲ್ಲ, ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಪ್ರಜಾಪ್ರಭುತ್ವವಾದಿಗಳು ನಾವು. ಬರೀ ವಾದಿಗಳು ಅಲ್ಲ. ಪ್ರಜಾಪ್ರಭುತ್ವದಲ್ಲಿ ಸಂಪೂರ್ಣವಾಗಿ ನಂಬಿಕೆ ಇರತಕ್ಕ ನಾವು......

ಶ್ರೀ ಎಂ. ರಾಮಪ್ಪ.—ಮೌಲ್ಯಾಧಾರಿತ......

ಶ್ರೀ ಎ. ಲಕ್ಷ್ಮೀಸಾಗರ್.—ಕೂಚೊಂಡಿ, ನೇನು ಮಾಟ್ಲಾಡ್ತಾ ಉಂಡಾನು.

ಅವರು ಮಂಗಳೂರಿಗೆ ಒಂದು ಡಿಸ್ಟ್ರಿಕ್ಟ್ ಕೋರ್ಟ್ ಬೇಕೆಂದು ಹೇಳಿದ್ದಾರೆ. ಅದು ನನ್ನ ಪೂರ್ಣ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅಲ್ಲಿಗೆ ಡಿಸ್ಟ್ರಿಕ್ಟ್ ಕೋರ್ಟ್ ಕೊಡುವ ಬಗ್ಗೆ ಹೈಕೋರ್ಟಿನವರು ತೀರ್ಮಾನ ಮಾಡಬೇಕು. ಅವರು ಆ ಬಗ್ಗೆ ಒಪ್ಪಿಕೊಂಡ ಮೇಲೆ ಹಣವನ್ನು ಒದಗಿಸುವುದು ಸರ್ಕಾರದ್ದು ಇರುತ್ತದೆ. ಅದಕ್ಕೆ ಹೈಕೋರ್ಟಿನವರು ಒಪ್ಪಿಕೊಂಡರೆ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ನಾವೂ ಕೂಡಾ ಒಪ್ಪಿಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮೊಹಿದ್ದೀನ್ ಅವರು ಅರ್ಬನ್ ಪೂರ್ ಬಗ್ಗೆ ಮೂಲಭೂತವಾದ ಪ್ರಶ್ನೆಯನ್ನೇ ಕೇಳಿದ್ದಾರೆ. ಅರ್ಬನ್ ಪೂರ್ ಬಗ್ಗೆ ಮಾನದಂಡ ಯಾವುದು. ಇಂತಹ ಜನರೂ ಇದ್ದಾರೆಯೇ ಎಂದು ಕೇಳಿದ್ದಾರೆ, ಇದು ನಮಗೆ ತಲೆನೋವು ತಂದಿದೆ. ನಗರ ಪ್ರದೇಶದಲ್ಲಿ ಬಡವರನ್ನು ಗುರುತಿಸಿರತಕ್ಕ ಮಾನದಂಡ ಯಾವುದು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದಲ್ಲೂ ಮಾಡಿಲ್ಲ, ಈ ಬಗ್ಗೆ ಖಾಜಿ ಸೇಟ್ ಅವರೇ ಮಾಡದ ಮೇಲೆ ಇನ್ನು ಬಡಾ ಇಮಾಮ್‌ಸಾಬ್ ಏನನ್ನು ಮಾಡುವುದಕ್ಕಾಗುತ್ತದೆ ?

ಶ್ರೀ ಧರ್ಮಸಿಂಗ್.—ಮೊದಲು ಕೂಡಾ ಮಾಡಿದ್ದಾರೆ, ಮುನ್ನಡೆ ಎಂಬ ಕಾರ್ಯಕ್ರಮ ಹಾಕಿಕೊಂಡು ಇಂತಹ ಜನರಿಗೆ ಸಹಾಯ ಮಾಡಿದ್ದಾರೆ. ಯಾರಿಗೆ ಸೈಟ್ಸ್ ಇಲ್ಲ ಅವರಿಗೆ ಕೊಡುವುದು, ಬಡವರಿಗೆ ರಿಕ್ಷಾ ಕೊಡುವುದು, ಬಂಡಿ ಕೊಡುವುದು, ಇಂತಹ ಕಾರ್ಯಕ್ರಮಗಳು ಆಗಿನಿಂದ ಇದೆ.

ಶ್ರೀ ಎ ಲಕ್ಷ್ಮೀಸಾಗರ್,—ತಾವು ಸ್ವಲ್ಪ ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಅರ್ಬನ್ ಪೂರ್ ಐಡೆಂಟಿಫಿಕೇಷನ್ಸ್ ಬಗ್ಗೆ ಕೇಳಿದ್ದಾರೆ ಇದಕ್ಕೆ ಮಾನದಂಡ ಯಾವುದು, ಇದಕ್ಕೆ ಮಾನ ದಂಡ ಇದ್ದರೆ ಎಷ್ಟು ಜನ ಇಂತಹವರು ನಮ್ಮ ರಾಜ್ಯದಲ್ಲಿ ಇದ್ದಾರೆ ಎಂದಿದ್ದಾರೆ. ಇದಕ್ಕೆ ಮಾನದಂಡ ನಮ್ಮ ರಾಜ್ಯದಲ್ಲೂ ಇಲ್ಲ ಬೇರೆ ರಾಜ್ಯದಲ್ಲೂ ಕೂಡಾ ಇಲ್ಲ. ಇದು ಇನ್ನೂ ಇತ್ಯರ್ಥವಾಗಿಲ್ಲ.

ಶ್ರೀ ಧರ್ಮಸಿಂಗ್.—ಬಡತನ ರೇಖೆಯಿಂದ ಕೆಳಗೆ ಇರುವವರ ಬಗ್ಗೆ ಕಂಡುಹಿಡಿಯಲಾಗುತ್ತದೆ. ಪಟ್ಟಣಗಳಲ್ಲಿ ಈ ಬಗ್ಗೆ ಏಕೆ ಮಾಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಮಾನದಂಡ ಉಪಯೋಗಿಸಿ ಆ ರೀತಿ ತೀರ್ಮಾನಕ್ಕೆ ಬಂದಿದ್ದೇವೆ. ನಗರ ಪ್ರದೇಶಗಳ ಬಗ್ಗೆ ಇದುವರೆವಿಗೂ ಕೇಂದ್ರದಲ್ಲೂ ಮಾಡಿಲ್ಲ. ನಾವೂ ಕೂಡಾ ಮಾಡಿಲ್ಲ. ಆದರೆ ಕೇಂದ್ರ ಸರ್ಕಾರದವರೇ ಮಾಡದಿರುವುದನ್ನು ಅವರು ಮಾಡುವುದಕ್ಕೆ ಕಾದು ಕೂರದೇ ಸ್ವಂತ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅರ್ಬನ್ ಪೂರ್ ಬಗ್ಗೆ ಕೇಂದ್ರದವರು ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ಬರೀ ಗ್ರಾಮಾಂತರ ಪ್ರದೇಶದಲ್ಲಿ ಮಾತ್ರ ಆಗಿದೆ ಎಂದು ಹೇಳುವುದು ವಾಸ್ತವಾಂಶಕ್ಕೆ ಅನುಗುಣವಾಗಿಲ್ಲ. ಇವತ್ತು ಬಡತನದ ರೇಖೆಯಿಂದ ಕೆಳಗೆ ಇರುವವರು ಅಥವಾ ಮೇಲೆ ಇರುವವರ ಬಗ್ಗೆ ಅರ್ಬನ್‌ನಲ್ಲಿ ಇಷ್ಟು ರೂರಲ್‌ನಲ್ಲಿ ಇಷ್ಟು ಎಂದು ಬೈಫರ್ಕೇಟ್ ಮಾಡಿ ಹೇಳಿಲ್ಲ. ಅವರುಗಳು ಸೇವನೆ ಮಾಡತಕ್ಕ ಆಹಾರದಲ್ಲಿ ೨೨೦೦ ಕ್ಯಾಲರೀಸ್ ಇರುವಷ್ಟು ಆಹಾರ ಸೇವಿಸುವವರು ಹಾಗೂ ೧೮೦೦ ಕ್ಯಾಲರೀಸ್‌ಕ್ಕಿಂತಾ ಕಡಿಮೆ ಆಹಾರ ಸೇವಿಸುವವರ ಆಧಾರದಿಂದ ಬಡತನ ರೇಖೆಯನ್ನು ಫಿಕ್ಸ್ ಮಾಡಿರುತ್ತಾರೆ. ಈ ೧೮೦೦ ಕ್ಯಾಲರೀಸ್ ಕೂಡಾ ಕಡಿಮೆ ಎಂದು ಜಿಜ್ಞಾಸೆ ಇದ್ದು ಈ ಬಗ್ಗೆ ಸುಕಾತ್ಮೆ ಅವರೂ ಕೂಡಾ ಚರ್ಚೆ ಮಾಡುತ್ತಿದ್ದಾರೆ. ಆದರೆ ಅರ್ಬನ್ ಪೂರ್ ಹಾಗೂ ರೂರಲ್ ಪೂರ್ ಎಂದು ಮಾಡಿಲ್ಲವೆಂದು ಹೇಳಿರುವುದು ಸರಿಯಲ್ಲ. ನಮ್ಮ ರಾಜ್ಯದಲ್ಲೂ ಈ ಬಗ್ಗೆ ಸರ್ವೇ ಮಾಡಿ ಸರಿಯಾಗಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ನಗರ ಪ್ರದೇಶಗಳು ಸಿಕ್ಕಾಪಟ್ಟೆ ಬೆಳೆಯುತ್ತಿವೆ, ಅದನ್ನು ನಿಯಂತ್ರಣ ರೀತಿಯಲ್ಲಿ ಬೆಳೆಯತಕ್ಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಬೇಕೆಂದು ಮಾನ್ಯ ಮೊಹಿಯುದ್ದೀನ್ ಅವರು ಹೇಳಿದ್ದಾರೆ. ಅವರ ವಾದವನ್ನು ನಾನು ಒಪ್ಪುತ್ತೇನೆ. ನಗರ ಪ್ರದೇಶಗಳ ಬೆಳವಣಿಗೆ ಹಾಗೂ ಅಲ್ಲಿಯ ಜನರ ವಿಚಾರದ ಬಗ್ಗೆ ಅರ್ಬನ ಪೂರ್ ಬಗ್ಗೆ ಕೇಂದ್ರ ಸರ್ಕಾರ ಕೂಡಾ ಏನೂ ಮಾಡಿಲ್ಲ. ನಾನು ಕೇಂದ್ರ ಮಟ್ಟದಲ್ಲಿ ನಡೆದ ಎರಡು ನಗರಾಭಿವೃದ್ಧಿ ಮಂತ್ರಿಗಳ ಸಭೆಗೆ ಹೋಗಿದ್ದೆ. ಎರಡೂ ಸಮಯದಲ್ಲೂ ನಾನು ಪ್ರಸ್ತಾಪ ಮಾಡಿದ್ದೇನೆ, ಈಗ ಕೇಂದ್ರ ಸರ್ಕಾರದವರೂ ಈ ಅರ್ಬನ್ ಪಾಲಿಸಿ ಹೇಗೆ ಇರಬೇಕೆಂದು ರೂಪಿಸಿಕೊಳ್ಳುವುದಕ್ಕೋಸ್ಕರ ಶ್ರೀ ಛಾರ್ಲ್ಸ್ ಕುರಿಯ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಅವರು ಅಂಕಿಸಂಖ್ಯೆಗಳನ್ನು ಜಮಾಯಿಸುತ್ತಿದ್ದಾರೆ. ಕೇಂದ್ರ ಸರ್ಕಾರದವರು ಅದನ್ನು ಬೇಗನೆ ಮಾಡಬೇಕೆಂದು ಒತ್ತಾಯ ಪೂರ್ವಕವಾದ ಮನವಿಯನ್ನು ನಾನು ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಮಂತ್ರಿಗಳವರಲ್ಲಿ ಮನವಿಯನ್ನು ಮಾಡಿದ್ದೇನೆ. ಇದು ಅಷ್ಟು ಸುಲಭವಾಗಿರತಕ್ಕ ವಿಚಾರವಲ್ಲ. ಈ ಬಗ್ಗೆ ಮಾನ್ಯ ಧರ್ಮಸಿಂಗ್ ಅವರೂ ಹಾಗೂ ಈ ಸದನದ ಉಭಯ ಪಕ್ಷದ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದ, ನಮ್ಮ ದೇಶದ ಒಟ್ಟು ಜನರ ಪೈಕಿ ಶೇಕಡಾ ೩೦ರಷ್ಟು ಜನ ನಗರಗಳಲ್ಲಿ ವಾಸ ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳ ಕಡೆ ಗಮನ ಇಟ್ಟಿರತಕ್ಕ ರೀತಿಯಲ್ಲಿ, ಗ್ರಾಮಾಂತರ ಪ್ರದೇಶದ ಜನರಿಗೆ ಖರ್ಚು ಮಾಡತಕ್ಕ ರೀತಿಯಲ್ಲಿ ನಗರಪ್ರದೇಶದಲ್ಲಿ ಖರ್ಚು ಮಾಡತಕ್ಕ ಒಂದು ಪಾಲಿಸಿಯನ್ನು, ನೀತಿಯನ್ನು ಕೇಂದ್ರ ಸರ್ಕಾರ ರೂಪಿಸುವುದಕ್ಕಾಗಿಲ್ಲ, ಇವತ್ತು ನಗರಪ್ರದೇಶದ ಜನಸಂಖ್ಯೆ ವರ್ಷೇವರ್ಷೇ ಜಾಸ್ತಿಯಾಗುತ್ತಾ ಹೋಗುತ್ತಿದೆಯೇ ಹೊರತು ಕಡಿಮೆ ಆಗತಕ್ಕ ಸೂಚನೆ ಕಾಣುತ್ತಾ ಇಲ್ಲ. ನಗರಪ್ರದೇಶದಲ್ಲಿ ಬರತಕ್ಕ ಜನರನ್ನು ತಡೆಯುವುದಕ್ಕಾಗಿ ಈ ದೇಶದಲ್ಲಿ ಕಾನೂನು ಇಲ್ಲ. ಮುಂದೆ ಮಾಡುತ್ತಾರೋ ಏನೋ ಗೊತ್ತಿಲ್ಲ. ಆದುದರಿಂದ ಬಹಳ ಗಂಭೀರವಾದ ಪ್ರಶ್ನೆ ಇದು ಆಗಿದೆ, ನಾವೂ ಕೂಡಾ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಮೊದಲು ತೀರ್ಮಾನ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದ್ದೇನೆ. ನಗರದ ಪ್ರದೇಶದ ಜನರಿಗೆ ಕನಿಷ್ಟ ಪ್ರಮಾಣದ ಪೌರ ಸೌಲಭ್ಯಗಳನ್ನು ಒದಗಿಸಬೇಕಾದರೆ ಸಾಕಷ್ಟು ಹಣದ ಸಂಪನ್ಮೂಲದ ಅವಶ್ಯಕ ಇದೆ. ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಪ್ರಮಾಣದ, ಗಾತ್ರದ ಹಣವನ್ನು ನಗರ ಪ್ರದೇಶಕ್ಕೆ ಖರ್ಚು ಮಾಡತಕ್ಕ ಶಕ್ತಿ ಯಾವ ರಾಜ್ಯ ಸರ್ಕಾರಕ್ಕೂ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆದರೂ ಕೂಡಾ ಕೇಂದ್ರ ಸರ್ಕಾರದವರು ಮಾಡುವುದನ್ನು ಕಾದು ನಿಲ್ಲದೆ ನಮ್ಮ ರಾಜ್ಯದ ಮಟ್ಟದಲ್ಲಿ ಸದರೀ ಛಾರ್ಲ್ಸ್ ಕುರಿಯಾ ಸಮಿತಿಯನ್ನು ಮಾಡಿದ್ದೇವೆ. ಈಗಾಗಲೇ ಅವರು

ಸಭೆಗಳನ್ನು ಮಾಡಿದ್ದಾರೆ. ನಾವು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಅರ್ಬನ್ ಪಾಲಿಸಿಯನ್ನು ನಿರ್ಮಾಣ ಮಾಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಕಾರ್ಯಕ್ರಮಗಳನ್ನು ಮಾಡಲಾಗಿದೆ. ಇನ್ನು ಐತಿಹಾಸಿಕ ಸ್ಥಳಗಳು ಅವನತಿ ಹೊಂದುತ್ತಿವೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಒಂದೊಂದು ಕಾಲದಲ್ಲಿ, ಒಂದೊಂದು ಕಾಲಕ್ಕೆ ಒಂದೊಂದು ರೀತಿಯ ಬದಲಾವಣೆಗಳು ಬರುತ್ತಿರುತ್ತವೆ, ಇದನ್ನು ಯಾರು ಕೂಡಾ ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಒಂದು ಕಾಲದಲ್ಲಿ ಶ್ರೀರಂಗಪಟ್ಟಣ ಮೈಸೂರಿನ ರಾಜಧಾನಿ ಆಗಿತ್ತು. ಆ ನಂತರ ಅದು ಮೈಸೂರಿಗೆ ಹೋಯಿತು. ಅದನ್ನು ಯಾರು ಕೂಡಾ ತಡೆಯುವುದಕ್ಕಾಗುವುದಿಲ್ಲ. ಆಗಿನ ಬೆಂಗಳೂರು ಒಂದು ಸಣ್ಣ ಪ್ರಮಾಣದಲ್ಲಿ ಇತ್ತು. ಬೆಂಗಳೂರು ಆಗ ಸಣ್ಣ ಪ್ರಮಾಣದಲ್ಲಿ ಇದ್ದ ಈ ನಗರ ಈಗ ಬೃಹದಾಕಾರವಾಗಿ ಬೆಳೆದು ಭಸ್ಮಾಸುರನ ಮಟ್ಟಕ್ಕೆ ಬೆಳೆದು ನಿಂತಿದೆ. ಇವತ್ತಿನ ದಿವಸ ಇಲ್ಲಿ ಏನಾದರೂ ಚರಿತ್ರಾರ್ಹವಾದ ಅವಶೇಷಗಳು ಇದ್ದರೆ ಅವುಗಳನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಗಮನ ತೆಗೆದುಕೊಳ್ಳುತ್ತದೆಯೇ ಹೊರತು ಬೇರೆ ಕೆಲಸಗಳನ್ನು ಮಾಡುವ ಬಗ್ಗೆ ನನಗೇನೂ ಅನಿಸುವುದಿಲ್ಲ. ಆಯಾಯ ಸ್ಥಳೀಯ ಸಂಸ್ಥೆಯವರು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿಕೊಂಡು ೫ ವರ್ಷಗಳ ಕಾಲ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದ್ದಾರೆ. ಆ ಒಂದು ವಾದವನ್ನು ನಾನು ಒಪ್ಪುತ್ತೇನೆ. ಮಾನ್ಯ ಕೃಷ್ಣನ್ ಅವರು ಹಲವಾರು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಕೀಲರ ಸಮ್ಮೇಳನದಲ್ಲಿ ಮಾಡಿರತಕ್ಕ ಕೆಲವು ನಿರ್ಣಯಗಳ ಬಗ್ಗೆ ಏನು ಹೇಳಿದ್ದಾರೆಂದು ಹೇಳಿ ಒಂದೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ ಮೊದಲನೆಯದಾಗಿ, ಕೋರ್ಟ್ ಫೀ ತೆಗೆದುಬಿಡಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರ ಕೂಡಾ ಚಿಂತನೆ ಮಾಡುತ್ತಿದೆ. ಇದರ ಬಗ್ಗೆ ನಾನೂ ಕೂಡಾ ಒಂದು ಸಭೆಗೆ ಹೋಗಿದ್ದೆ, ಹಿಂದೆ ಈ ಖಾತೆಯನ್ನು ವಹಿಸಿಕೊಂಡಿದ್ದ ಮಾನ್ಯ ರಾಮಕೃಷ್ಣ ಅವರು ಕೂಡಾ ಒಂದು ಸಭೆಗೆ ಹೋಗಿದ್ದರು. ಈ ಬಗ್ಗೆ ಕೇಂದ್ರ ಸರ್ಕಾರ ಕೂಡಾ ಏನೂ ನಿರ್ಣಯವನ್ನು ತೆಗೆದುಕೊಂಡಿಲ್ಲ. ಆದರೆ ಕೋರ್ಟ್ ಫೀಸನ್ನು ವಜಾ ಮಾಡುವುದರಿಂದ ಸಾಮಾನ್ಯ ಜನರಿಗೆ ಏನು ಅನುಕೂಲ ಸಿಗುತ್ತದೋ ಆ ಅನುಕೂಲಗಳಲ್ಲಿ ನಾವು ಈಗಾಗಲೇ ಕೆಲವೊಂದನ್ನು ಕೊಟ್ಟಿದ್ದೇವೆ. ಉಚಿತ ಕಾನೂನು ನೆರವಿನ ಆಶ್ರಯದಲ್ಲಿ ೮ ಸಾವಿರ ರೂಪಾಯಿಗಳಿಗಿಂತಾ ಜಾಸ್ತಿ ವರಮಾನ ಇಲ್ಲದೇ ಇರುವವರಿಗೆ ಸಂಪೂರ್ಣವಾದ ನೆರವನ್ನು ಕೊಟ್ಟು ಅವರ ಪರ ಅಥವಾ ವಿರುದ್ಧವಾಗಿ ಬರತಕ್ಕ ಕೇಸುಗಳಿಗೆ ಆಗುವ ಎಲ್ಲಾ ಖರ್ಚನ್ನು, ಮತ್ತು ಕೋರ್ಟ್ ಫೀಯನ್ನು ನಾವೇ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದುದರಿಂದ ಕೋರ್ಟ್ ಫೀಸ್‌ನ್ನು ವಜಾ ಮಾಡಿದರೆ ಏನು ಅನುಕೂಲ ಸಿಗುತ್ತದೋ ಅಂತಹ ಅನುಕೂಲವನ್ನು ಎರಡು ವರ್ಷಗಳಿಂದ ನಾವು ಜಾರಿಗೆ ತಂದಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸ್ಟಾಂಪ್ ಡ್ಯೂಟಿ ವಜಾ ಮಾಡತಕ್ಕದರ ಬಗ್ಗೆ ಹೇಳಿದ್ದಾರೆ. ಅದು ಸಾಧ್ಯವಿಲ್ಲದ ಮಾತು. ಅದು ನಮಗೆ ವರಮಾನ ಬರತಕ್ಕ ಇಲಾಖೆ. ಇದರಿಂದ ಈಗ ಬರತಕ್ಕ ಅಲ್ಪಸ್ವಲ್ಪ ಹಣವನ್ನು ಈಗ ಬಿಡುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಹೈಕೋರ್ಟ್‌ನಲ್ಲಿ ಮತ್ತಿತರ ಕಡೆಗಳಲ್ಲಿ ಬಹಳಷ್ಟು ಕೇಸುಗಳು ಪೆಂಡಿಂಗ್ ಇವೆ, ಹೈಕೋರ್ಟ್ ಒಂದರಲ್ಲೇ ೮೭ ಸಾವಿರ ಕೇಸುಗಳು ಇವೆಯೆಂದು ಮಾನ್ಯ ಸದಸ್ಯರು ಅನೇಕರು ಪ್ರಸ್ತಾಪ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಈಗಲೇ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಅಂದರೆ ಹೈಕೋರ್ಟ್‌ನಲ್ಲಿ ೮೭ ಸಾವಿರ ಕೇಸು, ಕೆಳಗಿನ ಕೋರ್ಟುಗಳಲ್ಲಿ ೧೦ ಲಕ್ಷ ಕೇಸುಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ ಇದರ ಬಗ್ಗೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಹತ್ತಿರ ಮಾತನಾಡಿ ಆದಷ್ಟು ಬೇಗ ಇವುಗಳನ್ನು ಇತ್ಯರ್ಥ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಅವರೂ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇದು ಇಲ್ಲಿಗೇ ನಿಲ್ಲುವುದಿಲ್ಲ. ಮತ್ತೆ ಅವರನ್ನು ನಾನು ಕಾಣುತ್ತೇನೆಂದು ಹೇಳಬಯಸುತ್ತೇನೆ. ಸ್ಟೇಟ್ ಲಾ ಕಮೀಷನ್ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಕಾರಣಾಂತರದಿಂದ ನೇಮಕವಾದಂಥ ಸದಸ್ಯರ ಹೆಸರನ್ನು ಪೂರ್ತಿ ಮಾಡುವುದಕ್ಕೆ ಆಗಲಿಲ್ಲ. ಅದನ್ನು ಈ ವರ್ಷದೊಳಗೆ ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವರ್ಷ ಎಂದರೆ ಈ ಫೈನಾನ್ಷಿಯಲ್ ಇಯರ್ ಎಂದು ಅಲ್ಲ.

ಇನ್ನು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಸ್ಥಳೀಯ ಸಂಸ್ಥೆಗಳು ಆಕ್ಟ್ರಾಯನ್ನು ವಸೂಲಿ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿಲ್ಲವಾದ್ದರಿಂದ ವಸೂಲಾತಿ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. ಇದಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಬೇಕಾದ ಸ್ಥಳೀಯ ಸಂಸ್ಥೆಗಳು ಆಕ್ಟ್ರಾಯ್ ವಸೂಲಾತಿಯನ್ನು ಸಂಪೂರ್ಣವಾಗಿ ವಸೂಲ್ಮಾಡತಕ್ಕ ಕಡೆಗಳಲ್ಲಿ ೫೦ ಪರ್ಸೆಂಟ್, ೨೦ ಪರ್ಸೆಂಟ್ ವಸೂಲ್ಮಾಡುತ್ತಿವೆ, ಇನ್ನು ಕೆಲವು ಸಂದರ್ಭಗಳಲ್ಲಿ ವಸೂಲಾತಿಯನ್ನೇ ಮಾಡದಿರುವುದು, ಮತ್ತು ಒಂದುವೇಳೆ ವಸೂಲ್ಮಾಡಿದರೂ ಅದಕ್ಕೆ ಒಂದು ಇತಿ ಮಿತಿ ಇಲ್ಲದೆ ಖರ್ಚುಮಾಡುವುದು ಇದೆಲ್ಲಾ ನಡೆಯುತ್ತಿದೆ. ಇದನ್ನೆಲಾ ನಾವು ನಿಯಂತ್ರಣ ಮಾಡಿದ್ದೇವೆಂದು ಈಗಾಗಲೇ ನಾನು ಹೇಳಿದ್ದೇನೆ, ರಾಜ್ಯದ ಬೊಕ್ಕಸಕ್ಕೆ ನಗರಸಭೆಗಳಿಂದ ಶೇಕಡ ೫೦ ರಷ್ಟು ವರಮಾನ ಬರುತ್ತದೆ. ಆದ್ದರಿಂದ ಹೆಚ್ಚಿಗೆ ಅವುಗಳಿಗಾಗಿಯೇ ಖರ್ಚುಮಾಡಬೇಕೆಂದು ಹೇಳಿದ್ದಾರೆ. ಹೆಚ್ಚು ಖರ್ಚು ಮಾಡಬೇಕೆಂಬುದೇನೋ ಸರಿ. ಆದರೆ ಸ್ಥಳೀಯ ಸಂಸ್ಥೆಗಳು ತಮ್ಮ ಮೂಲಭೂತ ಸಂಪನ್ಮೂಲಗಳನ್ನು ಸ್ಥಳೀಯವಾಗಿ ತಾವೇ ಒದಗಿಸಿಕೊಂಡು ಕೆಲಸ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದವರು ಯಾವರೀತಿ ತಮ್ಮ ತಮ್ಮ ಸಂಪನ್ಮೂಲಗಳನ್ನು ಒದಗಿಸಿಕೊಂಡು ಕೆಲಸ ಮಾಡಿಕೊಳ್ಳಬೇಕೆಂದು ರಾಜ್ಯಸರ್ಕಾರಗಳಿಗೆ ಹೇಳಿದ್ದಾರೋ ಅದೇರೀತಿಯಲ್ಲಿ ನಗರಸಭೆ ಮತ್ತು ಪುರಸಭೆಗಳೂ ಕೂಡ ತಮ್ಮ ತಮ್ಮ ಸಂಪನ್ಮೂಲಗಳನ್ನು ಒದಗಿಸಿಕೊಂಡು ತಮ್ಮ ಕಾಲಮೇಲೆ ತಾವು ನಿಂತುಕೊಳ್ಳಬೇಕೆಂದು ನಾವು ಹೇಳುತ್ತೇವೆ. ನೀವು ಎಷ್ಟು ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುತ್ತೀರಿ ಅಷ್ಟೇ ಹಣವನ್ನು ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಸೆಂಟ್ರಲಿಸ್ಪಾನ್ಸರ್ಡ್ ಸ್ಕೀಂನಲ್ಲಿ ನಿಮಗೆ ನಾವು ಒದಗಿಸಿಕೊಡುತ್ತೇವೆಂದು ಅವರು ಹೇಳಿದ್ದಾರೆ. ಅದೇ ಮಾತನ್ನು ನಾನು ನಗರಸಭೆಯವರಿಗೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಸೂಲಿ ಕ್ರಮ ಸರಿಯಾಗಿ ಆಗಿಲ್ಲವೆಂದು ನೀವು ಹೇಳಿದ್ದೀರಿ. ಇದರ ಬಗ್ಗೆ ನಾನು ಅನಂತರ ಉತ್ತರ ಕೊಡುತ್ತೇನೆ. ಬೆಂಗಳೂರು ನಗರಸಭೆಯ ಕಲೆಕ್ಷನ್ ಕಡಿಮೆಯಾಗಿದೆಯೆಂದು ಅವರು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಅಂಕಿಅಂಶಗಳಿವೆ. ಸುಮಾರು ೬೦ ಪರ್ಸೆಂಟ್‌ನಷ್ಟು ವಸೂಲಾತಿಯನ್ನು ಮಾಡಿದ್ದಾರೆ. ಈವರೆಗೆ ೯ ಕೋಟಿ ರೂಪಾಯಿಗಳನ್ನು ವಸೂಲ್ಮಾಡಿದ್ದಾರೆ, ಇನ್ನು ಒಂದು ತಿಂಗಳಲ್ಲಿ ಸುಮಾರು ೨ ಕೋಟಿ ರೂಪಾಯಿಗಳನ್ನು ಅವರು ವಸೂಲ್ಮಾಡುತ್ತಾರೆಂದು ಹೇಳಬಯಸುತ್ತೇನೆ. ಇದು ಡಿಸೆಂಬರ್ ತಿಂಗಳ ಕೊನೆಯವರೆಗೆ ಇರತಕ್ಕ ಅಂಕಿಅಂಶಗಳನ್ನು ನಾನು ಕೊಟ್ಟಿರತಕ್ಕದ್ದು. ಆದರೂ ಕೂಡ ಬೆಂಗಳೂರು ನಗರಸಭೆಯವರು ಸಾಧಿಸಿರತಕ್ಕ ಸಾಧನೆ ಸಾಲದು. ಬೆಂಗಳೂರು ನಗರಸಭೆಯವರಂತೆಯೇ ರಾಜ್ಯದ ಎಲ್ಲಾ ಕಾರ್ಪೋರೇಷನ್‌ಗಳವರೂ ವಸೂಲಾತಿಯನ್ನು ಮಾಡಿದರೆ ಅನುಕೂಲವಾಗುತ್ತದೆ. ಅವರು ವಸೂಲ್ಮಾಡತಕ್ಕ ಹಣವನ್ನು ಸರಿಯಾಗಿ ವಸೂಲ್ಮಾಡಿದರೆ ಬೇರೆಯವರೂ ಮಾಡುತ್ತಾರೆ. ಬೇರೆಯವರಿಗೆ ಅವರು ಮಾದರಿಯಾಗಿರುತ್ತಾರೆ. ಈಗ ಸ್ವಲ್ಪಮಟ್ಟಿಗೆ ಪ್ರಯತ್ನವನ್ನು ಮಾಡಿದ್ದಾರೆ ಇನ್ನೂ ಪೂರ್ಣವಾಗಿ ಪ್ರಯತ್ನ ಮಾಡಬೇಕೆಂದು ಅವರಿಗೆ ತಾಕೀತು ಮಾಡುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಮಾರುಕಟ್ಟೆಗಳ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದ್ದಾರೆ. ರಾಜಾಜಿನಗರದ ಎಲ್ಲ ಅಂಗಡಿಗಳೂ ಅಲಾಟ್‌ಮೆಂಟ್ ಆಗಿದೆ. ಆದರೆ ಅವರು ಇನ್ನೂ ಬಂದು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಯಶವಂತಪುರದ ಮಾರುಕಟ್ಟೆಯಲ್ಲೂ ಅಲಾಟ್‌ಮೆಂಟ್ ಕೆಲಸ ಆಗಿದೆ. ೩ನೇ ಮಹಡಿಯಲ್ಲಿ ಆರ್.ಟಿ.ಓ.ಗೆ ಅಲಾಟ್ ಮಾಡಿದ್ದಾರೆ. ಅವರು ಬಂದು ಈಗಾಗಲೇ ಸ್ವಾಧೀನದಲ್ಲಿ ತೆಗೆದುಕೊಂಡಿದ್ದಾರೆ. ೨ನೇ ಮಹಡಿಯಲ್ಲಿ ಸೈನ್ಸ್ ಮತ್ತು ಟೆಕ್ನಾಲಜಿಗೆ ಅಲಾಟ್ ಮಾಡಿದ್ದೇವೆ. ಅವರೂ ಇಷ್ಟರಲ್ಲೇ ಆಕ್ಯುಪೈ ಮಾಡಿಕೊಳ್ಳುತ್ತಾರೆ. ಗ್ರೌಂಡ್ ಫ್ಲೋರ್ ಮತ್ತು ಮೊದಲನೇ ಮಹಡಿಯ ಅಂಗಡಿಗಳನ್ನು ಲಾಟರಿ ಮೂಲಕ ಅಲಾಟ್ ಮಾಡಲಾಗುತ್ತಿದೆ. ಈ ಪದ್ಧತಿಯನ್ನು ನಾವು ಮೊದಲನೇ ಸಾರಿ ಅನುಸರಿಸುತ್ತಿದ್ದೇವೆ. ಇದನ್ನೂ ಕೂಡ ಪೂರ್ತಿ ಉಪಯೋಗ ಮಾಡಿಕೊಳ್ಳುವಂತೆ ವ್ಯವಸ್ಥೆ ಮಾಡೋಣ.

ಇನ್ನು ಆಸ್ಪತ್ರೆ ಆಗಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು ಉತ್ತರನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಬಂದು ಡೈರೆಕ್ಟೋರೇಟ್ ಮಾಡಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು.

ಇನ್ನು ನೀರು ಸರಬರಾಜಿನ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ವಿವರಗಳನ್ನು ಕೊಡಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಕಾವೇರಿ ೩ನೇ ಹಂತದ ಕೆಲಸಗಳು ಪ್ರಾರಂಭವಾಗಿವೆ. ಇದು ತಮಗೂ ಗೊತ್ತಿದೆ. ಸೇತುವೆಗಳನ್ನು ಕಟ್ಟತಕ್ಕ ಕೆಲಸವೂ ಪ್ರಾರಂಭವಾಗಿದೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ನೀಲಿ ನಕಾಶೆ (ಬ್ಲೂ ಪ್ರಿಂಟ್) ಸಿದ್ಧವಾಗಿದೆ, ನಾವು ಈ ವಿವರಗಳನ್ನೆಲ್ಲಾ ಕೇಂದ್ರಸರ್ಕಾರಕ್ಕೆ ಕೊಟ್ಟಿದ್ದೇವೆ. ಇದನ್ನು ವಿಶ್ವಬ್ಯಾಂಕ್‌ಗೆ ಕೊಟ್ಟು ಅವರಿಂದ ಆರ್ಥಿಕ ನೆರವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಈ ನೀರು ಸರಬರಾಜು ಯೋಜನೆಗೆ ಬೆಂಗಳೂರು ನಗರಸಭೆಯವರು ೩೦ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಒಂದು ನಿರ್ಣಯವನ್ನು ಮಾಡಿದ್ದಾರೆ. ಎಲ್.ಐ.ಸಿ. ಯವರೂ ಕೂಡ ೫೦ ಕೋಟಿ ರೂಪಾಯಿಗಳನ್ನು ಕೊಡಲು ಮುಂದೆ ಬಂದಿದ್ದಾರೆ. ಇದರ ಜೊತೆಗೆ ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರದ ಆಧೀನದಲ್ಲಿರತಕ್ಕ ಕಾರ್ಖಾನೆಗಳು, ಇಲಾಖೆಗಳು ಏನಿವೆ ಅವುಗಳ ಜೊತೆ ವಿಚಾರ ವಿನಿಮಯ ಮಾಡಿ ಅವರಿಂದಲೂ ಹಣವನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಿದ್ದೇವೆ, ಆದಷ್ಟುಬೇಗ ಕಾವೇರಿ ೩ನೇ ಹಂತದ ಕೆಲಸವನ್ನು ಪೂರ್ತಿ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ೩೬ ಅಂಗುಲ ಅಗಲದ ೨ ಕೊಳವೆಗಳ ಲೈನನ್ನು ಹಾಕಬೇಕೆಂದು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಕೇಳಿದ್ದಾರೆ. ಆದರೆ ಅವುಗಳನ್ನು ಎಲ್ಲೆಲ್ಲಿ ಹಾಕಬೇಕೆಂಬ ವಿಚಾರ ಇದೆ. ಮೊದಲು ಹೈಗ್ರೌಂಡ್ಸ್ ರಿಸರ್ವಾಯರ್‌ನಿಂದ ಆಗತಕ್ಕಂಥ ಲೈನನ್ನು ಬೇಗ ತೆಗೆದುಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಈ ದಿಸೆಯಲ್ಲಿ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ಒಂದು ಮೀಟಿಂಗ್‌ನ್ನೂ ವ್ಯವಸ್ಥೆ ಮಾಡಿದ್ದರು. ಆದರೆ ಆವತ್ತು ಅದು ನಡೆಯಲಿಲ್ಲ. ಇನ್ನು ಒಂದು ವಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಅಧ್ಯಕ್ಷರೆ, ನಾನು ಈಗಲೇ ಮಾನ್ಯ ಸಚಿವರನ್ನು ಕ್ಲಾರಿಫಿಕೇಷನ್ ಕೇಳುತ್ತೇನೆ. ಈ ವಿಚಾರದಲ್ಲಿ ೩೬ ಇಂಚು ಲೈನ್ ಕೊಳವೆ ಏನಿದೆ ಅದು ಹೈಗ್ರೌಂಡ್ಸ್ ರಿಸರ್ವಾಯರ್ ನಿಂದ ಹಾಕತಕ್ಕದ್ದು. ನಾನು ಹೇಳುತ್ತಿರುವುದು ಸೌತ್ ಎಂಡ್‌ನಿಂದ ಕೇತಮಾರನಹಳ್ಳಿಗೆ ಹಾಕುವುದು. ನೀವು ಅದನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಈ ೪.೫ ಕೋಟಿ ರೂಪಾಯಿಯ ಯೋಜನೆಯ ಕೆಲಸ ಕೂಡ ಪ್ರಾರಂಭವಾಗಲಿ. ಮಾತನಾಡುವಾಗ ಜಾರಿಕೊಳ್ಳುವ ಕೆಲಸ ಮಾಡಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನೇನೂ ಜಾರಿಕೊಳ್ಳುತ್ತಿಲ್ಲ, ಅದನ್ನು ಕೈಬಿಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೈ ಬಿಡಬೇಡಿ. ಕೈ ಕಟ್ಟಿಕೊಳ್ಳಿ. ಆದರೆ ನೀವು ಜಾರಿಕೊಳ್ಳುತ್ತಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರವನ್ನು ಬೋರ್ಡ್‌ನ ಮುಂದಿಟ್ಟು, ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಕೆಲಸ ಇನ್ನೂ ಮುಗಿದಿಲ್ಲ. ಬೇಕಾದರೆ ಎರಡು ಕೆಲಸಗಳನ್ನೂ ತೆಗೆದುಕೊಳ್ಳಲಿ. ಆದರೆ ಮೊದಲು ಯಾವುದನ್ನು ತೆಗೆದುಕೊಳ್ಳಬೇಕು, ಅನಂತರ ಯಾವುದನ್ನು ತೆಗೆದುಕೊಳ್ಳಬೇಕೆಂದು ಟೆಕ್ನಿಕಲ್ ಒಪಿನಿಯನ್ ತೆಗೆದುಕೊಂಡು......

ಶ್ರೀ ಎಂ. ಎಸ್. ಕೃಷ್ಣನ್.—ಎರಡು ಕೆಲಸಗಳನ್ನೂ ತೆಗೆದುಕೊಂಡರೆ ಅದರಿಂದ ಬೆಂಗಳೂರು ನಗರಕ್ಕೆ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಈಗ ನೀವು ಒಂದನ್ನು ಮಾಡುತ್ತೀರಿ ಸಂತೋಷ, ಸ್ವಾಗತ. ಇದೇರೀತಿ ಇನ್ನೊಂದನ್ನು ತೆಗೆದುಕೊಳ್ಳುವುದರಲ್ಲೂ ಸ್ಪಷ್ಟತೆ ಇರಬೇಕು ಅವರಿಗೆ ನೀವು ನಿರ್ದೇಶನ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈ ಕೆಲಸವನ್ನು ನಾವು ಅವರಿಗೆ ಬಿಟ್ಟಿದ್ದೇವೆ. ಆದರೆ ಅವರಿಗೆ ನಿರ್ದೇಶನವನ್ನು ಕೊಡತಕ್ಕ ಅಧಿಕಾರ ನಮಗೆ ಕಾನೂನಿನಲ್ಲಿಲ್ಲ. ಆದರೂ ಕೂಡ ಇದು ಅವಶ್ಯಕವಾಗಿ ಆಗಬೇಕಾದ ಕೆಲಸವಾದ್ದರಿಂದ ಇದನ್ನು ತೆಗೆದುಕೊಳ್ಳಬೇಕೆಂದು ಅವರಿಗೆ ಗೊತ್ತಾಗಿದೆ. ಆದ್ದರಿಂದಲೇ ನೀವು ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮೊನ್ನೆ ನೀವು ರಾಜಾಜಿನಗರಕ್ಕೆ ಬಂದಿದ್ದಾಗ ಇದರ ಬಗ್ಗೆ ಅಲ್ಲಿನ ಜನರಿಗೆ ಒಂದು ಆಶ್ವಾಸನೆಯನ್ನು ಕೊಡಲಿಲ್ಲವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯವನ್ನು ಸಭೆಯ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ, ನಿಜ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಕಾವೇರಿ ೪ನೇ ಹಂತದ ಬಗ್ಗೆ ಪ್ರಸ್ತಾವ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರು ವಿವರವಾದ ಒಂದು ಸರ್ವೆ ಕೆಲಸವನ್ನು ತೆಗೆದುಕೊಂಡಿದ್ದಾರೆ. ಈ ಕೆಲಸ ಮುಂದುವರಿಯುತ್ತಿದೆ ಎನ್ನತಕ್ಕ ಮಾತನ್ನು ಹೇಳ ಬಯಸುತ್ತೇನೆ.

ಇನ್ನು ಬೋರ್‌ವೆಲ್‌ಗಳ ಬಗ್ಗೆ ಮಾನ್ಯ ಕೃಷ್ಣನ್‌ರವರು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ೨೪೬ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಅದರಲ್ಲಿ ಮಾನ್ಯ ಕೃಷ್ಣನ್‌ರವರ ಕ್ಷೇತ್ರದಲ್ಲೇ ೧೧೯ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಇತ್ತೀಚೆಗೆ ಅವರ ಕ್ಷೇತ್ರದಲ್ಲಿ ಇನ್ನೂ ಕೆಲವಾರು ಬೋರ್‌ವೇಲ್‌ಗಳನ್ನು ಹಾಕಿದ್ದೇವೆ. ಒಟ್ಟು ೭೩೮ ಬೋರ್‌ವೆಲ್‌ಗಳಿದ್ದು ೩.೦೫ ಮಿಲಿಯನ್ ಗ್ಯಾಲನ್ ನೀರು ಬೆಂಗಳೂರಿನ ಎಲ್ಲ ಕಡೆಗೂ ಸರಬರಾಜಾಗುತ್ತದೆ. ಬೆಂಗಳೂರಿನ ಎಲ್ಲ ಶಾಸಕರನ್ನೂ ಬರಮಾಡಿಕೊಂಡು ನೀರಿನ ಸಮಸ್ಯೆಯ ಬಗ್ಗೆ ಚರ್ಚೆಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನೂ ಕೂಡ ಕ್ರಮವಾಗಿ, ಶಾಸ್ತ್ರೀಯವಾಗಿ ನಗರದ ಎಲ್ಲ ಶಾಸಕರನ್ನೂ ತಿಂಗಳಿಗೆ ಒಂದೆರಡುಸಾರಿ ಬರಮಾಡಿಕೊಂಡು ಅವರ ಸಲಹೆ, ಸೂಚನೆಗಳನ್ನು ಕೇಳಿ ಅದರ ಪ್ರಕಾರ ಕೆಲಸ ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಬೆಂಗಳೂರಿನ ಎಲ್ಲ ಶಾಸಕರನ್ನೂ ಕರೆಸಿಕೊಂಡು ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುವಂತೆಯೇ, ನಮ್ಮ ರಾಜ್ಯದಲ್ಲಿರತಕ್ಕ ಎಲ್ಲ ಕಾರ್ಪೋರೇಷನ್‌ಗಳಲ್ಲೂ ಕೂಡ ಸ್ಥಳೀಯ ಶಾಸಕರನ್ನು ಬರಮಾಡಿಕೊಂಡು ಅವರ ಸಲಹೆ ಸೂಚನೆಗಳನ್ನೂ ತೆಗೆದುಕೊಳ್ಳುವಂತ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈ ಕೆಲಸವನ್ನೂ ಮಾಡೋಣ. ಇದರ ಜೊತೆಗೆ ತೆರೆದ ಬಾವಿಗಳನ್ನು ಸ್ವಚ್ಛಗೊಳಿಸುವ ಕ್ರಮವನ್ನು ತೆರೆದುಕೊಂಡು ಈಗಾಗಲೇ ಬೆಂಗಳೂರಿನಲ್ಲಿರುವ ಎಲ್ಲ ತೆರೆದ ಬಾವಿಗಳಲ್ಲೂ ಹೂಳನ್ನು ತೆಗೆಸಬೇಕೆಂದು ನಿರ್ದೇಶನ ನೀಡಿದ್ದೇನೆ. ಇದರ ಪ್ರಕಾರ ಬೆಂಗಳೂರಿನಲ್ಲಿರುವ ೯೨ ಬಾವಿಗಳ ಪೈಕಿ ೬೨ ಬಾವಿಗಳಲ್ಲಿ ಹೂಳನ್ನು ತೆಗೆಸಿ ಶುದ್ಧೀಕರಣ ಮಾಡಿಸಿದ್ದೇವೆ,

ನಲವತ್ತು ತೆರೆದ ಬಾವಿಗಳನ್ನು ಎ ಮತ್ತು ಬಿ ಜೋನ್‌ಗಳಲ್ಲಿ ತೆಗೆದು ೦.೪ ಎಂ.ಬಿ.ಡಿ ನೀರನ್ನು ಒದಗಿಸುತ್ತಿದ್ದೇವೆ. ಈಗ ಸನ್ಮಾನ್ಯ ಕೃಷ್ಣನ್‌ರವರಿಗೆ ಬೇಕಾಗಿರತಕ್ಕಂಥ ಉತ್ತರ ಶಿಂಶದಿಂದಿ ಬರತಕ್ಕಂಥ ನೀರಿನ ಬಗ್ಗೆ. ಅವರಿಗೆ ಸಮಜಾಯಿಷಿ ಹೇಳತಕ್ಕಂಥದ್ದು ಏನೆಂದರೆ, ಶಿಂಶಾದಿಂದ ಬರತಕ್ಕಂಥ ೪.೫೦ ಎಂ. ಬಿ. ಡಿ. ಪೂರ್ತಿ ನೀರನ್ನು ಎ. ಮತ್ತು ಬಿ. ಜೋನ್ ಅಂದರೆ ವೆಸ್ಟ್ ಆಫ್ ಕಾರ್ಡ್‌ರೋಡ್‌ಗೆ ಕಳುಹಿಸಿಕೊಡುತ್ತೇವೆ. ಇದರಲ್ಲಿ ೧.೫ ಎಂ.ಬಿ.ಡಿ. ನೀರನ್ನು ಮಾಗಡಿ ರಸ್ತೆಯ ಪ್ರದೇಶಕ್ಕೆ ೧೬ ಇಂಚಿನ ಪೈಪ್‌ಲೈನ್ ಚಾಮರಾಜಪೇಟೆಯಿಂದ ಬರತಕ್ಕಂಥ ನೀರನ್ನು ತೆಗೆದು ಸಪ್ಲೈ ಮಾಡುತ್ತಿದ್ದೇವೆ. ಇಲ್ಲಿಗೆ ಸಪ್ಲೈ ಮಾಡುತ್ತಿದ್ದ ನೀರು ಎ ಮತ್ತು ಬಿ ಜೋನ್‌ಗೆ ಬಹುಮಟ್ಟಿಗೆ ತಿಪ್ಪಗೊಂಡನಹಳ್ಳಿ ರಿಸರ್ವಾಯರ್‌ನಿಂದ ಬರತಕ್ಕಂಥ ೧೫ ಎಂ.ಬಿ.ಡಿ. ನೀರಿನಲ್ಲಿ ೫.೫೮ ಎಂ.ಬಿ.ಡಿ. ನೀರನ್ನು ಎ ಮತ್ತು ಬಿ ಜೋನ್‌ಗಳಿಗೆ ಸಪ್ಲೈ ಮಾಡುತ್ತಿದ್ದೇವೆ. ಇದರಿಂದ ಸ್ವಲ್ಪಮಟ್ಟಿಗೆ ನೀರಿನ ವಿತರಣೆಯಲ್ಲಿ ಸುಧಾರಣೆಯಾಗಿದೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸುವ ಸಲುವಾಗಿ ಸರಬರಾಜು ಸಡಿಲಿಸಲಾಗುತ್ತದೆಂದು ಹೇಳುತ್ತೇನೆ. ಒಂದುವಾರದಿಂದ ಬೆಳಗಿನ ಪೆರೇಡ್ ಅಂದರೆ ವೀಕ್ಷಣಾ ಕಾರ್ಯವನ್ನು ಮಾಡುತ್ತಿಲ್ಲ ನಾಳೆಯಿಂದಲೇ ಇದು ಇಂಪ್ರೂವ್ ಆಗಿರುತ್ತದೆಯೋ ಇಲ್ಲವೇ ಎನ್ನುವುದನ್ನು ಖುದ್ದಾಗಿ ನೋಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹೆಸರುಘಟ್ಟದಲ್ಲಿ ಕೊಳವೇ ಬಾವಿಗಳನ್ನು ಹಾಕತಕ್ಕಂಥ ಕಾರ್ಯ ನಡೆದಿದ್ದು ಇದು ಆಶಾದಾಯಕವಾಗಿರುತ್ತದೆ. ಅಲ್ಲಿ ಹೆಚ್ಚು ನೀರು ಸಿಕ್ಕಿದರೆ ಮುಂದೆ ನೀರನ್ನು ನಗರಕ್ಕೆ ಸರಬರಾಜು ಮಾಡತಕ್ಕಂಥ ಕೆಲಸ ಮಾಡುತ್ತೇವೆ. ದಿನಂಪ್ರತಿ ನೀರನ್ನು ಕೊಡುತ್ತಿರತಕ್ಕಂಥ ಪ್ರದೇಶಗಳಿಗೆ ಈಗ ತೆಗೆದುಕೊಂಡಿರುವ ಪಾಲಿಸಿ ಪ್ರಕಾಶ ಏನ್ನು ಮಾಡಬೇಕು ಎನ್ನುವ ಬಗ್ಗೆ ಪುನರ್ ಪರಿಶೀಲನೆ ಮಾಡತಕ್ಕಂಥ ಒಂದು ಉದ್ದೇಶ ನನಗಿದೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬಿ.ಡಿ.ಎ ಬೆಂಗಳೂರು ರೀಜನಲ್ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ನಮ್ಮ ಮುಂದೆ ಮೂಲಭೂತವಾದ ಪ್ರಶ್ನೆಯಾಗಿರುತ್ತದೆ, ಇದು ಇರಬೇಕೆಂದು ಹೇಳತಕ್ಕಂಥವರು ಇದ್ದಾರೆ, ಇದು

ಬೇಡವೆಂದು ಹೇಳತಕ್ಕಂಥವರೂ ಇದ್ದಾರೆ. ಬಿ.ಡಿ.ಎ. ಮುಖಾಂತರ ಹಂಚತಕ್ಕಂಥ ಜಾಗಗಳನ್ನು ಕಾನೂನು ಪ್ರಕಾರವಾಗಿಯೇ ಕೊಟ್ಟಿರುತ್ತೇವೆ. ಕುಮಾರಸ್ವಾಮಿ ಲೇ ಔಟಿನಲ್ಲಿ ನಿರ್ಮಾಣ ಮಾಡಿರ ತಕ್ಕಂಥ ಮನೆಗಳನ್ನು ಇನ್ನೂ ಸರಿಯಾಗಿ ಹಂಚಿಲ್ಲ. ಅಲ್ಲಿ ನಿರ್ಮಾಣವಾಗಿರುವ ಮನೆಗಳಿಗೆ ಕಿಟಕಿಯಿಲ್ಲ ಬಾಗಿಲು ಇಲ್ಲ. ಮತ್ತು ರೋಡ್ಸ್ ಮಾಡತಕ್ಕಂಥ ಕೆಲಸ ಹಾಗೆಯೇ ನಿಂತಿದೆ. ಕಿಟಕಿಬಾಗಿಲುಗಳನ್ನು ಕಿತ್ತುಹಾಕಿದ್ದಾರೆ, ನೀರಿನ ಸರಬರಾಜು ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಅಲ್ಲಿ ಏನೂ ತೊಂದರೆಯಾಗಿಲ್ಲ, ನೀರನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ನಾನು ಮೂರುನಾಲ್ಕು ಸಲ ಹೋಗಿ ನೋಡಿಕೊಂಡು ಬಂದಿರುತ್ತೇನೆ.

ಇನ್ನು ರೆವಿನ್ಯೂ ಸೈಟ್ಸ್ ಓನರ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಸಮಗ್ರವಾದಂಥ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾವು ಪ್ರಯತ್ನ ಮಾಡಿದ್ದೇವೆ. ತೆಗೆದು ಕೊಂಡಿರತಕ್ಕಂಥ ತೀರ್ಮಾನ ಕೊನೆಯ ಹಂತದಲ್ಲಿದೆ. ಅದನ್ನು ಕ್ಯಾಬಿನೆಟ್ ಮುಂದೆ ತರಬೇಕೆಂದಿದ್ದೇವೆ ಸಂಬಂಧಪಟ್ಟ ವಿವರಗಳನ್ನು ಈಗಾಗಲೇ ಸಂಗ್ರಹ ಮಾಡಿದ್ದೇವೆ. ಈ ಬಗ್ಗೆ ಇಷ್ಟರಲ್ಲಿಯೇ ತೀರ್ಮಾನ ತೆಗೆದು ಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ತಾವು ಹೇಳಿದ ಹಣ ಒಂದಾದರೆ ತಾವು ಕೇಳುತ್ತಿರುವ ಹಣ ಒಂದಾಗಿದೆ ಎಂದು ಸನ್ಮಾನ್ಯ ಕೃಷ್ಣನ್‌ರವರು ಹೇಳಿದ್ದಾರೆ. ಮೊದಲು ಘೋಷಣೆ ಆದಾಗ ಯಾವರೀತಿ ಇತ್ತು ಆ ರೀತಿ ತೆಗೆದುಕೊಳ್ಳಬೇಕೆಂದು ಹೇಳಿದರು. ಈವತ್ತಿನ ದರದಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಾವಿಷನ್ ಇದೆಯೇ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ ಜಾಗದ ಬೆಲೆ ಜಾಸ್ತಿಯಾಗಿದ್ದರಿಂದ ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಎನ್‌ಹ್ಯಾನ್ಸ್‌ಮೆಂಟ್ ಏನು ಆಗಿರುತ್ತದೋ ಅದನ್ನು ಕೊಟ್ಟು ಪೊಸಿಷನ್ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ಕೊಟ್ಟಿದ್ದಾರೆ. ಆದ್ದರಿಂದ ಕಾಸ್ಟ್ ಜಾಸ್ತಿಯಾಯಿತು. ಇದರಲ್ಲಿ ಯಾವುದೇ ವಿಧವಾದ ಸಂಚು ಇಲ್ಲ. ಅದು ಅವಶ್ಯಕವಾಗಿ ಅನಿವಾರ್ಯವೂ ಆಗಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ರೆಂಕೋ ಸೊಸೈಟಿಯವರು ದುಡ್ಡು ಕೊಟ್ಟಿದ್ದರೂ ಏನೂ ಆಗಿಲ್ಲವೆಂದು ಹೇಳಿದ್ದಾರೆ. ಅದನ್ನು ನೋಡುತ್ತೇನೆ. ಲೇ ಔಟ್‌ಗಳನ್ನು ಮಾಡಲು ಹೋದವರ್ಷ ಒಪ್ಪಿಕೊಂಡದ್ದು. ಕಂಟ್ರಾಕ್ಟರರಿಗೂ ಮತ್ತು ಬಿ.ಡಿ.ಎ.ಗೂ ಜಗಳವಾಗಿ ಕೆಲಸ ಸ್ಥಗಿತವಾಗಿರುತ್ತದೆ. ಮಾರ್ಚ್ ತಿಂಗಳೊಳಗೆ ಮುಗಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಮಾರ್ಚ್ ತಿಂಗಳೊಳಗೆ ಆಗುವಂತೆ ಕಾಣುವುದಿಲ್ಲ. ೨-೩ ತಿಂಗಳ ಲ್ಲಿಯೇ ಪೂರ್ಣಗೊಳಿಸಲು ಪ್ರಯತ್ನಿಸುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ಒಳಚರಂಡಿ ವ್ಯವಸ್ಥೆ ನೀರಿನ ವ್ಯವಸ್ಥೆ, ಈ ಎರಡು ಕೆಲಸಗಳನ್ನು ಮಾಡುವುದಕ್ಕೋಸ್ಕರವಾಗಿ ಬಿ.ಡಿ.ಎ. ರವರು ಜಲ ಮಂಡಲಿಗೆ ಹಣವನ್ನು ಕೊಟ್ಟಿದ್ದಾರೆ. ಕೆಲಸಗಳನ್ನು ಅವರು ತ್ವರಿತಗತಿಯಿಂದ ಮಾಡುತ್ತಾರೆಂದು ನನಗನಿಸುತ್ತದೆ. ಇದು ಆದ ನಂತರ ಅವರಿಗೆ ಪೂರ್ಣವಾಗಿ ಮನೆಗಳನ್ನು ಕಟ್ಟಿಕೊಳ್ಳತಕ್ಕಂಥ ವ್ಯವಸ್ಥೆ ಮಾಡುತ್ತೇನೆ ಅನಂತರ ಎಲ್.ಐ.ಬಿ. ಹೌಸಸ್ ೧೯೬೬ರಲ್ಲಿ ೧೨೫ ಕನ್‌ಸ್ಟ್ರಕ್ಷನ್ ಆಗಿರುತ್ತದೆ. ೧೭ ಕಡಿಮೆ ಬರುತ್ತಿದೆ. ಅರ್ಜಿಗಳು ಬಂದಿರುತ್ತದೆ. ಹೆಚ್ಚಿಗೆ ಬಂದಂಥ ಅರ್ಜಿಗಳಿಗೆ ಕಲ್ಲಹಳ್ಳಿಯಲ್ಲಿ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ. ಇನ್ನು ಎಂ. ಐ. ಬಿ. ಹೌಸ್‌ಗಳಲ್ಲಿ ೯೩ ಕಟ್ಟಿಸಲಾಗಿದೆ. ಇದರಲ್ಲೂ ಎಕ್ಸಸ್ ಬಂದ ಅರ್ಜಿಗಳಿಗೆ ಬೇರೆ ಕಡೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ಇನ್ನು ಬಿ.ಡಿ.ಎ. ಲೇ ಔಟ್ ಸರಿಯಾಗಿ ಮಾಡುತ್ತಿಲ್ಲ. ಡೆವಲಪ್‌ಮೆಂಟ್ ಸರಿಯಾಗಿ ಆಗು ತ್ತಿಲ್ಲ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಕೂಡ ತಿಳಿದುಕೊಂಡಿರುತ್ತೇನೆ. ಚೆನ್ನಾಗಿ ಬೆಳೆದ ಮೇಲೆ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡಿಸತಕ್ಕಂಥದ್ದು ಇರುತ್ತದೆ. ನಗರ ಸಭೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಪೌರಸೌಲಭ್ಯಗಳನ್ನು ಕೊಡುವುದಕ್ಕೆ ಆಗಿಲ್ಲ ವೆಂದು ಹೇಳುವ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕನಿಷ್ಠ ಪ್ರಮಾಣದ ಪೌರಸೌಲಭ್ಯ ಗಳನ್ನು ನಾವು ಕೊಟ್ಟಿದ್ದೇವೆ. ಇಲ್ಲಿ ಜಲ್ಲಿ ರಸ್ತೆಗಳು ಇವೆ, ಒಳಚರಂಡಿ ವ್ಯವಸ್ಥೆ, ಮತ್ತು ನೀರಿನ ವ್ಯವಸ್ಥೆ ಮಾಡಿರುತ್ತೇವೆ. ಆಮೇಲೆ ಬೀದಿ ದೀಪದ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ಕನಿಷ್ಟ ಪ್ರಮಾಣದ ಪೌರಸೌಲಭ್ಯಗಳನ್ನು ಕೊಡತಕ್ಕಂಥ ಕೆಲಸಗಳನ್ನು ನಗರ ಸಭೆ ತೆಗೆದುಕೊಳ್ಳಬೇಕೆಂದು ಇರುತ್ತದೆ, ಆದರೆ ಬೆಳವಣಿಗೆಯ ಮಟ್ಟದಲ್ಲಿ ಮಾಡಿಲ್ಲ. ಆದ್ದರಿಂದ ನಾವು ತೆಗೆದುಕೊಳ್ಳುವುದಕ್ಕೆ

ಆಗುವುದಿಲ್ಲವೆಂದು ನಗರ ಸಭೆಯವರು ಹೇಳುತ್ತಾರೆ. ಬಿ. ಡಿ. ಎ. ಲೇ ಔಟ್ಸನ್ನು ನಗರ ಸಭೆಗೆ ವಹಿಸಲು ತಕ್ಕ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇನ್ನು ಬಿ. ಡಿ. ಎ.ಗೆ ಪ್ರತ್ಯೇಕವಾಗಿ ಹೋಲ್ ಟೈಮ್ ಚೇರ್‌ಮನ್ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ಕೂಡ ಮಾಡೋಣ. ಇನ್ನು ಜಿ. ಎಂ. ಆರ್. ಡಿ. ಎ ಅಪ್ಲಿಕೇಷನ್ ಸಲ್ಲಿಸಿ ಬಂದ್ ಮಾಡಿರುತ್ತಾರೆ. ಮುಂದಿನ ತಿಂಗಳಲ್ಲಿಯೇ ಆರಂಭ ಮಾಡುತ್ತೇವೆಂದು ಅಥಾರಿಟಿಯವರು ಈಗಾಗಲೇ ನಿರ್ಣಯ ಮಾಡಿದ್ದಾರೆ.

ಶ್ರೀಮಾನ್ ರಾಮಯ್ಯನವರು ಗ್ರ್ಯಾಂಟ್ ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇನ್ನು ಭಾಗ್ಯಮಂದಿರಕ್ಕೆ ಹಣಕಾಸು ಸಾಲದು, ನಿಜ ಇದು ಕಡಿಮೆ ಇದೆ, ಜಾಸ್ತಿ ಕೊಡಬೇಕೆಂದು ನಮ್ಮ ಹಣಕಾಸಿನ ಮಿತಿಯಲ್ಲಿ ವಿಚಾರ ಮಾಡಬೇಕಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀಮಾನ್ ಯಡಿಯೂರಪ್ಪನವರು ಮತ್ತು ಕೃಷ್ಣನ್ ಅವರು ವಿಧಾನ ಮಂಡಲದ ವರದಿಗಾರರ ಬೇಡಿಕೆ ಇನ್ನೂ ಇತ್ಯರ್ಥ ಆಗಿಲ್ಲ, ಇದನ್ನು ಇತ್ಯರ್ಥ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೂ ಕೂಡ ಇದನ್ನು ಗಮನದಲ್ಲಿಟ್ಟುಕೊಂಡು ಬೇಗ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ. ಅವರೇ ಹೀಗೆ ಹೇಳಿದ ಮೇಲೆ ನಾನೂ ಮತ್ತೆ ಹೇಳಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೆ ಚತುರಮತಿಗಳು ನೀವು ಬಹಳ ಚೆನ್ನಾಗಿ ಜಾರಿಕೊಳ್ಳುತ್ತಿದ್ದೀರಿ.

ಉಪಾಧ್ಯಕ್ಷರು.—ಆ ಜಾಗಕ್ಕೆ ಹೋದಮೇಲೆ ಇದು ಜಾಸ್ತಿಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಆ ಜಾಗದಲ್ಲಿ ಹಿಂದೆ ಶ್ರೀ ರಘುಪತಿಯವರು ಇದ್ದರು. ಅವರು ಹೀಗೆ ಜಾರಿಕೊಳ್ಳುತ್ತಿರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆಮೇಲೆ ಶ್ರೀ ಯಡಿಯೂರಪ್ಪನವರು ವಿಧಾನ ಮಂಡಲದ ನೌಕರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಉತ್ತರವನ್ನು ಈಗಾಗಲೇ ಹೇಳಿದ್ದೇನೆ, ಪುರಸಭೆಯ ಕೆಲಸಗಳಿಗೆಲ್ಲಾ ಬೆಂಗಳೂರಿಗೆ ಬರಬೇಕಾಗುತ್ತದೆ ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ, ಆ್ಯಕ್ಟ್ ಅಮೆಂಡ್‌ಮೆಂಟ್ ಮಾಡಬೇಕಾಗಿದೆ, ರೂಲ್ಸ್ ರೆಡಿಯಾಗಿದೆ, ಅದರ ಜೊತೆಗೆ ಸುಮಾರು ಹದಿನೈದು ವಿಧವಾದಂಥ ಅಪಾಯಿಂಟ್‌ಮೆಂಟ್‌ಗಳನ್ನು ಜಿಲ್ಲಾಮಟ್ಟದಲ್ಲಿ ಮಾಡುವುದಕ್ಕೆ, ಅವರಿಗೇ ಅಧಿಕಾರ ಕೊಡುವುದಕ್ಕೆ ರೂಲ್ಸ್ ಮಾಡಿ ಇಟ್ಟಿದ್ದೇವೆ. ಇದೇ ರೀತಿಯಾಗಿ ಖರ್ಚು ಮಾಡತಕ್ಕಂಥ ಹಣ ನಗರಸಭೆಗಳಿಗೂ ಕೂಡ ಜಾಸ್ತಿ ಕೊಡಬೇಕೆಂಬ ವಾದವನ್ನು ಒಪ್ಪಿಕೊಂಡಿದ್ದು, ರೂಲ್ಸ್ ರೆಡಿಯಾಗಿದ್ದು ಆ್ಯಕ್ಟ್ ಬಂದನಂತರ ಮಾಡಲಾಗುವುದು. ಇನ್ನು ಪುರಸಭೆಗಳ ಕೆಲಸಗಳಿಗೆ ಬೆಂಗಳೂರಿನ ವಿಧಾನಸೌಧಕ್ಕೆ ಬರತಕ್ಕಂಥ ವಿಷಯ ಇದನ್ನು ಆದಷ್ಟು ಕಡಿಮೆ ಪ್ರಮಾಣಕ್ಕೆ ಇಟ್ಟುಕೊಂಡು, ಪಾಲಿಸಿಗೆ ಸಂಬಂಧಪಟ್ಟ ವಿಷಯಗಳನ್ನು ಬಿಟ್ಟು ಮಿಕ್ಕ ಎಲ್ಲಾ ಅಧಿಕಾರಗಳನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಡಿವಿಜನಲ್ ಕಮೀಷನರ್‌ಗೆ ಬಿಟ್ಟಿದ್ದೇವೆ. ಗುಲ್ಬರ್ಗಾದವರು ಬೆಂಗಳೂರಿಗೆ ಬರಬೇಕಾಗಿಲ್ಲ ಗುಲ್ಬರ್ಗಾದಲ್ಲಿ ಡಿವಿಜನಲ್ ಕಮೀಶನರ್ ಇದ್ದಾರೆ. ಅಲ್ಲಿ ತಮ್ಮ ಕೆಲಸಗಳನ್ನು ಇತ್ಯರ್ಥ ಮಾಡಿಕೊಳ್ಳಬಹುದು, ಚುನಾಯಿತ ಪ್ರತಿನಿಧಿಗಳು ಐದುವರ್ಷ ಇರಬೇಕೆನ್ನುವ ಬೇಡಿಕೆ ಇದೆ. ಇದನ್ನು ಮಾಡಬೇಕೆಂದು ಬಹಳ ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ, ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆನ್ನುವ ಬಗ್ಗೆ, ನನ್ನ ಸಹದ್ಯೋಗಿಗಳೊಡನೆ ವಕೀಲನಾಗಿ ಇದನ್ನು ಅವರ ಮುಂದೆ ನಾನು ಇಡುತ್ತೇನೆ. ಅಸೆಸ್‌ಮೆಂಟ್ ಮಾಡುವಲ್ಲಿ ಭ್ರಷ್ಟಾಚಾರ ಇದೆಯೆಂದು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಬಿ ಎಸ್. ಯಡಿಯೂರಪ್ಪ.— ನಾನು ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಬೇರೆ ಯಾವುದಾದರೂ ಸಿಸ್ಟಮ್ ಮಾಡಿ ಐದುವರ್ಷಗಳಿಗೆ ಒಂದು ಸಾರಿ ಐದು ಪರ್ಸೆಂಟನಷ್ಟು ಏರಿಸುವುದರ ಮೂಲಕ ಇದನ್ನು ತಡೆಗಟ್ಟಬಹುದು ಎಂದು ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರತಕ್ಕಂಥ ಆ್ಯಕ್ಟ್ ಪ್ರಕಾರ ನಾಲ್ಕು ವರ್ಷಗಳಿಗೊಮ್ಮೆ ರಿವೈಸ್ ಮಾಡಲಿಕ್ಕೆ ಅವರಿಗೆ ಅಧಿಕಾರ ಇದೆ, ಕೆಲವು ಕಡೆ ಮಾಡಿದ್ದಾರೆ, ಇನ್ನು ಕೆಲವು ಕಡೆ ಮಾಡಿಲ್ಲ. ಭ್ರಷ್ಟಾಚಾರ ಮಾಡದೇ ಇರತಕ್ಕಂಥ ಅಸೆಸ್‌ಮೆಂಟ್ ಅಧಿಕಾರಿಗಳನ್ನು ಎಲ್ಲಿಂದ ತರುವುದು? ಸ್ವಾಮಿ, ಅರ್ಥ

ಶಾಸ್ತ್ರ ಬರೆದ ಕೌಟಿಲ್ಯ ಒಂದು ಮಾತನ್ನು ಹೇಳಿದ್ದಾನೆ. ಮರದಲ್ಲಿರತಕ್ಕಂಥ ಜೇನುಗೂಡನ್ನು ತೆಗೆಯಲು ಮರ ಹತ್ತಿದವನು, ಗೂಡನ್ನು ಕಿತ್ತು ಕೆಳಗಿದ್ದವನಿಗೆ ಕೊಡುತ್ತಾನೆ. ಸ್ವಲ್ಪ ಜೇನು ಕೈಗೆ ಮೆತ್ತಿಕೊಂಡಿರುತ್ತದೆ. ಕೈ ತೊಳೆದುಕೊಂಡರೆ ಜೇನು ಹೊರಟು ಹೋಗುತ್ತದೆ ಎಂದು ಸ್ವಲ್ಪ ನೆಕ್ಕಿಕೊಳ್ಳಬೇಕೆಂದು ಮಾಡಿದ ಲಂಚ ಎನ್ನುವುದು ಅಲ್ಲಿಂದ ಶುರುವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.— ನೀವು ಹೀಗೆ ಹೇಳಿದರೆ, ಅವರಿಗೇ ಕಲಿಸಿಕೊಟ್ಟಹಾಗೆ ಆಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಇರುವ ಪರಿಸ್ಥಿತಿಯನ್ನು ಹೇಳಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಎಲ್ಲರೂ ಜೇನು ತಿನ್ನುತ್ತಾರೆ ಎಂದು ಹೇಳಿಬಿಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಲಂಚಗುಳಿತನವನ್ನು ಒಬ್ಬರೇ ನಿರ್ಮೂಲನ ಮಾಡುವುದಕ್ಕೆ ಆಗುವುದಿಲ್ಲ. ಸಮಾಜದ ಜನರೆಲ್ಲರೂ ಒಟ್ಟಿಗೆ ಸೇರಿ ಈ ಕೆಲಸ ಮಾಡುವುದಕ್ಕೆ ಕಂಕಣಬದ್ಧರಾಗಬೇಕು. ಕೊಡುವವರು ಇದ್ದರೆ ತೆಗೆದುಕೊಳ್ಳುವವರು ಇರುತ್ತಾರೆ. ಕೊಡುವವರು ಇಲ್ಲದೆ ಹೋದರೆ ತೆಗೆದುಕೊಳ್ಳುವವನು ಬಾಯಿ ಬಾಯಿ ಬಡಿದುಕೊಳ್ಳುತ್ತಾನೆ.

Sri K.B. Shanappa.—Why do you say it cannot be eliminated?

Sri A. Lakshmisagar.—We can try and all of us should try It s'all not be the responsibility of the Government alone. Everybody should co-operate. ಸ್ವಾಮಿ ಶಾಣಪ್ಪನವರೇ, ಇದು ಸರ್ವಾಂತರ್ಯಾಮಿಯಾಗಿರತಕ್ಕಂಥ ಗುಣವನ್ನು ಹೊಂದಿದೆ. ದೇವರು ಸರ್ವಾಂತರ್ಯಾಮಿ ಎಂದು ಹೇಳಿದ್ದಾರೆ. ಈ ಲಂಚ ಕೂಡ ಹಾಗೆಯೇ ಇದೆ. ಲಂಚದ ಡೆಫಿನೆಶನ್ ಬೇಕು ಎಂದರೆ ಇದನ್ನು ಹೇಳಬೇಕಾಗುತ್ತದೆ, ಇನ್ನು ಶ್ರೀ ವೆಂಕಟರಾಮಯ್ಯನವರು ವಕೀಲರು. ಕೇಸುಗಳು ಬಹಳ ಉಳಿದಿವೆ ಎಂದು ಹೇಳಿದ್ದಾರೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಹೈಕೋರ್ಟಿನವರು ಮತ್ತು ಇತರ ನ್ಯಾಯಾಧೀಶರು ಇದನ್ನು ಕೇಳಿಸಿಕೊಂಡಿದ್ದಾರೆ ಎಂದು ನನ್ನ ನಂಬಿಕೆ. ಈ ವಿಳಂಬ ಕಡಿಮೆಯಾಗಲಿಕ್ಕೆ ಅವರು ಪ್ರಯತ್ನ ಮಾಡಬೇಕು, ಹಾಗೆಯೇ ನ್ಯಾಯಾಧೀಶರ ಸಂಖ್ಯೆ ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ಮುನ್ಸಿಫ್ ಹುದ್ದೆಗಳಿಗೆ ರೆಕ್ರೂಟ್‌ಮೆಂಟ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ, ಅರ್ಜಿಗಳನ್ನು ಕರೆದಿದ್ದಾರೆ ಎಂದು ಸಮಾಚಾರ ಅವರಿಗೆ ಸಂಬಳ ಜಾಸ್ತಿ ಮಾಡಬೇಕು ಎಂದು ಹೇಳಿದ್ದಾರೆ, ಹೋದವರ್ಷ ಕೂಡ ಇದಕ್ಕೆ ಉತ್ತರ ಕೊಟ್ಟಿದ್ದೆ, ಅವರಿಗೆ ಬರತಕ್ಕಂಥ ಸಂಬಳ ಕಡಿಮೆಯೇನೂ ಅಲ್ಲ, ಬೇರೆ ರಾಜ್ಯಗಳಿಗೆ ಹೋಲಿಸಿದರೆ ಇದು ಕಡಿಮೆ ಅಲ್ಲ. ಸಂಬಳ ಜಾಸ್ತಿ ಮಾಡಿದರೆ ಒಳ್ಳೆಯವರು ಬರುತ್ತಾರೆ ಎನ್ನುವ ವಾದವನ್ನು ಹೇಳಿದ್ದಾರೆ ಸಂಬಳ ಜಾಸ್ತಿ ಮಾಡುವುದರಿಂದ ಒಳ್ಳೆ ಜನ ಸಿಗುತ್ತಾರೆ ಎಂದು ನನಗನ್ನಿಸುವುದಿಲ್ಲ. ಇದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶ ಇದೆ, ಆದರೆ ಬರೀ ಹಣ ಜಾಸ್ತಿ ಮಾಡುವುದರಿಂದ ಎಲ್ಲರೂ ಒಳ್ಳೆಯವರು ಸಿಗುತ್ತಾರೆ ಎಂದು ನನಗನ್ನಿಸುವುದಿಲ್ಲ. ಇನ್ನು ಸ್ಲಮ್‌ಗಳಲ್ಲಿ ಸೌಲಭ್ಯಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಈ ಕೆಲಸ ಮಾಡುತ್ತಿದ್ದೇವೆ, ಕಡಿಮೆ ಎಂದು ಹೇಳಿದ್ದೀರಿ. ಅದನ್ನು ದ್ವಿಗುಣ–ತ್ರಿಗುಣಗೊಳಿಸುವುದಕ್ಕೆ ನಾನು ತಾಕೀತು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಸೂತ್ರವನ್ನು ಇಟ್ಟುಕೊಂಡಿದ್ದು ಅದರ ಪ್ರಕಾರ ಹಣ ಕೊಡುತ್ತಿದ್ದೇವೆ. ಇನ್ನು ಎಂ.ಎಲ್.ಎ. ಗಳಿಗೆ ಸೈಟುಗಳನ್ನು ಕೊಡುವ ಬಗ್ಗೆ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತೇನೆ, ಈಗಾಗಲೇ ಕೆಲವರಿಗೆ ಕೊಟ್ಟಿದ್ದೇವೆ ಎಕ್ಸ್ ಎಂಎಲ್‌ಎ, ಎಂಎಲ್‌ಸಿ, ಎಂಆರ್‌ಎಎಸ್ ಹಿರಿತನ ಇವರಿಂದ ಇದ್ದಾರೆ. ಅವರಿಗೆ ಕೊಟ್ಟಿದ್ದೇವೆ ಕೊಟ್ಟಿಲ್ಲದೇ ಇರುವವರು ನನ್ನ ಹತ್ತಿರ ಬಂದರೆ ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಆಮೇಲೆ ರಾಮನಾಥರೈ ಅವರು ನಗರ ಪ್ರದೇಶಗಳಲ್ಲಿರುವಂತಹ ಸೌಲಭ್ಯಗಳೆಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿಯೂ ಇರುವಂತಹ ವ್ಯವಸ್ಥೆಯಾಗಬೇಕೆಂದು ಹೇಳಿದರು. ಇದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದೇ ಮಾನ್ಯ ಸದಸ್ಯರು ಕೆಲವು ಹಳ್ಳಿಗಳನ್ನು ಸೇರಿಸಿಕೊಂಡು ಪುರಸಭೆಗಳ ಸಂಖ್ಯೆ

ಯನ್ನು ಜಾಸ್ತಿ ಮಾಡಿದ್ದೀರಿ ಎಂದು ಹೇಳಿದ್ದಾರೆ. ಈ ರೀತಿ ಸೇರಿಸಿದಂಥ ಹಳ್ಳಿಗಳನ್ನು ತೆಗೆದು ಮಂಡಲ್ ಪಂಚಾಯತಿಗಳನ್ನಾಗಿ ಮಾಡಿ ಎಂದು ಸಲಹೆ ಕೊಟ್ಟರು. ಈ ರೀತಿ ಎಲ್ಲೆಲ್ಲಿ ಮಾಡಲು ಸಾಧ್ಯವಿದೆಯೋ ಅಲ್ಲೆಲ್ಲಾ ಮಾಡುತ್ತೇವೆ. ಈಗ ಬಂಟ್ವಾಳ ಪುರಸಭೆಗೆ ಸೇರಿಸಿರುವಂತಹ ಹಳ್ಳಿಗಳನ್ನು ತೆಗೆದುಬಿಟ್ಟರೆ, ಅಲ್ಲಿನ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಾದರೆ ಅದು ಮಂಡಲ ಪಂಚಾಯಿತಿ ಆಗುತ್ತದೆ. ಮತ್ತೆ ಶ್ರೀ ರೋಷನ್‌ಬೇಗ್ ಅವರು ತಮ್ಮ ಕ್ಷೇತ್ರದಲ್ಲಿ ಕೆಲವು ಕೆಲಸಗಳಾಗಬೇಕೆಂದು ನನಗೆ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ. ಅವರ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸಗಳಾಗಬೇಕೆಂದು ಹೇಳಿದ್ದಾರೆ. In the Supplementary Budget a sum of Rs. 13.60 crores has been provided as against Rs. 12.46 crores last year on the work of remodelling of Russel Market. With regard to regularisation of revenue pockets, I have already mentioned to the hon. Members. In connection with railway over-bridge the Bangalore City Corporation will avail this facility. So far as welfare measures for women is concerned, tailoring centre will be opened shortly ; the proposal has been approved. This is for the first time that such a specific provision is made. Of course, there is some delay. that will be overcome. This facility will be extended to women. ಇದೇ ಮಾನ್ಯ ಸದಸ್ಯರು ಅಸೆಸ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ ಅವರು ಈ ಕೆಲಸಕ್ಕಾಗಿ ೧೨ ಜನ ಅಸಿಸ್ಟೆಂಟ್ ಕಮೀಷನರ್ಸ್ ಬೇಕೆಂದು ನಮ್ಮನ್ನು ಕೇಳಿದ್ದಾರೆ. ಈ ಬಗ್ಗೆ ನಾವು ಸೂಕ್ತ ಕ್ರಮ ಕೈಕೊಳ್ಳುತ್ತೇವೆ. ಮತ್ತೆ ಖಾತಾ ಬದಲಾವಣೆಯ ಬಗ್ಗೆ ಹೇಳಿದ್ದಾರೆ. ಈಗಾಗಲೇ ಕಾರ್ಪೋರೇಷನ್ ಅವರು ಇದನ್ನು ಫೈನಲೈಸ್ ಮಾಡುತ್ತಿದ್ದಾರೆ. ಮಾನ್ಯ ಕಣ್ಣನ್‌ರವರು ಪೌರ ಕಾರ್ಮಿಕರಿಗೆ ಸಾಕಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ನಮ್ಮ ವಾರ್ಷಿಕ ವರದಿಯಲ್ಲಿ ವಿವರಣೆಯನ್ನು ಕೊಟ್ಟಿದ್ದೇವೆ. With regard to providing housing facilities to powra karmikas, I would like to say that we have taken up construction of 8 blocks of 24 quarters. The Bangalore City Corporation is constructing multi-storeyed building at a cost of Rs. 195-15 lakhs for its workers. 506 powra karmikas have already been allotted quarters in the Multi-storeyed building. ಮತ್ತೆ ಜೇಕಬ್ ಕಮಿಟಿ ವಿಚಾರ ಹೇಳಿದ್ದಾರೆ. ಇದಕ್ಕೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇವರು ಪ್ರಸ್ತಾಪ ಮಾಡಿರುವ ರೆವಿನ್ಯೂ ಪಾಕೆಟ್ಸ್ ಬಗ್ಗೆ ಸಹ ಉತ್ತರ ಕೊಟ್ಟಿದ್ದೇನೆ. ಇವರು ತಮ್ಮ ಕ್ಷೇತ್ರದಲ್ಲಿ ಒಂದು ಡಿಗ್ರಿ ಕಾಲೇಜನ್ನು ತೆರೆಯಬೇಕೆಂದು ಹೇಳಿದ್ದಾರೆ. ಅಲ್ಲಿ ಒಂದು ಡಿಗ್ರಿ ಕಾಲೇಜಿನ ಅವಶ್ಯಕತೆ ಇದೆ. ಮಾನ್ಯ ವಿದ್ಯಾ ಮಂತ್ರಿಗಳು ಈ ಮೊದಲು ಇವರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಆದ್ದರಿಂದ ಅಲ್ಲಿ ಒಂದು ಡಿಗ್ರಿ ಕಾಲೇಜನ್ನು ತೆರೆಯುವಂತೆ ಮಾನ್ಯ ಸದಸ್ಯರು ವಿದ್ಯಾಮಂತ್ರಿಗಳಿಗೆ ತಾಕೀತ್ ಮಾಡಬಹುದು ನಾನೂ ಸಹ ಈ ವಿಚಾರದಲ್ಲಿ ಮಾನ್ಯ ವಿದ್ಯಾ ಮಂತ್ರಿಗಳಿಗೆ ಹೇಳುತ್ತೇನೆ. ಮತ್ತೆ ಬೆಂಗಳೂರು ನಗರ ಕಾರ್ಪೋರೇಷನ್‌ನಲ್ಲಿ ಹಣದ ಲೂಟಿಯಾಗುತ್ತಿದೆ ಎಂದು ಹೇಳಿದ್ದಾರೆ. ಇಂತಹ ಕಡೆಯಲ್ಲಿ ಆಗುತ್ತಿದೆ ಎಂದರೆ ನಾವು ಕ್ರಮ ತೆಗೆದುಕೊಳ್ಳಬಹುದು. ಆದರೆ ಜನರಲ್ ಆಗಿ ಹೇಳಿದರೆ ನಾವು ಏನೂ ಕ್ರಮ ಕೈಕೊಳ್ಳುವುದಕ್ಕಾಗುವುದಿಲ್ಲ.

ಇನ್ನು ಮಾನ್ಯ ಧರ್ಮಪ್ಪನವರು ಕೋರ್ಟ್ ಕಟ್ಟಡಗಳ ಬಗ್ಗೆ ಹೇಳಿದ್ದಾರೆ. ಈಗ ಎಲ್ಲೆಲ್ಲಿ ಕೋರ್ಟ್ ಕಟ್ಟಡಗಳ ಕೆಲಸ ಮುಂದುವರೆದಿದೆ, ಆ ಕೆಲಸವನ್ನೆಲ್ಲಾ ಪೂರ್ಣ ಮಾಡಲು ಪ್ರಯತ್ನ ಮಾಡುತ್ತೇವೆ. ಈ ಕೆಲಸಕ್ಕೆ ನಾವು ಹಣ ಒದಗಿಸುತ್ತೇವೆ.

ಇನ್ನು ಮಾನ್ಯ ಮೂಡ್ಲಗಿರಿಯಪ್ಪನವರು ಕೃಷಿ ಕಾರ್ಮಿಕರ ಬಗ್ಗೆ ಮತ್ತು ಕಟ್ಟಡಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಬಗ್ಗೆ ಸೂಕ್ತ ಕಾನೂನು ಮಾಡಬೇಕೆಂದು ಕೇಳಿದ್ದಾರೆ, ಈಗ ಇಲ್ಲಿ ಕಾರ್ಮಿಕ ಸಚಿವರು ಇಲ್ಲ. ನಾನು ಅವರ ಹತ್ತಿರ ಈ ವಿಚಾರ ಪ್ರಸ್ತಾಪ ಮಾಡುತ್ತೇನೆ. ಇದು ಬಹಳ ಸಾಧು ವಾದುದೆಂದು ನನಗನಿಸುತ್ತದೆ. ಮತ್ತೆ ಇದೇ ಮಾನ್ಯ ಸದಸ್ಯರು ಸೋಟ್ಸ್‌ವ್ಯಾಲ್ಯೂ ಯೂನಿಫಾರಂ

ಆಗಿರಬೇಕೆಂದು ಹೇಳಿದರು. ಆ ರೀತಿ ಮಾಡಬೇಕಾದರೆ ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಮತ್ತೆ ಈಗ ಕೋರ್ಟ್ ಸಮನ್ಸ್ ಜಾರಿ ಬಗ್ಗೆ ಇರುವ ನಿಯಮ ಬದಲಾವಣೆ ಆಗಬೇಕೆಂದು ಹೇಳಿದ್ದಾರೆ. ಈಗಿನ ನಿಯಮದ ಪ್ರಕಾರ ಮೊದಲು ಆರ್ಡಿನರಿ ಪೋಸ್ಟ್‌ನಲ್ಲಿ ಕಳುಹಿಸಿ ಕೊಡಲಾಗುತ್ತದೆ. ಇದಾದ ನಂತರ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿಕೊಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಕೋರ್ಟಿನವರೇ ಮುದ್ದಾಂ ಹೋಗಿ ಸಮನ್ಸ್ ಜಾರಿ ಮಾಡುತ್ತಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ನಾವು ಏನೇ ಬದಲಾವಣೆ ಮಾಡಿದರೂ ಸಹ, ಅದರಲ್ಲಿ ತಪ್ಪು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ. ಆದರೂ ಸಹ ಇದನ್ನು ವಿಚಾರ ಮಾಡೋಣ. ಮತ್ತೆ ಕೋರ್ಟಿನಲ್ಲಿ ರಿಟರ್ನ್ ಆರ್ಗ್ಯುಮೆಂಟ್ ಮಾಡಲು ಅವಕಾಶವಿರಬೇಕೆಂದು ಸಲಹೆ ಮಾಡಿದರು. ಈ ಬಗ್ಗೆ ಹೈಕೋರ್ಟಿನವರು ತೀರ್ಮಾನ ಕೈಕೊಳ್ಳಬೇಕೇ ಹೊರತು ನಾವೇನೂ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ಜಡ್ಜ್‌ಗಳಿಗೆ ಟ್ಯಾಕ್ಸ್ ಫ್ರೀ ಸಂಬಳ ಕೊಡಬೇಕೆಂದು ಹೇಳಿದ್ದಾರೆ. ಇದನ್ನು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಬೇಕೇ ಹೊರತು ನಾವು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಮತ್ತೆ ರಾಜ್ಯದಲ್ಲಿ ಪ್ರಾಸಿಕ್ಯೂಟರ್ಸ್ ಕಡಿಮೆ ಇದ್ದಾರೆಂದು ಹೇಳಿದರು. ಈಗ ನಾವು ಇವರನ್ನು ಎಲ್ಲ ಕಡೆಗೂ ನೇಮಕ ಮಾಡುತ್ತಿದ್ದೇವೆ. ಇನ್ನು ಲೀಗಲ್-ಏಡ್ ಹೆಸರಿಗೆ ಮಾತ್ರ ಇದೆ. ಈ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ಪ್ರಚಾರ ಆಗಿಲ್ಲವೆಂದು ಹೇಳಿದ್ದಾರೆ. ಈ ವಾದ ಸರಿಯಲ್ಲ. ನಾವು ಸಾಕಷ್ಟು ಪ್ರಚಾರ ಮಾಡಿದ್ದೇವೆ. ಇದು ಇವರ ಕಿವಿಗೆ ಇನ್ನೂ ಮುಟ್ಟಿಲ್ಲವೆಂದು ಕಾಣುತ್ತದೆ. ಎಕ್ಸ್-ಎಂ. ಎಲ್.ಎ. ಗಳಿಗೆ ಪೆನ್‌ಷನ್ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಈಗ ನಾವು ಎಲ್ಲ-ಎಕ್ಸ್ ಎಂ.ಎಲ್.ಎ. ಗಳಿಗೂ ಪೆನ್‌ಷನ್ ಕೊಡುತ್ತಿದ್ದೇವೆ. ಒಂದು ವೇಳೆ ಯಾರಿಗಾದರೂ ಕೊಡದಿದ್ದರೆ, ಆ ಬಗ್ಗೆ ವಿವರಗಳನ್ನು ಕೊಟ್ಟರೆ ನಾನು ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

ಇನ್ನು ಮಾನ್ಯ ಮಲ್ಲಪ್ಪನವರು ಆಕ್ಟ್ರಾಯ್ ರದ್ದಿನಿಂದ ಸ್ಥಳೀಯ ಸಂಸ್ಥೆಗಳಿಗೆ ತೊಂದರೆ ಆಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಕೋರ್ಟುಗಳಿಗೆ ಒಳ್ಳೆಯ ಪೀಠೋಪಕರಣಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಒಳ್ಳೆಯ ಪೀಠೋಪಕರಣಗಳನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ. ದಾವಣಗೆರೆಗೆ ಸೆಷನ್ಸ್ ಜಡ್ಜ್ ಕೋರ್ಟ್ ಕೊಡಬೇಕೆಂದು ಕೇಳಿದ್ದಾರೆ. ಹೈಕೋರ್ಟಿನವರು ಒಪ್ಪಿಕೊಂಡರೆ ನಾವು ದುಡ್ಡು ಕೊಡುತ್ತೇವೆ. ಕೆಂಪು ಬಿಲ್ಡಿಂಗ್‌ನವರನ್ನು ನೀವು ಒಪ್ಪಿಸಿದರೆ ನಾವು ಹಣ ಕೊಡುತ್ತೇವೆ. ಮಾನ್ಯ ಆಚಾರ್ ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ ಬೈಂದೂರನ್ನು ಮಂಡಲ್ ಪಂಚಾಯಿತಿ ಆಗಿ ಮಾಡಬೇಕೆಂದು ಹೇಳಿದ್ದಾರೆ. ಈಗ ಅಲ್ಲಿನ ಪುರಸಭೆಗೆ ಸೇರಿಸಿರುವ ಹಳ್ಳಿಗಳನ್ನು ತೆಗೆದ ಮೇಲೆ ಅಲ್ಲಿನ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆ ಆದರೆ, ಅದನ್ನು ಮಂಡಲ್ ಪಂಚಾಯಿತಿ ಮಾಡಬಹುದು.

ಇನ್ನು ಮಾನ್ಯ ಪಂಪಾಪತಿ ಅವರು ಆಕ್ಟ್ರಾಯ್ ಬಗ್ಗೆ ಹೇಳಿದ್ದಾರೆ. ದಾವಣಗೆರೆಯಲ್ಲಿ ತೆರಿಗೆ ವಸೂಲಿ ಸರಿಯಾಗಿ ಆಗಿಲ್ಲ ಅಲ್ಲಿ ೨೨-೩೦ ಲಕ್ಷ ರೂಪಾಯಿಗಳಷ್ಟು ತೆರಿಗೆ ಬಾಕಿ ಇದೆ, ಅದನ್ನು ಇನ್ನೂ ವಸೂಲಿ ಮಾಡಿಲ್ಲ. ಇದನ್ನು ಹೇಳಲು ನನಗೆ ನಾಚಿಗೆ ಆಗುತ್ತದೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ಎಲ್ಲಿ ಮಳೆ ಚೆನ್ನಾಗಿ ಆಗಿಲ್ಲ, ಎಲ್ಲಿ ಬಡವರು ಜಾಸ್ತಿ ವಾಸವಾಗಿದ್ದಾರೆ, ಅಂತಹ ಕಡೆಗಳಲ್ಲಿ ತೆರಿಗೆ ಚೆನ್ನಾಗಿ ವಸೂಲಿ ಆಗಿದೆ, ಆದರೆ ದಾವಣಗೆರೆಯಲ್ಲಿ ಮಾತ್ರ ತೆರಿಗೆ ವಸೂಲಿ ಸರಿಯಾಗಿ ಆಗಿಲ್ಲ. ಮತ್ತೆ ಆಕ್ಟ್ರಾಯ್ ರದ್ದಾದ ಮೇಲೆ ಸರ್ಕಾರದಿಂದ ಇದರ ಬದಲಿಗೆ ಕೊಡುವ ಅನುದಾನ ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ೧೯೭೯-೮೦ನೇ ಸಾಲಿನಿಂದಲೂ ಈ ಬಗ್ಗೆ ಅನುದಾನವನ್ನು ಕೊಡುವಂತಹ ಪದ್ಧತಿ ಇದೆ. ೧೯೭೯-೮೦ರಲ್ಲಿ ೨೩ ಕೋಟಿ ೬೦ ಲಕ್ಷ ರೂಪಾಯಿಗಳನ್ನು ಅನುದಾನ ರೂಪದಲ್ಲಿ ಕೊಡಲಾಗಿದೆ. ಇದರ ಜೊತೆಗೆ ಈ ಅನುದಾನವನ್ನು ಶೇಕಡಾ ಹತ್ತರಂತೆ ಪ್ರತಿವರ್ಷವೂ ಹೆಚ್ಚಿಸಿಕೊಂಡು ಹೋಗುತ್ತಿದ್ದೇವೆ. ಈ ಒಂದು ಲೆಕ್ಕದ ಪ್ರಕಾರ ೧೯೮೫-೮೬ನೇ ಸಾಲಿನಲ್ಲಿ ೩೯ ಕೋಟಿ ೨ ಲಕ್ಷ ರೂಪಾಯಿಗಳಿಗೆ ಇದು ಹೆಚ್ಚಿದೆ. ಕೇವಲ ೬ ವರ್ಷಗಳಲ್ಲಿ ೧೫ ಕೋಟಿ ರೂಪಾಯಿಗಳಷ್ಟು ಜಾಸ್ತಿ ಕೊಡುವಂತಹ ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ವರ್ಷದ್ದು ಇನ್ನೂ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಬಾಕಿ ಇರುವಂತಹ ೧೯.೫ ಕೋಟಿ ರೂಪಾಯಿಗಳನ್ನು ಮಾರ್ಚಿ ತಿಂಗಳೊಳಗಾಗಿ ಬಿಡುಗಡೆ ಮಾಡತಕ್ಕಂಥ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆ. ಈ ವರ್ಷದಲ್ಲಿ ಬಾಕಿ ಇರುವ ಎಲ್ಲ ಹಣವೂ ಸಹ ಈ ತಿಂಗಳೊಳಗಾಗಿ ಬಿಡುಗಡೆ ಆಗುತ್ತದೆ.

ಶ್ರೀ ಧರ್ಮಸಿಂಗ್.—ನಿಮ್ಮ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನಮಗೆ ಮೊದಲೇ ಕೊಟ್ಟಿದ್ದರೆ ನಾವು ಈ ಎಲ್ಲ ವಿವರಗಳನ್ನು ಅದರಿಂದ ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಅನಂತರ ಕೊಟ್ಟಿದ್ದೇವೆ.

ಇನ್ನು ಉಳಿದಿರತಕ್ಕಂಥ ೧೯.೫ ಕೋಟಿ ರೂಪಾಯಿಗಳನ್ನು ರಿಲೀಸ್ ಡ್ಯೂರಿಂಗ್ ಕೋರ್ಸ್ ಆಫ್ ದಿಸ್ ಮಂತ್. ಆಮೇಲೆ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನ ಬಗ್ಗೆ ಹೇಳಿದ್ದಾರೆ. ಪೌರ ಸೌಲಭ್ಯಗಳಿಗಾಗಿ ಇಟ್ಟಿದ್ದಂತಹ ಜಾಗವನ್ನು ಬೇರೆ ಕೆಲಸಕ್ಕೆ ಉಪಯೋಗಿಸತಕ್ಕ ನಿರ್ಣಯವನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಸರಿಯಾಗಿ ವಿಚಾರಣೆ ಮಾಡಬೇಕೆಂದು ಡೆಪ್ಯುಟಿ ಕಮೀಷನರ್‌ರವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಡೆಪ್ಯುಟಿ ಕಮೀಷನರ್‌ರವರು ಅಮೂಲಾಗ್ರವಾಗಿ ವಿಚಾರಣೆ ಮಾಡುತ್ತಾರೆ. ವಿಚಾರಣಾ ವರದಿ ಬಂದ ಮೇಲೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ದಾವಣಗೆರೆಯಲ್ಲಿ ನೀರಿನ ವ್ಯವಸ್ಥೆ ಸರಿಪಡಿಸಬೇಕೆಂದು ಹೇಳಿದ್ದಾರೆ, ತುಂಗಭದ್ರ ನದಿಯ ನೀರನ್ನು ದಾವಣಗೆರೆಗೆ ತರುವ ಬಗ್ಗೆ ಹಾಗೂ ಈಗಿರತಕ್ಕ ಜಲ ಮೂಲವನ್ನು ಬಲಪಡಿಸಿ ಹೆಚ್ಚು ನೀರನ್ನೂ ಶೇಖರಣೆ ಮಾಡುವ ಬಗ್ಗೆ ನಾನು ಗಮನ ಹರಿಸಿದ್ದೇನೆ. ಈಗಿರತಕ್ಕ ಜಲ ಮೂಲವನ್ನು ಬಲಪಡಿಸಿ ನೀರಿನ ಶೇಖರಣೆಯನ್ನು ಹೆಚ್ಚಿಸಿದ್ದೇ ಆದರೆ ಹೊಸದಾದ ಯೋಜನೆಗಳನ್ನು ಮಾಡಬೇಕಾಗಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಪೌರಕಾರ್ಮಿಕರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನನಗೆ ತಿಳಿದಿರುವ ಬಗ್ಗೆ ಈಗಾಗಲೇ ಔಷಧಿಗಳನ್ನು ಪುಕ್ಕಟೆಯಾಗಿ ಕೊಡುತ್ತಿರಬಹುದು. ಕೊಡದೇ ಇದ್ದರೆ ಅದರ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಕೆ.ಕೆ. ಜಾರ್ಜ್‌ರವರು ಕೊಳಚೆ ಪ್ರದೇಶಗಳ ಜನರಿಗೆ ತುಂಬಾ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದಾರೆ. ಬರೀ ಅನ್ಯಾಯವಾಗುತ್ತಿದೆ ಎಂದರೆ ನಾನು ಹೇಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಎಲ್ಲಿ, ಯಾರಿಗೆ ಅನ್ಯಾಯವಾಗುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರಿಗೆ ತಿಳಿಸುತ್ತೇನೆ. ಕೊಳಚೆ ಪ್ರದೇಶಗಳಿಗೆ ಹಣ ಖರ್ಚು ಮಾಡಿರುವ ಬಗ್ಗೆ ತಮ್ಮ ಆ್ಯನ್ಯುಯಲ್ ರಿಪೋರ್ಟ್‌ನಲ್ಲಿ ೨೧ ಲಕ್ಷ ಖರ್ಚಾಗಿದೆ ಎಂದು ತಿಳಿಸಿದ್ದೀರಿ ಆದರೆ ನಿಮ್ಮ ಉತ್ತರದಲ್ಲಿ ೧೭ ಲಕ್ಷವನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ, ಇದರಲ್ಲಿ ಯಾವುದು ಸರಿ ಎಂದು ಕೇಳಿದ್ದಾರೆ. ಈಗ ನಾವು ಬಿಡುಗಡೆ ಮಾಡಿರುವುದು ೧೭ ಲಕ್ಷ ರೂಪಾಯಿಗಳು. ಒಟ್ಟು ಖರ್ಚು ಮಾಡಿರುವುದು ೨೧ ಲಕ್ಷ ರೂಪಾಯಿಗಳು ಎಂದು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ. ಇನ್ನು ಕೊಳಚೆ ಪ್ರದೇಶದ ಜನರಿಗೆ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಏರ್ಪಾಡನ್ನು ಮಾಡಿದ್ದೇನೆ. ನಗರದಲ್ಲಿ ರಿಂಗ್ ರೋಡ್ ಮಾಡುವ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ೭೨೫ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಈಗಾಗಲೇ ಕಳುಹಿಸಿದ್ದೇವೆ.

ಮಾನ್ಯ ಸದಸ್ಯರಾದ ಪ್ರಭಾಕರ್ ರಾಣೆಯವರು, ಕಾರವಾರದಲ್ಲಿ ಮುನಿಸಿಪಾಲಿಟಿ ಲಿಮಿಟ್‌ಗೆ ಯಾವುದೋ ಒಂದು ಹಳ್ಳಿಯನ್ನು ಸೇರಿಸಿಲ್ಲ, ಇದಕ್ಕೆ ಕಾರಣ, ಸರ್ಕಾರದವರು ಯಾರದೋ ಹಿಡಿತಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಆದ್ದರಿಂದ ಇದನ್ನು ಮಾಡಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೇ. ನಾನು ಯಾರ ಹಿಡಿತಕ್ಕೂ ಸಿಕ್ಕುವವನಲ್ಲ. ಇದರ ಬಗ್ಗೆ ತೊಂದರೆ ಇದ್ದರೆ ಅದರ ಬಗ್ಗೆ ವಿವರಣೆಯನ್ನು ತೆಗೆದುಕೊಂಡು ಬನ್ನಿ, ಅದನ್ನು ವಿಚಾರ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳೋಣ. ನಾನು ಯಾರ ಹಿಡಿತಕ್ಕೂ ಸಿಕ್ಕುವ ಗಿರಾಕಿಯಲ್ಲ. ಈಗಾಗಲೇ ಕೈಗಾ ಅಣು ವಿದ್ಯುತ್ ಸ್ಥಾವರ ನಿಮ್ಮ ಕಾರವಾರದಲ್ಲಿ ಆಗುತ್ತಿದೆ. ಅದೃಷ್ಟ ನಿಮ್ಮ ಜಿಲ್ಲೆಗೆ ಬಂದಿದೆ. ತಾನಾಗೇ ನಿಮ್ಮ ಜಿಲ್ಲೆ ಅಭಿವೃದ್ಧಿಯಾಗುತ್ತದೆ ಅದರ ಬಗ್ಗೆ ಸಂಶಯ ಮಾನ್ಯ ಸದಸ್ಯರಿಗೆ ಇರುವುದು ಬೇಡ. ಅದೂ ಅಲ್ಲದೇ ಮಾನ್ಯ ರಾಣೆಯವರು ರಾಯಚೂರಿನ ಅಭಿವೃದ್ಧಿ ಬಗ್ಗೆ ಮಲತಾಯಿ ಧೋರಣೆಯನ್ನು ಸರ್ಕಾರ ತೋರಿಸುತ್ತಿದೆಯೆಂದು ಹೇಳಿದರು. ಮಾನ್ಯ ರಾಣೆಯವರು ಏಕೆ ಆ ರೀತಿ ಹೇಳಿದರೋ ನನಗಂತೂ ಗೊತ್ತಿಲ್ಲ. ನಾನು ಎಲ್ಲಾ ಪುರಸಭೆಗಳನ್ನೂ ಸಮಾನ ದೃಷ್ಟಿಯಿಂದ ನೋಡುತ್ತಿದ್ದೇನೆ, ಅದರಲ್ಲಿ ಅನುಮಾನವೇ ಇಲ್ಲ.

ಇನ್ನು ಮಾನ್ಯ ಕೆ. ಹೆಚ್. ಪಾಟೀಲರು ಗದಗ್ ತಾಲ್ಲೂಕಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕೊಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ತೀವ್ರ ಗಮನಹರಿಸಿ ಕುಡಿಯುವ ನೀರನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಇದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗೆ ತೀರ್ಮಾನ ಮಾಡಿ ೨ ವರ್ಷಗಳಾಯಿತು, ಆದರೆ ಕೆಲಸವೇ ಇನ್ನೂ ಆಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಉತ್ತರ ಹೇಳಿದ ನೆನಪು ಇದೆ. ಇದರ ಬಗ್ಗೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಮಾನ್ಯ ಧರ್ಮಸಿಂಗ್‌ರವರು ಕೆ.ಯು.ಡಬ್ಲ್ಯು.ಎಸ್.ಗೆ ಕೊಟ್ಟಿರುವ ಹಣವನ್ನು ಖರ್ಚು ಮಾಡಲಿಲ್ಲವೆಂದು ಹೇಳಿದ್ದಾರೆ. ೧೯೮೫–೮೬ರಲ್ಲಿ ೮೦೬ ಲಕ್ಷ ಇಟ್ಟಿದ್ದೆವು. ಆದರೆ ಮತ್ತೆ ರಿವೈಸ್ ಮಾಡಿ ೭.೫೬ ಕೋಟಿಯನ್ನು ಇಟ್ಟೆವು. ಅದರಲ್ಲಿ ಇದುವರೆಗೆ ೫೧೧.೭೫ ಲಕ್ಷ ರೂಪಾಯಿಗಳು ಖರ್ಚಾಗಿದೆ. ಅಲ್ಲದೆ ಸ್ಕೇರ್‌ಸಿಟಿಯಲ್ಲಿ ಕೊಟ್ಟಿರುವ ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳಿದ್ದಾರೆ, ೧೯೮೫–೮೬ರಲ್ಲಿ ೨೪೦ ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಇಟ್ಟಿದ್ದೆವು. ಅದರಲ್ಲಿ ೨೨೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ ೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಈ ೧೪ ಲಕ್ಷ ರೂಪಾಯಿಗಳು ಫೆಬ್ರುವರಿ, ಮಾರ್ಚ್ ತಿಂಗಳಿನಲ್ಲಿ ಮಾಯವಾಗಿ ಹೋಗುತ್ತದೆ. ಡಿಕೇಡ್ ವಾಟರ್ ಸಪ್ಲೈ ಸ್ಕೀಮಿಗೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೩೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಈ ಯೋಜನೆಗೆ ಪೂರ್ತಿ ೧೨೯.೩೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೆಲವು ದಿನಗಳ ಹಿಂದೆ ನಾನು ಕೇಂದ್ರ ನಗರಾಭಿವೃದ್ಧಿ ಸಚಿವರ ಸಭೆಗೆ ಹೋಗಿದ್ದೆ. ಅಲ್ಲಿ ಈಗ ಟಾರ್ಗೆಟ್ ಏನು ಇದೆ ಅದರಲ್ಲಿ ೫೦ ಪರ್ಸೆಂಟ್ ಕಡಿಮೆ ಮಾಡಿ ಎಂದು ನಮಗೆ ಹೇಳಿದ್ದಾರೆ. ಇನ್ನು ಸ್ವಲ್ಪ ದಿನಗಳಲ್ಲಿ ಅಲ್ಲಿ ನಡೆದ ಮೀಟಿಂಗ್ ಬಗ್ಗೆ ನಿರ್ಣಯ ಕೂಡ ಬರುತ್ತಿದೆ. ಇನ್ನು ಸ್ಲಮ್ ಬೋರ್ಡ್ ವಿಚಾರವಾಗಿ ಹೆಚ್ಚು ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳಿದ್ದಾರೆ. ಇದಕ್ಕಾಗಿ ೧೮೬ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರಲ್ಲಿ ಖರ್ಚಾಗಿರುವುದು ೩೬.೮೬ ಕೋಟಿ ರೂಪಾಯಿಗಳು. ೩೫೨ ಲಕ್ಷ ರೂಪಾಯಿಗಳು ಹುಡ್ಕೋ ಇಂದ ಬರಬೇಕಾಗಿದೆ, ಆ ಹಣ ಇನ್ನೇನು ಬರಬಹುದು. ಅದು ಬಂದ ಮೇಲೆ ಅದನ್ನೂ ಖರ್ಚು ಮಾಡುತ್ತೇವೆ. ಆಮೇಲೆ ಇಂಟರ್‌ನಲ್ ವಾಟರ್ ಡಿಕೇಡ್ ಸ್ಕೀಮಿಗೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೩೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ೫೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರ ಬಗ್ಗೆ ೫೦ ಪರ್ಸೆಂಟ್ ಸ್ಕೇಲ್ ಡೌನ್ ಮಾಡುವುದಕ್ಕೆ ಕೇಂದ್ರದವರು ಹೇಳಿದ್ದಾರೆ. ಆಮೇಲೆ ಇಐಯುಡಿಪಿ ಗೋಸ್ಕರ ೩೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅರ್ಬನ್ ಡೆವಲಪ್‌ಮೆಂಟಿಗೆ ೧೯೮೫–೮೬ರಲ್ಲಿ ೫..೯೪ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ೧೯೮೬–೮೭ರಲ್ಲಿ ೬೭.೧೮ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಹಿಂದೆ ಇಟ್ಟಿದ್ದ ಹಣ ಎಲ್ಲಾ ಖರ್ಚಾಗಿದೆ. ಡೈರೆಕ್ಟರ್ ಆಫ್ ಅಡ್ಮಿನಿಸ್ಟ್ರೇಷನ್ ರಜಾದಲ್ಲೂ ಕೆಲಸ ಮಾಡಿದ್ದಾರೆ. ಅದು ಸುಧಾರಣೆಯಾಗಬೇಕಾದರೆ ಇನ್ನೂ ಸ್ವಲ್ಪ ಸಮಯಬೇಕು, ಎರಡು ಮೂರು ಹೀಗೆ ನಡೆಸಿದರೆ ಅವು ಸ್ವಾಯತ್ತ ಸಂಸ್ಥೆಗಳಾಗಿ ವಿಜೃಂಭಣೆಯಿಂದ ತಮ್ಮ ಅಧಿಕಾರವನ್ನು ನಡೆಸಿ ಜನರ ಸೇವೆಯನ್ನು ಮಾಡತಕ್ಕ ಶಕ್ತಿಯನ್ನು ಪಡೆದುಕೊಳ್ಳುವ ಸಂಸ್ಥೆಗಳಾಗುತ್ತವೆ ಎಂಬ ಅಭಿಪ್ರಾಯವನ್ನು ನಾನು ಇಟ್ಟುಕೊಂಡಿದ್ದೇನೆ. ಇಷ್ಟು ಹೇಳಿ ನನ್ನ ಬೇಡಿಕೆಗಳಿಗೆ ಸನ್ಮಾನ್ಯ ಸದಸ್ಯರುಗಳು ಪೂರ್ಣವಾದ ಬೆಂಬಲವನ್ನು ನೀಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

SKI BLASIUS M. 'D' SOUZA (Mangalore).— Mr. Speaker Sir, I am really sorry for the reply given by the Hon'ble Minister for Law and Parliamentary Affairs and Urban Development: He spoke about the contribution from the State to the Corporations and Municipalities in lieu of Octroi. I would like to inform him that there have been several taxes which have been levied in lieu of Octroi and one of them is Surcharge on Sales Tax. The Sales Tax for the year 1986-87 is of

the order of 585 crores, Entry tax on goods amounts to Rs. 32 crores and turnover tax, Surcharge on Motor Vehicles Surcharge on Electricity amounts to Rs. 150 crores. This amount should have been given to the local bodies, for their improvement. This year, a provision of Rs. 42 crores is being made. Regarding Beggar homes, I request the Hon'ble Minister to instruct the Deputy Commissioners to start beggar homes as in the neighbouring State. because of the prohibition of Beggary Act, from 1975, they have collected Cess to the tune of lakhs. It is not as if the Corporation has to start the Beggar homes. It is the duty of the Deputy Commissioner to take action in this matter. Thirdly, I asked for Mangalore Development Authority and not the City Improvement Trust Board, in Mangalore. I would like to remind the Hon'ble Minister for Urban Development that the Mangalore Development Authority, if constituted, will have more powers. They can work faster. In the city of Mangalore, during the time of acute shortage of houses, the City Improvement Trust Board will not be able to carry on the activities as fast as Development Authority. As regards slums, I contended that anybody coming to Bangalore should be accommodated. I wanted an Assurance from the Hon'ble Minister that where ver slums exist, they are removed by giving them alternative compensation. The Hon'ble Minister has stayed that he is going to bring an amendment to the Municipal Act, wherein he will give more powers to the President regarding expenditure, But when it comes to Mayor, the Hon'ble Minister says that the Act does not permit. The Hon'ble Minister for Urban Development is also the Law Minister and he should know that Mayor also controls the Police Department and other departments. The Mayor should not be a presiding deity. He should be given all powers. I would request the Hon'ble Minister to see that more and more powers are given to the elected representives of the local bodies. As regards Directorate for Local bodies, the Directorate has already been formed and a senior I.A.S. Officer has been posted as the Director, Uufortunately, the Act has not been amended and he has no executive powers. I would request the Hon'ble Minister to see that the Act is amended immediately.

ಶ್ರೀ ಎಸ್. ಲಕ್ಷ್ಮೀಸಾಗರ್.– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೆಲವು ಲೋಕಲ್ ಟ್ಯಾಕ್ಸೆಸ್‌ನ್ನು ಷೇರ್ ಮಾಡತಕ್ಕ ವಿಚಾರದಲ್ಲಿ ಲೋಕಲ್ ಫೈನಾನ್ಸ್ ರೀಪೋರ್ಟ್ ಬಂದಿದೆ. ಸಮಗ್ರವಾದ ವಿಚಾರ ಅದರಲ್ಲಿದೆಯೆಂದು ಭಾವಿಸುತ್ತೇನೆ. ಅದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡ ಮೇಲೆ ಈ ವಿಷಯಕ್ಕೆಲ್ಲಾ ಒಂದು ಉತ್ತರ ಸಿಕ್ಕಿದಂತೆ ಆಗುತ್ತದೆಂದು ನಾನು ಭಾವಿಸುತ್ತೇನೆ. Beggar Cess ವಸೂಲು ಮಾಡುತ್ತಾರೆ, ನಿಜ. ಆದರೆ ಆ ಹಣವೆಲ್ಲಾ ಸಮಾಜ ಕಲ್ಯಾಣ ಇಲಾಖೆಗೆ ಹೋಗುತ್ತದೆ. ಡೆಪ್ಯೂಟಿ ಕಮೀಷನರ್‌ರವರಿಗೆ ಹೇಳಬೇಕೆಂದಿದ್ದೇವೆ. ಆದರೆ ಮುಖ್ಯವಾಗಿ ಹೇಳಬೇಕಾಗಿರುವುದು ಸಮಾಜ ಕಲ್ಯಾಣ ಇಲಾಖೆಗೆ. ಡೆವಲಪ್‌ಮೆಂಟ್ ಅಥಾರಿಟಿ ಮಾಡಬೇಕೆಂದು ಹೇಳಿದ್ದಾರೆ. It is a question of opinion. He says that Mangalore Development

Authority will be more powerful. It all depends on giving powers If Mangalore Development Authority is created, no better purpose will be served. It is a question of opinion. Let us see. ನಾನು ಹೇಳಿದ್ದು ಮೇಯರ್‌ರವರಿಗೆ ಈಗ ಇರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಒಂದು ಗೌರವ ಇದೆ. ಸ್ಥಾನ ಇದೆ. ಅವರಿಗೆ ಎಕ್ಸಿಕ್ಯೂಟಿವ್ ಪವರ್ ಕೊಡುತ್ತೇವೆಂದು ಹೇಳಿಲ್ಲ. ನಾನು ತುಂಬಾ ಪವರ್ ಕೊಡುತ್ತೇನೆಂದು ಹೇಳಿದ್ದು ಎಕ್ಸಿಕ್ಯೂಟಿವ್‌ಗೆ ಡೆಪ್ಯೂಟಿ ಕಮೀಷನರ್‌ಗೆ, ಚೀಫ್ ಇಂಜಿನಿಯರ್‌ರವರಿಗೆ ಮಾತ್ರ ಹೇಳಿರುವುದು ಅದನ್ನು ಮಾಡುವುದಕ್ಕೆ ಮನಸ್ಸು ಮಾಡಿದ್ದೇನೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಜಾಸ್ತಿ ಪವರ್ ಕೊಡಬೇಕು ಎಂಬುವನ್ನು ತಾವು ಹೇಳಿದ್ದೀರಿ. ಎಲ್ಲಾ ಕಾನೂನು ತಿದ್ದುಪಡಿಯಾಗಬೇಕು. ಎಲ್ಲಾ ರೆಡಿಯಾಗಿದೆ. ಈ ಸಭೆಯಲ್ಲಿ ತರಬೇಕೆಂದು ಇದ್ದೇವೆ, ಕಾರಣಾಂತರದಿಂದ ಈ ಸಲ ಆಗುವುದಿಲ್ಲವೆಂದು ನನಗನಿಸುತ್ತದೆ. ಆದರೂ ಪ್ರಯತ್ನ ಮಾಡುತ್ತೇನೆ. ಇಷ್ಟನ್ನು ಮಾತ್ರ ಅವರಿಗೆ ಹೇಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಸಮಿತಿಗೆ ಲಾಟರಿ ಮೂಲಕ ನಿವೇಶನಗಳನ್ನು ಹಂಚಬೇಕೆಂದು ತಾವು ಆದೇಶ ಕೊಟ್ಟಿದ್ದೀರಿ. ಲಾಟರಿ ಮೂಲಕ ನಿವೇಶನಗಳನ್ನು ಹಂಚಬೇಕಾದರೆನಗರಾಭಿವೃದ್ಧಿ ಸಮಿತಿಗೆಏಕೆ ಬೇಕು?ಸದಸ್ಯರುಗಳುಏಕೆ ಬೇಕು? ಇದುನನಗೆ ಅರ್ಥವಾಗುತ್ತಿಲ್ಲ ಈ ಲಾಟರಿ ಮೂಲಕ ಹಂಚಿದರೆ. ಲಾಟರಿ ಟಿಕೇಟ್ ತೆಗೆದುಕೊಂಡರೆ ಏನಾಗುತ್ತದೋ ಅದೇ ಸ್ಥಿತಿ ಈ ನಿವೇಶನಗಳಿಗೆ ಅರ್ಜಿ ಹಾಕಿದವರಿಗೂ ಬರುತ್ತದೆ ಎನ್ನುವುದು ನನ್ನ ಭಾವನೆ ಆದ್ದರಿಂದ ನಿವೇಶನ ರಹಿತ ಜನಗಳಿಗೆ ಸೈಟ್ ಸಿಕ್ಕುವ ದೃಷ್ಟಿಯಿಂದ ಲಾಟರಿ ಪ್ರಯತ್ನವನ್ನು ದಯುವಿಟ್ಟು ಕೈಬಿಡುತ್ತೀರೆಂದು ನಾನು ತಿಳಿದಿರುತ್ತೇನೆ. ಎರಡನೇಯದಾಗಿ, ಮೈಸೂರು ನಗರದಲ್ಲಿ ಸುಮಾರು ನಲವತ್ತು, ೪೦ ವರ್ಷಗಳಿಂದ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ನಗರವನ್ನು ಶುದ್ಧೀಕರಣ ಮಾಡುತ್ತಾ ಇದ್ದಾರೆ ಅವರು ಒಳ್ಳೆಯ ಸೇವೆಯನ್ನು ಮಾಡುತ್ತಾ ಇದ್ದಾರೆ. ಈ ಸೇವೆಯನ್ನು ಸಲ್ಲಿಸತಕ್ಕ ಜನರಿಗೆ ಇದುವರೆವಿಗೂ ಒಬ್ಬರಿಗೂ ಕೂಡ ಸ್ವಂತ ಮನೆಗಳು ಇಲ್ಲ. ಮೈಸೂರು ನಗರ ಕಾರ್ಪೋರೇಷನ್ ಒಂದು ನಿರ್ಣಯ ಮಾಡಿ ಯಾವ ಪೌರ ಕಾರ್ಮಿಕರು ಇವತ್ತು ಕೆಲಸ ಮಾಡುತ್ತಾ ಇದ್ದಾರೆ ಅಂಥ ಪೌರ ಕಾರ್ಮಿಕರಿಗೆ ವಾಸ ಮಾಡುವುದಕ್ಕೆ ಮನೆಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂಬುದನ್ನು ನಾನು ಕೇಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಲಾಟರಿ ಮೂಲಕ ಮಾಡುವುದು ಸರಿಯಿಲ್ಲವೆಂದು ಸನ್ಮಾನ್ಯ ಸದಸ್ಯರ ಅಭಿಮತ ಹಂಚತಕ್ಕ ಮನೆಗಳಲ್ಲಿ ಶೇಕಡ ೮೦ ರಷ್ಟು ಭಾಗವನ್ನು ಲಾಟರಿ ಮೂಲಕ ಕೊಡಬೇಕು. ಉಳಿದ ೧೦ ಭಾಗವನ್ನು ಇತರೇ ಗುಂಪಿನ ಜನರಿಗೆ ಕೊಡಬೇಕೆಂದು ತೀರ್ಮಾನವಾಗಿದೆ ಲಾಟರಿ ಮೂಲಕ ಕೊಡುವುದು ಸರಿಯಿಲ್ಲವೆಂದು ಹೇಳುತ್ತಾರೆ. ನನ್ನ ಅನುಭವದ ಮೂಲಕ ಹೇಳುವುದಾದರೆ ೧೯೮೩-೮೪ರಲ್ಲಿ ವಸತಿ ಮಂತ್ರಿಯಾಗಿದ್ದೆ ಆಗ ಸುಮಾರು ೮,೦೦೦ ಮನೆಗಳನ್ನು ಲಾಟರಿ ಮೂಲಕ ಹಂಚಿದೆವು. ಆಗ ಒಂದು ಕಡೆಯಿಂದಲೂ ನನಗೆ ಲಾಟರಿ ಮೂಲಕ ಅನ್ಯಾಯವಾಗಿದೆ. ಮೋಸವಾಗಿದೆಯೆಂದು ಯಾರೂ ನನಗೆ ದೂರು ಕೊಟ್ಟಿಲ್ಲ, ಊರಿನಲ್ಲಿ ನಾನು ಮಾಡಿದ ಕಾರ್ಯವನ್ನು ಮುಕ್ತ ಕಂಠದಿಂದ ನನಗೆ ಹೊಗಳಿಕೆಯನ್ನು ಸೂಚಿಸಿದ್ದಾರೆ. ನಾನೇ ಕೆಲವು ಕಡೆ ಸ್ವಂತ ಹಾಜರಿದ್ದು ವಿತರಣೆ ಮಾಡತಕ್ಕಂಥಹದ್ದರಲ್ಲಿದ್ದೆನು. ಸನ್ಮಾನ್ಯ ವೇದಾಂತ ಹೆಮ್ಮಿಗೆಯವರು ಹಿರಿಯರು, ಅವರ ಅಭಿಪ್ರಾಯವನ್ನು ಇಟ್ಟುಕೊಳ್ಳುವುದಕ್ಕೆ ಅಭ್ಯಂತರವಿಲ್ಲ. ಮನೆಗಳ ವಿಚಾರದಲ್ಲಿ ಸರ್ಕಾರಕ್ಕೆ ಮನವಿ ಬಂದಿದೆ, ಅವನ್ನು ನೋಡುತ್ತೇನೆ. ಅನ್ಯಾಯವಾಗಿದೆ ಎಂದರೆ ನಾನು ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವುದನ್ನು ನೋಡಿದರೆ ಬೆಂಗಳೂರ ನಗರದಲ್ಲಿ ಏನೂ ತೊಂದರೆ ಇಲ್ಲ, ನೀರಿನ ವಿಷಯದಲ್ಲೂ ತೊಂದರೆ ಇಲ್ಲ ಎನ್ನುವ ಅಭಿಪ್ರಾಯ ಬರುತ್ತದೆ.

ತಾವು ಆ ಕಡೆ ಮುಖ ಮಾಡಿಕೊಂಡಿದ್ದರೆ ನಾವು ಹೇಳುವುದು ತಮಗೆ ಕೇಳಿಸುವುದಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಉತ್ತರವನ್ನು ನೋಡಿದರೆ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ಸ್ವಲ್ಪ ಇಂಪ್ರೂವ್ ಆಗಿರುವಂತೆ ಉತ್ತರ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಕೊಟ್ಟಂತಹ ಅಂಕಿಅಂಶಗಳನ್ನು ನೋಡಿದರೆ ನಮ್ಮ ಮನಸ್ಸಿಗೂ ಸ್ವಲ್ಪ ಇಂಪ್ರೂವ್ ಆಗಿದೆಯೇನೋ ಎಂದು ಕಾಣುತ್ತದೆ. ಈ ಬಗ್ಗೆ ತಾವು ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಇದು ನಮ್ಮ ಮತ್ತು ನಿಮ್ಮ ಪ್ರೈವೇಟ್ ವ್ಯವಹಾರವಲ್ಲ. ಸಾರ್ವಜನಿಕರ ಸೇವೆ ಮಾಡುವುದಕ್ಕೆ ನಾವು ಮತ್ತು ನೀವು ಬಂದಿರುವುದು. ಮತ್ತು ಬೆಂಗಳೂರು ನಗರದಲ್ಲಿ ನೀರನ್ನು ಹಂಚಿಕೆ ಮಾಡುವುದಕ್ಕೆ ತಾವು ೩೬ ಇಂಚ್ ಕೊಳವೆಯನ್ನು ಹಾಕಿದರೆ ಮಾತ್ರ ಅನುಕೂಲವಾಗುತ್ತದೆ, ಈ ೩೬ ಇಂಚ್ ಕೊಳವೆಯನ್ನು ಹಾಕಿದರೆ ಎ. ಅಂಡ್ ಬಿ. ಜೋನ್ಸ್ ಎಂದು ಏನು ತಾವು ಮಾಡಿದ್ದೀರಿ ಅಲ್ಲಿಗೂ ಸಹ ಅನುಕೂಲವಾಗುತ್ತದೆ. ಎರಡನೆಯದಾಗಿ, ರಾಜಾಜಿನಗರ ಮತ್ತು ಬಿನ್ನಿಪೇಟೆ ಹಾಗೂ ಗಾಂಧೀನಗರಕ್ಕೂ ಕೂಡ ಅನುಕೂಲವಾಗುತ್ತವೆ. ಈ ಕೆಲಸವನ್ನು ತಾವು ಮಾಡಿದರೆ ಇಡೀ ಬೆಂಗಳೂರು ನಗರದ ಅರ್ಧ ಭಾಗಕ್ಕೆ ನೀರಿನ ಸೌಕರ್ಯ ಒದಗಿಸಿ ಕೊಟ್ಟಂತೆ ಆಗುತ್ತದೆ. ಆದ್ದರಿಂದ ತಕ್ಷಣ ಈ ೩೬ ಇಂಚ್ ಕೊಳವೆಯನ್ನು ಬೆಂಗಳೂರು ದಕ್ಷಿಣದಿಂದ ಕೇತಮಾರನಹಳ್ಳಿಯವರೆವಿಗೂ ಹಾಕುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತು...

ಶ್ರೀ ಎ. ಲಕ್ಷ್ಮೀಸಾಗರ್. — ಸ್ವಾಮಿ, ಈ ಪ್ರಶ್ನೆಗೆ ನಾನು ಮೊದಲು ಉತ್ತರ ಹೇಳಿಬಿಡುತ್ತೇನೆ ಈ ಹಿಂದೆ ಬೋರ್ಡ್ ಒಂದು ಮೀಟಿಂಗ್ ಕರೆದಿತ್ತು. ಆಗ ಇಬ್ಬರು ಮಾನ್ಯ ಸದಸ್ಯರು ಬರಲಿಲ್ಲವೆಂದು ಹೇಳಿ ಮುಂದಕ್ಕೆ ಹಾಕಿದ್ದಾರೆ. ಈಗ ಇದೇ ತಿಂಗಳ ೧೧ನೇ ತಾರೀಖು ಒಂದು ಮೀಟಿಂಗ್ ಕರೆದಿದ್ದಾರೆ. ಆಗ ಈ ಯೋಜನೆಯ ಬಗ್ಗೆ ಸಾಧ್ಯತೆ ಎಷ್ಟಿದೆ ಎಂದು ಒಂದು ತೀರ್ಮಾನ ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ ಎನ್ನುವ ಮಾತನ್ನು ಅವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. — ಬಹಳ ಸಂತೋಷ ಸ್ವಾಮಿ. ಇನ್ನೊಂದು ಪ್ರಶ್ನೆ ಏನೆಂದರೆ, ದಿನ ಬಿಟ್ಟು ದಿನ ನೀರು ಬಿಡುವ ವ್ಯವಸ್ಥೆಯನ್ನು ತಾವು ಈಗಾಗಲೇ ಜಾರಿಯಲ್ಲಿ ತಂದಿದ್ದೀರಿ. ನಾನು ಮೊದಲೇ ಹೇಳಿದ ಹಾಗೆ ಈ ೩೬ ಇಂಚ್ ಕೊಳವೆಯನ್ನು ಹಾಕಿದರೆ ಈ ಪರಿಸ್ಥಿತಿ ತಪ್ಪುತ್ತದೆ. ಈಗಿರತಕ್ಕಂಥ ವ್ಯವಸ್ಥೆಯಲ್ಲಿಯೇ ಪರಿಸ್ಥಿತಿ ಸುಧಾರಿಸಿದರೆ ಅದು ಸುದೈವ. ತಾವು ಏನ ಒಂದು ಗುರಿಯನ್ನು ಇಟ್ಟುಕೊಂಡಿದ್ದೀರಿ ಅದರಲ್ಲಿ ಅಬ್ಜೆಕ್ಟೀವ್ ಎಂದು ಅನೇಕ ಸಲ ಹೇಳಿದ್ದೀರಿ. ಈ ಬಗ್ಗೆ ನಾನು ಕೇಳಿಕೊಳ್ಳುವುದೇನೆಂದರೆ, ಕನಿಷ್ಟ ಪಕ್ಷ ಒಂದು ದಿನಕ್ಕೆ ಎರಡು ಗಂಟೆಯಾದರೂ ನೀರು ಬರಲೇಬೇಕು. ಏನಾದರೂ ಒಂದು ಆಲ್ಟರ್‌ನೇಟೀವ್ ಮಾಡಿ ನೀರು ಒದಗಿಸಿಕೊಡಲೇಬೇಕು ಮತ್ತೆ ಈ ಲೆಜಿಸ್ಲೇಟೀವ್ ಕಮಿಟಿಯಲ್ಲಿ ಬಹಳ ಜನಕ್ಕೆ ವಿರೋಧವಿದ್ದು ಅಲ್ಲಿ ಜಗಳ ಸಹ ಆಗಿದೆ ಎಂದು ನಾನು ಕೇಳಿದ್ದೇನೆ. ಈ ಬಗ್ಗೆ ಹಟ ಏತಕ್ಕೆ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಅಧ್ಯಕ್ಷರೇ, ಆ ಕಮಿಟಿಯಲ್ಲಿ ಏನು ತೀರ್ಮಾನ ಆಗಿದೆಯೋ ಅದು ನನಗೆ ಅಫಿಷಿಯಲ್ ಆಗಿಯೂ ಸಹ ಗೊತ್ತಿಲ್ಲ, ಈಗ ಎ. ಅಂಡ್ ಬಿ. ಜೋನ್ ಎಂದು ಮಾಡಿ ಅಲ್ಲಿಗೆ ದಿನ ಬಿಟ್ಟು ದಿನ ನೀರು ಕೊಡುವಂತಹ ಪದ್ಧತಿ ಜಾರಿಯಲ್ಲಿ ಇದೆ. ಎ. ಎ ಕಡೆ ನೀರು ಕಡಿಮೆ ಪ್ರಮಾಣದಲ್ಲಿ ಇದೆ ಎನ್ನುವುದನ್ನು ಮಾನ್ಯ ಸದಸ್ಯರೂ ಸಹ ಒಪ್ಪಿಕೊಳ್ಳುತ್ತಾರೆ. ಆದರೆ ಶಿಂಶಾ ನದಿಯಿಂದ ನೀರು ಬಂದ ಮೇಲೆ ಯಾವ ಪ್ರಮಾಣದಲ್ಲಿ ಜಾಸ್ತಿ ನೀರನ್ನು ಕೊಟ್ಟಿದ್ದೇವೆ ಎನ್ನುವುದನ್ನೂ ಸಹ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ನಾನು ಈ ಬಗ್ಗೆ ಅಂಕಿಅಂಶಗಳ ಸಮೇತವಾಗಿ ಅವರಿಗೆ ತಿಳಿಸಿದ್ದೇನೆ. ಇನ್ನು ಹೆಸರಘಟ್ಟ ಕೆರೆಯಲ್ಲಿ ನಾವು ಕೊಳವೆ ಬಾವಿಗಳನ್ನು ತೋಡಿಸಬೇಕೆಂದು ಪ್ರಯತ್ನ ಮಾಡಿ ಅಲ್ಲಿ ಈಗಾಗಲೇ ಸುಮಾರು ೨-೩ ಕಡೆ ಕೆಲಸ ನಡೆಯುತ್ತಿದೆ. ಅಲ್ಲಿ ಸುಮಾರು ೬-೭ ಸಾವಿರ ಗ್ಯಾಲನ್ ನೀರು ಸಿಗುವಂತಹ ಸೂಚನೆಗಳು ಕಂಡುಬರುತ್ತಿವೆ. ಆ ನೀರನ್ನು ನಾವು ಇಂಡಸ್ಟ್ರಿಗಳಿಗೆ ಮತ್ತು ಡಿಫೆನ್ಸ್‌ರವರಿಗೆ ಕೊಟ್ಟು ಅವರಿಗೆ ಈಗ ಕೊಡುತ್ತಿರುವ ನೀರನ್ನು ನಾವೇ ಉಳಿಸಿಕೊಂಡು ಕೇತಮಾರನಹಳ್ಳಿ ರಿಸರ್‌ವಾಯರ್‌ಗೆ ಬಿಡಬೇಕೆಂದು ಇದ್ದೇವೆ, ಈ ನೀರನ್ನು ರಾಜಾಜಿನಗರ ಮತ್ತು ವೆಸ್ಟ್ ಆಫ್ ಕಾರ್ಡ್ ರಸ್ತೆಗೆ ಒದಗಿಸಿಕೊಡಬೇಕೆನ್ನುವ ವಿಷಯ ಕೂಡ ನಮ್ಮ ಮುಂದೆ ಇದೆ. ಇದರ ಜೊತೆಗೆ ಅಷ್ಟರಲ್ಲಿ ಮಳೆ ಸಹ ಬರಬಹುದು. ಸುದೈವದಿಂದ ಮೊನ್ನೆ ಫೆಬ್ರುವರಿ ತಿಂಗಳಲ್ಲಿ ತಿಪ್ಪಗೊಂಡನಹಳ್ಳಿ ಕೆರೆಗೆ ಸುಮಾರು ೧೦ ಅಡಿ ನೀರು ಬರುತ್ತದೆಂದು ಯಾರೂ ನಂಬಿರಲಿಲ್ಲ, ಅದು ಯಾರ ಪುಣ್ಯವೋ ನನಗೆ ಗೊತ್ತಿಲ್ಲ. ಹೆಸರಘಟ್ಟದಿಂದ ನೀರು ಬಂದ ಮೇಲೆ ನಾವು review

ಮಾಡುತ್ತೇವೆ. I am keeping an open mind I have not closed my mind. I do not want to mislead anybody and I will keep on my consultations with him.

ಅಧ್ಯಕ್ಷರು.—ಮಾನ್ಯ ರಾಜುಗೌಡರೇ ತಾವು ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಇನ್ನೊಂದು ಪ್ರಶ್ನೆಯನ್ನು ಮಾತ್ರ ಕೇಳುತ್ತೇನೆ.

ಅಧ್ಯಕ್ಷರು.—ಇಲ್ಲ ತಾವು ಯಾವಾಗಲೂ ಇದೇ ರೀತಿ ಹಟ ಮಾಡುತ್ತೀರಿ,

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲ ಸ್ವಾಮಿ ನಾನು ಬೇಗ ಮುಗಿಸಿಬಿಡುತ್ತೇನೆ. ಈಗ ಸೆಲ್ಫ್ ಫೈನಾನ್ಸ್ ಸ್ಕೀಂ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇಲ್ಲಿರತಕ್ಕಂತಹ ಪ್ರಶ್ನೆ ಏನೆಂದರೆ, ಇವರು ಕಂಟ್ರಾಕ್ಟ್ ಅನ್ನು ಒಂದೇ ಒಂದು ಸೈಡ್‌ನಿಂದ ಕೊಡುತ್ತಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ, ಎರಡು ವರ್ಷಗಳಲ್ಲಿ ಕಟ್ಟಬೇಕಾದಂಥ ಮನೆಯನ್ನು ಸುಮಾರು ೬ ವರ್ಷಗಳಾದರೂ ಕಟ್ಟಿಸಿಕೊಡುವುದಿಲ್ಲ, ಆ ಜವಾಬ್ದಾರಿ ಅವರ ಮೇಲಿದ್ದರೂ ಸಹ ಮತ್ತೆ ಮತ್ತೆ ಹಣ ಕೇಳುತ್ತಿರುತ್ತಾರೆ. ಈ ಬಗ್ಗೆ ತಾವು ಏನಾದರೂ ಯೋಚನೆ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಕಂಟ್ರಾಕ್ಟ್ ಕೊಡುವಾಗ ಎಲ್ಲಾ ಸನ್ನಿವೇಶಗಳಲ್ಲಿ ಕೂಡ ಹಣ ಜಾಸ್ತಿ ಕೇಳಬೇಕಾಗುತ್ತದೆ. ಈಗ ಲೋಕೋಪಯೋಗಿ ಇಲಾಖೆಯನ್ನೇ ತೆಗೆದುಕೊಳ್ಳಿ, ಅದೇ ರೀತಿ ಕೆ.ಇ.ಬಿ.ಯನ್ನೇ ತೆಗೆದುಕೊಳ್ಳಿ. ಹೆಚ್ಚಿಗೆ ಹಣ ಬೇಕೆಂದು ಅಪ್ಲಿಕೇಷನ್ ಹಿಡಿದುಕೊಂಡು ಬಂದೇ ಬರುತ್ತಾರೆ. ಈಗ ಹುಡ್ಕೋ ನಾರಮ್ಸ್ ಏನಿದೆ ಎಂಬುದನ್ನು ಹೇಳುತ್ತೇನೆ ಸ್ವಲ್ಪ ಕೇಳಿ. There are instances where a period of 10 years has been taken for completion. You cannot help it. This is in the system. But I would like to assure everybody that all possible steps will be taken to expedite such contracts undertaken by the B.D.A.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೆ, ಹೊರ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ವಲಸೆ ಬರುವುದನ್ನು ತಪ್ಪಿಸಲು ರಾಜ್ಯಾಂಗ ಬದ್ಧವಾಗಿ ಏನಾದರೂ ತಡೆ ಇದೆಯೇ ? ಮತ್ತು ಈ ರೀತಿ ವಲಸೆ ಬರುವುದನ್ನು ತಪ್ಪಿಸಲು ಬೆಂಗಳೂರು ನಗರದ ಅಧಿಕಾರಿಗಳು ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ. ಈಗಿರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಆಗಲಿ, ಅಥವಾ ಒಂದು ಊರಿನಿಂದ ಮತ್ತೊಂದು ಊರಿಗೆ ಬರುವುದಕ್ಕೆ ಆಗಲಿ ಅದನ್ನು ತಡೆಗಟ್ಟುವುದಕ್ಕೆ ಈ ದೇಶದಲ್ಲಿ ಇನ್ನೂ ಅಂತಹ ಕಾನೂನು ಬಂದಿಲ್ಲ, ಆದರೂ ಸಹ ಸ್ಥಳೀಯ ಅಧಿಕಾರಿಗಳು ಹೊರರಾಜ್ಯದಿಂದ ಬಂದಂಥ ಜನರು ಖಾಲಿ ಜಾಗಗಳನ್ನು ಆಕ್ರಮಣ ಮಾಡಿಕೊಳ್ಳದಂತೆ ತಡೆಗಟ್ಟಲು ಸಾಧ್ಯತೆಗಳು ಇವೆ. ಆ ಕೆಲಸವನ್ನು ಸ್ಥಳೀಯ ಸಂಸ್ಥೆಗಳು ಮಾಡಬೇಕೆಂದು ನಾವು ತಾಕೀತು ಮಾಡುತ್ತಲೇ ಬಂದಿದ್ದೇವೆ. ಇನ್ನು ಮುಂದೆ ಸಹ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗತಾನೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು, ೧೮ ಪರ್ಸೆಂಟ್ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡುತ್ತಿದ್ದೇವೆ, ಯಾವ ರೀತಿಯಲ್ಲಿ ವಸೂಲಿ ಮಾಡುತ್ತಿದ್ದೇವೆಂದು. ಆ ಪ್ರಕಾರ ನಾನು ಹೇಳುವುದಾದರೆ ಸುಮಾರು ೪,೫೩,೯೩,೦೦೦ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಮತ್ತು ಇದರಲ್ಲಿ ಸುಮಾರು ೮೬ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆಂದು ವರದಿಯಲ್ಲಿ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಆ ರೀತಿಯಲ್ಲ. ನಾನು ನಿಮಗೆ ಕರೆಕ್ಷನ್ ಮಾಡಿಕೊಡುತ್ತೇನೆ.

That is the total collection of 1985-86 including previous years unspent amount. There is no account of monies having been certified by the local authorities towards 18%. You don't get figures any

where. This is the total picture but all that I have done during the cuorse of the one year, atleast for the year 1985-86 I set apart what ever amount that is permissible under the law now. We try to spend that amount during this year. This will give you a better picture of allocations of 18% monies and expenditure there of.

ಶ್ರೀ ಬಿ. ಬಸವಲಿಂಗಪ್ಪ. ತಾವು ಉತ್ತರ ಕೊಟ್ಟಿದ್ದೀರಿ. ಮತ್ತು ೧೯೮೫-೮೬ ನೇ ಸಾಲಿನ ಬೆಂಗಳೂರು ನಗರದ ಬಗ್ಗೆ ಒಂದು ವರದಿಯನ್ನು ಇಲ್ಲಿ ಕೊಟ್ಟಿದ್ದೀರಿ. ಅದರಲ್ಲಿ ಇರುವ ಪ್ರಕಾರ ೧೯ ಲಕ್ಷ ೨೮ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಬೆಂಗಳೂರು ನಗರದಲ್ಲಿ ಆದಾಯ ಬರತಕ್ಕಂಥಾದ್ದು ಸುಮಾರು ೫೦ ಕೋಟಿ ರೂಪಾಯಿಗಳು. ಆ ಪ್ರಕಾರ ೧೯ ಕೋಟಿ ರೂಪಾಯಿಗಳು ಖರ್ಚು ಮಾಡಬೇಕು. ಈಗ ಅದೇ ಲೆಕ್ಕವನ್ನು ತೆಗೆದುಕೊಂಡು ಕೇಳುವು ದಾದರೆ ಹೋದ ವರ್ಷ ಎಷ್ಟು ಖರ್ಚು ಮಾಡಿದ್ದೀರಿ ? ಅದಕ್ಕೆ ಹಿಂದಿನ ವರ್ಷ ಎಷ್ಟು ಖರ್ಚು ಮಾಡಿದ್ದೀರಿ ? ಈ ವರ್ಷ ಎಷ್ಟು ಖರ್ಚು ಮಾಡಬೇಕೆಂದು ಇಟ್ಟುಕೊಂಡಿದ್ದೀರಿ ? ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಖರ್ಚು ಮಾಡಬೇಕೆನ್ನುವ ಬಗ್ಗೆ ತಾವು ಸದಸ್ಯರನ್ನು ಕೇಳಿದರೆ ಅವರು ತಮಗೆ ಒಂದು ಐಡಿಯಾ ಕೊಡುತ್ತಾರೆ. ಆಗ ತಾವು ಹಣವನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಸ್ವಾಮಿ, ನಾನು ಕೂಡ ಹಿಂದೆ ನಗರಾಭಿವೃದ್ಧಿ ಮಂತ್ರಿ ಆಗಿದ್ದೆ. ಆಗ ಇಲ್ಲಿ ಒಂದು ಟ್ರಸ್ಟ್ ಬೋರ್ಡ್ ಇತ್ತು. ಇದು ಸರಿಯಲ್ಲ, ಡೆಲ್ಲಿಯಲ್ಲಿ ಇರುವಂತೆ, ಒಂದು ಸಂಸ್ಥೆ ಇರಬೇಕೆಂದು, ಬಿ.ಡಿ.ಎ ತರಬೇಕೆಂದು ಮಾಡಿದೆ. ಇದರಿಂದ ಬಡವರಿಗೆ ಅನುಕೂಲವಾಗಲೀ, ಎಲ್ಲರಿಗೂ ಸೈಟು ಸಿಗಲಿ ಎಂದು ಮಾಡಿದೆ. ಆದರೆ ಅದು ಇಂದು ಏನೇನೋ ಆಗಿದೆ, ಅವತ್ತಿನಿಂದ ಇವತ್ತಿನವರೆಗೂ ಅಲ್ಲಿ ಕಮೀಷನರ್‌ಗಳು ಬಂದಿದ್ದಾರೆ. ಅಲ್ಲಿ ಕಮೀಷನರ್ ಆಗಿ ಬಂದವರು ಮೊದಲು ಸೈಟ್ ಮಾಡಿಕೊಳ್ಳಬೇಕು. ಬೇರೆಯವರು ಮಾತ್ರ ಕಾಯುತ್ತಾ ಇರಬೇಕು. ಹೀಗಾಗಿ ಮೊದಲು ಕಮೀಷನರ್‌ಗಳು ಸೈಟ್ ಹಿಡಿಯುತ್ತಾರೆ. ಈಗಿನ ಕಮೀಷನರ್ ಬಂದ ತಕ್ಷಣ ಒಂದು ತಿಂಗಳಲ್ಲೇ ಸೈಟ್ ಹಿಡಿದಿದ್ದಾರೆ. ಇಂಥವರಿಂದ ಸಮಾಜ ಸೇವೆ ಆಗುವುದಿಲ್ಲ. ಇಂಥ ಜನಗಳನ್ನು, ಇಂಥ ಸ್ಥಳಗಳಲ್ಲಿ ಇಡಬಾರದು ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಾನು ಇದರ ಬಗ್ಗೆ ಲಿಖಿತ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೂ ಕೊಟ್ಟಿದ್ದೇನೆ ಆಮೇಲೆ ಸೋಷಿಯಲ್ ಜಸ್ಟೀಸ್ ಕೇಸುಗಳನ್ನು ಮೊದಲು ಮುಖ್ಯ ಮಂತ್ರಿಗಳೇ ತೀರ್ಮಾನ ಮಾಡುತ್ತಿದ್ದರು. ಅದರಂತೆ, ಈಗಲೂ ಮುಖ್ಯಮಂತ್ರಿಗಳೇ ಇವುಗಳನ್ನು ತೀರ್ಮಾನ ಮಾಡಬೇಕೆಂದು ಹೇಳುತ್ತೇನೆ. ೨೫ ಜನ ಹೆಚ್.ಯು.ಡಿ. ಇಂಜಿನಿಯರುಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದರು, ಅದು ಇವತ್ತಿನವರೆಗೂ ತೀರ್ಮಾನವಾಗಿಲ್ಲ. ಆದುದರಿಂದ ಆದಷ್ಟು ಬೇಗ ಇವುಗಳನ್ನು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಕ್ಟ್ರಾಯಿ ವಿಚಾರ ನನ್ನ ಮನಸ್ಸಿಗೆ ವಿರುದ್ಧವಾದುದು. ಮಾನ್ಯ ದೇವರಾಜ ಅರಸರು ನೇರವಾಗಿ ಇದನ್ನು ವಜಾ ಮಾಡಿದರು. ಇದು ಮುನಿಸಿಪಾಲಿಟಿಯ ಎಲ್ಲಾ ಸದಸ್ಯರಿಗೂ ಗೊತ್ತು. ಆಕ್ಟ್ರಾಯಿ ಸಂಪಾದನೆ ಇಲ್ಲದೇ ಹೋದರೆ ಮುನಿಸಿಪಾಲಿಟಿ ನಡೆಸುವುದಕ್ಕಾಗುವುದಿಲ್ಲ. ಅಲ್ಲಿ ಸಂಬಳ ಕೊಡಲಿಕ್ಕೂ ಆಗುವುದಿಲ್ಲ. ಈ ಆಕ್ಟ್ರಾಯಿ ಬಗ್ಗೆ ಯಾವಾಗಲೂ ನಾನು ಕೇಳುತ್ತಿರುತ್ತೇನೆ. ಆದುದರಿಂದ ಈ ಆಕ್ಟ್ರಾಯನ್ನು ಪುನಃ ಜಾರಿಗೆ ತರಬೇಕೆಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದಿನ ವರ್ಷದ ೧೮ ಪರ್ಸೆಂಟ್ ವಿಚಾರ ಕೇಳಿದ್ದಾರೆ ತಕ್ಷಣಕ್ಕೆ ಇಲ್ಲ, ನಂತರ ಕಳುಹಿಸಿಕೊಡುತ್ತೇನೆ ನಾವು ೧೮ ಪರ್ಸೆಂಟ್ ಲೆಕ್ಕಾಚಾರ ಮಾಡುವಾಗ ಗೈಡ್‌ಲೈನ್ಸ್ ಕೊಟ್ಟಿದ್ದೇವೆ. ಇದರಲ್ಲಿ ಕೆಲವು ಮೊತ್ತಗಳನ್ನು ಕಳೆಯುತ್ತಾರೆ. ಉಳಿದ ಹಣದಲ್ಲಿ ೧೮ ಪರ್ಸೆಂಟ್ ಕೊಡುತ್ತಾರೆ. ಆ ಪ್ರಕಾರ ಆಗಿದೆಯೆಂದು ತಿಳಿದುಕೊಂಡಿದ್ದೇನೆ ಇನ್ನು ಬಿ.ಡಿ.ಎ. ಕಮೀಷನರ್ ಸೈಟ್ ತೆಗೆದುಕೊಂಡಿದ್ದಾರೆಂದು ಆಗ್ರಹ ಮಾಡಿದ್ದಾರೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಟೇ ಮಾಡಿದ್ದಾರೆ......

ಶ್ರೀ ಬಿ. ಬಸವಲಿಂಗಪ್ಪ.—ಕಮೀಷನರ್ ಆದ ತಕ್ಷಣ ಎಲ್ಲರನ್ನೂ ಬಿಟ್ಟು, ಇಲ್ಲಿರತಕ್ಕ ಒಡವರನ್ನು ತಳ್ಳಿಹಾಕಿ ಸೈಟ್ ಹೊಡೆಯಬೇಕೇನು ? He should be kept under suspension or dismissed from service.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ವೀಸ್‌ನಿಂದ ತೆಗೆಯುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಕೋಪದಿಂದ ಮಾತನಾಡುತ್ತಿದ್ದಾರೆ. 'ಕೋಪದಿಂದ ಕೊಯ್ದ ಮೂಗು ಮತ್ತೆ ಬರುವುದಿಲ್ಲ' ಇನ್ನು ಸೋಷಿಯಲ್ ಜಸ್ಟೀಸ್ ಕಮಿಟಿ ವ್ಯವಹಾರವನ್ನು ತಿಳಿದುಕೊಂಡು ತಾವು ಕೇಳುವುದು ಸಾಧ್ಯವಾಗಿದ್ದರೆ ಅವರಿಗೆ ಹೇಳುತ್ತೇನೆ. ಇನ್ನು ಆಕ್ಟ್ರಾಯಿ ಮತ್ತೆ ತರಬೇಕೆಂದು ಹೇಳುತ್ತಿದ್ದಾರೆ, ಮಾನ್ಯ ಬಸವಲಿಂಗಪ್ಪನವರು ಆಕ್ಟ್ರಾಯಿ ಅಬಾಲಿಷ್ ಮಾಡುವುದಕ್ಕೆ.. ...

ಶ್ರೀ ಬಿ. ಬಸವಲಿಂಗಪ್ಪ.—ಸ್ವಲ್ಪ ಕೇಳಿ, ಆಕ್ಟ್ರಾಯಿ ಕಥೆ ಹೇಳುತ್ತೇನೆ. ಸ್ವಾಮಿ, ಇದನ್ನು ವಜಾ ಮಾಡುವುದಕ್ಕೆ ಯಾವತ್ತೂ ನಾನು ವಿರೋಧ. ಮಾನ್ಯ ದೇವರಾಜ ಅರಸರು ಇವತ್ತು ಇಲ್ಲ, ಅವರು ನನ್ನ ಹತ್ತಿರ ವಾಗ ಮಾಡುತ್ತಿದ್ದರು. ಹೇಗಾದರೂ ಮಾಡಿ ಆಕ್ಟ್ರಾಯಿ ವಜಾ ಮಾಡೋಣ ಎಂದು ಹೇಳುತ್ತಿದ್ದರು. ನಾನು ಒಪ್ಪಲೇ ಇಲ್ಲ ನೇರವಾಗಿ ಬಜೆಟ್ ಭಾಷಣ ಮಾಡುವಾಗ, ಫೈನಾನ್ಸ್ ಮಂತ್ರಿಗಳು ಅಬಾಲಿಷ್ ಮಾಡಿದ್ದಾರೆ ಎಂದು ಹೇಳಿದರು. ನಾನು ಅದಕ್ಕೆ... ...

SRI A. LAKSHMI SAGAR.—The Minister is collectively responsible, including the propriety. At least he should have made a statement at the time the announcement was made with the permission of the Chief Minister that he was not in agreement with the decision. All right better late than never, he is entitled to revise his opinion. ಕೆಲವು ರಾಜ್ಯಗಳಲ್ಲಿ ಈ ಆಕ್ಟ್ರಾಯಿ ಜಾರಿಯಲ್ಲಿದೆ. ಕೇಂದ್ರ ಸರ್ಕಾರವೂ ಒತ್ತಾಯ ಪಡಿಸುತ್ತಾ ಇದೆ ಆಕ್ಟ್ರಾಯಿ ವಜಾ ಮಾಡಬೇಕೆಂದು, ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿರತಕ್ಕಂಥ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಒತ್ತಾಯ ಹಾಕುತ್ತಿದ್ದಾರೆ. ನಾನು ಇತ್ತೀಚೆಗೆ ಹೋದ ಶನಿವಾರ ಅಹಮದಾಬಾದ್‌ಗೆ ಹೋಗಿದ್ದೆ. ಅಲ್ಲಿನ ಮಂತ್ರಿಗಳು ಹೇಳುತ್ತಿದ್ದರು ಆಕ್ಟ್ರಾಯ್ ತೆಗೆಯಬೇಕೆಂದು ಒತ್ತಾಯ ಬರುತ್ತಿದೆ, ನೀವು ಹೇಗೆ ಮಾಡಿದಿರಿ, ಲಾಸ್ ಸರಿತೂಗಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿರಿ ಎಂದು ನನ್ನನ್ನು ಕೇಳಿದರು. ಅದಕ್ಕೆ ಏನು ಮಾಡಬೇಕೆಂದು ನಾನು ಅವರಿಗೆ ಹೇಳಿದೆ. ಆದ್ದರಿಂದ ನಿಮ್ಮ ಸರ್ಕಾರದವರೇ ಆಕ್ಟ್ರಾಯ್ ತೆಗೆಯಬೇಕೆಂದು ಇದ್ದಾರೆ. ಮುಂದೆ ನಮ್ಮ ಸರ್ಕಾರ ಆಕ್ಟ್ರಾಯ್ ಮತ್ತೆ ಜಾರಿಗೆ ತರತಕ್ಕಂಥ ವಿಷಯ ಇಲ್ಲ.

SRI R. ROSHANBAIG.—I had brought it to the notice of the Hon. Minister regarding Ulsoor Lake. In 1980, the Bangalore City Corporation had written to the State Government to revoke the decision of the State Government.

SRI A. LAKSHMISAGAR.—I did not touch upon the point. I will discuss the matter with the hon.member. Whatever permissible under law, I will do it.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ನಮ್ಮ ಬಳ್ಳಾರಿಯಲ್ಲಿ ನೀರು ಸರಬರಾಜು ಯೋಜನೆಗಾಗಿ ಒಂದು ಕೋಟಿ ಆರು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಒಂದು, ಒಂದೂವರೆ ವರ್ಷವಾಯಿತು. ಅಲ್ಲಿ ಖರ್ಚು ಮಾಡಿರುವುದು ಬಹಳ ಕಡಿಮೆ. ಆದುದರಿಂದ ಇದನ್ನು ಇನ್ನೆಷ್ಟು ದಿವಸದಲ್ಲಿ ಮುಗಿಸುತ್ತೀರಿ ಎಂಬ ಬಗ್ಗೆ ಮಾಹಿತಿ ಬೇಕು. ಅಲ್ಲಿ ಈಗ ಕೆಲಸ ಮಾಡುತ್ತಾ ಇಲ್ಲ. ಅಮೇಲೆ ಬಳ್ಳಾರಿಯಲ್ಲಿ ತೆರೆದ ಚರಂಡಿಗಳು ಜಾಸ್ತಿ ಇದ್ದು ಅವುಗಳನ್ನು ಕ್ಲೀನ್ ಮಾಡುವ ವ್ಯವಸ್ಥೆ ಇಲ್ಲ. ಕಮಿಟಿ ಬಂದ ಮೇಲೆ 200 ಜನಕ್ಕೆ ಒಬ್ಬ ಮನುಷ್ಯ ಎಂದು ಹೇಳಿದ್ದಾರೆ. ಆದುದರಿಂದ ಚರಂಡಿ ಕ್ಲೀನ್ ಮಾಡುವುದಕ್ಕೆ ಬೇರೆ ಯಾವುದಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ನೀರು ಸರಬರಾಜು ವಿಚಾರದಲ್ಲಿ ಕೆಲಸ ಪ್ರಗತಿಯಲ್ಲಿದೆ. ಸ್ವಲ್ಪ ನಿಧಾನವಾಗಿದೆ ಎಂದು ಹೇಳಬಹುದು. ಆದಷ್ಟು ಜಾಗ್ರತೆ, ತ್ವರಿತವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಇದುವರೆಗೆ ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ, ಅದನ್ನಾದರೂ ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಬಳ್ಳಾರಿಗೆ ನೀರನ್ನು ಒದಗಿಸಿಕೊಡುವುದಕ್ಕಾಗಿ ಒಟ್ಟು ಅಂದಾಜು ಹಣ ೬೪೦ ಲಕ್ಷ ರೂಪಾಯಿ. ಇಲ್ಲಿಯವರೆಗೆ ಖರ್ಚಾಗಿರುವುದು ೫೨ ಲಕ್ಷ. ಅದರಲ್ಲಿ ಈ ವರ್ಷಕ್ಕೆ ಈಗಾಗಲೇ ಅಲ್ಲಿಗೆ ೧೧–೧೧½ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದರಲ್ಲಿ ಮೇಲ್ಮಟ್ಟದ ಜಲಸಂಗ್ರಹಣೆಯ ಕಾಲುವೆಗೆ ಹೋಗುವ ಕೆಲಸ ಈಗ ನಡೆದಿದೆ. ಇದರ ಪೂರ್ಣ ಮಾಹಿತಿಯನ್ನು ಸನ್ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಅಲ್ಲಿ ಎರಡು ವರ್ಷಗಳಿಂದಲೂ ಏನೂ ಕೆಲಸ ಆಗಿಲ್ಲ.

ಅಧ್ಯಕ್ಷರು.—ಅದರ ಬಗ್ಗೆ ಷಾರ್ಟ್ ನೋಟೀಸ್ ಕ್ವೆಶ್ಚನ್ ಕಳುಹಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ಎರಡನೆಯದಾಗಿ ಬಳ್ಳಾರಿಯಲ್ಲಿ ಪೌರ ಕಾರ್ಮಿಕರ ಸಂಖ್ಯೆ ಬಹಳ ಕಡಿಮೆ, ಅಲ್ಲಿ ಸಾಕಷ್ಟು ಜನ ಇಲ್ಲ ಎಂದು ಹೇಳಿದ್ದಾರೆ. ಮುನಿಸಿಪಾಲಿಟಿಯವರು ಅಲ್ಲಿಗೆ ಎಷ್ಟು ಜನ ಬೇಕು ಎನ್ನುವ ಪ್ರಪೋಸಲ್‌ನ್ನು ಕಳುಹಿಸಿದರೆ ಅದನ್ನು ಸೂಕ್ತವಾಗಿ ಪರಿಗಣಿಸಿ ತಕ್ಕ ಅನುಕೂಲ ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ದಾವಣಗೆರೆಯಲ್ಲಿ ನೀರಿನ ತೊಂದರೆ ಇದೆ. ಆ ಜನರಿಗೆ ನೀರಿನ ತೊಂದರೆಯನ್ನು ನೀಗಿಸುವುದಕ್ಕೆ ಈಗಿನಿಂದಲೇ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ಆ ಬಗ್ಗೆ ಉತ್ತರ ಹೇಳಿದಾಗ ಮಾನ್ಯ ಸದಸ್ಯರು ಇರಲಿಲ್ಲ.

ಶ್ರೀ ಸಿ. ಬೈರೇಗೌಡ.—ನಿಮ್ಮ ವಿಷಯ ಗೊತ್ತೇ ಇದೆ. ನೀವು ಬಂದಾಗಲೇ ಅವರು ಉತ್ತರ ಹೇಳಬೇಕೇನು?

ಶ್ರೀ ಪಂಪಾಪತಿ.—ಅವರು ನಾನು ಕೇಳಿದ್ದಕ್ಕೆ ಸರಿಯಾಗಿ ಉತ್ತರ ಕೊಟ್ಟಿಲ್ಲ.

ಒಬ್ಬ ಮಾನ್ಯ ಸದಸ್ಯರು.—ನೀವು ಏತಕ್ಕೆ ಎದ್ದು ಹೋದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರು ಊಟಕ್ಕೆ ಎದ್ದು ಹೋಗಿದ್ದರು, ಊಟ ಮಾಡಿಕೊಂಡು ಬಂದು ಈಗ ನೀರನ್ನು ಕೇಳುತ್ತಾರೆ.

ಶ್ರೀ ಪಂಪಾಪತಿ.—ಊಟ ಮಾಡಿಕೊಂಡು ಬಂದಮೇಲೆ ನೀರನ್ನು ಕೊಡುವುದಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ತಮಗೆ ಏನು ಕ್ಲಾರಿಫಿಕೇಷನ್ ಬೇಕು ಕೇಳಿ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಪೌರ ಕಾರ್ಮಿಕರು ಹೊಲಸಿನಲ್ಲಿ ಕೆಲಸ ಮಾಡ ತಕ್ಕಂಥಾವರು ಎನ್ನುವುದು ತಮಗೆ ಗೊತ್ತಿದೆ. ಅವರ ಪೂರ್ಣ ಆರೋಗ್ಯದ ವ್ಯವಸ್ಥೆ ಮತ್ತು ಔಷಧೋಪಚಾರ ಮಾಡುವ ಪೂರ್ಣ ಜವಾಬ್ದಾರಿ ನಿಮ್ಮದಲ್ಲವೇ ? ಮತ್ತು ದಾವಣಗೆರೆಯ ನೀರಿನ ತೊಂದರೆ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಪೌರ ಕಾರ್ಮಿಕರಿಗೆ ಪುಕ್ಕಟೆಯಾಗಿ ಔಷಧಿ ಕೊಡುವ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಇದರ ಬಗ್ಗೆ ಈಗ ನನ್ನ ಹತ್ತಿರ ಪೂರ್ತಿ ಮಾಹಿತಿ ಇಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಆ ವಿಚಾರದಲ್ಲಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಎರಡನೇದಾಗಿ, ನೀರಿನ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಎರಡು ಮೂಲಗಳಿಂದ ನೀರು ತರಬೇಕಾಗಿದೆ. ಒಂದು, ತುಂಗಭದ್ರಾ ನಾಲೆಯಿಂದ ದಾವಣಗೆರೆಗೆ ನೀರು ತರುವುದು, ಇನ್ನೊಂದು ವಿಧಾನ ಈಗ ಇರುವ ಕಡೆಗೇನೇ ಭದ್ರಾ ಜಲಾಶಯದಿಂದ ಹೆಚ್ಚು ನೀರನ್ನು ಬಿಟ್ಟು

ಅದನ್ನು ಶೇಖರಣೆ ಮಾಡಿಕೊಂಡು ಸ್ವಲ್ಪ ಹೆಚ್ಚು ಹಣ ಖರ್ಚಾದರೂ. ಇದನ್ನೇ ಮಾಡಿ ಆ ಊರಿಗೆ ನೀರು ಸರಬರಾಜು ಮಾಡುವ ಅವಶ್ಯಕತೆ ಇದೆ ಎಂದು ಇಂಜನೀಯರ್‌ರವರ ಅಭಿಪ್ರಾಯವಾಗಿದೆ. ಇವೆರಡನ್ನೂ ಯೋಚನೆ ಮಾಡೋಣ. ನಿಮಗೆ ತೊಂದರೆ ಮಾಡಬೇಕು ಎನ್ನುವ ಉದ್ದೇಶದಿಂದ ನಾನು ಹೇಳಲಿಲ್ಲ. ಇಬ್ಬರೂ ಕೂತುಕೊಂಡು ಈ ಬಗ್ಗೆ ಯೊಚನೆ ಮಾಡಿ ಯಾವುದು ಸರಿ ಎಂದು ಹೇಳಿದರೆ ಅದರಂತೆ ಮಾಡೋಣ,

SMT. MUKTHARUNNISA.—I would like to ask the Hon. Minister as to what method the Government has adopted to distribute the HUDCO houses, particularly in Mysore City. Whether you have formed the committee to verify the poorer sections or whether the Mayore has to go to distribute in each division ? What is the exemption you have given to the physically handicapped ? Five years back you have sanctioned some houses to the physically handicapped. You have enhanced the rate now Rs. 10,000 to Rs. 20,000 to each EWS house. You have sanctioned Houses to physically handicapped. But, now you haveenhanced the rate to Rs. 38 000/- From where they have to pay that amount ? Have you seen it any time ? Have you visited any time to see as to how they have constructed those houses ? Rooms are without doors. You have to visit there. Another most important thing is that your goodself has opened III Stage in Bannimantap HUDCO Houses in Mysore. I have brought it to your kind notice as to whom you have distributed those houses.

SRI A. LAKSHMISAGAR.—These questions should be directed for an answer to the Housing Minister, not to me. But, I have brought it to the notice of Housing Minister.

SMT. MUKTHARUNNISA.—It is your Department. These houses for physically handicapped are distributed from the Trust Board. It is under your Department, not the Housing Minister.

SRI A. LAKSMISAGAR.—I will look into it.

SMT. MUKTHARUNNISA.—I have enquired many times. I have. brought to your notice personally in Mysore as well as in Bangaloreb Again the reply is 'I will look into it. When you are giving sanction?

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನೋಡಿ ನಾನು ಹೇಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಈ ಮುನಿಸಿಪಾಲಿಟಿ ಏರಿಯಾದಲ್ಲಿ ಯಾರು ಅತಿಕ್ರಮಣ ಮಾಡಿ ಮನೆಕಟ್ಟಿ ಕೊಂಡಿದ್ದರು ಆದರ ಬಗ್ಗೆ ಹೋದ ಸಲ ನಾನು ಈ ಸದನದಲ್ಲಿ ಹೇಳಿದಾಗ್ಗೆ ತಾವು ಅವರಿಗೆ ಮಂಜೂರು ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಕೆಲವು ಜನತಾ ಮನೆಗಳನ್ನೂ ಆ ಬಡ ಜನರಿಗೆ ಏನು ಅಲಾಟ್ ಮಾಡುತ್ತೀರಿ ಅವರಿಗೆ ೨ ಸಾವಿರ ರೂಪಾಯಿ ಉತ್ಪನ್ನ ಬರುವ ಒಂದು ಸರ್ಟಿಫಿಕೇಟ್ ಕೊಡಬೇಕು ಅಂತ ಹೇಳಿದ್ದೀರಿ. ಒಬ್ಬ ಬಡ ಕೂಲಿಕಾರನೂ ಸಹ ಈವೊತ್ತಿನ ದಿವಸ ದಿನಕ್ಕೆ ೭ ರೂಪಾಯಿ ದುಡಿಯುತ್ತಾನೆ ಹಾಗಿದ್ದರೂ ಸಹ ಅವನಿಗೆ ಮನೆ ಸಿಗುವುದಿಲ್ಲ. ಆದುದರಿಂದ ವಾರ್ಷಿಕ ವರಮಾನವನ್ನು ೨ ಸಾವಿರ ರೂಪಾಯಿಯಿಂದ ೫ ಸಾವಿರ ರೂಪಾಯಿನವರೆಗೆ ಹೆಚ್ಚಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಬೆಂಗಳೂರು ಅಷ್ಟೇ ಅಲ್ಲ, ಮೈಸೂರಿನಲ್ಲೂ ಕೂಡ ಎಷ್ಟು ಜನ ಅತಿಕ್ರಮಣ ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅದರಲ್ಲಿ ಎಷ್ಟು ಕೀಳಿಸಿದ್ದೀರಿ, ಎಷ್ಟು ಹಾಗೆಯೇ ಇವೆ ಅನ್ನುವುದನ್ನು ಹೇಳುತ್ತೀರಾ ?

ಮೂರನೆಯದಾಗಿ ಸಿರಸಿ, ಸಿದ್ದಾಪುರಕ್ಕೆ ವಾಟರ್ ಸಪ್ಲೈ ಬಗ್ಗೆ ೧ ಕೋಟಿ ೨೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದೆ. ಇದರಲ್ಲಿ ಎಷ್ಟು ಖರ್ಚಾಗಿದೆ. ಈ ಕೆಲಸ ಈಗ ಆಗುತ್ತಾ ಇದೆಯೋ ಅಥವಾ ನಿಂತಿದೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕಳುಹಿಸಲಿ, ಅದಕ್ಕೆ ಉತ್ತರ ಕಳುಹಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವುದನ್ನು ಕೇಳಿದರೂ ಹೀಗೆಯೇ ಹೇಳುತ್ತಾರೆ. ನಾನು ೫-೬ ವಿಷಯಗಳನ್ನು ಕೇಳಿದ್ದೇನೆ, ಯಾವುದಕ್ಕೂ ಉತ್ತರ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.— ಅವರು ಯಾವುದಕ್ಕೆ ಉತ್ತರ ಬೇಕೋ ಅದಕ್ಕೆ ಪ್ರಶ್ನೆ ಕಳುಹಿಸಲಿ, ಉತ್ತರ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರಿಗೆ ಉತ್ತರ ಕೊಡುವುದಕ್ಕೆ ತಾಕತ್ತು ಇಲ್ಲದೇ ಹೋದರೆ ನಾವು ಇನ್ನೇನು ಕೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರಿಗೆ ಸಂಬಂಧಪಟ್ಟದ್ದಕ್ಕೆ ಈಗಾಗಲೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ಮಹಮದ್ ಮೊಯ್ದುದ್ದೀನ್.—ಹಲವಾರು ಸಲಹೆಗಳನ್ನು ಕೊಟ್ಟಿರುವುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಒಂದಕ್ಕೆ ಉತ್ತರ ಬರಲಿಲ್ಲ. ನನಗೆ ಸ್ವಲ್ಪ ಸ್ಪಷ್ಟವಾಗಿ ಉತ್ತರಬೇಕಾಗಿದೆ. ಸರ್ಕಾರದವರು ಆ್ಯಂಟಿ ಪಾವರ್ಟಿ ಪ್ರೊಗ್ರಾಂ ಅನ್ನು ಇಂಟರ್‌ಡ್ಯೂಸ್ ಮಾಡುತ್ತಾರೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೂಡಿಸಬೇಕಾಗಿದೆ. ೧೫-೨೦ ವರ್ಷಗಳಿಂದ ಇದರ ಬಗ್ಗೆ ಚಿಂತನೆ ನಡೆದಿಲ್ಲ. ಇದರ ಬಗ್ಗೆ ಎಲ್ಲಾ ಅಂಕಿ ಸಂಖ್ಯೆಗಳನ್ನು ತೆಗೆದು ಮಾಡಬೇಕಾಗುತ್ತದೆ. ಅರ್ಬನ್ ಪಾಲಿಸಿ ಫಾರ್ಮುಲೇಟ್ ಮಾಡುವಾಗ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದಂಥ ನಿರ್ಣಯ ತೆಗೆದುಕೊಳ್ಳುತ್ತೇನೆ

ಶ್ರೀ ಧರ್ಮಸಿಂಗ್.—ಈ ಕೆಲಸ ನಡೆದಿದೆ, ಐಡೆಂಟಿಫೈ ಕೆಲಸ ನಡೆದಿದೆ. ತಾವು ಅಟೆಂಡ್ ಮಾಡಿಲ್ಲ ಎಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್,—ನನಗೆ ಗೊತ್ತಿರತಕ್ಕಂಥ ಮಾಹಿತಿ ಪ್ರಕಾರ, identification of urban policy formulation there on is not available with me. That is what I said ಅದನ್ನು ಫಾರ್ಮುಲೇಟ್ ಮಾಡಬೇಕಾಗುತ್ತದೆ, ಅದನ್ನು ಮಾಡುತ್ತಾ ಇದ್ದೇವೆ, ಕಮಿಟಿಯನ್ನು ಈಗಲೇ ಮಾಡುತ್ತೇವೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಸಚಿವರು ಬಡವರಿಗೆ ಏನು ಅನ್ಯಾಯವಾಗಿದೆ ಎಂದು ಹೇಳಿದರು ಉದಾಹರಣೆಗೆ ಹೇಳುವುದಾದರೆ ೧೯೮೫-೮೬ ರಲ್ಲಿ ೨೫೦೦ ಮನೆಗಳನ್ನು ಕೊಳಚೆ ಪ್ರದೇಶದಲ್ಲಿ ಕಟ್ಟುತ್ತೇವೆ, ೮೪ ಲಕ್ಷ ರೂಪಾಯಿ ಸ್ಟೇಟ್ ಗೌವರ್ನಮೆಂಟ್ ಗ್ರಾಂಟ್, ೩½ ಕೋಟಿ ರೂಪಾಯಿ ಹುಡ್ಕೋ ಲೋನ್ ಬರುವಂಥ ಟಾರ್ಗೆಟ್ ಹಾಕಿಕೊಂಡಿದ್ದರು. ೧೯೮೫-೮೬ನೇ ವರ್ಷದಲ್ಲಿ ಕೇವಲ ೯೬ ಮನೆಗಳನ್ನು ಕಟ್ಟಿದ್ದಾರೆ. ೨೫೦೦ ಮನೆಗಳು ಎಲ್ಲಿ, ೯೬ ಮನೆಗಳು ಎಲ್ಲಿ, ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಸ್ಲಂ ಕ್ಲಿಯರೆನ್ಸ್ ಬೋರ್ಡ್‌ನಿಂದ ೮೦ ಮನೆಗಳನ್ನು ಮಾತ್ರ ಕಟ್ಟಿದ್ದಾರೆ. ಕೊಳಚೆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ವರ್ಗದವರಿದ್ದಾರೆ, ಹಿಂದುಳಿದ ಜಾತಿಯವರಿದ್ದಾರೆ. ಆದ್ದರಿಂದ ೮೦ ಮನೆಗಳನ್ನು ಕಟ್ಟಿಕೊಂಡು ಹೋದರೆ ಅನ್ಯಾಯವಾಗುವುದಿಲ್ಲವೇ.

ಶ್ರೀ ಎ. ಲಕ್ಷ್ಮೀಸಾಗರ್,—ನಾನು ಈಗಾಗಲೇ ಮಾನ್ಯ ಧರ್ಮಸಿಂಗ್‌ರವರಿಗೆ ಉತ್ತರ ಕೊಡತಕ್ಕ ಸಮಯದಲ್ಲಿ ಹೇಳಿದೆ. ಈ ವರ್ಷದಲ್ಲಿ ೨೫೦೦ ಮನೆಗಳನ್ನು ಕಟ್ಟಬೇಕಾಗಿತ್ತು, ಕಟ್ಟಿರತಕ್ಕಂಥಾದ್ದು ೧೮೬ ಮನೆಗಳು ಜನವರಿ ೧೯೮೬ರವರೆಗೆ ಎಂದು ಹೇಳಿದ್ದೇನೆ. ಆದರೆ ಹುಡ್ಕೋನಲ್ಲಿ ೩೫೮ ಲಕ್ಷ ರೂಪಾಯಿ ಬಿಡುಗಡೆಯಾಗದೇ ಇರುವುದರಿಂದ ತಡವಾಗಿದೆ, ಅದು ಬಂದನಂತರ ಅವುಗಳನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎರಡನೆಯದು, ಈ ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಹಂತ ಹಂತವಾಗಿ ಆಗಬೇಕಾಗಿರತಕ್ಕಂಥ ಕೆಲಸ. ಎಲ್ಲರಿಗೂ ಒಂದೇ ಸಲ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ. ಜಾಸ್ತಿ ಮನೆಗಳನ್ನು ತೆಗೆದುಕೊಂಡು ಕಟ್ಟಿಸಬೇಕೆಂಬ ಆಸೆಆಕಾಂಕ್ಷೆ ನಮಗೂ ಇದೆ. ಹಣಕಾಸಿನ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮವನ್ನು ನೀವು ಲೆಕ್ಕ ಹಾಕಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಪುರಸಭೆ, ನಗರಸಭೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುತ್ತೇವೆ, ಡಿವಿಜನಲ್ ಕಮಿಷನರ್ ಡಿಸ್ಪೋಸ್ ಮಾಡುತ್ತಾರೆ ಎಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ, ಪುರಸಭೆ, ನಗರಸಭೆಗಳಿಂದ ಬಹಿರಂಗ ಹರಾಜು ಮಾಡಿ ಕಡತಗಳನ್ನು ಜಿಲ್ಲಾಧಿಕಾರಿಗಳಿಂದ ಕಳಿಸಿರುವುದು ಇಲ್ಲಿ ಬಿದ್ದಿದೆ. ಶಿಕಾರಿಪುರದಲ್ಲಿ ೪೦ ಸಾವಿರ ೫೦ ಸಾವಿರಕ್ಕೆ ಹರಾಜೂ ಮಾಡಿದ್ದನ್ನು ಇಲ್ಲಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ತಕ್ಷಣ ಅದನ್ನು ಡಿಸ್ಪೋಸ್ ಮಾಡಿ ಕಳಿಸಬೇಕೆಂದು ಹೇಳುತ್ತೇನೆ. ನಾನು ಪದೇ ಪದೇ ಅಸೆಸ್‌ಮೆಂಟ್ ಬಗ್ಗೆ ಹೇಳಿದ್ದೇನೆ. ಅಸೆಸ್‌ಮೆಂಟ್ ಆಫೀಸರಿಂದ ಭ್ರಷ್ಟಾಚಾರ ಆಗುತ್ತಿದೆ ಎನ್ನುವುದನ್ನು ಒಪ್ಪಿಕೊಂಡಿರಿ. ಜನಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಮೊದಲೇ ಮನೆ ಕಟ್ಟಿದವರಿಗೆ ಪುರಸಭೆ ಅಸೆಸ್‌ಮೆಂಟ್ ನಿಷ್ಕರ್ಷೆ ಮಾಡಿದೆ. ಫರ್ದರ್ ಮಾಡಬೇಕಾದರೆ ನಾಲ್ಕೈದು ಪರ್ಸೆಂಟ್ ಏರಿಸುವುದನ್ನು ಅಳವಡಿಸಿಕೊಟ್ಟರೆ ಅನುಕೂಲವಾಗುತ್ತದೆ. ಶಿಕಾರಿಪುರದಲ್ಲಿ ೫-೬ ವರ್ಷ ಆಯಿತು. ಈಗ ಒಂದು ವರ್ಷದಿಂದ ಪೆಂಡಿಂಗ್‌ನಲ್ಲಿದೆ. ಪುರಸಭೆಯವರಿಗೆ ಆದಾಯ ಹೆಚ್ಚು ಮಾಡಿಕೊಳ್ಳಿರಿ ಎಂದು ಹೇಳುತ್ತೀರಿ ಆದುದರಿಂದ ನೇರವಾಗಿ ಕಾನೂನನ್ನು ಏಕೆ ತಿದ್ದುಪಡಿ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಫೈಲ್ಸ್ ಕ್ಲಿಯರ್ ಆಗಿಲ್ಲ ಎಂದು ಹೇಳಿದ್ದಾರೆ, ಅದನು ಮಾಡಿಸುತ್ತೇನೆ. ಅಸೆಸ್‌ಮೆಂಟ್ ಬಗ್ಗೆ ಅವರದೇ ಪ್ರತ್ಯೇಕವಾದಂಥ ಸೂಚನೆ ಇದೆ. ಈಗಿರತಕ್ಕ ಕಾನೂನಿನಲ್ಲಿ ರಿವಿಜನ್ ಆಫ್ ಅಸೆಸ್‌ಮೆಂಟ್ ಮಾಡುವುದಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಇದೆ, ೪ ವರ್ಷಕ್ಕೆ, ೫ ವರ್ಷಕ್ಕೆ ಮಾಡಬೇಕು ಎಂದು ಇದೆ. ೪ ವರ್ಷಕ್ಕೊಂದು ಸಲ ೧೦ ಪರ್ಸೆಂಟ್ ಜಾಸ್ತಿ ಮಾಡುತ್ತೇವೆಂದು ಘೋಷಣೆ ಮಾಡಿ ಎಂದು ಹೇಳುತ್ತಾ ಇದ್ದಾರೆ. ಅದು ಕಾನೂನು ಬದ್ಧವಾಗಿದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲಿಸಿ ಸೂಕ್ತವಾದಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ೨೪೮ ಅರ್ಬನ್ ಲೋಕಲ್‌ಬಾಡೀಸ್‌ನವರು ದಾರಿದೀಪ, ಕುಡಿಯುವ ನೀರಿನ ಬಿಲ್‌ಗಳನ್ನು ತುಂಬುತ್ತಾ ಇದ್ದಾರೆ. ಅದನ್ನು ಸಂಪೂರ್ಣವಾಗಿ ರದ್ದುಮಾಡುವ ಬಗ್ಗೆ ಸರ್ಕಾರದ ನೀತಿ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ.

ಶ್ರೀ ಎಂ, ಎಸ್. ಪಾಟೀಲ್. —ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್— ತೆರಿಗೆ ವಸೂಲು ಮಾಡದೇ ಹೋದರೆ ಎಲ್ಲರೂ ಚೆನ್ನಾಗಿರುತ್ತಾರೆ.

ಶ್ರೀ ಎಂ. ಎಸ್. ಪಾಟೀಲ್— ಟೌನ್‌ಪ್ಲಾನಿಂಗನ್ನು ಕಡ್ಡಾಯಗೊಳಿಸತಕ್ಕ ಕಾರ್ಯಕ್ರಮ ಇದೆಯೇ? ಮಾನ್ಯ ಮುಖ್ಯಮಂತ್ರಿಗಳು ಸಂಕೇಶ್ವರ ವಾಟರ್ ಸಪ್ಲೈಗೆ ಈಗಾಗಲೇ ಒಂದೂವರೆ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಏನಾಗಿದೆಯೆಂದರೆ ಒಂದು ಕಡೆ ಒಬ್ಬರು ಸ್ಥಳ ಹೇಳುತ್ತಾರೆ, ಇನ್ನೊಂದು ಕಡೆ ಇನ್ನೊಬ್ಬರು ಸ್ಥಳ ಹೇಳುತ್ತಾರೆ, ಹೀಗೆ ನಡೆಯುತ್ತಿದೆ. ನಾನು ಕರ್ಮಾರ ಹಳ್ಳದ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಯಾವಾಗ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ,

ಶ್ರೀ ಎ. ಲಕ್ಷ್ಮೀಸಾಗರ್— ಟೌನ್ ಪ್ಲಾನಿಂಗನ್ನು ಯಾವ ಯಾವ ನಗರ ಪ್ರದೇಶಗಳಲ್ಲಿ ಅನ್ವಯಗೊಳಿಸಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದೇವೆ. ಸಣ್ಣ ಸಣ್ಣ ನಗರ ಪ್ರದೇಶಗಳಲ್ಲಿ ಅನ್ವಯವಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನು ಪುನರ್‌ಪರಿಶೀಲನೆ ಮಾಡುತ್ತೇನೆ. ಸಂಕೇಶ್ವರದ ಬಗ್ಗೆ ಮಾನ್ಯ ಸದಸ್ಯರು ಹೋದ ವರ್ಷವೂ ಕೇಳಿದರು. ಈ ವರ್ಷವೂ ಕೇಳಿದ್ದಾರೆ. ಇದು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರುತ್ತದೆ. ಆ ಮೇಲೆ ಭೂಮಿಯನ್ನು ಸ್ವಾಧೀನ ತೆಗೆದುಕೊಳ್ಳತಕ್ಕ ಕಾರ್ಯ ತೀವ್ರವಾಗಿ ಮಾಡುತ್ತಾ ಇದ್ದಾರೆ. ಅದನ್ನು ಮುಗಿಸುತ್ತೇವೆ, ಅಡ್ಡಿ ಆತಂಕಗಳನ್ನು ತೆಗೆಯುವುದಕ್ಕೆ ಪ್ರಯತ್ನ ಈಗಾಗಲೇ ನಡೆದಿದೆ ಎಂದು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಸಂಕೇಶ್ವರ ಒಂದನ್ನು ಹಿಡಿದುಕೊಂಡಿದ್ದಾರೆ. ಬನ್ನಿ ಕುಳಿತುಕೊಂಡು ಮಾತನಾಡೋಣ, ಸರಿಪಡಿಸೋಣ.

ಶ್ರೀ ಜಿ. ನಾರಾಯಣಕುಮಾರ್— ಜಲಮಂಡಲಿ ಹಂಗಾಮಿ ನೌಕರರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರು, ಬೆಂಗಳೂರು ಮಹಾನಗರ ಪಾಲಿಕೆಯ ನೌಕರರನ್ನು ಖಾಯಂಗೊಳಿಸುವುದಕ್ಕೋಸ್ಕರ ಒಂದು ಸಮಿತಿ ಮಾಡಿದ್ದರು. ಆ ಸಮಿತಿಯಲ್ಲಿ ಜಲಮಂಡಲಿ ನೌಕರರನ್ನು ಮತ್ತು ಪ್ರಾಧಿಕಾರದ ನೌಕರರನ್ನು ಖಾಯಂಗೊಳಿಸದೆ ಕೈಬಿಟ್ಟಿದ್ದಾರೆ. ಮಂತ್ರಿಗಳು ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಾಕಿದ್ದಾರೆ, ಈಗ ಪ್ರಾಧಿಕಾರದ ನೌಕರರು ಮುಷ್ಕರ ಹೂಡುತ್ತಾ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್— ಬೆಣ್ಣೆಯೂ ಇಲ್ಲ, ಸುಣ್ಣವೂ ಇಲ್ಲ. ಪರಕೆ ತೆಗೆದುಕೊಂಡು ಗುಡಿಸುವುದಕ್ಕೆ ಹೋಗುವ ಮನುಷ್ಯ ನಾನು. ಈ ಕೆಲಸ ಎಲ್ಲರೂ ಮಾಡಿದರೆ ಸರಿಹೋಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಖಾಯಂಗೊಳಿಸತಕ್ಕ ಒಂದು ಸೂಚನೆ ಆ ಸಂಸ್ಥೆಗಳಿಂದ ಸರ್ಕಾರಕ್ಕೆ ಬರಬೇಕು. ಅಲ್ಲಿಂದ ಬರಲಿ, ನಂತರ ಸೂಕ್ತವಾದಂಥ ನಿರ್ಣಯ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತಾ ಯಾರು ಮುಷ್ಕರ ಮಾಡುತ್ತಾರೆ ಅವರೆಲ್ಲಾ ತಮ್ಮ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಬಹಳ ವಿನಯದಿಂದ ಮನವಿ ಮಾಡುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್— ಅದು ಈಗಾಗಲೇ ಸರ್ಕಾರದ ಮುಂದಿದೆ. ಸ್ಥಳೀಯ ಸಂಸ್ಥೆಗಳಿಂದ ಅವರನ್ನು ಖಾಯಂಗೊಳಿಸಬೇಕು ಎಂದು ಕಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್— ಗಮನಕ್ಕೆ ಬಂದಿದ್ದರೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ— ಮಂಗಳೂರು, ನವ ಮಂಗಳೂರು ಬಂದರು, ಸೂರತ್ಕಲ್ ಆಸುಪಾಸಿನ ೧೪ ಗ್ರಾಮಗಳಲ್ಲಿ ನೀರಿನ ಕೊರತೆ ಇದೆ. ತುಂಬೆಗೆ ಕಡಿಮೆ ನೀರು ಬರುತ್ತಿದೆ, ದಾಮಾಷಾ ಪ್ರಕಾರ ಜಾಸ್ತಿ ಮಾಡಬೇಕು ಎಂದು ಹೇಳುತ್ತಾ, ವೆಂಟೆಡ್ ಡ್ಯಾಂ ಕಟ್ಟುವಾಗ ಹೆಚ್ಚು ನೀರು ಬರುವ ಹಾಗೆ ಉಪಕಾರದ ಕೆಲಸವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್— ಈಗಿನ ಯೋಜನೆ ಈ ತಿಂಗಳ ಕೊನೆಯಲ್ಲಿ ಮುಕ್ತಾಯವಾಗತಕ್ಕಂಥ ಸೂಚನೆ ಇದೆ. ಅದು ಪೂರ್ಣವಾದ ಮೇಲೆ ೯ ಮಿಲಿಯನ್ ಗ್ಯಾಲನ್ ನೀರು ಮಂಗಳೂರು ಸುತ್ತಮುತ್ತಲಿನ ಪ್ರದೇಶಕ್ಕೆ ಸಿಗತಕ್ಕ ಅವಕಾಶವಿದೆ. ಅದರ ನಂತರ ತೊಂದರೆಯಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಹಾಗೇನಾದರೂ ಇದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ— ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ೩ ವಿಷಯಗಳ ಬಗ್ಗೆ ವಿವರಣೆ ಕೇಳುತ್ತೇನೆ. ಒಂದನೆಯದು, ರಾಣಿಬೆನ್ನೂರು ನಗರದಲ್ಲಿ ಓವರ್‌ಹೆಡ್ ಟ್ಯಾಂಕ್ ಕಟ್ಟುವುದರ ಬಗ್ಗೆ ಮಂತ್ರಿಗಳನ್ನು ಕರೆದು ಸಮಾರಂಭ ಮಾಡಿಸಿತ್ತು. ಆದರೆ ಇಲ್ಲಿಯವರೆಗೆ ಅದು ಪ್ರಾರಂಭವಾಗಿಲ್ಲ, ಎಷ್ಟು ದಿವಸವಾಗುತ್ತದೆ ಎಂದು ಕೇಳುತ್ತೇನೆ. ರಾಣಿಬೆನ್ನೂರು ನಗರಕ್ಕೆ ೪ ಕೋಟಿ ರೂಪಾಯಿ ಯೋಜನೆಗೆ ತುಂಗಭದ್ರ ಹೊಳೆಯಿಂದ ನೀರನ್ನು ನಗರದ ಜನರಿಗೆ ಕೂಡಲೇ ಪೂರೈಸತಕ್ಕ ಯೋಜನೆಯ ಬಗ್ಗೆ ಲೈಫ್ ಇನ್‌ಸೂರೆನ್ಸ್ ಕಾರ್ಪೊರೇಷನ್‌ನಿಂದ ಸಾಲ ಕೊಡಿಸುತ್ತೇನೆಂದು ಹೇಳಿ ಬಂದಿದ್ದಿರಿ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳುತ್ತೇನೆ.

ಮತ್ತೆ ಅನೇಕ ನಗರಸಭೆಗಳಲ್ಲಿನ ನೌಕರರಿಗೆ ಆರೇಳು ತಿಂಗಳುಗಳಿಂದ ಪಗಾರ ಕೊಡದೇ ಇರತಕ್ಕಂತಹ ಪರಿಸ್ಥಿತಿ ಇದೆ. ಆಕ್ಟ್ರಾಯ್ ಗ್ರಾಂಟನ್ನು ಏನು ಕೊಡುತ್ತಿದ್ದೀರಿ ಅದರ ಬದಲಾಗಿ ವಿದ್ಯಾಶಿಲಾಖೆಯವರು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿರತಕ್ಕ ನೌಕರರಿಗೆ ಯಾವ ರೀತಿಯಾಗಿ ನೇರವಾದ ಪಗಾರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೋ ಅದೇ ರೀತಿ ಆಕ್ಟ್ರಾಯ್ ಗ್ರಾಂಟಿಗೆ ಬದಲಾಗಿ ನಗರ ಸಭೆಯ ನೌಕರರಿಗೆ ಸರ್ಕಾರವೇ ನೇರವಾದ ಪಗಾರವನ್ನು ಕೊಡತಕ್ಕಂತಹ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ? ಹಾಗೇನಾದರೂ ಸರ್ಕಾರದ ಮುಂದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್— ತುಂಗ ಭದ್ರಾ ನದಿಯಿಂದ ರಾಣಿ ಬೆನ್ನೂರು ನಗರಕ್ಕೆ ನೀರು ಸರಬರಾಜು ಮಾಡತಕ್ಕಂಥದ್ದು ಏನಾಗಿದೆಯೆಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಇದರ ಬಗ್ಗೆ ನನ್ನ ಹತ್ತಿರ ವಿವರಣೆ ಇಲ್ಲ. ತಾವು ಬಂದರೆ ವಿವರಣೆಯನ್ನು ತರಿಸಿ ಹೇಳುತ್ತೇನೆ. ಇನ್ನು ನಗರಸಭೆಗಳಲ್ಲಿನ ನೌಕರರಿಗೆ ಪಗಾರ ಕೊಡುವಲ್ಲಿ ತೊಂದರೆ ಇದೆ, ಸರ್ಕಾರವೇ ಕೊಡಬೇಕೆಂದು ಹೇಳುತ್ತಿದ್ದಾರೆ, ಕೆಲವು ವರ್ಷದಿಂದ ಈ ವಿಚಾರದಲ್ಲಿ ನಮ್ಮ ಮುಂದೆ ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದನ್ನು ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ. ಅವರು ಕೇಳಿದಂತಹ ೧೨೦ ಬೇಡಿಕೆಗಳ ಪೈಕಿ ೯೯ ಅನ್ನು ಒಪ್ಪಿಕೊಂಡಿದ್ದೇವೆ. ಒಪ್ಪಿಕೊಳ್ಳದೇ ಇರತಕ್ಕಂಥಾದ್ದು ಒಂದೇ ಒಂದು. ಕೆ.ಸಿ.ಎಸ್.ಆರ್. ರೂಲ್ಸ್ ಅನ್ನು ನಮಗೂ ಅನ್ವಯವಾಗುವ ರೀತಿಯಲ್ಲಿ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ ಇದರ ಬಗ್ಗೆ ಕಾನೂನು ವಿಭಾಗದ ಹಾಗೂ ಹಣಕಾಸು ವಿಭಾಗದವರ ಅಭಿಪ್ರಾಯವನ್ನು ಕೇಳಿದ್ದೇನೆ. ಇದು ಹಲವಾರು ಹಂತಗಳಲ್ಲಿ ಇದೆ. ಇದರ ಬಗ್ಗೆ ಆದಷ್ಟು ಶೀಘ್ರವಾಗಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಕೆಲವು ಕಡೆಗಳಲ್ಲಿ ಸತ್ಯಾಗ್ರಹ ಇತ್ಯಾದಿಗಳು ನಡೆಯುತ್ತಿದೆಯೆಂದು ಹಲವಾರು ಕಡೆಗಳಿಂದ ಟೆಲಿಗ್ರಾಮ್ ಬಂದಿದೆ. ಮಾನ್ಯ ಸದಸ್ಯರು ತಮ್ಮ ಪ್ರಭಾವವನ್ನು ಬೀರಿ ನೌಕರರು ಸತ್ಯಾಗ್ರಹ ಮಾಡುವುದಕ್ಕೆ ಏನೂ ಕಾರಣವಿಲ್ಲವೆಂದು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವುಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆಂದು ಹೇಳಿ ವಚನವನ್ನು ಕೊಟ್ಟಿದ್ದೇನೆ. ಅವರು ಹಲವಾರು ಸಲ ಜಿಲ್ಲಾ ಮಟ್ಟದಲ್ಲಿ ಭೇಟಿ ಮಾಡಿದ್ದಾರೆ. ಡಿವಿಜನ್ ಮಟ್ಟದಲ್ಲಿ ಬೇಟಿ ಮಾಡಿದ್ದಾರೆ ಅವರು ಕೇಳಿದ ಎಲ್ಲಾ ಬೇಡಿಕೆಗಳನ್ನು ಸಹಾನುಭೂತಿಯಿಂದ ಮುಕ್ತ ಕಂಠದಿಂದ ಕೇಳಿದ್ದೇನೆ. ಅದರ ಬಗ್ಗೆ ಸೂಕ್ತ ನಿಲುವನ್ನು ತೆಗೆದಕೊಳ್ಳುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಜಿಲ್ಲಾ ಪರಿಷತ್ ಆ್ಯಕ್ಟ್ ಪ್ರಕಾರ ಕೆಲವು ಮುನಿಸಿಪಾಲಿಟಿಯನ್ನು ತೆಗೆದು ಮಂಡಲ ಪಂಚಾಯಿತ್ತಿಯನ್ನಾಗಿ ಮಾಡಬೇಕೆಂದು ಇದ್ದೀರಿ. ಅದರಲ್ಲಿ ಗುರುಮಠಕಲ್ ಜೇವರ್ಗಿ, ಅಫಜಲ್‌ಪುರ್, ಚಿಂಚೋಳಿಗಳನ್ನು ಮಂಡಲ ಪಂಚಾಯಿತ್ತಿಯೆಂದು ಮಾಡುತ್ತಿದ್ದಾರೆ. ಈಗ ಪ್ರಶ್ನೆ ಏನು ಬರುತ್ತದೆಂದರೆ ಈಗ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ಕಾಂಪನ್‌ಸೇಷನ್ ಕೊಡುತ್ತಿದ್ದೀರಿ, ಅಲ್ಲಿರತಕ್ಕಂತಹ ಸಿಬ್ಬಂದಿ ವರ್ಗಕ್ಕೆ ಪಗಾರ ಸಿಗುತ್ತಿದೆ. ನಾಳೆ ಇವುಗಳನ್ನು ಮಂಡಲ ಪಂಚಾಯಿತ್ತಿ ಎಂದು ಮಾಡಿದ ಮೇಲೆ ಅಲ್ಲಿರತಕ್ಕಂತಹ ಸ್ಟಾಫ್‌ಗಳಿಗೆ ತೊಂದರೆಯಾಗುತ್ತದೆ. ಅದಕ್ಕೆ ಯಾವ ರೀತಿಯ ವ್ಯವಸ್ಥೆ ಮಾಡಿದ್ದೀರಿ, ಇಲ್ಲವೇ ಅಂತಹ ಪ್ರದೇಶಗಳನ್ನು ಮುನಿಸಿಪಾಲಿಟಿಯಾಗಿಯೇ ಮುಂದುವರಿಯುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ? ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಎರಡನೆಯದಾಗಿ ಹೇಳುವುದಾದರೆ, ಗುಲ್ಬರ್ಗಾಕ್ಕೆ ಮಾನ್ಯ ಲಕ್ಷ್ಮೀಸಾಗರ್‌ರವರು ಬಂದಾಗ ಮೇಯರ್‌ರವರ ಚುನಾವಣೆ ನಡೆಯುತ್ತಿತ್ತು, ಆ ಹೊತ್ತಿನಲ್ಲಿ ಅವರು ಬಂದಿದ್ದರು. ಅಲ್ಲಿ ಎಸ್ ಸಿ. ಜನಾಂಗದವರೇ ಮೇಯರ್ ಆಗುತ್ತಾರೆಂದು ಯಾರು ಹೇಳಿದರೋ. ಇಲ್ಲವೇ ಅವರ ಪಕ್ಷದವರೇ ಹೇಳಿದರೋ ನನಗಂತೂ ಗೊತ್ತಿಲ್ಲ. ಅಲ್ಲಿನ ಕಾರ್ಪೊರೇಷನ್ ಕಮೀಷನ್‌ರವರು ಎಸ್ ಸಿ. ಯವರಾಗಿದ್ದು, ಅದನ್ನು ತಿಳಿದುಕೊಂಡ ತಕ್ಷಣ ಟೆಲೆಕ್ಸ್ ಮೆಸೇಜ್‌ನಲ್ಲಿ ಅವರನ್ನು ೨೪ ಗಂಟೆಯಲ್ಲಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಮೇಯರ್‌ರವರು ಎಸ್.ಸಿ.ಯವರು, ಆ ಕಮೀಷನ್‌ರವರು ಎಸ್.ಸಿ. ಜನಾಂಗದವರೆಂದು ಹೇಳಿ ಅವರ ಪಕ್ಷದ ಜನ ಹೋಗಿ ಒತ್ತಾಯ ಮಾಡಿದರೋ ಏನೋ ಆಮೇಲೆ ಅವರನ್ನು ೨೪ ತಾಸುಗಳಲ್ಲಿ ಅಲ್ಲಿಂದ ತೆಗೆಸತಕ್ಕಂತಹ ವ್ಯವಸ್ಥೆ ಮಾಡಿ, ಎಲ್ಲೋ ಒಂದು ಕಡೆ ಹಾಕಿದರೆಂದು ಕೇಳಿದ್ದೇನೆ. ಅವರನ್ನು ೨೪ ತಾಸುಗಳಲ್ಲಿ ತೆಗೆಯತಕ್ಕಂತಹ ಅವಶ್ಯಕತೆಯಾದರೂ ಏನಿತ್ತು? ಅವರು ಏನಾದರೂ ಮಾಡಿದ್ದಾರಾ? ಅವರು ಟ್ರಾನ್ಸ್‌ಫರ್ ಆಗಿ ಎರಡು ತಿಂಗಳಾಯಿತು. ಇಲ್ಲಿಯವರೆಗೆ ಆ ಕಾರ್ಪೊರೇಷನ್‌ಗೆ ಕಮೀಷನರ್ ಇಲ್ಲ. ಒಂದು ಸಾವಿರ ಫೈಲ್‌ಗಳು ಪೆಂಡಿಂಗ್ ಇವೆ. ದಕ್ಷ

ಆಡಳಿತ ನಡೆಸುತ್ತೇವೆಂದು ಹೇಳತಕ್ಕಂತಹವರು, ಅಲ್ಲಿರತಕ್ಕಂತಹ ಜನರಿಗೆ ತಕ್ಷಣ ಸಹಾಯ ಮಾಡುತ್ತೇವೆಂದು ಹೇಳಿಬಂದವರು ೨೪ ತಾಸುಗಳಲ್ಲಿ ಟ್ರಾನ್ಸ್‌ಫರ್ ಮಾಡಿದರು. ಅಲ್ಲಿಗೆ ಒಬ್ಬರನ್ನು ಪೋಸ್ಟಿಂಗ್ ಮಾಡಲು ಇವರ ಕೈಯಲ್ಲಿ ಆಗಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈ ಮುನಿಸಿಪಾಲಿಟಿಗಳೇನಿವೆ ಅವನ್ನು ಮಂಡಲ ಪಂಚಾಯಿತ್ತಿಗಳೆಂದು ಮಾಡಿದ ಮೇಲೆ, ಮುನಿಸಿಪಾಲಿಟಿಯ ನೌಕರರೇನಿದ್ದಾರೆ. ಅವರೆಲ್ಲರೂ ರೂರಲ್ ಡೆವಲಪ್‌ಮೆಂಟ್ ಪಂಚಾಯತ್‌ರಾಜ್ ನೌಕರರಾಗುತ್ತಾರೆ. ಅವರ ಸಂಬಳದ ಬಗ್ಗೆ ಏನೂ ತೊಂದರೆ ಇರುವುದಿಲ್ಲ. ಅಲ್ಲಿರತಕ್ಕಂತಹ ಕಮೀಷನ್‌ರವರನ್ನು ಟ್ರಾನ್ಸ್‌ಫರ್ ಮಾಡಿದ ಬಗ್ಗೆ ವಿವರಣೆ ಕೇಳಲು ಅವರೇನೂ ಈ ಸಭೆಯ ಸದಸ್ಯರಲ್ಲ, ಅಧಿಕಾರಿಗಳು ಇದರ ಬಗ್ಗೆ ನಾನು ದೋಷಾರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಮೇಲೆ ಹಲವಾರು ಸಲ ದೂರುಗಳು ಬಂದ ಕಾರಣ, ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಿದೆ. ಚುನಾವಣೆಗೂ ಇವರ ಟ್ರಾನ್ಸ್‌ಫರ್‌ಗೂ ಯಾವ ಸಂಬಂಧವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಚುನಾವಣೆ ಇದ್ದ ದಿವಸವೇ ..

ಶ್ರೀ ಎ. ಲಕ್ಷ್ಮೀಸಾಗರ್– ಮಾನ್ಯ ಅಧ್ಯಕ್ಷರೇ, ..

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ— ಇದುವರೆಗೆ ಬದಲಿ ವ್ಯವಸ್ಥೆಯನ್ನು ಏಕೆ ಮಾಡಿಲ್ಲ? ಎಸ್.ಸಿ ಯವರು ಬರುತ್ತಾರೆ ಓಟು ಪಡೆಯುತ್ತಾರೆಂದು ಹೇಳಿ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ನೀವು ಅದಕ್ಕೋಸ್ಕರ ಬಂದಿದ್ದೀರೆಂದು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಸದಸ್ಯರ ಆಪಾದನೆಗಳಿಗೆ ತಲೆ ಬುಡ ಇಲ್ಲ. ನಾನು ನಗರ ಸಭೆಗಳ ಕೆಲಸದ ವೀಕ್ಷಣೆಯನ್ನು ಮಾಡುವುದಕ್ಕೆ ಹೋಗಿದ್ದೆ. ಆ ಸಮಯದಲ್ಲಿ ಚುನಾವಣೆ ಇತ್ತು. ಇದು ಕಾಕತಾಳೀಯವಾದುದು. ಗೊತ್ತು ಗುರಿಯಿಲ್ಲದೆ ಹೇಳತಕ್ಕದ್ದರಲ್ಲಿ ಸತ್ಯಾಂಶವಿಲ್ಲ.

ಅಧ್ಯಕ್ಷರು— ೩೫ ನಿಮಿಷಗಳ ಕಾಲ ವಿವರಣೆಗೆ ಅವಕಾಶ ಕೊಟ್ಟಿದ್ದೇನೆ. ಇಲ್ಲಿಗೆ ಈ ಚರ್ಚೆ ಮುಗಿಯಿತು.

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗೆ ಇದೆ. "೩೧ನೇ ಮಾರ್ಚಿ ೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ೨೯,೩೦,೩೨ ೩೩, ೩೬,೩೭ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ''.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರು ಮಾಡಿದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ ೨೯ ವೈದ್ಯಕೀಯ ಸೇವೆ ಮತ್ತು ಸಮಾಜ ಕಲ್ಯಾಣ

೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧ ೩೪,೪೭, ೩೫,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧,೮೦,೮೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೦—ಜನಾರೋಗ್ಯ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭, ೩೮, ೩೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೨—ನಗರಾಭಿವೃದ್ಧಿ ಮುಂತಾದವು:

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೬೦,೧೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೨,೩೪, ೨೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೩ ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಅನುದಾನ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯತಿಗಳ ಅನುದಾನ ಪರಿಹಾರ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೨,೯೪,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೬—ರಾಜ್ಯ ವಿಧಾನ ಮಂಡಲ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೮೩,೩೯,೦೦೦ ರೂ ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೭—ನ್ಯಾಯ ಪರಿಪಾಲನೆ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೧೭,೫೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ೫೯೭ (೧೬೫)

ಅಧ್ಯಕ್ಷರು.—ಶ್ರೀ ನಂಜಯ್ಯ ಮಠರವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಉತ್ತರ ಈ ರೀತಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದಕ್ಕೆ ಹಾಕಿದೆಯೆಂದು ಹೇಳಿದ್ದೀರಿ, ಯಾವ ಕಾರಣದಿಂದ ಮುಂದಕ್ಕೆ ಹೋಗಿದೆ, ಆ ಕಾರಣ ಗೊತ್ತಾಗ ಬೇಕಲ್ಲವೇ ? ಅವರು ಸಮಯ ಕೇಳಿದ್ದಾರೆಂದು ತಾವು ಹೇಳಬೇಕಲ್ಲವೇ

ಅಧ್ಯಕ್ಷರು.—ಕ್ಯಾರೀಡ್ ಓವರ್ ಎಂದು ಬರೆದಿದ್ದಾರೆ.

ಶ್ರೀ ಎಸ್ ಬಂಗಾರಪ್ಪ —ಸಕಾರಣಗಳಿದ್ದರೆ. ಏನು ಕಾರಣವೆಂದು ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಒಳ್ಳೆಯದು. ಇನ್ನು ಮುಂದೆ ಕಾರಣಗಳನ್ನು ಕೊಡಬೇಕೆಂದು ಹೇಳುತ್ತೇನೆ ಸಕಾರಣಗಳೇನಾದರೂ ಇದ್ದರೆ. ಅದು ಏನೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕಾಗುತ್ತದೆ.

ಅಧ್ಯಕ್ಷರು.—ಅದು ಕ್ಯಾರೀಡ್ ಓವರ್ ಆಗಿದೆ. ಮುಂದೆ ಬರುತ್ತದೆ,

ಶ್ರೀ ಎಸ್. ಬಂಗಾರಪ್ಪ.—ತಾವು ಸುಮ್ಮನೇ ಮುಂದಕ್ಕೆ ಹಾಕಲಾಗಿದೆ ಎಂದು ಹೇಳಿದರೆ. ಹೀಗೆ ಕಷ್ಟವಾಗುತ್ತದೆ, ಇದನ್ನು ಮುಂದಕ್ಕೆ ಹಾಕಲು ಏನು ಸಕಾರಣಗಳಿವೆ ಎಂಬುದನ್ನು ತಿಳಿಸಬೇ